ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೩೫

ಸಾಹಿತ್ಯಮಾಲೆ - ೩೪

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ರಾಜಾ ಮಲಯಸಿಂಹ

ಭಾಗ - ೨

# ರಾಜಾ ಮಲಯಸಿಂಹ

## ಭಾಗ - ೨

ಇಂಗ್ಲೀಷ್ ಮೂಲ

**ಅಲೆಗ್ಸಾಂಡರ್ ಡ್ಯೂಮಾ**

ಕನ್ನಡ ಅನುವಾದ

**ಶ್ರೀನಿವಾಸಾಚಾರ್ಯ**

**ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ ಬೆಂಗಳೂರು – ೫೬೦ ೦೦೨

**RAJA MALAYASIMHA (Part-3)**: Kannada translation of Alexandre Dumas' 'The Count of Montechristo' by **Srinivasacharya**; Editor-in-Chief: **Dr. Pradhan Gurudatta**; Published by **Registrar**, **Karnataka Anuvada Sahitya Academy**, Kannada Bhavana, J.C. Road, Bangalore - 560 002. 2007; Pp. xvi + 207; Price: Rs.75/-.

© ಹಕ್ಕುಗಳು : ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಮೊದಲ ಮುದ್ರಣ : ೧೯೩೫, ದ್ವಿತೀಯ ಮುದ್ರಣ: ೧೯೭೩, ತೃತೀಯ ಮುದ್ರಣ : ೧೯೯೮
**(ಕನ್ನಡ ಪುಸ್ತಕ ಪ್ರಾಧಿಕಾರದಿಂದ)**

ಮುದ್ರಣ : ೨೦೦೭
ಪುಟಗಳು : xvi+ ೨೦೭
ಬೆಲೆ : ರೂ. ೭೫/–
ಪ್ರತಿಗಳು : ೩೦೦೦

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು
ದೂ : ೨೨೧೦೭೭೭೦

ಸಹಕಾರ :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಬೆಂಗಳೂರು

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀಪಾದ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಹೆಚ್.ಡಿ. ಕುಮಾರಸ್ವಾಮಿ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೧೫.೦೩.೨೦೦೭

# ಮುನ್ನುಡಿ

ಕರ್ನಾಟಕ ರಾಜ್ಯ ಪುನರ್ ಘಟನೆಯ ಐವತ್ತು ವರ್ಷಗಳ ನೆನಪಿಗಾಗಿ ಕರ್ನಾಟಕ ಸರ್ಕಾರ 'ಸುವರ್ಣ ಕರ್ನಾಟಕ'ದ ಸಂಭ್ರಮಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಿರ್ಧರಿಸಿತು. ಈ ಹೊತ್ತಿಗೆ ಸರಿಯಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯ ಮೂಲಕ ಕರ್ನಾಟಕ ಸರ್ಕಾರ ಇನ್ನೊಂದು ಹೊಸ ಹೆಜ್ಜೆಯನ್ನೂ ಇಟ್ಟಿತ್ತು. ಭಾರತೀಯ ಭಾಷೆಗಳ ನಡುವಣ ಪಾರಸ್ಪರಿಕ ಅರಿವನ್ನು ಹೆಚ್ಚಿಸುವುದರ ಜೊತೆಗೆ, ನಮ್ಮ ನಾಡು–ನುಡಿಗಳ ಹಿರಿಮೆಯನ್ನು ಇತರ ಭಾಷಾ–ಬಾಂಧವರಿಗೆ ಹಾಗೂ ಜಾಗತಿಕ ನೆಲೆಯಲ್ಲಿ ಪರಿಚಯಿಸಿ ಕೊಡುವುದು ಮತ್ತು ಜಗತ್ತಿನ ಇತರ ಭಾಷೆಗಳ ಶ್ರೇಷ್ಠ ಸಾಹಿತ್ಯವನ್ನು ಕನ್ನಡಿಗರಿಗೆ ಒದಗಿಸುವುದು ಇದರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅನುವಾದ ಸಾಹಿತ್ಯ ಈ ಹೊತ್ತು ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲದಿರುವುದರಿಂದ, ಜ್ಞಾನ–ವಿಜ್ಞಾನ– ತಂತ್ರಜ್ಞಾನಗಳ ಕ್ಷೇತ್ರಗಳನ್ನು ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದೂ ಇದರಲ್ಲಿ ಸೇರಿದೆ. ಇದರಿಂದ ಐತಿಹಾಸಿಕ ಹಿರಿಮೆಯ ಜೊತೆಗೆ, ಕನ್ನಡದ ಸಾಮರ್ಥ್ಯ, ವೈಶಿಷ್ಟ್ಯ, ಹಿರಿಮೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಕಂಗೊಳಿಸುವಂತಾಗುತ್ತದೆ.

'ಸುವರ್ಣ ಕರ್ನಾಟಕ' ಸಂಭ್ರಮದ ಸಂದರ್ಭದಲ್ಲಿ, ಈ ಹಿಂದೆ ನಾಡು ನುಡಿಗೆ ಸೇವೆಯನ್ನು ಸಲ್ಲಿಸಿರುವ ಹಿರಿಯ ಚೇತನಗಳು ಸ್ವಪ್ರೇರಣೆಯಿಂದ ಕನ್ನಡಕ್ಕೆ ತಂದುಕೊಟ್ಟಿರುವ ಶ್ರೇಷ್ಠ ಕೃತಿಗಳಲ್ಲಿ ಆಯ್ದ ಗ್ರಂಥಗಳನ್ನು 'ಸುವರ್ಣ ಅನುವಾದ ಮಾಲೆಯ' ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹಾಗೂ ವಿಶ್ವದಲ್ಲಿನ ಶ್ರೇಷ್ಠ ಕೃತಿಗಳನ್ನೂ ಪರಿಚಯಿಸಿ ಕೊಡಲಾಗುತ್ತಿದೆ. ಇವು ಕನ್ನಡಿಗರಿಗೆ ಪ್ರಿಯವಾಗುತ್ತವೆಂದು ನಂಬಿದ್ದೇನೆ. ಈ ಕೃತಿಗಳನ್ನು ಸಹೃದಯತೆಯಿಂದ ಸ್ವಾಗತಿಸುವ ಮೂಲಕ, ಅನುವಾದ ಸಾಹಿತ್ಯ ಅಕಾಡೆಮಿಯ ಇಂಥ ಕೆಲಸಗಳಿಗೆ ಕನ್ನಡ ನಾಡಿನ ಜನತೆ ಪ್ರೋತ್ಸಾಹ ನೀಡುತ್ತದೆ ಎಂದು ಭಾವಿಸಿದ್ದೇನೆ.

**(ಹೆಚ್.ಡಿ. ಕುಮಾರಸ್ವಾಮಿ)**

ಹೆಚ್.ಎಸ್. ಮಹದೇವ ಪ್ರಸಾದ್
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೦೮–೦೨–೨೦೦೭

## ಶುಭಾಕಾಂಕ್ಷೆ

ಕರ್ನಾಟಕ ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದಿರುವ ಅನುವಾದ ಸಾಹಿತ್ಯ ಅಕಾಡೆಮಿ, ರಾಷ್ಟ್ರದಲ್ಲಿಯೇ ಇಂಥ ಆದ್ಯ ಸಂಸ್ಥೆಯಾಗಿದ್ದು ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡು, ಕನ್ನಡ ಸಾಹಿತ್ಯ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಕ್ಕೆ ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡುವ ಹಂಬಲವನ್ನು ಹೊಂದಿದೆ. ಇದರ ಸ್ಥಾಪನೆಯ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಸುವರ್ಣ ಸಂಭ್ರಮದ ಉತ್ಸವವೂ ಕೂಡಿಬಂದಿರುವ ಕಾರಣದಿಂದಾಗಿ, ಅನುವಾದ ಸಾಹಿತ್ಯ ಅಕಾಡೆಮಿ ಗಾಂಧೀಜಿ, ನೆಹರೂ ಇಂಥ ಶ್ರೇಷ್ಠ ವ್ಯಕ್ತಿಗಳನ್ನು ಕುರಿತ ಮಹತ್ವದ ಕೃತಿಗಳನ್ನೇ ಅಲ್ಲದೆ, ವಿವಿಧ ಭಾಷೆಗಳಲ್ಲಿನ ಅತ್ಯುತ್ತಮ ಸಾಹಿತ್ಯ ಗ್ರಂಥಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಿಗರಿಗೆ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿರುವುದು ನನಗೆ ತುಂಬಾ ಸಂತೋಷವನ್ನು ಉಂಟುಮಾಡಿದೆ. ಇದರಲ್ಲಿ ದೇಶ–ವಿದೇಶಗಳ ಕಥೆ–ಕಾದಂಬರಿಗಳೂ, ನಾಟಕಗಳೂ, ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ ಮುಂತಾದ ಹಲವು ಕ್ಷೇತ್ರಗಳ ಕೃತಿಗಳೂ ಸೇರಿದ್ದು, ಕನ್ನಡಿಗರಿಗೆ ವೈವಿಧ್ಯಮಯ ಅನುಭವವನ್ನು ತಂದುಕೊಡುವಲ್ಲಿ ನೆರವಾಗುತ್ತವೆ ಎಂದು ನಂಬಿದ್ದೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ನನಗೆ ಹೆಚ್ಚಿನ ಸಂತೋಷವನ್ನು ಉಂಟುಮಾಡಿದೆ. ಇದೇ ರೀತಿ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಹಾಗೂ ವಿದೇಶೀ ಭಾಷೆಗಳಿಗೆ ಅನುವಾದಿಸಿ ಕೊಡುವ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದು ಕನ್ನಡಿಗರ ಸಾಧನೆ ಜಗತ್ತಿಗೆ ಚೆನ್ನಾಗಿ ತಿಳಿದುಬರುವಂಥ ಸಾರ್ಥಕ ಪ್ರಯತ್ನಗಳು ನಡೆಯಲಿ ಎಂದು ಹಾರೈಸುತ್ತೇನೆ.

ಈಗ ಹೊರಬರುತ್ತಿರುವ ಕೃತಿಗಳಿಗೆ ಕನ್ನಡ ವಾಚಕಲೋಕದ ಸಹೃದಯಪೂರ್ಣ ಸ್ವಾಗತ ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಸ್ವಾಗತ ಮತ್ತು ಪ್ರೋತ್ಸಾಹಗಳು ಅಕಾಡೆಮಿಯ ಮುಂದಿನ ಕಾರ್ಯಚಟುವಟಿಕೆಗಳಿಗೆ ಪ್ರೇರಣೆಯನ್ನೊದಗಿಸಲಿ ಎಂದು ಹಾರೈಸುತ್ತೇನೆ.

ಹೆಚ್. ಎಸ್. ಮಹದೇವಪ್ರಸಾದ್

**(ಹೆಚ್.ಎಸ್. ಮಹದೇವ ಪ್ರಸಾದ್)**

ಕರ್ನಾಟಕ ಸರ್ಕಾರ

ಕಛೇರಿ : ೨೨೨೫೫೪೮೨
೨೨೦೩೪೦೦೭

**ಐ.ಎಂ. ವಿಠ್ಠಲಮೂರ್ತಿ**, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ
ಹಾಗೂ ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊ.ನಂ.೫, ನೆಲಮಹಡಿ, ವಿಕಾಸಸೌಧ,
ಬೆಂಗಳೂರು–೫೬೦ ೦೦೧

## ಹೊಸ ಹೆಜ್ಜೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ 'ಶ್ರೀ ಕುವೆಂಪು ಭಾಷಾಭಾರತೀ' ಎಂಬ ರಾಷ್ಟ್ರೀಯ ಸಂಸ್ಥೆಯ ಒಂದು ಸ್ವತಂತ್ರ ವಿಭಾಗವಾಗಿ ಕರ್ನಾಟಕ ಸರ್ಕಾರ 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ'ಯನ್ನು ಈಗಾಗಲೇ (೨೦೦೬ರಲ್ಲಿ) ಅಸ್ತಿತ್ವಕ್ಕೆ ತಂದಿದೆ. ಇಂಥ ಉಪಕ್ರಮವನ್ನು ಮೆರೆಯುವಲ್ಲಿ ಕರ್ನಾಟಕವೇ ಮೊದಲನೆಯ ರಾಜ್ಯವಾಗಿದೆ ಎಂಬುದು ಹೆಮ್ಮೆಯ ಸಂಗತಿಯೇ ಆಗಿದೆ. ಈ ಅನುವಾದ ಅಕಾಡೆಮಿ, ಪ್ರಾರಂಭಗೊಂಡ ತರುಣದಲ್ಲಿಯೇ ಕರ್ನಾಟಕ ರಾಜ್ಯದ ಪುನರ್–ರಚನೆಯ ಸುವರ್ಣ ಮಹೋತ್ಸವದ ಸಂದರ್ಭ ಕೂಡಿ ಬಂದದ್ದು ಒಂದು ವಿಶಿಷ್ಟ ಯೋಗಾಯೋಗವೇ ಆಗಿದೆ. ಈ ಸುವರ್ಣ ಮಹೋತ್ಸವದ ಸಂದರ್ಭದ ಆಚರಣೆಯ ಅಂಗವಾಗಿ ಅನುವಾದ ಅಕಾಡೆಮಿ ಅನೇಕ ಮಹತ್ವಪೂರ್ಣ ಯೋಜನೆಗಳನ್ನು ಕೈಗೊಂಡಿದೆ. ಈ ಮೊದಲೇ ವಿಭಿನ್ನ ಭಾಷೆಗಳಲ್ಲಿನ ಹಲವು ಶ್ರೇಷ್ಠ ಲೇಖಕರ ಹಲವಾರು ಶ್ರೇಷ್ಠ ಕೃತಿಗಳು ನಮ್ಮ ಸಾಹಿತಿಗಳ ಗಮನವನ್ನು ಸೆಳೆದಿದ್ದು, ಅವುಗಳ ಯಥಾವತ್ತಾದ, ಸಂಗ್ರಹರೂಪವಾದ, ಅಳವಡಿಕೆಯಂತಿರುವ ಅನುವಾದಗಳನ್ನು ಅವರು ನಮಗೆ ಕೊಡಮಾಡಿದ್ದಾರೆ. 'ಒಬ್ಬನೇ ಉಂಡ ಊಟ ಹಬ್ಬವಲ್ಲ; ಒಬ್ಬನೇ ಸವಿದ ರುಚಿ ರುಚಿಯಲ್ಲ' ಎಂಬ ಗಾದೆ ಮಾತನ್ನು ಸಾರ್ಥಕಗೊಳಿಸುವಂತೆ, ಅವರು ಈ ಕೆಲಸವನ್ನು ಮಾಡಿದ್ದಾರೆ. ಇಂಥ ಪ್ರಸಿದ್ಧ, ಜನಪ್ರಿಯ, ಅಲಭ್ಯ ಕೃತಿಗಳನ್ನು 'ಸುವರ್ಣ ಕರ್ನಾಟಕ' ಯೋಜನೆಯ ಅಂಗವಾಗಿ ಹೊರತರಲಾಗುತ್ತಿದೆ. ಅಂತೆಯೇ, ಇತರ ಭಾಷೆಗಳಲ್ಲಿನ ಹೊಸ ಶ್ರೇಷ್ಠ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹೀಗೆ, ದೇಶ–ವಿದೇಶಗಳ ಉತ್ಕೃಷ್ಟ ಕೃತಿಗಳಿಂದ ಕನ್ನಡ ಭಾಷೆ–ಸಾಹಿತ್ಯಗಳನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಅನುವಾದ ಅಕಾಡೆಮಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಬೇಕಾಗಿದೆ.

ಅನುವಾದ ಇಂದು ತನ್ನ ಆಯಾಮವನ್ನು ಬಹುವಾಗಿ ವಿಸ್ತರಿಸಿಕೊಂಡು ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಒಳಪಡಿಸಿಕೊಂಡಿದೆ. ಹೀಗಾಗಿ, ಈ ದಿಕ್ಕಿನಲ್ಲಿಯೂ ಕನ್ನಡವನ್ನು ಸಮೃದ್ಧಗೊಳಿಸುವತ್ತ ನಮ್ಮ ಗಮನ ಹರಿಯಬೇಕಾಗಿದೆ. ಅಕಾಡೆಮಿ ಈ ದಿಕ್ಕಿನಲ್ಲಿಯೂ ಕಾರ್ಯೋನ್ಮುಖವಾಗಿರುವುದು ಸಂತೋಷದ ವಿಚಾರವೇ ಆಗಿದೆ. ಈ ಬಗೆಯ ಬಹುಮುಖೀ ಕಾರ್ಯಚಟುವಟಿಕೆಗಳಿಂದ ಭಾರತೀಯ ಭಾಷೆಗಳಲ್ಲಿ ಈಗಾಗಲೇ ತನ್ನದೇ ಆದ ಹಿರಿಮೆಯನ್ನು

ಮೆರೆದಿರುವ, ಮೆರೆಯುತ್ತಿರುವ  ಕನ್ನಡ ಭಾಷೆ–ಸಾಹಿತ್ಯ ಮತ್ತಷ್ಟು ಕಂಗೊಳಿಸುವಂತಾಗುತ್ತದೆ. ಅನೇಕ ಮಹತ್ವದ ಗ್ರಂಥಗಳು ದೊರೆಯುವಂತಾಗುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷವನ್ನು ಉಂಟುಮಾಡುತ್ತಿದೆ. ಇಂಥ ಕಾರ್ಯಗಳಿಗೆ ಸರ್ಕಾರದ ಬೆಂಬಲದ ಜೊತೆಗೆ, ಜನತೆಯ ಹೃತ್ಪೂರ್ವಕ ಪ್ರೋತ್ಸಾಹವೂ ಅಗತ್ಯವಾಗುತ್ತದೆ. ವಿವೇಚನಾಶೀಲರೂ, ಸಹೃದಯರೂ ಆದ ಕನ್ನಡಿಗರು ಇಂಥ ಪ್ರೋತ್ಸಾಹ ನೀಡುವಲ್ಲಿ ಮುಂದಾಗುತ್ತಾರೆ ಎಂದು ನಂಬಿದ್ದೇನೆ. ಅಕಾಡೆಮಿಯ ಕಾರ್ಯಚಟುವಟಿಕೆಗಳು ಇತೋಪ್ಯತಿಶಯವಾಗಿ ಮುಂದುವರಿಯಲಿ ; ಕರ್ನಾಟಕದ ಜನತೆಗೆ ಹೊಸ ಅನುಭವಗಳ ಲೋಕವನ್ನು ತೆರೆದು ತೋರುವ ಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಲಿ ಎಂದು ಈ ಸಂದರ್ಭದಲ್ಲಿ ಹಾರೈಸಬಯಸುತ್ತೇನೆ.

**(ಐ.ಎಂ. ವಿಠ್ಠಲಮೂರ್ತಿ)**

# ಪ್ರಸ್ತಾವನೆ

ಭಾರತದಲ್ಲಿ ಯಾವುದೇ ರಾಜ್ಯವೊಂದರಲ್ಲಿ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಮೊಟ್ಟಮೊದಲ ಬಾರಿಗೆ ಸ್ಥಾಪಿಸಿದ ಹಿರಿಮೆ ಕರ್ನಾಟಕ ಸರ್ಕಾರದ್ದಾಗಿದೆ. ಜನವರಿ ೬, ೨೦೦೬ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಧರ್ಮಸಿಂಗ್ ಅವರು ವಿಧ್ಯುಕ್ತವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಉದ್ಘಾಟಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಹಾಗೂ ಭಾಷಾಂತರವನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಿಕ್ಷಣ ವಿಷಯವಾಗಿ ಅಳವಡಿಸಿದ ಭಾಷಾಂತರ ಕ್ಷೇತ್ರದ ಭೀಷ್ಮಾಚಾರ್ಯರೂ ಆದ ಪ್ರೊ॥ ದೇ. ಜವರೇಗೌಡ ಅವರೂ, ಹಿರಿಯ ವಿದ್ವಾಂಸರಾದ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ ಅಕಾಡೆಮಿಯ ಕಾರ್ಯಚಟುವಟಿಕೆಗಳ ದಿಕ್ಕು–ದೆಸೆಗಳನ್ನು ನಿರ್ದೇಶಿಸಿದರು.

ನಮ್ಮ ನಾಡಿನಲ್ಲಿರುವ ವಿಚಿತ್ರ ಪರಿಸ್ಥಿತಿ ಎಂದರೆ ವಿದೇಶೀಯ ಭಾಷಾಸಾಹಿತ್ಯಗಳ ಅಷ್ಟಿಷ್ಟು ಪರಿಚಯವಾದರೂ ಇರುವ ನಮಗೆ ನಮ್ಮ ನಾಡಿನ ನೆರೆಹೊರೆಯ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯದ, ಶ್ರೇಷ್ಠ ಸಾಹಿತಿಗಳ ಪರಿಚಯ ಬಹುಮಂದಿಗೆ ಇಲ್ಲವೇ ಇಲ್ಲದಂತಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಇತರ ಕೆಲವು ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಾರ್ಯಚಟುವಟಿಕೆಗಳಲ್ಲಿ ಅನುವಾದಗಳನ್ನು ಹೊರತರುವ ಕೆಲವು ಯೋಜನೆಗಳನ್ನು ಕೈಗೊಳ್ಳುತ್ತಿರುವುದುಂಟು. ಆದರೆ, ಈ ಕಾರ್ಯಗಳು ಅಪೇಕ್ಷಣೀಯ ಪ್ರಮಾಣದಲ್ಲಿ ಹಾಗೂ ಪರಸ್ಪರ ಪೂರಕವಾಗುವ ರೀತಿಯಲ್ಲಿ ಆಗುತ್ತಿಲ್ಲ. ಮೇಲಾಗಿ ಈ ಕಾರ್ಯಕ್ರಮಗಳು ಬಹುಮಟ್ಟಿಗೆ ಸಾಹಿತ್ಯ ಕ್ಷೇತ್ರಕ್ಕೆ ಮಾತ್ರವೇ ಸೀಮಿತವಾಗಿವೆ. ಹೀಗಾಗಿ, ಪರಸ್ಪರ ಕೊಳು–ಕೊಡೆಯ ಕಾರ್ಯಕ್ರಮಗಳು ಹೆಚ್ಚು–ಹೆಚ್ಚಾಗಿ ಹಾಗೂ ವೈವಿಧ್ಯಮಯವಾಗಿ ಆಗಬೇಕಾದ ಅಗತ್ಯವೂ ಇದೆ.

ಭಾರತೀಯ ಭಾಷಾಸಾಹಿತ್ಯಗಳು ಸಮೃದ್ಧವಾಗಿ ಬೆಳೆಯಬೇಕಾದರೆ, ಎರಡು ಮುಖಗಳಲ್ಲಿ ಕಾರ್ಯಗಳು ಆಗಬೇಕಾಗಿದೆ: (೧) ರಾಷ್ಟ್ರೀಯ ಮಟ್ಟದಲ್ಲಿ; (೨) ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಷ್ಟ್ರೀಯ ಸ್ತರದಲ್ಲಿ ನಮ್ಮ ಭಾಷಾ ಸಾಹಿತ್ಯವನ್ನು ಬಿಂಬಿಸುವ ಕೆಲಸ ಎಷ್ಟು ಮುಖ್ಯವೋ, ಇತರ ಭಾಷೆಗಳಲ್ಲಿನ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಅಷ್ಟೇ ಮುಖ್ಯ. ರಾಷ್ಟ್ರೀಯ–ಅಂತಾರಾಷ್ಟ್ರೀಯ ಮಹತ್ವದ ಸಾಹಿತ್ಯವನ್ನು ಕನ್ನಡಕ್ಕೆ ತಂದುಕೊಳ್ಳುವುದು ಹಾಗೂ ಕನ್ನಡ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಿಂಬಿಸುವುದೂ ಅಷ್ಟೇ ಮುಖ್ಯ. ಈ ದೃಷ್ಟಿಯಿಂದ ನೊಬೆಲ್ ಪ್ರಶಸ್ತಿ, ಬೂಕರ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮೊದಲಾದ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದುಕೊಂಡಿರುವ ಲೇಖಕರ ಮಹತ್ವದ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುವ ಯೋಜನೆಗಳನ್ನು ಅನುವಾದ ಸಾಹಿತ್ಯ ಅಕಾಡೆಮಿ ತನ್ನ ಮುಂದಿರಿಸಿಕೊಂಡಿದೆ. ಅಷ್ಟೇ ಅಲ್ಲದೆ, ವಿಜ್ಞಾನ–ತಂತ್ರಜ್ಞಾನ,

ವೈದ್ಯಕೀಯ, ಮಾನವಿಕ ಮೊದಲಾದ ಕ್ಷೇತ್ರಗಳಲ್ಲಿನ ಶ್ರೇಷ್ಠ ಕೃತಿಗಳನ್ನು ಕನ್ನಡದಲ್ಲಿ ತರುವ ಯೋಜನೆಗಳೂ ಅಕಾಡೆಮಿಯ ಮುಂದಿವೆ. ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ, ಅಂತೆಯೇ, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ವಿಭಾಗ, ಕೇಂದ್ರೀಯ ಹಿಂದೀ ನಿರ್ದೇಶನಾಲಯ, ವೈಜ್ಞಾನಿಕ ಮತ್ತು ತಾಂತ್ರಿಕ ಪಾರಿಭಾಷಿಕ ಪದಾವಲೀ ಆಯೋಗ ಇತ್ಯಾದಿ ಸಂಸ್ಥೆಗಳೊಂದಿಗೆ ಸಂಪರ್ಕಿಸಿ ಈ ದಿಕ್ಕಿನಲ್ಲಿ ಸಹಕಾರವನ್ನು ಪಡೆದುಕೊಳ್ಳುವ ಆಲೋಚನೆಯನ್ನೂ ಅಕಾಡೆಮಿ ಇರಿಸಿಕೊಂಡಿದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಕಾರ್ಯಶಿಬಿರಗಳನ್ನು ಆಯೋಜಿಸಿ, ಅನುವಾದದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ, ಸಮರ್ಥ ಭಾಷಾಂತರಕಾರರನ್ನು ಗುರುತಿಸುವ ಪ್ರಯತ್ನಗಳನ್ನು ಅಕಾಡೆಮಿ ಮಾಡುತ್ತಿದೆ. ಈಗಾಗಲೇ ಕನ್ನಡ–ತೆಲುಗು, ಕನ್ನಡ–ಹಿಂದೀ, ಯಂತ್ರಾನುವಾದ, ವಿಜ್ಞಾನ ಸಾಹಿತ್ಯ ಅನುವಾದ ಇವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಬೇರೆ–ಬೇರೆ ಕೇಂದ್ರಗಳಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಕಾರ್ಯಶಿಬಿರಗಳನ್ನೂ, ವಿಚಾರಗೋಷ್ಠಿಗಳನ್ನೂ ನಡೆಸಲಾಗಿದೆ. ಉರ್ದೂ ಮತ್ತು ತಮಿಳು ಭಾಷೆಗಳ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಭಾಷಾಂತರ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಕ್ಕೆ ತೆಗೆದುಕೊಂಡು ಆ ದಿಕ್ಕಿನಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವ ಆಲೋಚನೆಯೂ ಇದೆ. ಇತ್ತೀಚೆಗೆ ಸ್ಯಾಮ್ ಪಿಟ್ರೋಡಾ ಅವರು 'ರಾಷ್ಟ್ರೀಯ ಅನುವಾದ ಮಿಷನ್' (National Translation Mission) ಅನ್ನು ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯೊಂದನ್ನು ಸಲ್ಲಿಸಿದ್ದು, ಕೇಂದ್ರ ಸರ್ಕಾರ ಆ ಯೋಜನೆಯನ್ನು ಒಪ್ಪಿಕೊಂಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದಲ್ಲಿ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳು ಜನಸಾಮಾನ್ಯರ ವರೆಗೂ ಯಶಸ್ವಿಯಾಗಿ ಮುಟ್ಟುವುದು ಸಾಧ್ಯವಾಗುತ್ತದೆ ಹಾಗೂ ರಾಷ್ಟ್ರದ ಪ್ರಗತಿಯೂ ಅಭೂತಪೂರ್ವ ರೀತಿಯಲ್ಲಿ ಆಗುತ್ತದೆ ಎಂದು ಆಶಿಸಲಾಗಿದೆ. ಈ ಯೋಜನೆ ಉದ್ಯೋಗಸೃಷ್ಟಿಯ ಮಹತ್ತರ ಯೋಜನೆಯೂ ಆಗಲಿದೆ. ಇಂಥ ಸಂದರ್ಭದಲ್ಲಿ ಅಗತ್ಯವಾಗುವ ಲಕ್ಷಾಂತರ ಮಂದಿ ಅನುವಾದಕರ ಪಡೆಯನ್ನು ಸಿದ್ಧಪಡಿಸುವುದು ಇಂಥ ಸಂಸ್ಥೆಗಳ ಮತ್ತು ವಿಶ್ವವಿದ್ಯಾನಿಲಯಗಳ ಹೊಣೆಯೇ ಆಗಿರುತ್ತದೆ. ರಾಜ್ಯದ ಹಾಗೂ ಹೊರಗಿನ ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ಭಾಷಾಂತರ ವಿಭಾಗಗಳು ಸ್ಥಾಪಿತವಾಗಿದ್ದು, ಅವು ಕಾರ್ಯಶೀಲವಾಗುತ್ತಿರುವುದು ಶುಭಸೂಚಕವಾಗಿದೆ.

ಇದುವರೆಗೆ ವಿದ್ವಾಂಸರ ವೈಯಕ್ತಿಕ ಪಾಂಡಿತ್ಯ, ವ್ಯುತ್ಪತ್ತಿ ಮತ್ತು ಒಲವನ್ನು ಆಧರಿಸಿ ಅನುವಾದ ಕಾರ್ಯಗಳು ನಡೆಯುತ್ತಾ ಬಂದಿವೆ. ಆದರೆ ಇಂಥ ಕಾರ್ಯಗಳು ವ್ಯವಸ್ಥಿತವಾಗಿ ಹಾಗೂ ಉತ್ತಮ ಗುಣಮಟ್ಟದೊಂದಿಗೆ ನಡೆಯಬೇಕಾದ್ದು ಅಪೇಕ್ಷಣೀಯವಾಗಿರುವ ಹಿನ್ನೆಲೆಯಲ್ಲಿ, ಭಾಷಾಂತರ ಸಂಬಂಧವಾದ ಶಿಕ್ಷಣ–ಕ್ರಮಗಳನ್ನು ರೂಪಿಸುವುದು ಹಾಗೂ ದ್ವಿಭಾಷಾ ಮತ್ತು ಬಹುಭಾಷಾ ನಿಘಂಟುಗಳನ್ನು, ನುಡಿಗಟ್ಟುಗಳ ಮತ್ತು ಗಾದೆಗಳ ಕೋಶಗಳು, ಸಮಾನಾರ್ಥಕ ಮತ್ತು ಭಿನ್ನಾರ್ಥಕ ಕೋಶಗಳು ಹಾಗೂ ವಾಕ್ಯರಚನಾ ಕೈಪಿಡಿಗಳನ್ನು ಹೊರತರುವುದು – ಇವೇ ಮೊದಲಾದ ಕಾರ್ಯಗಳು ಆದ್ಯತೆಯ ಮೇರೆಗೆ ನಡೆಯಬೇಕಾಗಿವೆ. ಅನುವಾದ ಅಕಾಡೆಮಿ ಸ್ಥಾಪಿತವಾದ ಅತ್ಯಲ್ಪ ಅವಧಿಯಲ್ಲಿಯೇ

ಇತರ ಸಂಘ–ಸಂಸ್ಥೆಗಳ ಗಮನವನ್ನು ಸೆಳೆದಿದ್ದು, ಅಂತರರಾಷ್ಟ್ರೀಯ ಕನಕದಾಸ ಮಿಷನ್‌ನಂತಹ ಸಂಸ್ಥೆ ಅನುವಾದ ಅಕಾಡೆಮಿಯೊಂದಿಗೆ ಸಹಕರಿಸಲು ಮುಂದೆ ಬಂದಿರುವುದು ಗಮನಾರ್ಹವಾದ ವಿಚಾರವೇ ಆಗಿದೆ. ಅಂತೆಯೇ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕನ್ನಡದಲ್ಲಿ ಹೊರತರುವ ಬಗ್ಗೆಯೂ ಆಲೋಚನೆ ಮಾಡಲಾಗುತ್ತಿದೆ. ಹೀಗೆ ಅನುವಾದ ಅಕಾಡೆಮಿ ಅನೇಕ ದಿಕ್ಕುಗಳಲ್ಲಿ ಮುಂದುವರಿದು ಸಾಧನೆ ಮಾಡಬೇಕಾಗಿದೆ.

ಕರ್ನಾಟಕ ಸರ್ಕಾರ ಅನುವಾದ ಅಕಾಡೆಮಿಯ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿ ಅಗತ್ಯವಾದ ನೆರವನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ವಿಶೇಷ ಸಂತೋಷದ ವಿಚಾರವೇ ಆಗಿದೆ. ಅದರಲ್ಲಿಯೂ ಈ ಬಾರಿ ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ ವಿಶೇಷ ಧನಸಹಾಯ ನೀಡಿರುವುದರಿಂದ ಪ್ರಸಿದ್ಧ/ಅಲಭ್ಯ ಅನುವಾದಗಳ ಮರುಪ್ರಕಟಣೆ ಕಾರ್ಯವನ್ನು ಕೈಗೊಳ್ಳುವುದು, ಮತ್ತಿತರ ಮಹತ್ವದ ಪ್ರಕಟಣೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಈ ದಿಕ್ಕಿನಲ್ಲಿ ನಾಡಿನ ವಿದ್ವಾಂಸರು ವಿಶೇಷವಾದ ಸಹಾಯ–ಸಹಕಾರಗಳನ್ನು ನೀಡಲು ಮುಂದೆ ಬಂದಿರುವುದು ಅಕಾಡೆಮಿಗೆ ಗೌರವದ, ಸಂತೋಷದ ಹಾಗೂ ಹೆಮ್ಮೆಯ ವಿಚಾರವೇ ಆಗಿದೆ. ಈ ಸಂದರ್ಭದಲ್ಲಿ ವಿಲ್ ಡ್ಯೂರಾಂಟ್ ಅವರ ಜಗತ್–ಪ್ರಸಿದ್ಧವಾಗಿರುವ ಹಾಗೂ ಭಾರತದ ಬೇರಾವ ಭಾಷೆಯಲ್ಲೂ ಇನ್ನೂ ಬೆಳಕು ಕಾಣದಿರುವ 'ದಿ ಸ್ಟೋರಿ ಆಫ್ ಸಿವಿಲಿಜೇಷನ್' ಸಂಪುಟಗಳ ಕನ್ನಡ ಅನುವಾದವನ್ನು ಹೊರತರುವಲ್ಲಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಅವರೂ, ಬಹಳ ಹಿಂದೆಯೇ ಇಂಗ್ಲಿಷ್‌ನಲ್ಲಿ ೧೦ ಸಂಪುಟಗಳಲ್ಲಿ ಪ್ರಕಟಣೆಗೊಂಡಿರುವ ಸಂಸ್ಕೃತ ಸಾಹಿತ್ಯದ ವಿಶಿಷ್ಟ ಕೃತಿಯಾದ ಸೋಮದೇವನ 'ಕಥಾಸರಿತ್ಸಾಗರ'ದ ಕನ್ನಡ ಅನುವಾದವನ್ನು ನೇರವಾಗಿ ಸಂಸ್ಕೃತದಿಂದ ಅನುವಾದಿಸಿ ಹೊರತರುವಲ್ಲಿ ಡಾ॥ ಪಿ.ಎಸ್.ರಾಮಾನುಜಮ್ ಅವರೂ ನೆರವು ನೀಡುತ್ತಿರುವುದು ವಿಶೇಷವಾಗಿ ಸ್ಮರಣೀಯವಾಗಿದೆ. ಕನ್ನಡ ಸಹೃದಯಲೋಕ ಅಕಾಡೆಮಿಯ ಈ ಕಾರ್ಯಚಟುವಟಿಕೆಗಳ ವಿಷಯದಲ್ಲಿ ತನ್ನ ಸಹೃದಯತೆಯನ್ನು ಮೆರೆಯುತ್ತದೆ ಎಂದು ಆಶಿಸಿದ್ದೇನೆ.

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಸ್ಥಾಪನೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಧರ್ಮಸಿಂಗ್ ಅವರಿಗೂ, ಅಕಾಡೆಮಿಯ ಕಾರ್ಯಚಟುವಟಿಕೆಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ತೋರಿ, ಎಲ್ಲ ನೆರವನ್ನು ನೀಡುತ್ತಿರುವ ಇಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಅವರಿಗೂ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀ ಮಹದೇವ ಪ್ರಸಾದ್ ಅವರಿಗೂ ಅಕಾಡೆಮಿ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ. ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಬಗೆಯ ಸಹಾಯ–ಸಹಕಾರ–ಮಾರ್ಗದರ್ಶನ ನೀಡುತ್ತಾ ಬಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀಮತಿ ಉಷಾ ಗಣೇಶ್ ಅವರಿಗೂ, ಚೈತನ್ಯಶೀಲರೂ, ದೂರಗಾಮಿ ದೃಷ್ಟಿಯನ್ನುಳ್ಳವರೂ ಆದ ಇಂದಿನ

ಕಾರ್ಯದರ್ಶಿಗಳಾದ ಶ್ರೀ ಐ.ಎಂ.ವಿಠ್ಠಲಮೂರ್ತಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿಂದಿನ ಆಯುಕ್ತರುಗಳಾಗಿದ್ದ ಶ್ರೀ ಕೆ.ಆರ್.ನಿರಂಜನ್ ಮತ್ತು ಶ್ರೀ ಎಸ್.ಎಫ್. ಯೋಗಪ್ಪನವರ್ ಅವರಿಗೂ, ನಿರ್ದೇಶಕರಾಗಿರುವ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ಅಕಾಡೆಮಿ ವಿಶೇಷ ವಂದನೆಗಳನ್ನು ಸೂಚಿಸಬಯಸುತ್ತದೆ.

ಅಕಾಡೆಮಿಯ ಕಾರ್ಯಚಟುವಟಿಕೆಗಳಿಗೆ ಎಲ್ಲ ಸಹಾಯ, ಸಹಕಾರ ಮತ್ತು ಮಾರ್ಗದರ್ಶನ ಮಾಡುತ್ತಿರುವ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೂ ನಮ್ಮ ವಂದನೆಗಳು ಸಲ್ಲುತ್ತವೆ.

ಸುಪ್ರಸಿದ್ಧ ಫ್ರೆಂಚ್ ಕಾದಂಬರಿಕಾರನೂ, ನಾಟಕಕಾರನೂ ಆಗಿದ್ದ ಅಲೆಕ್ಸಾಂಡರ್ ಡ್ಯೂಮಾನ (೧೮೦೩–೧೮೭೦) ಕೃತಿಗಳಲ್ಲಿ 'ಲೆ ಕಾಮ್ಟೆ ದ ಮಾಂಟೆಕ್ರಿಸ್ಟೊ' ('ದಿ ಕೌಂಟ್ ಆಫ್ ಮಾಂಟೆಕ್ರಿಸ್ಟೋ') ಅತ್ಯಂತ ಜನಪ್ರಿಯವಾಗಿದ್ದು, ಜಗತ್ತಿನ ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ. ಸಮಕಾಲೀನ ಇತಿಹಾಸದ ಸಂಘರ್ಷ–ಗೊಂದಲಗಳನ್ನೂ, ಜನಜೀವನದ ಕಷ್ಟ–ಸಂಕಷ್ಟಗಳನ್ನೂ ರೋಮಾಂಚಕ ಕಥೆಯೊಂದರ ಹಿನ್ನೆಲೆಯಲ್ಲಿ ಸ್ವಾರಸ್ಯಕರವಾಗಿ ಸೆರೆಹಿಡಿದಿರುವುದು ಈ ಕೃತಿಯ ವೈಶಿಷ್ಟ್ಯ. ಕನ್ನಡದಲ್ಲಿ (೧೯೨೩ರ ಹೊತ್ತಿಗೆ) ಶ್ರೀನಿವಾಸಾಚಾರ್ಯ ಅವರು ಮೂರು ಭಾಗಗಳಲ್ಲಿ ಇದನ್ನು ಕನ್ನಡಕ್ಕೆ ತುಂಬ ಯಶಸ್ವಿಯಾಗಿ ರೂಪಾಂತರಿಸಿದ್ದರು. ಅದು ಮರಣೋತ್ತರವಾಗಿ ಕನ್ನಡದಲ್ಲಿ ಪ್ರಕಟವಾದ ವಿಚಾರವನ್ನು ಚಿ. ವಾಸುದೇವಯ್ಯನವರು ಉಲ್ಲೇಖಿಸಿದ್ದಾರೆ. ಇಂಗ್ಲಿಷ್ ಮೂಲದಿಂದಲೇ ಅನುವಾದಿಸಿದ್ದರೂ, ಕನ್ನಡ ಓದುಗರಿಗೆ ಹೃದ್ಯವಾಗಬೇಕೆಂಬ ಉದ್ದೇಶದಿಂದ ಅದನ್ನು 'ರಾಜಾ ಮಲಯಸಿಂಹ'ನ ಕಥೆಯಾಗಿ ರೂಪಾಂತರಿಸಿದ್ದಾರೆ. ಮೂಲದ ಕೆಲವೊಂದು ವರ್ಣನ ಭಾಗಗಳು ಮತ್ತು ಇತರ ವಿವರಗಳನ್ನು ಕೈಬಿಟ್ಟಿದ್ದರೂ ಸ್ವಾರಸ್ಯ ಕುಂದದಂತೆ ಕಥೆಯನ್ನು ನಿರೂಪಿಸಲಾಗಿದೆ. ಇದು ತುಂಬ ಜನಪ್ರಿಯವಾಗಿ ೧೯೭೨ ಮತ್ತು ೧೯೮೪ರಲ್ಲಿ ಮರುಮುದ್ರಣಗೊಂಡಿದೆ. ೧೯೫೦ರಲ್ಲಿ ಉಲ್ಲಾಳ ಮಂಗೇಶರಾಯರು 'ವಿಧಿಯ ವೈಚಿತ್ರ್ಯ' ಎಂಬ ಹೆಸರಿನಲ್ಲಿ ಇದೇ ಕೃತಿಯ ಸಂಗ್ರಹಾನುವಾದವನ್ನು ಪ್ರಕಟಿಸಿದ್ದರೆಂಬುದನ್ನೂ ಇಲ್ಲಿ ಉಲ್ಲೇಖಿಸಬಹುದಾಗಿದೆ. ಇಂಥ ಜನಪ್ರಿಯ ಕೃತಿಯನ್ನು ಸುವರ್ಣ ಕರ್ನಾಟಕ ಮಾಲೆಯ ಅಂಗವಾಗಿ ಹೊರತರಲು ಸಾಧ್ಯವಾಗಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ಅಲಭ್ಯವಾಗಿದ್ದ ಈ ಸಂಪುಟಗಳನ್ನು ತಮ್ಮ ವೈಯಕ್ತಿಕ ಗ್ರಂಥಭಂಡಾರದಿಂದ ಒದಗಿಸಿಕೊಟ್ಟಿರುವ ಅನುವಾದ ಸಾಹಿತ್ಯ ಅಕಾಡೆಮಿಯ ಸಹ–ಸದಸ್ಯರಾದ ಶ್ರೀ ಎಸ್. ಆರ್. ಗೌತಮ್ ಅವರಿಗೆ ನಮ್ಮ ವಿಶೇಷ ವಂದನೆಗಳು ಸಲ್ಲುತ್ತವೆ. ಮೂರು ಭಾಗಗಳಲ್ಲಿರುವ ಕೃತಿಯ ಮೂರನೆಯ ಭಾಗ ಇದು.

ಇದರ ಭಾಷೆ ಸುಮಾರು ೩೫ ವರ್ಷಗಳಷ್ಟು ಹಿಂದಿನದು. ಹೀಗಾಗಿ ಇಂದು ಸ್ವಲ್ಪಮಟ್ಟಿಗೆ ವಿಚಿತ್ರವೆನ್ನಿಸಿದರೂ ಅದನ್ನು ಹಾಗೆಯೇ ಇರಿಸಿಕೊಳ್ಳಲಾಗಿದೆ. ಎದ್ದು ಕಾಣುವಂತಿದ್ದ ಅಚ್ಚಿನ ತಪ್ಪುಗಳನ್ನಷ್ಟೇ ಸರಿಪಡಿಸಲಾಗಿದೆ. ಈ ಆವೃತ್ತಿ ಕನ್ನಡ ಓದುಗರಿಗೆ ಪ್ರಿಯವಾಗುತ್ತದೆಂದು ನಂಬಿದ್ದೇವೆ.

ಅನುವಾದ ಅಕಾಡೆಮಿಯ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಅಕಾಡೆಮಿಯ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೆ ಹಾಗೂ ತಮ್ಮ ಅನೇಕ ಕಾರ್ಯಗಳ ನಡುವೆಯೂ ಬಿಡುವು

ಮಾಡಿಕೊಂಡು ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಶ್ರೀ ವಿ. ನಾಗರಾಜರಾವ್ ಅವರಿಗೆ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೆ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**

ಅಧ್ಯಕ್ಷ

# ಪರಿವಿಡಿ


| | |
|---|---|
| ಮುನ್ನುಡಿ | v |
| ಶುಭಾಕಾಂಕ್ಷೆ | vi |
| ಹೊಸ ಹೆಜ್ಜೆ | vii |
| ಪ್ರಸ್ತಾವನೆ | ix |
| ರಾಜಾ ಮಲಯಸಿಂಹ (ಭಾಗ - ೩) | ೧–೨೦೭ |

# ರಾಜಾ ಮಲಯಸಿಂಹ

## ಭಾಗ ೩

ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಪ್ರಕಟಣೆ - ೨೫

ಸಾಹಿತ್ಯಮಾಲೆ - ೨೪

ಪ್ರಧಾನ ಸಂಪಾದಕರು

**ಡಾ. ಪ್ರಧಾನ್ ಗುರುದತ್ತ**

# ರಾಜಾ ಮಲಯಸಿಂಹ

ಭಾಗ - ೨

೫೨
# ಅನಂತರಾಜುವಿನ ಅಭಿವೃದ್ಧಿ

ಈ ಮಧ್ಯೆ ಬೊಮ್ಮರಾಜು ತನ್ನ ಊರಿಗೆ ಹೋಗಿ ಸೈನ್ಯಕ್ಕೆ ಸೇರದೆ ಎಂದಿಗಿಂತ ಹೆಚ್ಚಾಗಿ ಜೂಜಾಟದಲ್ಲಿ ನಿರತನಾದನು. ತಂದೆಯಂತೆ ನಟಿಸಿದುದಕ್ಕಾಗಿ ಅವನ ಪಯಣದ ವೆಚ್ಚಕ್ಕೆ ಕೊಟ್ಟಿದ್ದ ಹಣವೆಲ್ಲಾ ಆಗಲೇ ಮುಗಿದುಹೋಗಿದ್ದಿತು. ಅವನು ಊರಿಗೆ ಹೋದ ಮೇಲೆ ಅವನ ಮಗನೆನಿಸಿದ್ದ ಅನಂತರಾಜು ದೊಡ್ಡ ಮನುಷ್ಯರ ಜತೆಯಲ್ಲೆಲ್ಲಾ ಓಡಾಡುತ್ತಲಿದ್ದನು. ದೊಡ್ಡ ನಗರದಲ್ಲಿ ಗೌರವಸ್ಥನೆನಿಸಿಕೊಳ್ಳಬೇಕಾದರೆ ಸ್ಫುರದ್ರೂಪಿಯಂತೆ ವೇಷ ಹಾಕಿಕೊಳ್ಳುವುದೂ, ದೇಶಭಾಷೆಯನ್ನು ಚೆನ್ನಾಗಿ ಆಡುವುದೂ, ಜೂಜಾಟಗಳಲ್ಲಿ ಸೇರುವುದೂ, ಹಣವನ್ನು ರೊಕ್ಕವಾಗಿ ಸಲ್ಲಿಸುವುದೂ, ಇವುಗಳೇ ಮುಖ್ಯವಾದ ಗುಣಗಳು. ಅನಂತರಾಜುವಿಗೆ ಇವೆಲ್ಲವೂ ಪರಿಪೂರ್ಣವಾಗಿ ಇದ್ದುದರಿಂದ ಅವನನ್ನು ಜಹಗೀರುದಾರನೆಂದೂ ಲಕ್ಷಾಂತರ ವರಹಗಳ ಖಾವಿಂದನೆಂದೂ, ಕೋಟ್ಯಾಧೀಶ್ವರನ ಮಗನೆಂದೂ ಎಲ್ಲರೂ ಪ್ರಸ್ತಾಪ ಮಾಡುತ್ತ ಗೌರವಿಸುತ್ತಿದ್ದರು.

ಒಂದು ದಿನ ಬೆಳಿಗ್ಗೆ ಮಲಯಸಿಂಹನು ದುರ್ಮತಿಯನ್ನು ನೋಡುವುದಕ್ಕೆ ಅವನ ಮನೆಗೆ ಹೋದನು. ಮನೆಯ ಬಾಗಿಲಲ್ಲಿ ಇದ್ದ ಆಳು "ಸ್ವಾಮೀ, ಯಜಮಾನರು ಮನೆಯಲ್ಲಿ ಇಲ್ಲ. ಅಮ್ಮನವರು ಒಳಗೆ ಇದ್ದಾರೆ" ಎಂದನು. ರಾಜನು ಒಳಕ್ಕೆ ಹೋದನು. ಭೂತದ ಮನೆಯಲ್ಲಿ ಊಟವಾದಂದಿನಿಂದ ಭಾಮಿನಿಗೆ ಮಲಯಸಿಂಹನೆಂದರೆ ಒಂದು ವಿಧವಾದ ಭಯವುಂಟಾಗಿದ್ದಿತು. ಆದರೂ ಅವನು ಬಾರದಿದ್ದರೆ ಅವಳಿಗೆ ಮನಸ್ಸಿನಲ್ಲಿ ನೆಮ್ಮದಿಯಾಗುತ್ತಿರಲಿಲ್ಲ. ಅವನು ತನ್ನ ಮುಖಕಮಲವನ್ನು ವಿಕಾಸ ಮಾಡಿಕೊಂಡು ಒಂದೆರಡು ಸವಿಮಾತುಗಳನ್ನಾಡಿದರೆ ಅವಳಿಗೆ ಅವನಲ್ಲಿದ್ದ ಭಯವು ತೊಲಗಿ ವಿಶ್ವಾಸವು ನೆಲೆಗೊಳ್ಳುತ್ತಲಿದ್ದಿತು.

ಮಲಯಸಿಂಹನು ಒಳಗೆ ಹೋದಾಗ ಭಾಮಿನಿಯೂ, ವಿಲಾಸಿನಿಯೂ, ಅನಂತರಾಜುವೂ ಒಂದು ಕಡೆಯಲ್ಲಿ ಕುಳಿತು ಕೆಲವು ಚಿತ್ರಪಟಗಳನ್ನು ನೋಡುತ್ತ ಅವುಗಳ ಗುಣದೋಷಗಳ ವಿಚಾರವಾಗಿ ಚರ್ಚಿಸುತ್ತಲಿದ್ದರು. ಮಧ್ಯೆ ಮಧ್ಯೆ ಅನಂತರಾಜುವು ಪ್ರೇಮದೃಷ್ಟಿಯನ್ನು ವಿಲಾಸಿನಿಯ ಮೇಲೆ ಸುಳಿಸುತ್ತಲಿದ್ದನು. ಅವಳು ಅದನ್ನು ಸಡ್ಡೆಗೈಯ್ಯುತ್ತಿರಲಿಲ್ಲ. ರಾಜನೊಂದಿಗೆ ಅವಳು ಒಂದೆರಡು ಮಾತನ್ನಾಡಿ

ತನ್ನ ಕೊಠಡಿಗೆ ಹೊರಟುಹೋದಳು. ಅಲ್ಲಿ ತನ್ನ ಉಪಾಧ್ಯಾಯಿನಿಯಾಗಿದ್ದ ಅಮೃತವಲ್ಲಿಯ ಜತೆಯಲ್ಲಿ ಕುಳಿತು ವೀಣಾಗಾನವನ್ನು ಮಾಡತೊಡಗಿದಳು. ಅನಂತರಾಜುವನ್ನು ಅವಳು ಒಳಕ್ಕೆ ಕರೆಯಲಿಲ್ಲ. ಅವನು ಇದ್ದ ಕಡೆಯಲ್ಲೇ ಸುಮ್ಮನೆ ಒದ್ದಾಡುತ್ತಲಿದ್ದನು.

ಅಷ್ಟರಲ್ಲಿಯೇ ದುರ್ಮತಿಯು ಮನೆಗೆ ಬಂದು ಮಲಯಸಿಂಹನನ್ನು ನೋಡಿದ ಬಳಿಕ ಅನಂತರಾಜುವು ಅವನ ದೃಷ್ಟಿಗೆ ಬಿದ್ದನು. ಅವನು ನಿಂತಿರುವುದನ್ನು ಕಂಡು "ಇದೇಕೆ ನೀವು ಇಲ್ಲಿ ಒಬ್ಬರೇ ನಿಂತಿದ್ದೀರಿ ? ಅವರು ನಿಮ್ಮನ್ನು ಒಳಕ್ಕೆ ಬರಹೇಳಲಿಲ್ಲವೋ ?" ಎನ್ನಲು, ಅವನು ಸಂಕಟದಿಂದ "ಇಲ್ಲ" ಎಂದು ಹೇಳಿದನು. ಆಗ ದುರ್ಮತಿಯು ವಿಲಾಸಿನಿಯ ಕೊಠಡಿಯ ಬಾಗಿಲನ್ನು ತೆರೆದು ಅವನನ್ನು ಒಳಕ್ಕೆ ಕರೆದುಕೊಂಡು ಹೋಗಿ ಕುಳ್ಳಿರಿಸಿದನು. ಅಲ್ಲಿ ಸಂಗೀತವು ನಡೆಯುತ್ತಲಿದ್ದಿತು. ಆಗ ರಾಜನಿಗೆ ಅನಂತರಾಜುವಿನ ಧ್ವನಿಯನ್ನು ಕೇಳಿ ಭದ್ರದತ್ತನ ಜ್ಞಾಪಕವು ಬಂದಿತು.

ಈಚೆಗೆ ಮೂರು ನಾಲ್ಕು ಲಕ್ಷ ವರಹಗಳು ನಷ್ಟವಾದರೂ ತನ್ನ ಗಂಡನು ಲಕ್ಷ್ಯಮಾಡದೆ ಇದ್ದಾನೆಂದು ಅವನ ಧೈರ್ಯವನ್ನು ಕುರಿತು ಭಾಮಿನಿಯು ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದಳು.

"ಓಹೋ ! ಈಗ ತಿಂಗಳ ಹಿಂದೆ ತನಗಾದ ನಷ್ಟಗಳನ್ನು ಹೇಳಿಕೊಂಡು ಜಂಭ ಮಾಡುತ್ತಲಿದ್ದನು. ಈಗ ಅವುಗಳನ್ನು ಮರೆಸುತ್ತಲಿದ್ದಾನೆ. ಇದನ್ನು ನೋಡಿದರೆ ಇವನ ಸ್ಥಿತಿಯು ಚೆನ್ನಾಗಿಲ್ಲ" ಎಂದುಕೊಂಡು ರಾಜನು "ಅಮ್ಮಾ, ನಿಮ್ಮ ಯಜಮಾನರೇನು ಸಾಮಾನ್ಯರೇ ? ಸರ್ಕಾರೀ ಪತ್ರಗಳನ್ನು ವಿಲೇ ಮಾಡುವುದರಲ್ಲಿ ನಿಪುಣರು. ಎಷ್ಟು ನಷ್ಟಗಳಾದರೇನು ? ಮುಂದೆ ಯಾವಾಗಲಾದರೂ ಒಂದಕ್ಕೆ ಎರಡರಷ್ಟು ಲಾಭವನ್ನು ಸಂಪಾದಿಸಬಲ್ಲರು."

"ಸ್ವಾಮೀ, ಅವರು ವ್ಯಾಪಾರವನ್ನು ಮಾಡುತ್ತಿರಲಿಲ್ಲ."

"ಓಹೋ ! ಮರೆತೆ. ನೀವು ಮಾಡುತ್ತೀರೆಂದು ದಮನಕರು ಹೇಳಿದ್ದರು."

"ಯಾವಾಗಲೋ ಒಂದೆರಡು ಸಾರಿ ಮಾಡಿದ್ದೆನು ; ಈಚೆಗೆ ಅದನ್ನೂ ಬಿಟ್ಟುಬಿಟ್ಟೆ"

"ದಮನಕರೆಲ್ಲಿ ? ಎರಡು ಮೂರು ದಿವಸಗಳಿಂದಲೂ ಕಾಣಿಸುವುದಿಲ್ಲ. ಅಮ್ಮಾ, ನೀವು ವ್ಯಾಪಾರ ಮಾಡದೆ ಇರುವುದು ತಪ್ಪು ; ಅದೃಷ್ಟವನ್ನು ನೆಚ್ಚುವುದಕ್ಕಿಲ್ಲ. ಗಾಳಿ ಬಂದಾಗ ತೂರಿಕೊಳ್ಳುವುದೀಗ ಬುದ್ಧಿವಂತಿಕೆ. ನಾನು ಹೆಂಗಸಾಗಿದ್ದು ನಿಮ್ಮಂತೆ ಧನಾಗಾರ ಪತಿಯ ಕೈ ಹಿಡಿದಿದ್ದರೆ ಗಂಡನ ವ್ಯಾಪಾರವನ್ನೂ ಆಸ್ತಿಯನ್ನೂ ನೆಚ್ಚದೆ ಸ್ವಂತಕ್ಕೆ ಅಷ್ಟು ಹಣ ಮಾಡಿಕೊಂಡು ಗಂಡನಿಗೆ ತಿಳಿಯದಂತೆ ಬೇರೆ ಒಬ್ಬನನ್ನು ನಮ್ರ ಸಚಿವನನ್ನಾಗಿ ಮಾಡಿಕೊಂಡು ಆ ಹಣವನ್ನು ಅವನ ಕೈಯಲ್ಲಿ ಕೊಟ್ಟು ಭದ್ರಪಡಿಸಿಕೊಳ್ಳುತ್ತಲಿದ್ದೆನು" ಎಂದು ರಾಜನು ದಮನಕನ ಪ್ರಸ್ತಾಪವಾದ ಮೇಲೆ ಈ ಮಾತನ್ನು ಹೇಳಲು, ಭಾಮಿನಿಗೆ ಉಳುಕಿ

ತುಂಬ ನಾಚಿಕೆಯಾಯಿತು. ಮುಂದೆ ಇನ್ನೇನು ಪ್ರಸ್ತಾಪವನ್ನು ಎತ್ತುವನೋ ಎಂದು ದಿಗಿಲು ಬಿದ್ದು,

"ಸ್ವಾಮೀ, ವಲ್ಲಭದೇವನ ಮನೆಯಲ್ಲಿ ನಡೆದ ಅನಾಹುತವನ್ನು ಕೇಳಿದಿರೋ ?" ಎಂದಳು. ಅದಕ್ಕೆ ಅವನು ಏನೂ ತಿಳಿಯದವನಂತೆ,

"ಏನು ನಡೆಯಿತು ? ಈಚೆಗೆ ನಾನು ಅತ್ತಹಡೆ ಹೋಗಲೇ ಇಲ್ಲ."

"ಶಾಂತವೀರನ ಹೆಂಡತಿ ತೀರಿಹೋದಳು."

"ಮಕ್ಕಳ ಮೊಮ್ಮಕ್ಕಳ ಕಣ್ಣ ಮುಂದೆ ಮುದುಕರು ಸಾಯುವುದೇನೋ ಸಹಜವೇ."

"ಅಷ್ಟೇ ಅಲ್ಲ."

"ಮತ್ತೇನು ?"

"ವೀರಸಿಂಹನಿಗೂ ವಿಮಲೆಗೂ ನಡೆಯಬೇಕಾದ ಮದುವೆಯೂ, ನಿಂತುಹೋಯಿತು. ಅವನು ಅವಳನ್ನು ಮದುವೆಯಾಗುವುದಿಲ್ಲವೆಂದು ಹೇಳುತ್ತಾನಂತೆ."

"ಏತಕ್ಕೆ ಹಾಗೆ ಹೇಳುತ್ತಾನಂತೆ ?"

"ಏತಕ್ಕೋ ಗೊತ್ತಿಲ್ಲ."

"ಅಯ್ಯೋ ಪಾಪ ! ಈ ಅವಮಾನವನ್ನು ವಲ್ಲಭದೇವನು ಹೇಗೆ ತಾನೇ ಸಹಿಸಾನು ?" ಎಂದು ರಾಜನು ಹೇಳುತ್ತಿರುವಾಗ ದುರ್ಮತಿಯು ಅವನ ಬಳಿಗೆ ಬಂದು,

"ಸ್ವಾಮೀ, ರಾಜರೇ, ರಾಜಕುಮಾರ ಅನಂತರಾಜು ಯೋಗ್ಯನು. ಅವನು ತನ್ನ ರೂಪದಿಂದಲೂ ವಿದ್ಯೆಯಿಂದಲೂ ಬುದ್ಧಿಯಿಂದಲೂ ಐಶ್ವರ್ಯದಿಂದಲೂ ರಾಜಕುಮಾರನ ಹಾಗೆ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಾನೆ. ಅವನು ಅರಸನ ಮಗನಲ್ಲವೇ !" ಎಂದು ಕೇಳಲು, ರಾಜನು,

"ನನಗೆ ಅವನ ವಿಷಯವಾವುದೂ ತಿಳಿಯದು. ಅವರಪ್ಪನು ಶ್ರೀಮಂತನೆಂದು ಕೇಳಿದ್ದೆ. ನೀವು ಕೇಳುವುದನ್ನು ನೋಡಿದರೆ ನಿಮಗೆ ಉದಯಸಿಂಹನ ಮೇಲಣ ಅಭಿಮಾನವು ತಪ್ಪಿಹೋಗಿ ಅನಂತರಾಜುವಿನಲ್ಲಿ ನೆಲೆಗೊಂಡಂತೆ ತೋರುತ್ತದೆ."

ಆಗ ಭಾಮಿನಿಯು ಗಂಡನನ್ನು ನೋಡಿ,

"ವಿಲಾಸಿನಿಯನ್ನು ಉದಯಸಿಂಹನಿಗೆ ಕೊಟ್ಟು ಮದುವೆ ಮಾಡುವುದಾಗಿ ನಿಶ್ಚಯ ಮಾಡಿಕೊಂಡಿರುವಾಗ ಅನಂತರಾಜುವನ್ನು ಹೀಗೆ ಸೇರಿಸಿಕೊಳ್ಳುವುದು ಸರಿಯಲ್ಲ."

"ಏತಕ್ಕೆ ?"

"ಒಂದು ವೇಳೆ ಉದಯಸಿಂಹನು ಬಂದು ನೋಡಿದರೆ ಏನೆಂದುಕೊಂಡಾನು?"

"ಸಾಧಾರಣವಾಗಿ ಅವನು ನಮ್ಮ ಮನೆಗೆ ಬರುವುದೇ ಅಪರೂಪ. ಒಂದು ವೇಳೆ ಹಾಗೇನಾದರೂ ಬಂದು ಅಸಮಾಧಾನಪಟ್ಟುಕೊಂಡರೆ, ನಾನು ಅದನ್ನು ಲಕ್ಷ್ಯ ಮಾಡುತ್ತೇನೆಯೆ ?" ಎಂದು ದುರ್ಮತಿಯು ಹೇಳುತ್ತಿದ್ದ ಹಾಗೆಯೇ ಆಳು ಬಂದು ಉದಯಸಿಂಹನ ಆಗಮನವನ್ನು ತಿಳಿಸಿದನು. ಅದನ್ನು ಕೇಳಿ ಭಾಮಿನಿಯು ಅಲ್ಲಿಂದ ಎದ್ದು ಮಗಳ ಕೊಠಡಿಗೆ ಹೊರಟಳು. ದುರ್ಮತಿಯು ಅವಳನ್ನು ತಡೆದು 'ಇಲ್ಲಿಯೇ ಇರು' ಎಂದನು. ಗಂಡನು ಹಾಗೆಂದುದನ್ನು ನೋಡಿ ಅವಳಿಗೆ ಆಶ್ಚರ್ಯವಾಗಿ ಅಲ್ಲಿಯೇ ಕುಳಿತಳು.

ಉದಯಸಿಂಹನು ಒಳಕ್ಕೆ ಬಂದು ಎಲ್ಲರಿಗೂ ವಂದಿಸಿ ಕುಳಿತು ಭಾಮಿನಿಯನ್ನು ನೋಡಿ,

"ಅಮ್ಮಾ, ನಿಮ್ಮ ಮಗಳು ಕ್ಷೇಮವೇ ?"

ಅವಳು ಬದಲು ಹೇಳುವುದಕ್ಕೆ ಮುಂಚೆಯೇ ದುರ್ಮತಿಯು,

"ಸ್ವಾಮೀ, ಕ್ಷೇಮ. ಅನಂತರಾಜು ಈಗ ಅವಳ ಸಂಗೀತವನ್ನು ಕೇಳುತ್ತಿದ್ದಾರೆ."

ಮಾನಗೆಟ್ಟು ಆ ರೀತಿಯಲ್ಲಿ ಹೇಳಿದ ಅವನ ಮಾತನ್ನು ಕೇಳಿ ಉದಯಸಿಂಹನು ಅಸಮಾಧಾನಪಟ್ಟುಕೊಂಡು ಉದಾಸೀನಭಾವದಿಂದ,

"ಸ್ವಾಮೀ ದುರ್ಮತಿಗಳೇ, ನಾನು ಇಲ್ಲಿಗೆ ಬಂದಾಗ ಅವರಿಬ್ಬರೂ ಸಂಗೀತದಲ್ಲಿರುವಂತೆ ತೋರಿ ಆನಂದವಾಯಿತು."

"ಆ ರಾಜಕುಮಾರನೂ ಅವಳೂ ಶೀಲವಯೋವೃತ್ತಗಳಲ್ಲಿ ಓರಗೆಯಾಗಿದ್ದಾರೆ."

"ಯಾವ ರಾಜಕುಮಾರ ?"

"ಅನಂತರಾಜು."

"ಅವನು ರಾಜಕುಮಾರನೆಂಬುದು ನನಗೆ ತಿಳಿಯದು. ಯಾವಾಗ ಅವನು ರಾಜಕುಮಾರನಾದನು ?"

ಅದಕ್ಕೆ ದುರ್ಮತಿಯು ಅಸಮಾಧಾನಪಟ್ಟು ಪಕ್ಕದಲ್ಲಿದ್ದ ಮಲಯಸಿಂಹನನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಿ,

"ನನ್ನ ಮಗಳಲ್ಲಿ ಉದಯಸಿಂಹನಿಗೆ ಅನುರಾಗವೇ ಇಲ್ಲ ; ಹೀಗಿರುವಾಗ ಅವಳನ್ನು ಅವನಿಗೆ ಹೇಗೆ ಮದುವೆಮಾಡಿ ಕೊಡುವುದು ?"

"ಅವನೇನೋ ಉದಾಸೀನನಂತೆ ಇದಾನೆ. ಆದರೆ ಮಾತು ಕೊಟ್ಟಿದ್ದೀರಲ್ಲಾ ?"

"ಕೊಟ್ಟಿದ್ದರೇನು ? ಪ್ರೀತಿಯಿಲ್ಲದ ಗಂಡನನ್ನು ಕಟ್ಟಿಕೊಂಡು ಅವಳೇನು ಮಾಡಾಳು ? ಅನಂತರಾಜುವಿಗೆ ಇರುವಂತೆ ಉದಯಸಿಂಹನಿಗೆ ಹೇರಳವಾಗಿ ಧನವಾದರೂ ಇದ್ದಿದ್ದರೆ ಅದೊಂದು ರೀತಿಯಾಗಿದ್ದಿತು. ಅದು ಕೂಡ ಇಲ್ಲ."

"ಉದಯಸಿಂಹನು ದೊಡ್ಡ ವಂಶದವನು. ಅವನಪ್ಪನು ಒಳ್ಳೆಯ

ಸ್ಥಿತಿಯಲ್ಲಿದ್ದಾನೆ. ಮಗನೂ ಬುದ್ಧಿವಂತ. ಮುಂದೆ ಒಳ್ಳೆಯ ಸ್ಥಿತಿಗೆ ಬರಬಹುದು ಎಂದು ನನ್ನ ಅಭಿಪ್ರಾಯ. ಸ್ನೇಹದ ವಾಂಛಲ್ಯಕ್ಕಾಗಿ ನಾನು ಹೀಗೆ ಹೇಳುವೆನೆಂದು ನೀವು ತಿಳಿದುಕೊಳ್ಳುತ್ತೀರೋ ಏನೋ ?" ಎಂದು ರಾಜನು ಹೇಳಲು ದುರ್ಮತಿಯು 'ಹೇ !' ಎಂದನು.

"ನಿಮಗೆ ಏಕೆ ಅನುಮಾನ ?"

"ಅವನ ಪೂರ್ವಸ್ಥಿತಿಯನ್ನು ನೆನಸಿಕೊಂಡರೆ ಸಾಕು."

"ಮಗನ ವಿಷಯದಲ್ಲಿ ಅಂತಹುದಾವುದೂ ಇಲ್ಲವಲ್ಲಾ ?"

"ಅದು ನಿಜ."

"ದುರ್ಮತಿಗಳೇ, ಮದುವೆಯು ನಿಧಾನವಾಗಿ ಆಲೋಚಿಸಿ ಮಾಡತಕ್ಕ ವಿಷಯ. ಅನಂತರಾಜು ಯಾರೆಂದು ನನಗೆ ಗೊತ್ತೇ ಇಲ್ಲ. ನಿಮಗೂ ಬಹುಶಃ ತಿಳಿದಿರಲಾರದು. ನೀವಿಬ್ಬರೂ ನನ್ನ ಮನೆಯಲ್ಲಿ ಸಂಧಿಸಿದ್ದು ಈಗ ನಿಮ್ಮ ಮಗಳನ್ನು ಉದಯಸಿಂಹನಿಗೆ ತಪ್ಪಿಸಿ ಅನಂತರಾಜುವಿಗೆ ಕೊಟ್ಟು ಮದುವೆ ಮಾಡಿದರೆ ನಾನೇ ಇದನ್ನು ಮಾಡಿಸಿದೆನೆಂದು ಜನರು ನನ್ನನ್ನು ನಿಂದಿಸುವರು."

"ಅನಂತರಾಜುವಿನ ವಿಷಯ ನಿಮಗೆ ತಿಳಿಯದೇನೋ ? ನಾನು ಚೆನ್ನಾಗಿ ಬಲ್ಲೆ."

"ಏತಕ್ಕೆ ?"

"ಅವನಿಗಿರುವ ಈಗಿನ ಸ್ಥಿತಿಯಿಂದಲೇ ಅವು ವ್ಯಕ್ತವಾಗುತ್ತವೆ."

"ಈ ವಿಷಯಗಳನ್ನು ನಾನು ನಿಮ್ಮಂತೆ ಸುಲಭವಾಗಿ ನಂಬುವುದಿಲ್ಲ."

"ರಾಜರೇ, ಆ ಹುಡುಗನ ವಿಷಯದಲ್ಲಿ ನೀವು ನ್ಯಾಯವಾಗಿ ಮಾತಾಡುವುದಿಲ್ಲ."

"ಹಾಗೆಯೇ ಇಟ್ಟುಕೊಳ್ಳಿ ; ಆದರೆ ಉದಯಸಿಂಹನಿಗೆ ಮಾತುಕೊಟ್ಟು ತಪ್ಪುವುದು ನ್ಯಾಯವೇ ?"

"ಈ ಕಾಲದಲ್ಲಿ ಹಾಗೆ ಮಾಡುವುದು ಸಾಧಾರಣವಾಗಿ ಹೋಗಿದೆ."

"ಆದರೂ ನಿಮ್ಮಂಥ ಶ್ರೀಮಂತರು ಹಾಗೆ ಮಾಡುವುದು ಸರಿಯಲ್ಲ. ಇದಲ್ಲದೆ ಅವನ ತಂದೆತಾಯಿಗಳು ಈ ಸಂಬಂಧವನ್ನೇ ನಂಬಿಕೊಂಡಿದ್ದಾರೆ."

"ಅದು ನಿಜವೇ ?"

"ಅಹುದು; ನಿಜ."

"ಹಾಗಿದ್ದ ಪಕ್ಷದಲ್ಲಿ ತಾವು ಒಂದು ಕೆಲಸ ಮಾಡೋಣವಾಗಲಿ. ತಮಗೂ ಆ ಮನೆಯವರಿಗೂ ಬಹು ಸ್ನೇಹವಿರುವುದರಿಂದ ತಾವು ಅವರೊಡನೆ ಈ ವಿಷಯವನ್ನು ಸ್ವಲ್ಪ ಸೂಚಿಸಿರಿ."

"ನನಗೂ ಅವರಿಗೂ ಸ್ನೇಹವೆಂದು ನಿಮಗೆ ಯಾರು ಹೇಳಿದರು ?"

"ಯಾರೂ ಹೇಳಲಿಲ್ಲ. ಚಂದ್ರಿಕಾವಿಹಾರದ ದಿನ ರಾಧಾಬಾಯಿಯೂ ನೀವೂ ಬಲು ಹೊತ್ತು ಲತಾಗೃಹದ ಬಳಿ ಮಾತನಾಡುತ್ತಿರಲಿಲ್ಲವೆ ? ಅದನ್ನು ನೋಡಿ ನನಗೆ ಹಾಗೆ ತೋರಿತು."

"ಅಂತಹ ಸ್ನೇಹವಾವುದೂ ಇಲ್ಲ ; ಬೇಕಾಗಿದ್ದರೆ ನಾನು ರಾಜಸಿಂಹರೊಡನೆ ಹೇಳುತ್ತೇನೆ."

"ಹಾಗೆಯೇ ಮಾಡಿರಿ. ಅವರಿಗೆ ಅಗತ್ಯವಿದ್ದರೆ ಕೂಡಲೇ ಬಂದು ಮಾತಾಡಿ ನಿಷ್ಕರ್ಷೆ ಮಾಡಿಕೊಂಡು ಹೋಗಲಿ" ಎಂದು ದುರ್ಮತಿಯು ಹೇಳುತ್ತಿದ್ದಾಗ ಯಾವನೋ ಒಬ್ಬನು ಒಂದು ಚೀಟಿಯನ್ನು ತಂದು ಅವನ ಕೈಯಲ್ಲಿ ಕೊಟ್ಟನು. ದುರ್ಮತಿಯು ಅದನ್ನು ಓದಿಕೊಂಡು ರಾಜನನ್ನು ನೋಡಿ "ನಿಮ್ಮೊಂದಿಗೆ ಕೆಲವು ಸಮಾಚಾರಗಳನ್ನು ಹೇಳಬೇಕಾಗಿದೆ, ತಾವು ದಯವಿಟ್ಟು ಸ್ವಲ್ಪ ಹೊತ್ತು ಇಲ್ಲಿಯೇ ಇರಬೇಕು. ನಾನು ಜಾಗ್ರತೆಯಾಗಿಯೇ ಬರುತ್ತೇನೆ" ಎಂದು ಹೇಳಿ ಹೊರಗೆ ಹೋದನು.

ಅಷ್ಟು ಹೊತ್ತಿಗೆ ಸಂಗೀತವು ಮುಗಿದು ವಿಲಾಸಿನಿ ಮುಂತಾದವರು ಬಂದು ಸೇರಿದರು. ಆಗ ದುರ್ಮತಿಯು ಬಂದು "ಯವನದೇಶದ ಚಾರನೊಬ್ಬನು ಬಂದಿದ್ದಾನೆ" ಎಂದು ರಾಜನಿಗೆ ಹೇಳಲು, ಅವನು,

"ಓಹೋ, ಅದಕ್ಕಾಗಿಯೇ ನೀವು ಓಡಿ ಹೋದುದು ?" ಎಂದನು.

ಉದಯಸಿಂಹನು "ಆ ದೇಶದ ರಾಜನು ಹೇಗಿದ್ದಾನೆ ?" ಎಂದು ಕೇಳಲು, ದುರ್ಮತಿಯು ಯಾವ ಬದಲನ್ನೂ ಹೇಳದೆ ಅತ್ತ ಕಡೆ ತಿರುಗಿಕೊಂಡನು. ಆಗ ಮಲಯಸಿಂಹನಿಗೆ ಉದಯಸಿಂಹನ ವಿಷಯದಲ್ಲಿ ಕನಿಕರ ಹುಟ್ಟಿತು. ಉದಯಸಿಂಹನು ರಾಜನನ್ನು ನೋಡಿ,

"ನಾವಿಬ್ಬರೂ ಒಟ್ಟಿಗೆ ಹೋಗೋಣವೇ ?"

"ಅದಕ್ಕೇನು ; ಆಗಬಹುದು."

ದುರ್ಮತಿಯು ತನ್ನನ್ನು ಆ ರೀತಿ ಏತಕ್ಕೆ ತಿರಸ್ಕರಿಸಿದನೆಂದು ಉದಯಸಿಂಹನು ಕಾಣನು. ರಾಜನಿಗೆ ಆ ಗುಟ್ಟು ತಿಳಿದಿದ್ದಿತು.

"ರಾಜರೇ, ದುರ್ಮತಿಯು ನನ್ನನ್ನು ತಿರಸ್ಕರಿಸಿದ್ದನ್ನು ನೋಡಿದಿರೊ ?"

"ನೋಡಿದೆ."

"ಯವನ ದೇಶದ ಚಾರ ಬಂದನೆಂದು ಹೇಳಿದನಲ್ಲಾ, ಅದರ ಅಭಿಪ್ರಾಯ ವೇನು ?"

"ನಾನು ಹೇಗೆ ಹೇಳಲಿ ?"

"ಆ ದೇಶದವರಿಗೂ ನಿಮಗೂ ಪತ್ರವ್ಯವಹಾರವಿದೆಯೆಂದು ಕೇಳಿದ್ದೆ" ಎಂದು ಉದಯಸಿಂಹನು ಹೇಳಲು ರಾಜನು ಅರ್ಥಗರ್ಭಿತವಾಗಿ ನಕ್ಕನು.

ರಾಜನೂ ಉದಯಸಿಂಹನೂ ಜತೆಯಲ್ಲಿ ಹೊರಟರು. ಆಗ ವಿಲಾಸಿನಿಯನ್ನು

ಕಂಡು ಉದಯಸಿಂಹನು "ರಾಜರೇ, ಸ್ವಲ್ಪ ತಾಳಿ ; ಅವಳನ್ನು ಸ್ತೋತ್ರಮಾಡಿ ಬರುತ್ತೇನೆ" ಎಂದು ಅವಳನ್ನಿದಿರುಗೊಂಡು ಹೋದನು. ರಾಜನೊಬ್ಬನೇ ಇದ್ದುದನ್ನು ಕಂಡು ದುರ್ಮತಿಯು ಅವನ ಸಮೀಪಕ್ಕೆ ಬಂದು,

"ನೀವು ಹೇಳಿದ ಉಪಾಯ ಬಲು ಒಳ್ಳೆಯದು, ವಿಷಯಲಂಪಟನು ಅಲ್ಲಿ ನಡೆಸಿದುದನ್ನೆಲ್ಲಾ ಸವಿಸ್ತಾರವಾಗಿ ಅಲ್ಲಿಂದ ಬರೆದಿದ್ದಾರೆ."

"ನಿಶ್ಚಯವಾಗಿ ?"

"ನಿಶ್ಚಯವಾಗಿ. ಅದನ್ನು ಓದಿದ ಮೇಲೆ ಉದಯಸಿಂಹನನ್ನು ಕಣ್ಣಿನಿಂದ ನೋಡುವುದಕ್ಕೂ ನನಗೆ ಬೇಕಾಗಿಲ್ಲ. ನನ್ನಿದಿರಿಗೆ ನಿಲ್ಲದಂತೆ ಅವನನ್ನು ಬೇಗ ಎಲ್ಲಿಗಾದರೂ ಕರೆದುಕೊಂಡು ಹೋಗಿರಿ. ನೀವು ಇಲ್ಲಿಗೆ ಯಾವಾಗಲಾದರೂ ಬಂದರೆ ಅಲ್ಲಿಂದ ಬಂದ ಕಾಗದವನ್ನು ತೋರಿಸುತ್ತೇನೆ."

"ಹಾಗೆಯೇ ಆಗಲಿ. ರಾಜಸಿಂಹರನ್ನು ನಿಮ್ಮ ಬಳಿಗೆ ಕಳುಹಿಸಲೋ ?"

"ಈಗಲೇ ಕಳುಹಿಸಿ."

"ಆಗಲಿ" ಎಂದು ಹೇಳಿ ರಾಜನು ಉದಯಸಿಂಹನಿಗೆ ಸನ್ನೆ ಮಾಡಿ, ಅವನನ್ನು ಕರೆದುಕೊಂಡು ಹೊರಟುಹೋದನು. ಹೋಗುತ್ತ ಅರ್ಧ ದಾರಿಯಲ್ಲಿ ಉದಯಸಿಂಹನು, ರಾಜನನ್ನು ಕುರಿತು,

"ನೋಡಿದಿರೋ ? ಮೆಲ್ಲಗೆ ನಾನು ತಪ್ಪಿಸಿಕೊಂಡು ನನ್ನ ಪ್ರತಿ ಕಕ್ಷಿಯನ್ನು ನಿಲ್ಲಿಸಿದೆ."

"ಅವನಾರು ?"

"ನಿಮ್ಮ ಶಿಷ್ಯ ಅನಂತರಾಜು."

"ಅವನು ನನ್ನ ಶಿಷ್ಯನಲ್ಲ. ಇಂತಹ ಹುಡುಗಾಟ ಬೇಡ. ದುರ್ಮತಿಗೆ ಅವನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯವಿದ್ದರೂ ನಿಮಗೆ ಮಗಳನ್ನು ಕೊಡುವುದಾಗಿ ಮಾತು ಕೊಟ್ಟಿರುವುದರಿಂದ ವಿಲಾಸಿನಿಗೂ ನಿಮಗೂ ಮದುವೆ ತಪ್ಪಿದುದಲ್ಲ."

"ಸ್ವಾಮೀ ರಾಜರೇ, ವಿಲಾಸಿನಿಯು ಈಚೆಗೆ ನನ್ನೊಂದಿಗೆ ಮಾತನಾಡುವುದೇ ಇಲ್ಲ. ದುರ್ಮತಿಯ ಸಮಾಚಾರವಂತೂ ನಿಮಗೆ ತಿಳಿದೇ ಇದೆ."

"ಅವನು ಸ್ವಲ್ಪ ಒರಟ. ಸಂಶಯಪ್ರಕೃತಿಯವನು."

"ಯಾರ ಮೇಲೆ ಸಂಶಯ ? ದಮನಕನ ಮೇಲೆ ಸಂಶಯವೋ ? "

"ಅಲ್ಲ, ಅಲ್ಲ ; ನಿಮ್ಮ ಮೇಲೆ."

"ಅದೇಕೆ ?"

"ಅದೇಕೋ ಕಾಣೆ; ನಿಮ್ಮ ಮೇಲೆ ಅವನಿಗೆ ಸಂಶಯವಿದ್ದರೂ ಅಭಿಮಾನವಿದೆ ಎಂಬುದಕ್ಕೆ ದೃಷ್ಟಾಂತವಿದೆ."

"ಅದಾವುದು ?"

"ಹೇಳಲೋ ? ಹಾಗಾದರೆ ಕೇಳಿ. ಈ ಮದುವೆಯನ್ನು ನಿಷ್ಕರ್ಷೆ ಮಾಡಿಕೊಂಡು ಹೋಗುವಂತೆ ನಿಮ್ಮ ಯಜಮಾನರಿಗೆ ತಿಳಿಸಹೇಳಿದ್ದಾನೆ."

"ಅದನ್ನು ಮಾತ್ರ ಮಾಡಬೇಡಿರಿ."

"ಅಪ್ಪಾ, ಮಾತು ಕೊಟ್ಟಿದ್ದೇನೆ; ಅದನ್ನು ಅಗತ್ಯವಾಗಿ ಮಾಡುವೆನು."

"ಹಾಗಾದರೆ ನನಗೆ ಅವಳನ್ನು ಗಂಟುಹಾಕಬೇಕೆಂದು ನೀವೂ ಯತ್ನ ಮಾಡುವಂತಿದೆ."

"ಎಲ್ಲರ ಸಂಗಡಲೂ ಸರಿಯಾಗಿರಬೇಕೆಂಬುದೇ ನನ್ನ ಯತ್ನ. ಇದು ಹಾಗಿರಲಿ. ಈಚೆಗೆ ದುರ್ಮತಿಯ ಮನೆಯಲ್ಲಿ ದಮನಕನು ಕಾಣುವುದೇ ಇಲ್ಲವಲ್ಲಾ; ಏಕೆ ?"

"ಅವರವರಿಗೆ ಸ್ವಲ್ಪ ಸರಿಬೀಳುವುದಿಲ್ಲ."

"ಯಾರ್ಯಾರಿಗೆ ? ಅವನಿಗೂ ಭಾಮಿನಿಗೋ ?"

"ಅಲ್ಲ ; ಅವನಿಗೂ ದುರ್ಮತಿಗೂ."

"ಏಕೆ ? ಅವನಿಗೇನಾದರೂ ಅನುಮಾನವೋ ?"

"ನೀವು ಎಲ್ಲಿಂದ ಬಂದಿರಿ ?"

"ಭೂಮ್ಯಂತದಿಂದ."

"ಅಲ್ಲ, ಅಲ್ಲ ; ಪಾತಾಳದಿಂದ ಬಂದಿರಬೇಕು."

"ಹಾಗೆಯೇ ಆಗಲಿ. ಈ ದೇಶದ ಗಂಡಂದಿರ ವಿಷಯವನ್ನು ನಾನೆತ್ತಬಲ್ಲೆ ?"

"ಓಹೋ ! ಆ ವಿಷಯದಲ್ಲಿ ಎಲ್ಲಾ ದೇಶದ ಗಂಡಂದಿರೂ ಒಂದೇ."

"ಅವರವರು ಅಷ್ಟು ಅನ್ಯೋನ್ಯವಾಗಿದ್ದು ಈಗ ಅಸಮಾಧಾನ ಪಟ್ಟುಕೊಳ್ಳುವುದಕ್ಕೆ ಕಾರಣವೇನು ?" ಎಂದು ಮಲಯಸಿಂಹನು ಪುನಃ ಪ್ರಶ್ನೆ ಮಾಡಲು, ಉದಯಸಿಂಹನು,

"ಸ್ವಾಮೀ, ನಾನೇನು ಬಲ್ಲೆ ? ತಿಳಿದವರನ್ನು ಕೇಳಿದರೆ ಅದರ ಕಾರಣವು ಗೊತ್ತಾದೀತು."

ಅಷ್ಟು ಹೊತ್ತಿಗೆ ಬಂಡಿಯು ರಾಜನ ಮನೆಯ ಬಾಗಿಲಲ್ಲಿ ನಿಂತಿತು. ಆಗ ಮಲಯಸಿಂಹನು ಬಂಡಿಯಿಂದ ಕೆಳಗೆ ಇಳಿದು "ಸ್ವಾಮೀ ಉದಯಸಿಂಹರೇ, ಈಗ ಹತ್ತು ಗಂಟೆ ಸ್ವಲ್ಪ ಹೊತ್ತು ಇಲ್ಲಿ ಇದ್ದು ಫಲಹಾರ ಮಾಡಿಕೊಂಡು ಬಿಜಯ ಮಾಡಬಹುದು" ಎನ್ನಲು, ಇಬ್ಬರೂ ಒಳಕ್ಕೆ ಹೋದರು.

## ೫೩
# ಕೋಮಲೆ

ಮಲಯಸಿಂಹ ಉದಯಸಿಂಹರಿಬ್ಬರೂ ಫಲಹಾರ ಮಾಡುತ್ತಿದ್ದಾಗ ವೀಣಾಗಾನವು ಉದಯಸಿಂಹನ ಕಿವಿಗೆ ಬಿದ್ದಿತು. ಆಗ ಅವನು,

"ಆಹಾ, ಈ ನಾದವು ಗಂಧರ್ವಲೋಕದ ಗಾನವನ್ನು ಕೀಳುಮಾಡುವಂತಿದೆ."

"ಉದಯಸಿಂಹರೇ, ಇಂದು ನಿಮ್ಮನ್ನು ಸಂಗೀತವು ಬಿಡುವಂತಿಲ್ಲ. ವಿಲಾಸಿನಿಯ ಸಂಗೀತವನ್ನು ಕೇಳದೆ ಇಲ್ಲಿಗೆ ಬಂದಿರಿ ; ಇಲ್ಲಿ ಕೋಮಲೆಯ ಸಂಗೀತವು ನಿಮ್ಮನ್ನು ಅಂಟಿತು."

"ಆಹಾ, ಎಂತಹ ಹೆಸರು ! ಇದಕ್ಕಿಂತ ಕೋಮಲವಾದ ಹೆಸರು ಎಲ್ಲಿಯಾದರೂ ಉಂಟೇ ?"

"ಉಶ್ ; ಪಕ್ಕದ ಕೋಣೆಯಲ್ಲಿಯೇ ಕೋಮಲೆಯು ಇದ್ದಾಳೆ."

"ನಮ್ಮ ಮಾತು ಅವಳಿಗೆ ಕೇಳಿಸಿದರೆ ಅವಳು ಕೋಪಿಸಿಕೊಳ್ಳುವಳೋ ?"

"ಅವಳು ಬಂದಿಯವಳು, ಆದುದರಿಂದ ಆ ಭಯವೇನೂ ಇಲ್ಲ. ಆದರೂ ಹೆಂಗಸರ ವಿಷಯವಾಗಿ ನಾವಾಡುವ ಮಾತು ಅವರ ಕಿವಿಗೆ ಬಿದ್ದರೆ ಸಹಜವಾಗಿ ಅವರು ನಾಚಿಕೊಳ್ಳುವರು."

"ನೀವು ನನ್ನೊಂದಿಗೆ ಹುಡುಗಾಟ ಮಾಡುತ್ತೀರೆಂದು ತೋರುತ್ತಿದೆ."

"ನಿಶ್ಚಯವಾಗಿಯೂ ನಾನು ಅವಳನ್ನು ಕೊಂಡುಕೊಂಡೆನು."

"ಇಂತಹ ಬಂದಿಯವರು ಇನ್ನೂ ಸಿಕ್ಕುತ್ತಾರೆಯೋ ?"

"ನೋಡಬೇಕು."

"ರಾಜರೇ, ನೀವು ಮಾಡುವುದೊಂದೊಂದೂ ಆಶ್ಚರ್ಯಕರವಾದುದು. ರೂಪದಲ್ಲಿಯೂ ಐಶ್ವರ್ಯದಲ್ಲಿಯೂ ಅವಳಿಗೆ ಸಮಾನರಾದವರು ಈ ರಾಜ್ಯದಲ್ಲಿಯೇ ಸಿಕ್ಕುವುದಿಲ್ಲ. ಅಂಥವಳನ್ನು ಹುಡುಕಿ ತಂದಿದ್ದೀರಿ."

"ಅವಳು ಒಬ್ಬ ರಾಜನ ಮಗಳು."

"ಹಾಗಾದರೆ ಅವಳು ಹೇಗೆ ಬಂದಿಯಾದಳು ?"

"ದುರದೃಷ್ಟದಿಂದ."

"ಅವಳ ಸಮಾಚಾರವೇನು !"

"ಅದು ಗುಟ್ಟು ; ನೀವು ನನಗೆ ಆಪ್ತ ಸ್ನೇಹಿತರು. ನಿಮಗೆ ಮಟ್ಟಿಗೆ ಹೇಳುತ್ತೇನೆ. ನೀವು ಮಾತ್ರ ಯಾರಿಗೂ ಹೇಳಕೂಡದು."

"ಸತ್ಯವಾಗಿಯೂ ನಾನು ಯಾರಿಗೂ ಹೇಳುವುದಿಲ್ಲ."

"ನೀವು ಯವನ ದೇಶದ ಚರಿತ್ರೆಯನ್ನು ಬಲ್ಲಿರೊ ?"

"ಕ್ಷಿತೀಂದ್ರನ ಚರಿತ್ರೆಯನ್ನೇ ? ಅದನ್ನು ಬಲ್ಲೆ. ಅವನ ಹತ್ತಿರದಲ್ಲಿ ನಮ್ಮಪ್ಪ ಕೆಲಸ ಮಾಡಿದನು."

"ನಿಜ. ನಾನೂ ಹಾಗೆಯೇ ಕೇಳಿದ್ದೆ."

"ಅವಳು ಅವನಿಗೆ ಏನಾಗಬೇಕು ?"

"ಮಗಳು."

"ಅವಳೇ ನಿಮ್ಮ ಬಂದಿ ?"

"ಅಹುದು."

"ರಾಜರೇ, ನಿಮ್ಮ ಕಾರ್ಯಗಳೆಲ್ಲವೂ ಇಂದ್ರಜಾಲದಂತೆ ನಮ್ಮನ್ನು ಮಂಕು ಮಾಡಿಬಿಡುತ್ತವೆ. ತಾವು ಕೋಪಿಸಿಕೊಳ್ಳದಿದ್ದರೆ ನಾನೊಂದನ್ನು ಕೇಳಬೇಕು ಎಂದಿದ್ದೇನೆ."

"ಬೇಕಾದುದನ್ನು ಕೇಳಬಹುದು."

"ನಾನು ಅವಳನ್ನು ನೋಡಬೇಕು."

"ಎರಡು ವಿಷಯಗಳಿಗೆ ನೀವು ಒಪ್ಪಿಕೊಳ್ಳಬೇಕು."

"ಹಾಗೆಯೇ ಆಗಲಿ ; ಹೇಳಿ."

"ಅವಳನ್ನು ನಿಮಗೆ ತೋರಿಸಿದೆನೆಂದು ನೀವು ಯಾರಿಗೂ ಹೇಳದೆ ಇರುವುದು ಒಂದು ; ನಿಮ್ಮ ಯಜಮಾನರು ಅವಳ ತಂದೆಯ ಬಳಿ ಕೆಲಸ ಮಾಡಿದರೆಂದು ನೀವು ಅವಳಿಗೆ ತಿಳಿಸದೆ ಇರುವುದು ಇನ್ನೊಂದು."

"ಸಮ್ಮತ" ಎಂದು ಉದಯಸಿಂಹನು ಒಪ್ಪಿಕೊಳ್ಳಲು, ರಾಜನು

"ನೀವು ದೊಡ್ಡ ಮನುಷ್ಯರು ; ನಿಮ್ಮ ಮಾತಿನಲ್ಲಿ ನನಗೆ ನಂಬುಗೆಯುಂಟು, ನೀವು ಈಗ ಆಡಿದ ಮಾತನ್ನು ಮರೆಯಬೇಡಿರಿ" ಎಂದು ಹೇಳಿ, ವಾಮನಭಟ್ಟನನ್ನು ಕರೆದು,

"ಎಲಾ, ಕೋಮಲೆಯನ್ನು ನೋಡಬೇಕೆಂದು ನನ್ನ ಸ್ನೇಹಿತರೊಬ್ಬರು ಬಂದಿದ್ದಾರೆ ; ಅವರನ್ನು ಸಂಗಡ ಕರೆದುಕೊಂಡು ನಾನು ಬರುತ್ತೇನೆಂದು ಅವಳಿಗೆ ತಿಳಿಸು."

ಕೋಮಲೆಯ ಕೊಠಡಿಗೆ ಹೋಗುವುದಕ್ಕೆ ಮುಂಚೆ ರಾಜನು ಉದಯಸಿಂಹನನ್ನು ಕುರಿತು,

"ನೀವು ಏನು ಕೇಳಬೇಕಾಗಿದ್ದರೂ ಅವಳನ್ನು ಕೇಳಬೇಡಿ ; ನನ್ನನ್ನು ಕೇಳಿ."

ಅನಂತರ ಇಬ್ಬರೂ ಅವಳ ಕೋಣೆಗೆ ಹೋದರು. ಎಂದೂ ಯಾರನ್ನೂ ಜತೆಯಲ್ಲಿ ಕರೆದುಕೊಂಡುಬಾರದಿದ್ದ ತನ್ನ ಸ್ವಾಮಿಯು ಇಂದು ಯಾರನ್ನೋ ಕರೆದುಕೊಂಡು ಬಂದುದನ್ನು ಕಂಡು ಅವಳು ಆಶ್ಚರ್ಯಪಡುತ್ತ ವಿಸ್ಫುರಿತಲೋಚನೆಯಾಗಿ ನಿಂತಿದ್ದಳು. ಅವಳ ಅತಿಶಯವಾದ ಸೌಂದರ್ಯವನ್ನು ಕಂಡು ಉದಯಸಿಂಹನು ಬೆಕ್ಕಸಪಡುತ್ತ ಮುಂದೆ

ಅಡಿಯಿಡುವುದಕ್ಕೆ ತೋರದೆ ಬಾಗಿಲಲ್ಲೇ ಮರದಂತೆ ನಿಂತನು. ಆಗ ಕೋಮಲೆಯು ರಾಜನನ್ನು ಕುರಿತು,

"ಸ್ವಾಮೀ, ತಾವು ಕರೆದುಕೊಂಡು ಬಂದಿರುವವರು ಯಾರು ?" ಎಂದು ಕೇಳಲು, ರಾಜನು,

"ಸ್ನೇಹಿತ" ಎಂದನು.

"ಅವರ ಹೆಸರೇನು ?"

"ಉದಯಸಿಂಹರು. ಅವರನ್ನೇ ಇಂದ್ರಪ್ರಸ್ಥದಲ್ಲಿ ಕಳ್ಳರ ಕೈಯ್ಯಿಂದ ಬಿಡಿಸಿಕೊಂಡು ಬಂದೆನು" ಎಂದು ಹೇಳಿದನು.

"ಸ್ವಾಮೀ, ಉದಯಸಿಂಹರೇ, ನನ್ನ ಸ್ವಾಮಿಯ ಸ್ನೇಹಿತರಾದ ತಾವು ಇಲ್ಲಿಗೆ ಬಿಜಯ ಮಾಡಿಸಿದುದು ನನ್ನ ಭಾಗ್ಯೋದಯವೇ ಸರಿ ; ಇಲ್ಲಿ ದಯ ಮಾಡಬೇಕು."

"ಉದಯಸಿಂಹರೇ, ನಿಮಗೆ ಅವಳ ಭಾಷೆಯು ತಿಳಿಯದು. ಅವಳು ಈಗತಾನೇ ನಿಮ್ಮ ಭಾಷೆಯನ್ನು ಕಲಿಯುತ್ತಲಿದ್ದಾಳೆ ; ಅದು ಅವಳಿಗೆ ಇನ್ನೂ ಚೆನ್ನಾಗಿ ಬಾರದು. ಅವಳ ಭಾಷೆಯಲ್ಲಿ ಮಾತನಾಡಿದರೆ ಅವಳ ಮಾತಿನ ಸ್ವಾರಸ್ಯವು ನಿಮಗೆ ಗೊತ್ತಾಗುತ್ತಲಿದ್ದಿತು."

"ನನಗೆ ಆ ಭಾಷೆಯು ತಿಳಿಯದೆ ಇರುವುದು ನನ್ನ ಗ್ರಹಚಾರ. ಆದರೆ ಅವಳ ಮಧುರವಾದ ಧ್ವನಿಯು ಯಾವ ಭಾಷೆಯಾದರೂ ಇಂಪನ್ನು ಕೊಡುವುದು."

ಕೋಮಲೆಯು ಉದಯಸಿಂಹನನ್ನು ಕುರಿತು,

"ಸ್ವಾಮೀ, ನನ್ನಿಂದ ತಮಗೆ ಏನಾಗಬೇಕು ?" ಎನ್ನಲು ಅವನು "ಯಾವುದನ್ನು ಕೇಳಲಿ" ಎಂದು ರಾಜನನ್ನು ಕೇಳಿದನು.

"ನಿಮಗೆ ಯಾವುದು ಬೇಕೋ ಅದನ್ನು ಕೇಳಿ."

"ಅಮ್ಮಾ, ನೀನು ನಿನ್ನ ದೇಶವನ್ನು ಯಾವಾಗ ಬಿಟ್ಟುದು ?"

"ಸ್ವಾಮೀ, ನನ್ನ ದೇಶವನ್ನು ಬಿಟ್ಟಾಗ ನನಗೆ ಐದು ವರ್ಷ."

"ನಿನ್ನ ಊರು ಜ್ಞಾಪಕವಿದೆಯೋ ?"

"ಬಹಿರಿಂದ್ರಿಯವು ಒಂದು ಸಾರಿ ನೋಡಿದ ಪದಾರ್ಥಗಳನ್ನು ಅಂತರಿಂದ್ರಿಯವು ಯಾವಾಗ ಬೇಕಾದರೂ ಪ್ರತ್ಯಕ್ಷಿಸಬಲ್ಲುದಷ್ಟೆ ಆದುದರಿಂದ ನಾನು ಕಣ್ಣನ್ನು ಮುಚ್ಚಿಕೊಂಡರೆ ಅದು ಪ್ರತ್ಯಕ್ಷವಾಗುತ್ತದೆ."

"ನಿನ್ನ ಬಾಲ್ಯದಲ್ಲಿ ನಡೆದುದೆಲ್ಲಾ ನಿನಗೆ ಜ್ಞಾಪಕವಿದೆಯೋ ?"

"ನನ್ನ ಮೂರನೆಯ ವಯಸ್ಸಿನಿಂದ ನಡೆದುದೆಲ್ಲಾ ಚೆನ್ನಾಗಿ ಜ್ಞಾಪಕವಿದೆ."

"ರಾಜರೇ, ಈ ಚರಿತ್ರೆಯನ್ನು ಇಂಥ ಕೋಮಲೆಯರ ವದನಾರವಿಂದದಿಂದಲೇ ಕೇಳುವುದು ಪುಣ್ಯವೇ ಸರಿ. ಇವಳ ಚರಿತ್ರೆಯನ್ನು ದಯೆ ಮಾಡಿ ನನಗೆ ತಿಳಿಸ ಹೇಳಿ"

ಎಂದು ಉದಯಸಿಂಹನು ಕೇಳಲು, ರಾಜನು ಸಂಕೇತಭಾಷೆಯಲ್ಲಿ "ನಿನ್ನ ತಂದೆಗೆ ಆದ ಗತಿಯನ್ನು ಹೇಳು ; ಆದರೆ ಆ ದ್ರೋಹಿಯ ಹೆಸರನ್ನೂ, ಅವನು ಮಾಡಿದ ದ್ರೋಹವನ್ನೂ ಹೇಳಬೇಡ" ಎಂದನು.

"ರಾಜರೇ, ಅವಳಿಗೆ ಏನು ಹೇಳಿದಿರಿ ?"

"ನೀವು ಸ್ನೇಹಿತರಾದುದರಿಂದ ನಿಮಗೆ ಇಷ್ಟವಾದುದನ್ನು ಹೇಳುವಂತೆ ಹೇಳಿದೆ."

"ಅಮ್ಮಾ, ನಿಮ್ಮ ದೇಶವನ್ನು ನೋಡಿದ ಕಣ್ಣುಗಳಿಗೆ ಈ ದೇಶವು ಹೇಗೆ ಕಾಣುತ್ತದೆ ?"

"ಈ ದೇಶವೇನೋ ಒಳ್ಳೆಯದೇ ಸರಿ ; ಆದರೆ ಬಾಲ್ಯದಲ್ಲಿ ಹುಟ್ಟುವ ಭಾವಗಳಿಗೂ ಬುದ್ಧಿ ತಿಳಿದಮೇಲೆ ಹುಟ್ಟುವ ಭಾವಗಳಿಗೂ ವ್ಯತ್ಯಾಸವಿದೆ."

"ಚಿಕ್ಕ ವಯಸ್ಸಿನಲ್ಲಿಯೇ ನಿನಗೆ ದುಃಖ ಪ್ರಾಪ್ತವಾಯಿತೆಂದು ಕೇಳಿದ್ದೆ; ಅದು ನಿಜವೋ ?" ಎಂದು ಉದಯಸಿಂಹನು ಕೇಳಲು, ಅವಳು ರಾಜನ ಮುಖವನ್ನು ನೋಡಿ, ಅವನು 'ಅದಕ್ಕೇನು ಹೇಳು' ಎಂದು ಸೂಚಿಸಿದ ಮೇಲೆ, ಉದಯಸಿಂಹನನ್ನು ನೋಡಿ,

"ಸ್ವಾಮೀ, ಬಾಲ್ಯದಲ್ಲಿ ಮನಸ್ಸಿಗೆ ಹತ್ತಿದುದು ಎಂದಿಗೂ ಮಾಸಿಹೋಗದು. ನನ್ನ ಜನ್ಮವು ದುಃಖಸಮುದ್ರದಲ್ಲಿ ಮುಳುಗಿದೆ. ನನ್ನ ಚರಿತ್ರೆ ದುಃಖದ ಚರಿತ್ರೆಯೇ ಹೊರತು, ಬೇರೆ ಅಲ್ಲ. ಅದನ್ನು ಹೇಳಬೇಕೆಂದರೆ ಹೇಳುತ್ತೇನೆ."

"ಅದನ್ನು ಕೇಳಲು ನನಗೆ ತುಂಬ ಆಸೆಯಾದುದರಿಂದ ದಯವಿಟ್ಟು ಹೇಳು."

"ಹಾಗಾದರೆ ಕೇಳೋಣವಾಗಲಿ. ಸುಮಾರು ನನ್ನ ನಾಲ್ಕನೆಯ ವರುಷದಲ್ಲಿ ಅರಮನೆಯಲ್ಲಿ ಎಂದಿನಂತೆ ಮಲಗಿದ್ದಾಗ ಒಂದು ದಿನ ರಾತ್ರಿ ನನ್ನ ತಾಯಿಯು ನನ್ನನ್ನು ಹಾಸಿಗೆಯಿಂದ ತಟ್ಟನೆ ಎತ್ತಿಕೊಂಡಳು. ನಾನು ಕಣ್ಣುಬಿಟ್ಟಾಗ ಅವಳ ಕಣ್ಣಿನಲ್ಲಿ ನೀರು ತುಂಬಿದ್ದಿತು. ಅದನ್ನು ಕಂಡು ನಾನೂ ಅಳತೊಡಗಿದೆನು. ಅವಳು ಸದ್ದು-ಸದ್ದು ಎಂದು ಮೆಲ್ಲಗೆ ಹೇಳಿದಳು. ಇತರ ಕಾಲದಲ್ಲಿ ಅವಳು ಎಷ್ಟು ಹೇಳಿದರೂ ಕೇಳದೆ ದಣಿಯುವ ತನಕ ಅತ್ತು ತೀರಿಸುತ್ತಲಿದ್ದೆನು ; ಆಗ ಮನಸ್ಸಿಗೆ ಏನೋ ಒಂದು ಬಗೆ ದಿಗಿಲು ತೋರಿ ತಟ್ಟನೆ ಸುಮ್ಮನಾದೆನು. ಅವಳು ನನ್ನನ್ನು ಎತ್ತಿಕೊಂಡು ಮಹಡಿಯ ಮೆಟ್ಟಲುಗಳನ್ನಿಳಿದು ಸುಮಾರು ಇಪ್ಪತ್ತು ಸಿಪಾಯಿಗಳೊಂದಿಗೆ ಓಡಿಹೋಗುತ್ತಿದ್ದಳು. ನಮ್ಮ ಹಿಂದೆ ಆಪ್ತನಾದ ಶಲ್ಯನೆಂಬವನ ತೋಳಿನ ಮೇಲೆ ಒಂದು ಕೈಯನ್ನಿಟ್ಟು ಮತ್ತೊಂದು ಕೈಯಲ್ಲಿ ಬಂದೂಕನ್ನು ಹಿಡಿದುಕೊಂಡು ಬೇಗ, ಬೇಗ ಎಂದು ಹೇಳುತ್ತ ಒಬ್ಬನು ಬರುತ್ತಿದ್ದನು. ಅವನೇ ನನ್ನ ತಂದೆ ಕ್ಷಿತೀಂದ್ರ" ಎಂದು ಹೇಳಿದ ಕೂಡಲೆ ಕೋಮಲೆಯ ಕಣ್ಣುಗಳಿಂದ ನೀರು ಧಾರೆಧಾರೆಯಾಗಿ ಸುರಿಯಿತು. ಆ ಹೆಸರನ್ನು ಕೇಳುತ್ತಲೇ ಉದಯಸಿಂಹನಿಗೂ ಮೆಯ್ ಜುಮ್ಮೆಂದಿತು.

"ಎಲ್ಲರೂ ಸ್ವಲ್ಪ ದೂರ ನಡೆದು ಸಮೀಪದ ದೊಡ್ಡ ಸರೋವರದ ಬಳಿಯನ್ನು ಸೇರಿ, ಅಲ್ಲಿ ಸಿದ್ಧವಾಗಿದ್ದ ದೋಣಿಗಳಲ್ಲಿ ಕುಳಿತು ಅದರ ಮಧ್ಯದಲ್ಲಿದ್ದ ದ್ವೀಪಕ್ಕೆ ಪ್ರಯಾಣ ಮಾಡಿದೆವು. ಯಾರಾದರೂ ನಮ್ಮನ್ನು ಅಟ್ಟಿಸಿಕೊಂಡು ಬಂದರೆ ಅವರನ್ನು ತಡೆಯಲೋಸುಗ ಸಿಪಾಯಿಗಳು ಮಾತ್ರ ದಡದಲ್ಲೇ ನಿಂತಿದ್ದು, ಕೊನೆಗೆ ಅವರೂ ಪ್ರಯಾಣ ಮಾಡಿದರು. ಆಗ ಗಾಳಿಯು ಅನುಕೂಲವಾಗಿ ಬೀಸುತ್ತಿದ್ದುದರಿಂದ ನಮ್ಮ ದೋಣಿಯು ಬಹು ವೇಗದಿಂದ ಹೋಗುತ್ತಿದ್ದಿತು. ಅದನ್ನು ಕಂಡು 'ಅಮ್ಮಾ ದೋಣಿಯು ಇಷ್ಟು ಜಾಗ್ರತೆಯಾಗಿ ಏಕೆ ಹೋಗುತ್ತಿದೆ ?' ಎಂದು ನನ್ನ ತಾಯಿಯನ್ನು ಕೇಳಲು, ಅವಳು 'ಸದ್ದು ಮಾಡಬೇಡ; ನಾವು ತಪ್ಪಿಸಿಕೊಂಡು ಓಡಿ ಬರುತ್ತಲಿದ್ದೇವೆ' ಎಂದಳು.

"ಅವಳು ಹೇಳಿದ ಅಭಿಪ್ರಾಯವು ಆಗ ನನಗೆ ತಿಳಿಯಲಿಲ್ಲ. ಶತ್ರುಗಳಿಗೆ ಯಮಸ್ವರೂಪನೆನಿಸಿ ಬಲಿಷ್ಠನಾಗಿದ್ದ ನನ್ನ ತಂದೆಯು ಏತಕ್ಕೆ ಹೀಗೆ ಓಡಿಹೋಗಬೇಕು ಎಂಬುದಕ್ಕೆ ನನಗೆ ಕಾರಣವೇ ತೋರಲಿಲ್ಲ. ಈಚೆಗೆ ನನಗೆ ತಿಳಿಯ ಬಂದುದರಲ್ಲಿ ಹಗೆಗಳು ಮುತ್ತಿಗೆ ಹಾಕಿದ ಜಾಹ್ನವೀಪಟ್ಟಣದ ಕೋಟೆಯ ಸಿಪಾಯಿಗಳು ಯುದ್ಧ ಮಾಡಿ ಬೇಸತ್ತು—" ಎಂದು ಅಷ್ಟರಲ್ಲಿಯೇ ಕೋಮಲೆಯು ರಾಜನನ್ನು ಭಾವಗರ್ಭಿತವಾದ ನೋಟದಿಂದ ನೋಡಿ, ಅವನು ಮಾಡಿದ ಸನ್ನೆಯನ್ನು ಅರಿತು, ಸುಳ್ಳನ್ನು ಜೋಡಿಸಲೋಸುಗವೋ ಇದ್ದುದನ್ನು ಬಿಡಲೋಸುಗವೋ ಮುಂದಣ ಕಥೆಯನ್ನು ನಿಧಾನವಾಗಿ ಯೋಚಿಸಿ ಹೇಳತೊಡಗಿದಳು.

"ಕ್ಷಿತೀಂದ್ರನನ್ನು ಕೊಂದು ಅವನ ಶಿರವನ್ನು ತಂದುಕೊಡಬೇಕು ಎಂದು ಶತ್ರುವಿನಿಂದ ನಿಯಮಿತರಾಗಿದ್ದ ಅಧಿಕಾರಿಯ ಸಂಗಡ ಸಮಾಧಾನ ಮಾಡಿಕೊಳ್ಳಬೇಕೆಂದು ನನ್ನ ತಂದೆಯನ್ನು ನಮ್ಮ ಕಡೆಯವರು ಬೇಡಿಕೊಂಡರು. ಅವನು ಅದೇ ರೀತಿ ಆಗಲೆಂದು ಶತ್ರುಗಳೊಂದಿಗೆ ಹೋಗಿ ಮಾತನಾಡಿ ಸಮಾಧಾನ ಮಾಡಿಕೊಂಡು ಬರಲು ತನ್ನ ಆಪ್ತ ಸೈನ್ಯಾಧಿಪನಾಗಿದ್ದ ಅಧಿಕಾರಿಯನ್ನು ಕಳುಹಿಸಿ, ಅರಮನೆಯಲ್ಲಿದ್ದರೆ ಏನು ತೊಂದರೆಯಾಗುವುದೋ ಎಂದು ಭಯಪಟ್ಟು ಸರೋವರದ ಮಧ್ಯದ ಎಡತಿಟ್ಟಿಗೆ ಓಡಿ ಹೋಗುತ್ತಲಿದ್ದೆವು."

"ಅಮ್ಮಾ, ಆ ಸೈನ್ಯಾಧಿಪನ ಹೆಸರು ನಿನಗೆ ತಿಳಿವುದೋ ?"

"ಇಲ್ಲ, ಸ್ವಾಮೀ, ಅದನ್ನು ಮರೆತಿದ್ದೇನೆ, ಜ್ಞಾಪಕ ಬಂದಾಗ ಹೇಳುತ್ತೇನೆ."

ಆಗ ಉದಯಸಿಂಹನಿಗೆ ತನ್ನಪ್ಪನ ಹೆಸರನ್ನು ಹೇಳಬೇಕೆಂದು ನಾಲಗೆಯ ತುದಿಯವರೆಗೂ ಬಂದಿತು. ಅಷ್ಟರೊಳಗೆ ಮಲಯಸಿಂಹನು ತನ್ನ ಬಾಯ ಮೇಲೆ ಬೆರಳನ್ನಿಟ್ಟನು. ಆಗ ತಾನು ಕೊಟ್ಟಿದ್ದ ಭಾಷೆಯು ನೆನಪಿಗೆ ಬರಲು ಉದಯಸಿಂಹನು ಸುಮ್ಮನಾದನು. ಕೋಮಲೆಯು ಮುಂದೆ ಹೇಳತೊಡಗಿದಳು ;—

"ನಾವು ಹೋಗುತ್ತಿದ್ದ ಎಡತಿಟ್ಟಿನಲ್ಲಿ ನಮ್ಮಪ್ಪನು ಮೂರು ಅಂತಸ್ತಿನ ಒಂದು ಸಣ್ಣ

ಅರಮನೆಯನ್ನು ಕಟ್ಟಿಸಿದ್ದನು. ಮೊದಲನೆಯ ಅಂತಸ್ತು ನೆಲಮಾಳಿಗೆ; ಎರಡನೆಯದು ನೆಲದ ಮೇಲಿದ್ದಿತು; ಮೂರನೆಯದು ನೆಲದಿಂದ ಸುಮಾರು ಹನ್ನೆರಡು ಅಡಿಗಳ ಎತ್ತರದಲ್ಲಿದ್ದಿತು. ನನ್ನನ್ನೂ ನನ್ನ ತಾಯಿಯನ್ನೂ ನೆಲಮಾಳಿಗೆಯಲ್ಲಿ ಇಳುಹಿದರು. ಅಲ್ಲಿ ಒಂದು ಕಡೆಯಲ್ಲಿ ಎರಡು ಕೋಟಿ ವರಹಗಳು ತುಂಬಿದ್ದ ಚೀಲಗಳೂ ಮತ್ತೊಂದು ಕಡೆಯಲ್ಲಿ ಮದ್ದು ತುಂಬಿದ್ದ ಇನ್ನೂರು ಪೀಪಾಯಿಗಳೂ ಇದ್ದವು. ಆ ಚೀಲಗಳಲ್ಲಿ ಅವನ ಆಸ್ತಿಯೆಲ್ಲವೂ ಇದ್ದಿತು. ಪೀಪಾಯಿಗಳಲ್ಲಿ ಒಂದು ಸಾವಿರ ಮಣ ಮದ್ದು ಇದ್ದಿತು. ಅವುಗಳ ಪಕ್ಕದಲ್ಲಿ ಶಲ್ಯನು ಕೈಯಲ್ಲಿ ಒಂದು ಸಣ್ಣ ದೊಂದಿಯನ್ನು ಹೊತ್ತಿಸಿಕೊಂಡು ನಿಂತಿದ್ದನು.

" 'ಅಪ್ಪಾ ಶಲ್ಯ, ಇದೇನು ಕೈಯಲ್ಲಿ ದೊಂದಿ ?' ಎಂದು ನನ್ನ ತಾಯಿಯು ಕೇಳಲು, ಅವನು 'ತಾಯೀ, ಶತ್ರುವಿನಿಂದ ಅನುಕೂಲವಾದ ಉತ್ತರ ಬಂದರೆ ತಮ್ಮ ಮುದ್ರೆಯ ಉಂಗುರವನ್ನು ಕಳುಹಿಸಿಕೊಡುವುದಾಗಿಯೂ, ಇಲ್ಲವಾದರೆ ತಮ್ಮ ಕಠಾರಿಯನ್ನು ಕಳುಹಿಸುವುದಾಗಿಯೂ, ಕಠಾರಿ ಬಂದರೆ ಒಡನೆಯೇ ಈ ಮದ್ದಿಗೆ ಬೆಂಕಿಯನ್ನು ಹೊತ್ತಿಸಿ ಈ ದ್ವೀಪವನ್ನೇ ಒಟ್ಟಿಗೆ ಹಾರಿಸಿಬಿಡಬೇಕೆಂದೂ ರಾಜರು ಆಜ್ಞೆಯನ್ನು ಮಾಡಿದ್ದಾರೆ. ಅದಕ್ಕಾಗಿ ಯಾವ ವೇಳೆ ಕಠಾರಿ ಬರುವುದೋ ಎಂದು ನಾನು ಸಿದ್ಧನಾಗಿದ್ದೇನೆ' ಎಂದನು. ಕೈಯಲ್ಲಿ ದೊಂದಿಯನ್ನು ಹಿಡಿದು ಪ್ರತಿ ನಿಮಿಷವೂ ರಾಜನ ಅಪ್ಪಣೆಯನ್ನು ನಿರೀಕ್ಷಿಸುತ್ತಲಿದ್ದ ಆ ಶಲ್ಯನ ಮುಖವು ಈಗಲೂ ನನಗೆ ಕಣ್ಣಿನಲ್ಲಿ ಕಟ್ಟಿದಂತಿದೆ.

"ಆಗ ನನಗೆ ಕಾಲದ ಪ್ರಮಾಣವೇ ತಿಳಿಯದು. ಎಷ್ಟು ಹೊತ್ತು ಹಾಗೆ ಇದ್ದೆವೋ ಹೇಳಲಾರೆ. ನನ್ನ ತಂದೆಯು ಮೂರನೆಯ ಮಹಡಿಯಲ್ಲಿದ್ದು ಯಾವ ಕಾಲದಲ್ಲಿ ಯಾರು ಬರುವರೋ ಎಂದು ಸುತ್ತಲೂ ನೋಡುತ್ತಿದ್ದನು. ಆಗಾಗ ನನ್ನ ತಾಯಿಯು ಅಪ್ಪನ ಬಳಿಗೆ ಹೋಗಿ ರೋದನೆ ಮಾಡುತ್ತಿದ್ದಳು. ಯಾವುದನ್ನೂ ಅರಿಯದ ನಾನು ಅವನ ಸಮೀಪದಲ್ಲಿ ಆಡುತ್ತಿದ್ದೆನು. ಆಗ ನಮ್ಮಪ್ಪನು ನನ್ನ ತಾಯಿಯನ್ನು ನೋಡಿ 'ಪ್ರಿಯೇ, ಧೈರ್ಯವಾಗಿರು. ಶತ್ರುವಿನಿಂದ ಈಗಲೋ ಆಗಲೋ ಬದಲು ಬರಬಹುದು. ಬರುವ ಬದಲು ಅನುಕೂಲವಾಗಿದ್ದರೆ ನಾವು ನಮ್ಮ ಅರಮನೆಯನ್ನು ಸೇರಿ ಸುಖವಾಗಿರೋಣ, ಇಲ್ಲದಿದ್ದರೆ—' ಎಂದು ಹೇಳುವುದರೊಳಗಾಗಿಯೇ ಅವನಿಗೆ ದುಃಖವು ಉಕ್ಕಿ ಬಂದು ಮುಂದೇ ಮಾತೇ ಹೊರಡಲಿಲ್ಲ. ಸ್ವಲ್ಪ ಸಮಾಧಾನವಾದ ಮೇಲೆ ನನ್ನ ತಾಯಿಯು 'ಇಲ್ಲದಿದ್ದರೆ ಏನು ?' ಎಂದು ಕೇಳಲು 'ಶಲ್ಯನಿಂದ ನಮಗೆ ವಿಮೋಚನೆಯಾಗುವುದು' ಎಂದನು."

"ಹೀಗೆ ಹೇಳುತ್ತಿದ್ದಾಗ ನಮ್ಮಪ್ಪನಿಗೆ ಏನೋ ತೋರಿ ತಟ್ಟನೆ ದುರ್ಬೀನನ್ನು ತೆಗೆದುಕೊಂಡು ಸರೋವರದ ದಡದ ಕಡೆ ನೋಡಿದನು. ಆಗ ಅವನ ಕೈ ನಡುಗಿತು. ಅವನು ಏನನ್ನು ನೋಡುತ್ತಾನೆಂದು ನಾನೂ ನನ್ನ ತಾಯಿಯೂ ಆ ಕಡೆ ನೋಡಲು

ಅಣುವಂತೆ ಯಾವುದೋ ನೀರಿನ ಮೇಲೆ ಹರಿದು ಬರುತ್ತಲಿದ್ದಿತು. ಓಹೋ ! ಒಂದು, ಎರಡು, ಮೂರು, ಅದರ ಹಿಂದೆ ಮತ್ತೊಂದು ಎಂದು ಹೇಳುತ್ತ ಅವನು ತನ್ನ ಆಯುಧವನ್ನು ಸಿದ್ಧಮಾಡಿಕೊಂಡು ನನಗೆ ಮುದ್ದಿಟ್ಟು ತಾಯಿಯ ಕೈಯನ್ನು ಹಿಡಿದುಕೊಂಡು 'ನಮ್ಮ ಹಣೆಯ ಬರಹವು ತಿಳಿಯುವ ಕಾಲವು ಪ್ರಾಪ್ತವಾಯಿತು. ಕೋಮಲೆಯನ್ನು ಕರೆದುಕೊಂಡು ನೀನು ನೆಲಮಾಳಿಗೆಗೆ ಹೊರಟುಹೋಗು' ಎಂದನು.

" 'ನಿಮ್ಮನ್ನು ಬಿಟ್ಟು ಎಂದಿಗೂ ಹೋಗೆನು. ಹಾಗೆ ಸತ್ತರೆ ನಿಮ್ಮೊಂದಿಗೇ ಸಾಯುತ್ತೇನೆ' ಎಂದು ನನ್ನ ತಾಯಿಯು ರೋದಿಸಲು, ಅವನು ಹೋಗು, ಎಂದು ಗರ್ಜಿಸಿದನು. ಆಗ ಅವಳು ಸದ್ದು ಮಾಡದೆ ನೆಲಮಾಳಿಗೆಗೆ ಹೊರಟಳು. ನಾನು ಅಲ್ಲಿಯೇ ನಿಂತಿದ್ದುದನ್ನು ಕಂಡು, ಅವನು ನನ್ನನ್ನು ಎತ್ತಿಕೊಂಡು ಪುನಃ ಮುದ್ದಿಟ್ಟು 'ನೀನು ಅಮ್ಮನ ಜತೆಯಲ್ಲಿರು, ಹೋಗು' ಎಂದು ಒಬ್ಬ ಸಿಪಾಯಿಯೊಡನೆ ಕಳುಹಿಸಿದನು. ಅದೇ ನನ್ನ ತಂದೆಯ ಕೊನೆಯ ಮುದ್ದು" ಎಂದು ಕೋಮಲೆಯು ಕಣ್ಣೀರನ್ನು ಸುರಿಸಿ ಹೇಳತೊಡಗಿದಳು.

"ನಾನೂ ನನ್ನ ತಾಯಿಯೂ ಎರಡನೆಯ ಅಂತಸ್ತಿನಲ್ಲಿ ಸ್ವಲ್ಪ ನಿಂತು ನೋಡುತ್ತಿದ್ದಾಗ, ಮೊದಲು ಅಣುವಂತೆ ತೋರುತ್ತಲಿದ್ದುದು ಸಮೀಪಕ್ಕೆ ಬರುಬರುತ್ತ ದೊಡ್ಡ ಪಕ್ಷಿಗಳಂತೆ ಕಾಣಿಸಿದುವು. ಮೇಲಿನ ಅಂತಸ್ಸಿನಲ್ಲಿ ನನ್ನ ತಂದೆಯು ದುಃಖಪಡುತ್ತ ಅಳುತ್ತಲಿದ್ದುದು ನಮ್ಮ ಕಿವಿಗೆ ಸ್ವಲ್ಪ ಸ್ವಲ್ಪ ಬೀಳುತ್ತಿದ್ದುವು. ಪಕ್ಷಿಗಳಂತೆ ತೋರುತ್ತಲಿದ್ದುವು ಸಮೀಪಕ್ಕೆ ಬರಲು, ದೋಣಿಗಳೆಂದು ತಿಳಿದೆವು. ದೋಣಿಗಳು ಸಮೀಪಕ್ಕೆ ಬರಲು ನನ್ನ ತಾಯಿಯು ಇನ್ನು ನೆಲಮಾಳಿಗೆಗೆ ಹೋಗದಿರುವುದು ಸರಿಯಲ್ಲವೆಂದು ನನ್ನನ್ನು ಎತ್ತಿಕೊಂಡು ಇಳಿದಳು. ಈಗಲೂ ಕಣ್ಣುಮುಚ್ಚಿಕೊಂಡರೆ ಆ ಸನ್ನಿವೇಶವು ಇದಿರಿಗೆ ಬಂದು ನಿಲ್ಲುವಂತಿದೆ.

"ನೆಲಮಾಳಿಗೆಗೆ ನಾವು ಹೋದಾಗ ಶಲ್ಯನು ತನ್ನ ಸ್ಥಾನದಲ್ಲಿಯೇ ಇದ್ದನು. ಆಪತ್ಕಾಲದಲ್ಲಿ ಒಂದು ಕಡೆ ಸೇರಿದವರು ಒಬ್ಬರನ್ನೊಬ್ಬರು ಆಶ್ರಯಿಸದೆ ಇರಲಾರರು. ನನ್ನ ತಾಯಿಯು ಶಲ್ಯನ ಬಳಿ ಕುಳಿತು ಸನ್ನಿಹಿತವಾಗಿದ್ದ ವಿಪತ್ತಿನ ವಿಷಯವಾಗಿ ಮಾತನಾಡುತ್ತಿದ್ದಳು. ಚಿಕ್ಕವಳಾಗಿ ಮಿಕ್ಕ ಸಂಗತಿಗಳಾವುವೂ ತಿಳಿಯದಿದ್ದರೂ ಆ ಸಂದರ್ಭದಲ್ಲಿ ಏನೋ ದೊಡ್ಡ ವಿಪತ್ತು ಸಂಭವಿಸುವುದೆಂದು ನನಗೂ ತೋರಿತು. ಆಗ ನಾನು ನನ್ನ ತಾಯಿಯ ತೊಡೆಯ ಮೇಲೆ ಕುಳಿತು ಅವಳನ್ನು ನನ್ನ ಎರಡು ಕೈಗಳಿಂದಲೂ ಅಪ್ಪಿಕೊಂಡಿದ್ದೆನು."

ಕ್ಷಿತೀಂದ್ರನ ಆಪತ್ಕಾಲದಲ್ಲಿ ನಡೆದ ವರ್ತಮಾನವನ್ನು ಉದಯಸಿಂಹನು ತನ್ನ ತಂದೆಯಿಂದ ಕೇಳದಿದ್ದರೂ ಇತರರಿಂದ ಕೇಳಿದ್ದನು. ಆದರೆ ಈಗ ಕೋಮಲೆಯು ಹೇಳಿದ ವಿವರದಿಂದ ಅವನಿಗೆ ಆಗ ಕೇಳಿದುದಕ್ಕೆ ಹೊಸ ಅರ್ಥವು ತೋರುತ್ತಲಿದ್ದಿತು.

ಅವಳು ಈ ಚರಿತ್ರೆಯನ್ನು ಹೇಳುತ್ತ ಮಧ್ಯೆ ಮಧ್ಯೆ ಸಂಕಟಪಡುತ್ತಲಿದ್ದುದನ್ನು ಕಂಡು ಉದಯಸಿಂಹನಿಗೆ ಪರಿತಾಪವುಂಟಾಯಿತು. ಬಿರುಗಾಳಿಯು ಬಂದರೆ ತಾವರೆಯು ಹೇಗೆ ಸೊಕ್ಕಿ ನೀರಿನ ಮೇಲೆ ಮಲಗುವುದೋ ಹಾಗೆ ಕೋಮಲೆಯು ಈ ದುಃಖಕರವಾದ ಚರಿತ್ರ ಕಥನದಿಂದ ಕುಗ್ಗಿ ತನ್ನ ಭುಜದ ಮೇಲೆ ತಲೆಯನ್ನಿಟ್ಟು ನಿಟ್ಟುಸಿರನ್ನು ಬಿಡುತ್ತ ಸ್ವಲ್ಪ ಕಾಲ ಸುಮ್ಮನೇ ಇದ್ದಳು.

ಆಗ ಮಲಯಸಿಂಹನು ಅವಳ ಅವಸ್ಥೆಯನ್ನು ನೋಡಿ ಕನಿಕರಪಟ್ಟು "ಜಾಗ್ರತೆಯಾಗಿ ಮುಗಿಸು" ಎಂದು ಸಂಕೇತಭಾಷೆಯಲ್ಲಿ ಹೇಳಲು, ಅವಳು ಸ್ವಪ್ನಾವಸ್ಥೆಯಿಂದ ಬೆಚ್ಚಿ ಎದ್ದವಳಂತೆ ಎಚ್ಚತ್ತು ಮುಂದೆ ಹೇಳಲಾರಂಭಿಸಿದಳು.

"ಆಗ ಸಾಯಂಕಾಲ ಸುಮಾರು ನಾಲ್ಕು ಗಂಟೆ, ಹೊರಗೆ ಬೆಳಕು ಚೆನ್ನಾಗಿದ್ದರೂ ನಮ್ಮ ನೆಲಮಾಳಿಗೆಯು ಕತ್ತಲೆಯಿಂದ ತುಂಬಿದ್ದಿತು. ಶಲ್ಯನು ಹಿಡಿದಿದ್ದ ದೊಂದಿಯು ಮಾತ್ರ ನೀಲಾಕಾಶದಲ್ಲಿ ಒಂದೇ ನಕ್ಷತ್ರವು ಮಿನುಗುಟ್ಟುವಂತೆ ಕಾಣುತ್ತಿದ್ದಿತು. ದೋಣಿಗಳು ಹತ್ತಿರ ಬಂದಾಗ ನನ್ನ ತಾಯಿಯು ಶಲ್ಯನನ್ನು ಕುರಿತು 'ಅಪ್ಪಾ ಶಲ್ಯ, ನಮ್ಮ ಗತಿ ಏನಾಗುವುದು ?' ಎನ್ನಲು 'ಅಮ್ಮಾ, ನಮ್ಮ ಪ್ರಾಣಗಳು ನಮ್ಮ ಕೈಯ್ಯಲ್ಲಿರುವಾಗ ನಮಗೇನು ಭಯ ?' ಎಂದು ಹೇಳಿ ದೊಂದಿಯನ್ನು ಪ್ರಕಾಶಮಾಡಿದನು. ಆ ಮಾತನ್ನು ಕೇಳಿ ನನ್ನ ತಾಯಿಯು ಗಡಗಡನೆ ನಡುಗಿದಳು. ಆ ಸನ್ನಿವೇಶದ ಗೌರವವನ್ನರಿಯದ ನಾನು ತಾಯಿಯನ್ನು ನೋಡಿ 'ಅಮ್ಮಾ, ನಾವು ನಿಜವಾಗಿಯೂ ಈಗ ಸಾಯಬೇಕೆ ?' ಎಂದು ಕೇಳಿದೆನು. ಅದಕ್ಕೆ ಅವಳು 'ಮಗೂ ! ಇಂತಹ ಮರಣದಿಂದ ದೇವರು ನಿನ್ನನ್ನು ಪಾರು ಮಾಡಲಿ', ಎಂದು ಹೇಳಿ ಶಲ್ಯನನ್ನು ನೋಡಿ 'ಶಲ್ಯ, ನೀನು ನನಗೊಂದು ಉಪಕಾರ ಮಾಡುತ್ತೀಯಾ ?' ಎಂದು ಕೇಳಿದಳು.

" 'ಅಮ್ಮಾ, ಅದೇನು ಅದೇನು ಅಪ್ಪಣೆಯಾಗಲಿ.'

" 'ಈ ಬೆಂಕಿಯಲ್ಲಿ ಬೆಂದು ಸಾಯುವುದಕ್ಕಿಂತ ಯಜಮಾನರು ಕಠಾರಿಯನ್ನು ಕಳುಹಿಸಿದರೆ ಅದರಿಂದ ನನ್ನ ಹೃದಯವನ್ನು ಚುಚ್ಚಿಬಿಡು ; ಸುಖವಾಗಿ ಸಾಯುವೆನು. ಅಷ್ಟುಮಟ್ಟಿಗೆ ಮಾಡಲಾರೆಯಾ ?' ಎನ್ನಲು, ಅವನು 'ಅಮ್ಮಾ, ನೋಡೋಣ' ಎಂದು ಹೇಳಿ ವ್ಯಾಕುಲಪಟ್ಟನು.

"ನೆಲಮಾಳಿಗೆಯಲ್ಲಿ ಈ ರೀತಿ ಮಾತು ನಡೆಯುತ್ತಲಿದ್ದಾಗ ಹೊರಗೆ ವಿಪರೀತ ಗದ್ದಲವಾಯಿತು. ಅದೇನಿರಬಹುದೆಂದು ಕಿವಿಗೊಟ್ಟು ಕೇಳಲು, ಸಮಾಧಾನ ಮಾಡಿಕೊಂಡು ಬರಲು ಕಳುಹಿಸಿದ್ದ ನಮ್ಮಪ್ಪನ ಸೇನಾಪತಿಯ ಹೆಸರನ್ನು ನಮ್ಮ ಸಿಪಾಯಿಗಳೆಲ್ಲ ಸಂತೋಷದಿಂದ ಹೇಳಿಕೊಳ್ಳುತ್ತಲಿದ್ದರು. ಅದರಿಂದ ನಮ್ಮಪ್ಪನನ್ನು ಚಕ್ರಾಧೀಶ್ವರನು ಕ್ಷಮಿಸಿದನೆಂದು ತಿಳಿದು ನನ್ನ ತಾಯಿಯು ಸಂತೋಷಪಡುತ್ತಲಿದ್ದಳು. ಹೊರಗಿನ ಶಬ್ದವು ಹೆಚ್ಚಿತು ; ನೆಲಮಾಳಿಗೆಗೆ ಜನರು ಬಂದು ಇಳಿಯುತ್ತಲಿದ್ದರು. ಶಲ್ಯನು ತನ್ನ ಕೈಯಲ್ಲಿದ್ದ ಭಲ್ಯವನ್ನು ಸಿದ್ಧಮಾಡಿಕೊಂಡು ಒಳಕ್ಕೆ ಯಾರೂ ಬಾರದಂತೆ ಬಾಗಿಲಲ್ಲಿ ನಿಂತಿದ್ದನು. ಬಾಗಿಲ

ಮುಂದೆ ನಿಂತಿದ್ದವರಲ್ಲಿ ಒಬ್ಬನು ಬಲಾತ್ಕಾರದಿಂದ ಒಳಕ್ಕೆ ಬರಲು ಪ್ರಯತ್ನ ಮಾಡಿದಾಗ ಶಲ್ಯನು 'ಯಾರು ಬರುವವರು ? ಮುಂದೆ ಒಂದು ಅಡಿ ಇಟ್ಟರೂ ಮರಣವು ಸಿದ್ಧ' ಎಂದನು. ಮಹಾರಾಜ ಕ್ಷಿತೀಂದ್ರನಿಗೆ ಜಯವಾಗಲಿ ! ಕ್ಷಿತೀಂದ್ರನನ್ನು ಚಕ್ರಾಧಿಪನು ಕ್ಷಮಿಸಿರುವನಲ್ಲದೆ ಅವನ ರಾಜ್ಯ ಕೋಶಗಳನ್ನೆಲ್ಲಾ ಅವನಿಗೆ ಕೊಟ್ಟಿದ್ದಾನೆ' ಎಂದು ಅವನು ಹೇಳಲು, ನನ್ನ ತಾಯಿಗೆ ಪರಮಸಂತೋಷವಾಗಿ ನನ್ನನ್ನು ಕಟ್ಟಿಕೊಂಡಳು. ಅದಕ್ಕೆ ಶಲ್ಯನು 'ಸ್ವಾಮೀ, ತಾವು ಹೇಳುವಂತೆ ಇರಬಹುದು ; ಆದರೂ ನಮ್ಮ ರಾಜರು ತಮ್ಮ ಕುರುಹನ್ನು ಕಳುಹಿಸುವವರೆಗೆ ನಾನು ಯಾರನ್ನೂ ಒಳಗೆ ಬಿಡೆನು. ಆ ಕುರುಹನ್ನು ತಾವು ತೋರಿಸಿರಿ' "

ಎಂದು ಹೇಳುತ್ತಿದ್ದ ಹಾಗೆಯೇ ಕೋಮಲೆಯ ಮುಖವು ಬಿಳ್ಚೇರಿ, ಮೆಯ್ ಬೆವರಿ, ಅಶ್ರುಧಾರೆಗಳು ಸುರಿದು, ಬಾಯೆಲ್ಲಾ ಒಣಗಿ, ಮಾತು ಹೊರಡದೆ, ಸೊಕ್ಕಿ ಹಾಗೆಯೇ ಒರಗಿದಳು. ಉದಯಸಿಂಹನು ಅದನ್ನು ನೋಡಿ ಗಾಬರಿ ಬೀಳಲು, ರಾಜನು, "ಗಾಬರಿ ಏತಕ್ಕೆ ?" ಎಂದು ಯಾವಾಗಲೂ ತನ್ನ ಬಳಿ ಇಟ್ಟಿರುವ ಸಣ್ಣ ಸೀಸೆಯ ದ್ರಾವಕದಲ್ಲಿ ಒಂದು ತೊಟ್ಟನ್ನು ಅವಳ ಬಾಯಿಗೆ ಬಿಟ್ಟನು. ಕೋಮಲೆಯು ನಿದ್ದೆ ಮಾಡಿದವಳಂತೆ ಎದ್ದಳು. ಆಗ ಮಲಯಸಿಂಹನು ಸಂಕೇತಭಾಷೆಯಲ್ಲಿ ಅವಳನ್ನು ಕುರಿತು "ಧೈರ್ಯವಾಗಿರು ; ಕಥೆಯನ್ನು ಜಾಗ್ರತೆಯಾಗಿ ಮುಗಿಸು" ಎಂದು ಹೇಳಲು, ಅವಳು ಕಣ್ಣುಗಳನ್ನು ಒರಸಿಕೊಂಡು ಹೇಳತೊಡಗಿದಳು :—

"ಅಷ್ಟು ಹೊತ್ತಿಗೆ ನಮ್ಮ ಕಣ್ಣುಗಳು ಕತ್ತಲೆಗೆ ಅಭ್ಯಾಸವಾಗಿ ಬಾಗಿಲಲ್ಲಿ ನಿಂತಿದ್ದವನು ನಮ್ಮಪ್ಪನ ಸೇನಾಪತಿಯೆಂದು ತಿಳಿಯಿತು. ಅದು ಶಲ್ಯನಿಗೆ ತಿಳಿದಿದ್ದರೂ ರಾಜನ ಆಜ್ಞೆಯನ್ನು ಸ್ವಲ್ಪವೂ ವ್ಯತ್ಯಾಸವಿಲ್ಲದೆ ನಡೆಸಬೇಕೆಂದು ಕುರುಹನ್ನು ಕೊಟ್ಟ ಹೊರತು ಯಾರನ್ನೂ ಒಳಗೆ ಬಿಡೆನು ಎಂದನು. ಆಗ ಸೇನಾಪತಿಯು 'ಇಗೋ ನೋಡು, ಕುರುಹು' ಎಂದು ಮುದ್ರೆಯ ಉಂಗುರವನ್ನು ಶಲ್ಯನ ಬಳಿಗೆ ಬಿಸುಟನು. ಶಲ್ಯನು ಅದನ್ನು ತೆಗೆದುಕೊಂಡು ಚೆನ್ನಾಗಿ ನೋಡಿ 'ಇದೇ ನಮ್ಮ ರಾಜರ ಮುದ್ರೆಯ ಉಂಗುರ' ಎಂದು ಕೈಯಲ್ಲಿದ್ದ ದೊಂದಿಯನ್ನು ಕೆಳಗಿಟ್ಟು ಬೆಂಕಿಯನ್ನು ಕಾಲಿಂದ ತುಳಿದು ಆರಿಸಿದನು. ಆಗ ಸೇನಾಪತಿಯು ಏನೋ ಸಂಕೇತವನ್ನು ಮಾಡಲು ಒಡನೆಯೇ ನಾಲ್ವರು ಸಿಪಾಯಿಗಳು ನುಗ್ಗಿ ಶಲ್ಯನನ್ನು ತಿವಿದು ಕೊಂದರು. ಆಗ ನನ್ನ ತಾಯಿ ದಿಕ್ಕೇ ತೋರದೆ ನನ್ನನ್ನು ಎತ್ತಿ ಕೊಂಡು ಅಪ್ಪನಿದ್ದೆಡೆಗೆ ಅಂತರಂಗದ ದಾರಿಯಲ್ಲಿ ಮೆಟ್ಟಲುಗಳನ್ನು ಹತ್ತಿ ಹೋದಳು. ನಮ್ಮ ಗ್ರಹಚಾರಕ್ಕೆ ಅವನ ಕೊಠಡಿಯ ಬಾಗಿಲು ಮುಚ್ಚಿದ್ದಿತು. ಬಾಗಿಲಲ್ಲಿಯೇ ನಿಂತು ಒಳಗೇನು ನಡೆಯುತ್ತದೋ ಎಂದು ಕದದ ಸಂದಿನಲ್ಲಿ ನೋಡಿದಾಗ ಶತ್ರುಗಳು ಆ ಕೊಠಡಿಯನ್ನು ಪ್ರವೇಶಿಸಿ 'ಕ್ಷಿತೀಂದ್ರ, ಇಗೋ ಚಕ್ರವರ್ತಿಯ ಆಜ್ಞೆ. ಇದನ್ನು ನಿನಗೆ ತಿಳಿಸಲು ಬಂದಿದ್ದೇವೆ' ಎಂದರು. 'ಅದರಲ್ಲಿ ಏನಿದೆ ?' ಎಂದು ನಮ್ಮಪ್ಪನು ಕೇಳಲು, 'ನಿನ್ನ ತಲೆಯನ್ನು ತರಹೇಳಿದೆ' ಎಂದರು. ಆಗ ನನ್ನ ತಂದೆಯು ನಕ್ಕು 'ಶಲ್ಯ, ನಿನ್ನ ಕೆಲಸವನ್ನು ನೀನು ಜಾಗ್ರತೆ ಮಾಡು' ಎಂದು ಕೂಗಿ

ತನ್ನ ಹತ್ತಿರ ಯಾರೂ ಬಾರದಂತೆ ಕತ್ತಿಯನ್ನು ತಿರುಗಿಸುತ್ತ ನಿಂತನು. ಅಷ್ಟು ಹೊತ್ತಿಗೆ ಸೇನಾಪತಿಯು ಅಲ್ಲಿ ಬಂದು 'ಶಲ್ಯನು ಆಗಲೇ ಸತ್ತನು ; ನಿನ್ನನ್ನು ಕೊಲ್ಲದೆ ಬಿಡೆವು' ಎಂದನು.

"ತನ್ನ ಆಪ್ತನೇ ಹೀಗೆ ದ್ರೋಹಮಾಡಿದನಲ್ಲಾ ಎಂದು ನನ್ನ ತಂದೆಗೆ ಹುಚ್ಚು ಕೋಪ ಬಂದು. 'ನೀನು ಪರಮಚಂಡಾಳ. ಚಕ್ರೇಶ್ವರನು ಕ್ಷಮಿಸಿದನೆಂದು ಸುಳ್ಳು ಕಾಗದವನ್ನು ನನಗೆ ತೋರಿಸಿ ನನ್ನ ಮುದ್ರೆಯ ಉಂಗುರವನ್ನು ತೆಗೆದುಕೊಂಡು ಶಲ್ಯವನ್ನು ಕೊಂದುಹಾಕಿ ನನ್ನನ್ನೂ ಕೊಲ್ಲಲು ಬಂದೆಯಾ ? ನಿನಗೆ ದೇವರು ತಕ್ಕ ಶಿಕ್ಷೆಯನ್ನು ಮಾಡದೆ ಇರನು' ಎಂದು ಸಮೀಪದಲ್ಲಿದ್ದ ಹತ್ತು ಹದಿನೈದು ಮಂದಿ ಶತ್ರುಗಳನ್ನು ಕೊಂದು ಸೇನಾಪತಿಯನ್ನು ತರುಬಿಕೊಂಡು ಹೋದಾಗ ಚಕ್ರವರ್ತಿಯ ಪ್ರತಿನಿಧಿಯಾಗಿ ಬಂದಿದ್ದವನು ಹಿಂದಣಿಂದ ನಮ್ಮಪ್ಪನನ್ನು ತಿವಿದು ಕೊಂದನು. ಅವನು ಸತ್ತು ಕೆಳಗೆ ಬಿದ್ದಾಗ ನನ್ನ ತಾಯಿಯು ಮೂರ್ಛಾಕ್ರಾಂತಳಾಗಿ ಕೆಳಗೆ ಬಿದ್ದಳು. ನನಗೂ ಮೆಯ್ಯ ಮೇಲೆ ಸ್ಮರಣೆಯು ತಪ್ಪಿತು."

ಇಷ್ಟು ದೂರ ಹೇಳಿದ ಮೇಲೆ ಕೋಮಲೆಗೆ ಎದೆಯುಬ್ಬಿ ನಿಟ್ಟುಸಿರು ಪ್ರಾರಂಭವಾಯಿತು. ಆಗ ಮಲಯಸಿಂಹನು ಅವಳನ್ನು ಕುರಿತು "ದೇವರು ದೊಡ್ಡವನು, ದುಷ್ಟರನ್ನು ನಿಗ್ರಹಿಸಿ ಅನಾಥೆಯಾದ ನಿನ್ನನ್ನು ರಕ್ಷಿಸದೆ ಬಿಡನು. ಹೆದರಬೇಡ" ಎಂದು ಅವಳನ್ನು ಸಂತೈಸಿದನು. ಉದಯಸಿಂಹನು ರಾಜನನ್ನು ಕುರಿತು,

"ಇದು ಭಯಂಕರವಾದ ವೃತ್ತಾಂತ. ಇದನ್ನು ಇವಳಿಂದ ಹೇಳಿಸಿ ಇವಳಿಗೆ ಇಲ್ಲದ ಸಂಕಟವನ್ನು ಉಂಟುಮಾಡಿದೆನಲ್ಲಾ ಎಂದು ವ್ಯಸನಪಡುತ್ತೇನೆ."

"ಆ ವಿಷಯದಲ್ಲಿ ನೀವು ಪಶ್ಚಾತ್ತಾಪ ಪಡಬೇಕಾದುದೇನೂ ಇಲ್ಲ. ಕೋಮಲೆ ಬಹು ಧೈರ್ಯಶಾಲಿ ; ಈ ಚರಿತ್ರ ಕಥನವು ಅವಳಿಗೆ ದುಃಖೋಪಶಮನವಾಗಿದೆ" ಎಂದು ಹೇಳಲು, ಕೋಮಲೆಯು

"ನನ್ನ ಸ್ವಾಮಿಯು ಹೇಳುವುದು ಸರಿ ; ದುಃಖಸಮುದ್ರದಲ್ಲಿ ನಾನು ಮುಳುಗಿ ತೇಲುತ್ತಿದ್ದುದನ್ನು ನೆನಸಿಕೊಂಡರೆ ನನ್ನ ಸ್ವಾಮಿಯು ಮಾಡಿದ ಉಪಕಾರದ ಮಹತ್ವವು ಗೊತ್ತಾಗುತ್ತದೆ. ಅದೇ ನನಗಾಗುವ ಉಪಶಮನ."

ಕೋಮಲೆಯು ಹೇಗೆ ರಾಜನ ಸೆರೆಯಾದಳು ಎಂದು ತಿಳಿಯ ಬೇಕಾಗಿದ್ದುದರಿಂದ ಉದಯಸಿಂಹನು ಅವಳನ್ನು ಕೌತುಕದಿಂದ ನೋಡಲು, ಅವನ ಅಭಿಪ್ರಾಯವನ್ನು ತಿಳಿದು, ಕೋಮಲೆಯು ರಾಜನ ಮುಖವನ್ನು ನೋಡಿ ಅವನು ಹೇಳು ಎಂದು ಸಂಜ್ಞೆಮಾಡಿದುದರಿಂದ ಆ ಸಮಾಚಾರವನ್ನು ಪ್ರಾರಂಭಿಸಿದಳು :—

ನನಗೆ ಮೂರ್ಛೆ ತಿಳಿದಾಗ ನಾವು ಪ್ರತಿನಿಧಿಯ ಮುಂದಿದ್ದೆವು. ಆಗ ನನ್ನ ತಾಯಿಯು 'ಸ್ವಾಮೀ, ನನ್ನನ್ನು ಕೊಂದುಬಿಡಿ ; ಮಾನಭಂಗ ಮಾಡಬೇಡಿರಿ' ಎಂದು

ಎರಡು ಕೈಗಳನ್ನೂ ಜೋಡಿಸಿ ಪ್ರಾರ್ಥಿಸಲು, ಅವನು 'ನನ್ನೊಂದಿಗೆ ಹೇಳಿ ಏನು ಪ್ರಯೋಜನ ?' ಎಂದನು.

'ಇನ್ನಾರಲ್ಲಿ ಹೇಳಿಕೊಳ್ಳಬೇಕು ?'

'ನಿನ್ನ ಹೊಸ ಸ್ವಾಮಿಯಲ್ಲಿ ಹೇಳಿಕೋ ?'

'ಅವರೆಲ್ಲಿ ?'

'ಇದೋ ಇಲ್ಲಿ' ಎಂದು ನಮ್ಮ ಸೇನಾಪತಿಯನ್ನೇ ತೋರಿಸಿದನು."

""ಆಗ ನೀವು ಅವನ ಸ್ವತ್ತಾದರೋ ?" ಎಂದು ಉದಯಸಿಂಹನು ಕೇಳಲು, ಕೋಮಲೆಯು

"ನಮ್ಮನ್ನು ಅವನ ಸಮೀಪದಲ್ಲಿಟ್ಟುಕೊಳ್ಳಲು ಅವನಿಗೆ ಧೈರ್ಯ ಸಾಲದೆ, ಜೀತಗಾರರನ್ನು ಕೊಳ್ಳಲು ಬಂದಿದ್ದ ವ್ಯಾಪಾರಿಗಳಲ್ಲಿ ಒಬ್ಬನಿಗೆ ನಮ್ಮನ್ನು ಮಾರಿಬಿಟ್ಟನು. ಆತನು ನಮ್ಮನ್ನು ನಡೆಸಿಕೊಂಡು ಹೋಗಿ ವಿಕ್ರಯಿಸುವುದಕ್ಕಾಗಿ ಸಂತೆಯಲ್ಲಿ ನಿಲ್ಲಿಸಲು ಅಲ್ಲಿ ಸೇರಿದ್ದ ಅನೇಕರು ಸಮೀಪದಲ್ಲಿದ್ದ ಕಮಾನ ಬಾಗಿಲನ್ನು ಅತಿ ಕುತೂಹಲದಿಂದ ನೋಡುತ್ತಿದ್ದರು. ಅಲ್ಲೇನಿರಬಹುದೆಂದು ನಾನೂ ನನ್ನ ತಾಯಿಯೂ ನೋಡಿದಾಗ ನಮ್ಮಪ್ಪನ ತಲೆಯನ್ನು ತೂಗುಹಾಕಿದ್ದರು. ಇದೇ ಕ್ಷಿತೀಂದ್ರನ ಶಿರಸ್ಸು ಎಂದು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಕೆಳಗಡೆ ಬರೆದಿದ್ದಿತು. ಅದನ್ನು ನೋಡಿದೊಡನೆಯೇ ನನ್ನ ತಾಯಿಯು ಜ್ಞಾನ ತಪ್ಪಿ ಕೆಳಗೆ ಬಿದ್ದಳು. ಅವಳನ್ನು ಎತ್ತಿದಾಗ ಪ್ರಾಣವು ಹಾರಿ ಹೋಗಿದ್ದಿತು. ಅಂದು ಜೀತಗಾರರನ್ನು ಕೊಳ್ಳಲು ಅನೇಕರು ಬಂದಿದ್ದರು. ನನ್ನ ಅದೃಷ್ಟಕ್ಕೆ ನನ್ನನ್ನು ಒಬ್ಬ ದೊಡ್ಡ ಸಾಹುಕಾರನು ಕ್ರಯಕ್ಕೆ ಕೊಂಡು ನನಗೆ ವಿದ್ಯಾಬುದ್ಧಿಗಳನ್ನು ಕಲಿಸಿದರೆ ತನಗೆ ಹೆಚ್ಚು ಬೆಲೆ ಸಿಕ್ಕುವುದೆಂದು ಯೋಚಿಸಿ ಅದಕ್ಕೆ ತಕ್ಕ ಏರ್ಪಾಡನ್ನು ಮಾಡಿ, ನನ್ನ ಹದಿಮೂರನೆಯ ವಯಸ್ಸಿನಲ್ಲಿ ಒಬ್ಬ ಸಾಹುಕಾರನಿಗೆ ಮಾರಿದನು."

"ನಿಮಗೆ ತೋರಿಸಿದ ಕಲ್ಪವಲ್ಲೀಚೂರ್ಣವಿಟ್ಟಿರುವ ಪಚ್ಚೆಯಂತೆ ಇದ್ದ ಮತ್ತೊಂದು ಪಚ್ಚೆಯನ್ನು ಕೊಟ್ಟು ಅವನಿಂದ ನಾನು ಇವಳನ್ನು ಕ್ರಯಕ್ಕೆ ಕೊಂಡೆನು" ಎಂದು ರಾಜನು ಹೇಳಲು, ಕೋಮಲೆಯು ರಾಜನನ್ನು ದೈನ್ಯಭಾವದಿಂದ ನೋಡಿ "ನಿಮ್ಮಂತಹ ಸ್ವಾಮಿಯು ದೊರಕಿದುದು ನನ್ನ ಪುಣ್ಯವೇ ಸರಿ" ಎಂದಳು.

ಈ ವೃತ್ತಾಂತವನ್ನು ಕೇಳಿ ಉದಯಸಿಂಹನು ಬೆರಗಾದನು. ರಾಜನು ಅವನ ಬೆನ್ನು ತಟ್ಟಿ "ಕೋಮಲೆಯ ಕಥೆಯು ಮುಗಿಯಿತು. ಇನ್ನು ಹೋಗೋಣ ; ಏಳಿ" ಎಂದು ಅವನನ್ನು ಕರೆದುಕೊಂಡು ಅಲ್ಲಿಂದ ಹೊರಟನು.

## ೫೪
# ಯವನದೇಶದ ವೃತ್ತಾಂತ

ದೀನನಾಥನ ಕೊಠಡಿಯಿಂದ ಹೊರಟಾಗ ವೀರಸಿಂಹನಿಗೆ ಕಾಲುಗಳು ನಡುಗಿ ಮುಖವು ವಿವರ್ಣವಾಗಿದ್ದಿತು. ಅವನ ಆಗಿನ ಸ್ಥಿತಿಯನ್ನು ವಿಮಲೆಯು ನೋಡಿದ್ದರೆ ಅವಳಿಗೂ ಕರುಣೆಯುಂಟಾಗುತ್ತಲಿದ್ದಿತು. ಬಾಗಿಲ ಸಮೀಪದಲ್ಲಿ ನಿಂತಿದ್ದ ವಲ್ಲಭದೇವನು ಎಲ್ಲರಿಗಿಂತ ಮುಂಚೆ ಬಾಗಿಲನ್ನು ತೆರೆದುಕೊಂಡು ತನ್ನ ಕೊಠಡಿಗೆ ಹೊರಟುಹೋದನು. ಅವನು ಒಳಗೆ ಹೋಗಿ ಕುಳಿತು ತನ್ನ ತಂದೆಯ ಅವಿವೇಕವನ್ನು ನೆನಸಿಕೊಂಡು ದುಃಖ ಪಡುತ್ತಲಿದ್ದಾಗ ಸೇವಕನು ಅವನ ಕೈಗೆ ಒಂದು ಕಾಗದವನ್ನು ತಂದು ಕೊಟ್ಟನು. ಅದರಲ್ಲಿ ಈ ರೀತಿ ಇದ್ದಿತು :—

ದೀನನಾಥರ ಕೊಠಡಿಯಲ್ಲಿ ತಿಳಿಯಬಂದ ಸಂಗತಿಯಿಂದ, ನಾನು ನಿಮ್ಮ ಸಂಬಂಧವನ್ನು ಮಾಡುವುದಕ್ಕಾಗುವುದಿಲ್ಲ. ಆ ಸಮಾಚಾರಗಳನ್ನೆಲ್ಲಾ ನೀವು ತಿಳಿದಿದ್ದೂ ಈ ಏರ್ಪಾಡು ಮಾಡಿದುದನ್ನು ನೋಡಿ ನನಗೆ ತುಂಬ ಆಶ್ಚರ್ಯವೂ ವಿಷಾದವೂ ಆಗಿದೆ.

ಇತಿ, ವೀರಸಿಂಹ

ಅದನ್ನು ಓದಿ ವಲ್ಲಭದೇವನು ಮದುವೆಯು ತಪ್ಪಿಹೋಯಿತಲ್ಲಾ ಎಂದು ಸಂಕಟಪಟ್ಟುದಲ್ಲದೆ ಅವಮಾನವನ್ನೂ ಅನುಭವಿಸಿದನು. ನಿಜವಾಗಿ ನೋಡಿದರೆ ವಲ್ಲಭದೇವನಿಗೆ ಆ ದ್ವಂದ್ವ ಯುದ್ಧದ ವಿಷಯವಾಗಿ ಇಷ್ಟು ವಿವರಗಳು ತಿಳಿದಿರಲಿಲ್ಲ. ವೀರಪ್ರಚಂಡರನ್ನು ತನ್ನ ತಂದೆಯು ಮೋಸದಿಂದ ಕೊಂದನೆಂದು ತಿಳಿದಿದ್ದನೇ ಹೊರತು, ಧರ್ಮಯುದ್ಧದಲ್ಲಿ ಕೊಂದನೆಂದು ತಿಳಿದಿರಲಿಲ್ಲ. ಅಲ್ಲದೆ, ತನ್ನ ತಂದೆಯು ಆ ಸಂಗತಿಯನ್ನು ಇಷ್ಟು ಬಹಿರಂಗವಾಗಿ ಹೇಳುವನೆಂದು ಅವನು ಯೋಚಿಸಿಯೇ ಇರಲಿಲ್ಲ. ನಾಗಮಣಿಯು ಗಂಡನ ಬಳಿಗೆ ಬಂದು,

"ಎಲ್ಲರೂ ಕಾದಿದ್ದಾರೆ; ವೀರಸಿಂಹನು ಹೊರಟುಹೋದನು. ನೀವು ಇಲ್ಲಿ ಕುಳಿತಿದ್ದೀರಿ. ಇದು ಏನು ಸಮಾಚಾರ ?" ಎಂದು ಕೇಳಲು, ಅವನು,

"ಮುದುಕನಿಗೂ ವೀರಸಿಂಹನಿಗೂ ಕೆಲವು ಮಾತುಗಳು ನಡೆದು ಮದುವೆಯು ತಪ್ಪಿಹೋಯಿತು. ಕೆಳಗೆ ನೆರೆದಿರುವ ಜನಗಳಿಗೆ ಏನನ್ನಾದರೂ ಹೇಳಿ ಕಳುಹಿಸು" ಎಂದನು.

ಆಗ ಅವಳು ಕೆಳಗೆ ಬಂದು "ನನ್ನ ಮಾವಂದಿರಿಗೆ ಹಠಾತ್ತಾಗಿ ಮೈಯ್ ಸ್ವಸ್ಥವಿಲ್ಲದೆ ಹೋದುದರಿಂದ ಈಗ ಲಗ್ನವು ನಿಂತುಹೋಯಿತು" ಎಂದು ಎಲ್ಲರಿಗೂ ತಿಳಿಸಲು, ಅವರೆಲ್ಲರೂ ಹಿಂದೆ ಆ ಮನೆಯಲ್ಲಿ ಆದ ಅನಾಹುತಗಳನ್ನು ನೆನಸಿಕೊಂಡು ಅದರಂತೆಯೇ ಇದೂ ಇರಬಹುದು ಎಂದುಕೊಂಡು ಸದ್ದಿಲ್ಲದೆ ಹೊರಟುಹೋದರು.

ಆಗ ತಾತನ ಕೊಠಡಿಗೆ ವಿಮಲೆಯು ಬಂದು ವೃದ್ಧನನ್ನು ಅಪ್ಪಿಕೊಂಡು "ನನಗೆ ನಮ್ಮಪ್ಪನು ಇಕ್ಕುತ್ತಿದ್ದ ಸಂಕಲೆಯನ್ನು ನೀನು ಒಂದೇ ಪೆಟ್ಟಿನಲ್ಲಿ ಮುರಿದು ಬಿಸುಟೆ. ನನಗೆ ಮೊದಲು ಉಂಟಾಗಿದ್ದ ದುಃಖವೂ ಈಗ ಉಂಟಾದ ಸಂತೋಷವೂ ನನ್ನ ಮನಸ್ಸನ್ನು ಕಳವಳಪಡಿಸಿದೆ ; ಅದಕ್ಕಾಗಿ ನನ್ನ ಕೊಠಡಿಗೆ ಹೋಗಿ ಸ್ವಲ್ಪ ಕಾಲ ಏಕಾಂತದಲ್ಲಿದ್ದು ಸಮಾಧಾನಮಾಡಿಕೊಂಡು ಬರುತ್ತೇನೆ" ಎಂದಳು. ಅವನು "ಹುಂ" ಎನ್ನುತ್ತಲೆ ಅವಳು ಅಲ್ಲಿಂದ ಹೊರಟಳು.

ಅಂದು ನಡೆದ ಆಶ್ಚರ್ಯಕರವಾದ ಸಂಗತಿಯು ವಿಮಲೆಯ ಮನಸ್ಸನ್ನು ಕಳವಳಪಡಿಸಿದ್ದುದೇನೋ ನಿಶ್ಚಯ. ಆದರೆ ತನ್ನ ಪ್ರಿಯನು ಸಂಕೇತ ಸ್ಥಾನಕ್ಕೆ ಒಂದು ವೇಳೆ ಬಂದಿದ್ದರೆ ಅವನಿಗೆ ಈ ಸಂತೋಷ ವರ್ತಮಾನವನ್ನು ತಿಳಿಸೋಣವೆಂದು ಅವಳು ತನ್ನ ಕೊಠಡಿಗೆ ಹೋಗದೆ ತೋಟಕ್ಕೆ ಓಡಿ ಹೋದಳು. ವೀರಸಿಂಹನಿಗೂ ವಿಮಲೆಗೂ ನಡೆಯಬೇಕಾಗಿದ್ದ ಮದುವೆಯು ನಿಂತುಹೋಯಿತೆಂದು ಮಾತ್ರ ಜಯವೀರನು ಹೊರಗೆ ವಿಚಾರಿಸಿ ತಿಳಿದಿದ್ದನು. ಅವನಿಗೆ ಅದರ ವಿವರವಾವುದೂ ತಿಳಿಯದು. ಅದನ್ನು ತಿಳಿಯಲೋಸುಗ ಅವನೂ ಸಂಕೇತಸ್ಥಾನಕ್ಕೆ ಬಂದನು.

ವಿಮಲೆಯು ಜಯವೀರನನ್ನು ಕಂಡಕೂಡಲೇ "ನಾವು ಬದುಕಿದೆವು" ಎಂದು ಹೇಳಲು "ಬದುಕಿದೆವೇ ? ಯಾರಿಂದ ?" ಎಂದು ಅತ್ಯಾನಂದದಿಂದ ಕೇಳಲು ಅವಳು "ಅಜ್ಜನಿಂದ" ಎಂದಳು.

"ಅವರು ಯಾವ ಯುಕ್ತಿಯನ್ನು ಮಾಡಿ ನಮಗೆ ಸುಖವನ್ನು ತಂದರು ?"

ತಾತನು ದ್ವಂದ್ವಯುದ್ಧದಲ್ಲಿ ವೀರಪ್ರಚಂಡನನ್ನು ಕೊಂದ ಸಂಗತಿಯನ್ನು ಹೊರಪಡಿಸುವುದು ಯುಕ್ತವಲ್ಲವೆಂದು ಯೋಚಿಸಿ ವಿಮಲೆಯು "ಅದನ್ನು ಮುಂದೆ ಯಾವಾಗಲಾದರೂ ಹೇಳುತ್ತೇನೆ" ಎಂದಳು.

"ಯಾವಾಗ ?"

"ನಾನು ನಿನ್ನನ್ನು ಮದುವೆಯಾದ ಮೇಲೆ."

ವಿಮಲೆಗೂ ಜಯವೀರನಿಗೂ ಇದುವರೆಗೆ ಮದುವೆಯಾಗುವುದೆಂದರೆ ಎಷ್ಟು ಅಸಾಧ್ಯವಾಗಿ ತೋರುತ್ತಲಿದ್ದಿತೋ ಮುಂದೆ ಅಷ್ಟು ಸುಲಭವೆಂದು ತೋರಿ, ಇಬ್ಬರೂ ಆನಂದಸಮುದ್ರದಲ್ಲಿ ತೇಲಾಡುತ್ತಿದ್ದರು. ಇತ್ತ ಹೀಗಿರುವಲ್ಲಿ, ಅತ್ತ ನಾಗಮಣಿಯು ಮಾವನ ಕೊಠಡಿಗೆ ಹೋಗಿ ವಿಮಲೆಯ ಗುಣಗಳನ್ನೂ, ವೀರಸಿಂಹನ ಮದುವೆಯನ್ನು ತಪ್ಪಿಸಲು ಅವನು ಮಾಡಿದ ಉಪಾಯವನ್ನೂ ಕೊಂಡಾಡಿ, ಅವನು ಬರೆಸಿಟ್ಟಿರುವ ಮರಣಶಾಸನದಿಂದ ವಿಮಲೆಗೆ ಉಂಟಾಗುವ ನಷ್ಟವನ್ನೂ ತಿಳಿಸಿ, ಅವಳ ಹೆಸರಿಗೆ ಮತ್ತೊಂದು ಮರಣಶಾಸನವನ್ನು ಬರೆಸಿಡುವಂತೆ ಪ್ರಾರ್ಥಿಸಿದಳು. ಅದನ್ನು ಕೇಳಿ ವೃದ್ಧನಿಗೆ ಅನುಮಾನವುಂಟಾಗಿ, ಹೀಗೆ ಬಂದು ಕೇಳಲು ಅವಳ ಅಭಿಪ್ರಾಯವೇನಿರಬಹು ದೆಂದು ಬಹುಕಾಲ ಯೋಚಿಸಿ ಬಗೆ ಹರಿಯದೆ ಕೊನೆಗೆ ಹೇಗಾದರೂ ಆಗಲಿ, ತಾನು

ಮಾಡಬೇಕೆಂದಿದ್ದುದನ್ನೇ ಅವಳೂ ಅಪೇಕ್ಷಿಸುವುದು ಎಂದು ತಿಳಿದವನಾಗಿ ಹೂಂ ಎಂದನು. ನಾಗಮಣಿಯು ಸಂತೋಷಚಿತ್ತಳಾಗಿ ಹೊರಟುಹೋದಳು. ಮಾರನೆಯ ದಿನವೇ ದೀನನಾಥನು ಹಿಂದೆ ಬರೆಸಿದ್ದ ಮರಣಶಾಸನವನ್ನು ಸುಟ್ಟು, ತನ್ನ ಕಾಲಾನಂತರ ತನ್ನ ಆಸ್ತಿಯನ್ನೆಲ್ಲಾ ವಿಮಲೆಗೆ ಕೊಡಬೇಕೆಂದು ಒಂದು ಹೊಸ ಶಾಸನವನ್ನು ಬರೆಸಿದನು.

ವಲ್ಲಭದೇವನ ಮನೆಯಲ್ಲಿ ಮೇಲೆ ಹೇಳಿದ ಸಂಗತಿಗಳು ನಡೆಯುತ್ತಿದ್ದಾಗ ರಾಜಾ ಮಲಯಸಿಂಹನು ಶ್ರೀಮಂತ ರಾಜಸಿಂಹರನ್ನು ನೋಡಬೇಕೆಂದು ಅವನ ಮನೆಗೆ ಹೋಗಿ ದುರ್ಮತಿಯ ಮಾತನ್ನು ಅವನಿಗೆ ತಿಳಿಸುತ್ತಲೇ, ಅವನು ಲೇಶವೂ ಸಾವಕಾಶ ಮಾಡದೆ ದುರ್ಮತಿಯನ್ನು ಕಂಡು ಮದುವೆಯನ್ನು ನಿಷ್ಕರ್ಷೆ ಮಾಡಿಕೊಂಡು ಬರಲು ಹೊರಟನು. ಅವನು ಬಂದಾಗ ದುರ್ಮತಿಯು ಲೆಕ್ಕವನ್ನು ನೋಡುತ್ತಿದ್ದನು. ಪ್ರಾಯಶಃ ಅಂತಹ ವೇಳೆಗಳಲ್ಲಿ ಧನಾಗಾರಪತಿಗಳು ಸುಮುಖರಾಗಿರುವುದು ಅಪೂರ್ವ ; ಅದರಲ್ಲೂ ನಷ್ಟವೇ ಹೆಚ್ಚಾಗಿರುವಾಗ ಹೇಳಬೇಕಾದುದೇ ಇಲ್ಲ. ದುರ್ಮತಿಯು ತನ್ನ ಪೂರ್ವಸ್ನೇಹಿತ ರಾಜಸಿಂಹನನ್ನು ನೋಡುತ್ತಲೇ ಶರಂಭೂತನಾದನು. ಸ್ವಭಾವವಾಗಿ ದುರಹಂಕಾರಿಯಾದರೂ ರಾಜಸಿಂಹನು ಅಂದು ಬಹು ವಿನಯದಿಂದ ದುರ್ಮತಿಯನ್ನು ಮಾತನಾಡಿಸತೊಡಗಿದನು. ಅವನು ಮನಸ್ಸಿನಲ್ಲಿ 'ನಿನ್ನ ಮಗಳನ್ನು ನಮ್ಮ ಹುಡುಗನಿಗೆ ಮದುವೆ ಮಾಡಿಕೊಡು ಎಂದು ಕೇಳಿದರೆ ಸಾಕು, ದುರ್ಮತಿಯು ಒಪ್ಪುವನು' ಎಂದು ತಿಳಿದುಕೊಂಡಿದ್ದನು.

"ಸ್ವಾಮೀ ದುರ್ಮತಿಗಳೇ, ನಾವು ಬಹುಕಾಲದಿಂದ ಮಾಡಿಕೊಂಡಿದ್ದ ಸಂಕಲ್ಪವು ಇನ್ನೂ ಕಾರ್ಯಕಾರಿಯಾಗಲಿಲ್ಲ" ಎಂದು ರಾಜಸಿಂಹನು ಹೇಳಲು, ದುರ್ಮತಿಯು ಏನೂ ತಿಳಿಯದವನಂತೆ,

"ಯಾವ ಸಂಕಲ್ಪ ?" ಎಂದನು.

"ಓಹೋ ; ಕ್ರಮಪ್ರಕಾರ ಮರ್ಯಾದೆಯಿಂದ ಕೇಳಲಿಲ್ಲವೆಂದು ತಮಗೆ ಅಸಮಾಧಾನವೋ ? ಸ್ವಾಮೀ, ಶ್ರೀಮಂತ ದುರ್ಮತಿಗಳೇ ! ತಮ್ಮ ಮಗಳನ್ನು ನನ್ನ ಮಗನಿಗೆ ಲಗ್ನ ಮಾಡಿಕೊಟ್ಟು ನನ್ನ ವಂಶವನ್ನು ಉದ್ಧಾರ ಮಾಡಬೇಕು."

ದುರ್ಮತಿಯು ಸೊಟ್ಟ ಮೋರೆ ಮಾಡಿಕೊಂಡು,

"ಇದು ಸುಮ್ಮನೆ ಮಾಡತಕ್ಕ ಕಾಯವಲ್ಲ ; ಯೋಚಿಸದೆ ಏಕಾಏಕಿ ಒಪ್ಪಿಕೊಳ್ಳುವುದಕ್ಕೆ ಆಗದು."

"ಎಂಟು ವರ್ಷಗಳ ಹಿಂದೆಯೇ ಏರ್ಪಾಡಾಗಿದ್ದ ವಿಷಯವನ್ನು ಈಗ ಯೋಚಿಸಬೇಕಾದುದೇನು ?"

"ರಾಜಸಿಂಹರೇ, ಈ ಲೋಕದಲ್ಲಿ ಕಾಲಸ್ಥಿತಿಯು ಒಂದೇ ರೀತಿಯಾಗಿದ್ದೀತೇ ? ಪ್ರಕೃತ ಸ್ಥಿತಿಯನ್ನು ನೋಡಿಕೊಂಡಲ್ಲವೇ ಕೆಲಸಕ್ಕೆ ಕೈಹಾಕಬೇಕು."

"ಶ್ರೀಮಂತರೇ, ತಮ್ಮ ಅಭಿಪ್ರಾಯವು ನನಗೆ ಗೊತ್ತಾಗಲಿಲ್ಲ."

"ಹಾಗಾದರೆ ಕೇಳಿ. ಈಗ ಸುಮಾರು ಹದಿನೈದು ದಿನಗಳಿಂದ ಈಚೆಗೆ ಕೆಲವು ಸಂಗತಿಗಳು ನಡೆದಿರುವುವು ; ಅವು ನಿಮಗೆ ತಿಳಿಯದೋ ಏನೋ ?"

"ದುರ್ಮತಿಗಳೇ, ಇದು ಏನು ನಾಟಕವೋ ?"

"ನಾಟಕವೇ, ನಾಟಕದಂತೆಯೇ ಆಗಿದೆ. ಏನಾದರೂ ಆಗಲಿ, ಯಾವುದಾದರೂ ಒಂದು ನಿಷ್ಕರ್ಷೆ ಮಾಡಿಕೊಳ್ಳೋಣ."

"ನನಗೂ ಅದೇ ಅಭಿಪ್ರಾಯ."

"ನೀವು ರಾಜಾ ಮಲಯಸಿಂಹರನ್ನು ಈಚೆಗೆ ನೋಡಿದ್ದಿರೋ ?"

"ಅವರು ನನ್ನ ಮುಖ್ಯ ಸ್ನೇಹಿತರು ! ಅವರನ್ನು ಅಡಿಗಡಿಗೆ ನೋಡುತ್ತಲೇ ಇದ್ದೇನೆ."

"ನಾನು ಈ ಮದುವೆಯ ವಿಷಯವನ್ನು ಮರೆತಿರುವೆನೆಂದು ನೀವು ಅವರೊಂದಿಗೆ ಹೇಳಿದರಲ್ಲವೇ ?"

"ಹೇಳಿದ್ದೆ."

"ಅದನ್ನು ಮರೆಯಲಿಲ್ಲವೆಂದು ತಿಳಿಸಲು ಬಂದಿದ್ದೇನೆ."

ಅದಕ್ಕೆ ದುರ್ಮತಿಯು ಯಾವ ಬದಲನ್ನೂ ಹೇಳದೆ ಸುಮ್ಮನಿದ್ದನು.

"ಹಾಗಾದರೆ ನನ್ನಿಂದ ಕೇಳಿಸಿಕೊಂಡು ಬಳಿಕ ಇಲ್ಲವೆಂದು ನನಗೆ ಅಪಮಾನ ಮಾಡಬೇಕೆಂಬ ಅಭಿಪ್ರಾಯದಿಂದ ಹಾಗೆ ಹೇಳಿದಿರೋ ?"

"ರಾಜಸಿಂಹರೇ, ಬರೆಯ ಮಾತಿನಿಂದ ಏನು ಪ್ರಯೋಜನ ? ಯೋಚಿಸಿ ಹೇಳುತ್ತೇನೆ ಎಂದು ನಿಮ್ಮೊಂದಿಗೆ ಹೇಳಿದರೆ ಅದಕ್ಕೆ ತಕ್ಕ ಕಾರಣವಿಲ್ಲದೆ ಹೇಳಿರಲಾರೆ ಎಂದು ನೀವು ತಿಳಿದುಕೊಳ್ಳಿರಿ."

"ಹೊಸಬರೊಂದಿಗೆ ಈ ಮಾತನ್ನು ಹೇಳಿದರೆ ಒಪ್ಪಿಕೊಂಡಾರು. ನಾನೇನೂ ನಿಮ್ಮನ್ನು ಕಾಣದವನಲ್ಲ. ನಿಮ್ಮಿಂದ ಸರಿಯಾದ ಕಾರಣವನ್ನು ತಿಳಿದುಕೊಳ್ಳದೆ ಹೊರಡೆನು. ಇದನ್ನು ನೀವು ಅರಿಯಿರಾ ?"

"ಕಾರಣವಿಲ್ಲದೆ ಇಲ್ಲ. ಈಗ ಯಾವುದನ್ನೂ ಹೇಳುವುದಕ್ಕಾಗುವುದಿಲ್ಲ. ಸಾವಕಾಶ ಮಾಡಲು ಇಷ್ಟವಿಲ್ಲದಿದ್ದರೆ ಈ ಮದುವೆಯ ಯೋಚನೆಯನ್ನೇ ಬಿಟ್ಟು ಬಿಡಿರಿ."

ಹೀಗೆಂದು ದುರ್ಮತಿಯು ಹೇಳುತ್ತಲೇ ರಾಜಸಿಂಹನಿಗೆ ಕೋಪವು ಉಕ್ಕಿ ಬಂದಿತು. ಅಷ್ಟು ದಿನಗಳಿಂದ ಏರ್ಪಾಡಾಗಿದ್ದ ಮದುವೆಯು ನಿಂತುಹೋದರೆ ಅವಮಾನವೆಂದು ತಿಳಿದು, ರಾಜಸಿಂಹನು ಉಕ್ಕಿ ಬಂದ ಕೋಪವನ್ನು ಹಾಗೆಯೇ ತಡೆದುಕೊಂಡು,

"ಸ್ವಾಮೀ, ನಾವು ನಾವು ಮೊದಲಿನಿಂದಲೂ ಸ್ನೇಹಿತರಾಗಿದ್ದು ಒಬ್ಬರನ್ನೊಬ್ಬರು

ಚೆನ್ನಾಗಿ ಬಲ್ಲವರಾಗಿದ್ದೇವೆ. ನಮ್ಮಲ್ಲಿ ಏನಾದರೂ ತಪ್ಪು ನೆಪ್ಪುಗಳಿದ್ದರೆ ಅವುಗಳನ್ನು ನಾವು ಮರೆಯುವುದು ಧರ್ಮ. ನಿಮ್ಮ ಮಗಳನ್ನು ನನ್ನ ಮಗನಿಗೆ ಕೊಡದೆ ಇರುವ ಕಾರಣವೇನು ? ಅದು ತಿಳಿಯದೆ ಇದ್ದರೆ ನನ್ನ ಮನಸ್ಸು ಸಮಾಧಾನವಾಗಿರದು. ಉದಯಸಿಂಹನ ವಿಷಯದಲ್ಲಿ ನಿಮಗೇನಾದರೂ ಅನುಮಾನವೋ ? ಹಾಗೆ ಏನಾದರೂ ಇದ್ದರೆ ಹೇಳಿಬಿಡಿರಿ."

ರಾಜಸಿಂಹನು ತಗ್ಗಿದುದನ್ನು ಕಂಡು ದುರ್ಮತಿಯು ಸೊಕ್ಕು ಹೆಚ್ಚಿ "ಅವನ ವಿಷಯದಲ್ಲಿ ಏನೂ ಇಲ್ಲ" ಎಂದನು.

"ಹಾಗಾದರೆ ಇನ್ನಾರ ವಿಷಯದಲ್ಲಿ ?"

"ಕಾರಣವನ್ನು ಕೇಳದಿದ್ದರೆ ನಿಮಗೇ ಒಳ್ಳೆಯದು" ಎಂದು ದುರ್ಮತಿಯು ಹೇಳಲು, ರಾಜಸಿಂಹನಿಗೆ ಕೋಪ ಬಂದು ಮೈ ನಡುಗಿ,

"ಕಾರಣವನ್ನು ಹೇಳದಿದ್ದರೆ ನಾನು ನಿಮ್ಮನ್ನು ಬಿಡೆನು. ರಾಧಾಬಾಯಿಯ ವಿಷಯದಲ್ಲಿ ನಿಮಗೆ ಅಸಮಾಧಾನವೋ ? ಇಲ್ಲ, ನನ್ನ ಆಸ್ತಿಯು ಕಡಿಮೆಯೆಂದು ಯೋಚನೆಯೋ ? ರಾಜಕೀಯ ವಿಷಯಗಳಲ್ಲಿ ನಾವು ಪ್ರತಿಕಕ್ಷಿಗಳಾಗಿದ್ದೇವೆಂದು ಅನುಮಾನವೋ ? ಯಾವುದು ? ಹೇಳಿ."

"ಇವು ಯಾವುವೂ ಅಲ್ಲ. ಕಾಲ ನಿರೀಕ್ಷೆ ಮಾಡಿದರೆ ದೂರು ಏನಾದರೂ ಇದ್ದರೆ ತಾನಾಗಿಯೇ ಬಯಲಾಗುತ್ತದೆ."

"ದೂರು ಎಂದಿರಾ ? ನನ್ನ ವಿಷಯದಲ್ಲಿ ದೂರು ಹೇಳುವುದಕ್ಕೆ ಯಾರಿಗೆ ಧೈರ್ಯ ?"

"ಕಾರಣವನ್ನು ಕೇಳಬೇಡಿ ಎಂದು ಮೊದಲೇ ನಾನು ನಿಮಗೆ ಹೇಳಲಿಲ್ಲವೇ ?"

"ಹಾಗಾದರೆ ನೀವು ಹೇಳಿದುದಕ್ಕೆ ನಾನು ಬಾಯಿ ಮುಚ್ಚಿಕೊಂಡು ಹೋಗಬೇಕೋ ?"

"ನಿರ್ವಾಹವಿಲ್ಲ" ಎಂದು ದುರ್ಮತಿಯು ಹೇಳಲು ರಾಜಸಿಂಹನು ಕೋಪಾವೇಶದಿಂದ ಯಾವ ಮಾತನ್ನೂ ಆಡದೆ ಹೊರಟುಹೋದನು.

ರಾಜಸಿಂಹನು ಅತ್ತ ಹೋಗುತ್ತಲೇ ದುರ್ಮತಿಯು 'ರಾಜಕುಮಾರ ಅನಂತರಾಜುವು ಸಿಕ್ಕಿದುದು ಮೇಲಾಯಿತು' ಎಂದುಕೊಂಡನು.

ಮಾರನೆಯ ಬೆಳಿಗ್ಗೆ ದುರ್ಮತಿಯು ವರ್ತಮಾನ ಪತ್ರಿಕೆಯನ್ನು ತರಿಸಿಕೊಂಡು ಅತ್ಯಾಸಕ್ತಿಯಿಂದ ಅದನ್ನು ಓದುತ್ತ ಯವನದೇಶದ ವರ್ತಮಾನ ಎಂದು ಬರೆದಿದ್ದ ಭಾಗವನ್ನು ನೋಡಿ 'ಅದು ಸರಿ ; ಇನ್ನು ವಿಷಯಲಂಪಟನು ಕಾರಣವನ್ನು ಕೇಳಲಾರ' ಎಂದುಕೊಂಡನು.

ಇದಾದ ಸುಮಾರು ಅರ್ಧ ಗಂಟೆಯೊಳಗಾಗಿಯೇ ಉದಯಸಿಂಹನು ರಾಜಾ

ಮಲಯಸಿಂಹನ ಮನೆಗೆ ಬಹು ಆತುರವಾಗಿ ಹೋಗುತ್ತಿದ್ದನು. ರಾಜನು ಇದ್ದಾನೆಯೇ ಎಂದು ಮನೆಯಲ್ಲಿ ವಿಚಾರಿಸಲು ಅವನು ಹೊರಗೆ ಹೋಗಿದ್ದಾನೆಂದು ತಿಳಿಯಿತು. ಯಾವಾಗ ಬರುವನೆಂದು ಕೇಳಿದುದಕ್ಕೆ ಜಾಗ್ರತೆಯಾಗಿಯೇ ಬರುವನೆಂದು ಹೇಳಿದರು.

ರಾಜನಿಲ್ಲದ ವೇಳೆಯಲ್ಲಿ ಅವನ ಮನೆಯಲ್ಲಿದ್ದು ಕಾಲಹರಣ ಮಾಡುವುದು ಸರಿಯಲ್ಲವೆಂದು ಉದಯಸಿಂಹನು ಹೊತ್ತು ಕಳೆದು ಬರೋಣವೆಂದು ಸಮೀಪದಲ್ಲಿದ್ದ ಆಯುಧಶಾಲೆಗೆ ಹೋದನು. ಆ ಶಾಲೆಯ ಒಂದೊಂದು ಕೊಠಡಿಗೂ ಹೋಗಿ ಅಲ್ಲಿ ಜನಗಳು ಮಾಡುತ್ತಲಿದ್ದ ಶಸ್ತ್ರಾಭ್ಯಾಸಗಳನ್ನು ನೋಡಿ ಪಿಸ್ತೂಲಿನ ಅಭ್ಯಾಸವನ್ನು ಮಾಡುತ್ತಲಿದ್ದ ಕೊಠಡಿಗೆ ಬಂದನು. ಅಲ್ಲಿ ರಾಜಾ ಮಲಯಸಿಂಹನು ಸಾಧನೆಯನ್ನು ಮುಗಿಸಿ ಆಗತಾನೇ ಕೈಗಳನ್ನು ತೊಳೆದುಕೊಳ್ಳುತ್ತಲಿದ್ದನು. ಉದಯಸಿಂಹನು ಅವನನ್ನು ನೋಡಿ,

"ರಾಜರೇ, ನಿಮ್ಮನ್ನೇ ಹುಡುಕಿಕೊಂಡು ಬಂದೆನು" ಎನ್ನಲು,

"ಅದೇನು, ನನ್ನಲ್ಲಿ ನಿಮಗೆ ಅಷ್ಟು ಅಭಿಮಾನ ?"

"ನನ್ನ ಪರವಾಗಿ ನೀವು ಸಾಕ್ಷಿಯಾಗಿರಬೇಕು."

"ವಿಷಯವೇನು ?"

"ದ್ವಂದ್ವಯುದ್ಧ."

"ಇದು ಪ್ರಮಾದವಾದ ಸಂಗತಿ ; ಮನೆಗೆ ಹೋಗಿ ಮಾತನಾಡೋಣ."

"ಹಾಗೆಯೇ ಆಗಲಿ" ಎಂದು ಹೇಳಿ ಉದಯಸಿಂಹನು ಸುತ್ತ ನೋಡಿ, "ಆಹಾ, ಇದೇನು ! ಲಕ್ಷ್ಯದ ಹಲಗೆಯಲ್ಲಿ ಯಾರೋ ಇಸ್ಪೇಟು ಎಲೆಯನ್ನು ಅಂಟಿಸಿದ್ದಾರೆ" ಎನ್ನಲು, ರಾಜನು ನಕ್ಕು "ಚೆನ್ನಾಗಿ ನೋಡಿರಿ" ಎಂದನು. ಆಗ ಉದಯಸಿಂಹನು ಅದರ ಸಮೀಪಕ್ಕೆ ಹೋಗಿ ನೋಡಿ ಗುಂಡಿನಿಂದ ಹೊಡೆದು ತೂತಾದ ಎಲೆ ಎಂದು ತಿಳಿದು "ರಾಜರೇ, ಮೊದಲು ಗುರುತು ಮಾಡಿಕೊಂಡು ಕೈಯ್ಯಿಂದ ಕೊರೆದರೂ ಇಷ್ಟು ಪ್ರಶಸ್ತವಾಗಿರದು" ಎಂದು ಆಶ್ಚರ್ಯಪಟ್ಟು "ನಿಮ್ಮಂಥ ಸಾಧುಗಳಿಗೆ ಶಸ್ತ್ರಾಭ್ಯಾಸವೇಕೆ ?" ಎಂದು ಕೇಳಿದನು.

"ಈಗಿನ ಕಾಲದಲ್ಲಿ ದ್ವಂದ್ವಯುದ್ಧವು ವಿಶೇಷ ಆಚರಣೆಯಲ್ಲಿರುವುದರಿಂದ ಯಾವನಾದರೂ ಒಬ್ಬ ಹುಚ್ಚನು ನನ್ನಿಂದ ತನಗೆ ಅವಮಾನವಾಯಿತೆಂದು ಭ್ರಮಿಸಿ ದ್ವಂದ್ವಯುದ್ಧಕ್ಕೆ ಕರೆದರೆ 'ಹುಚ್ಚನ ಸಂಗಡ ನಮಗೆ ವ್ಯಾಜ್ಯವು ಏತಕ್ಕೆ' ಎಂದು ನಾವು ಸುಮ್ಮನಿದ್ದರೆ ಜನರು ನಮ್ಮನ್ನು ಹೇಡಿಯೆಂದೆನ್ನುವರಲ್ಲದೆ ನಿಕೃಷ್ಟನನ್ನಾಗಿಯೂ ಕಾಣುವರು. ಕಾಲಕ್ಕೆ ತಕ್ಕಂತೆ ನಾವೂ ಇರಬೇಕಲ್ಲವೇ ? ಹೊತ್ತಾಯಿತು, ಮನೆಗೆ ಹೋಗೋಣ ಬನ್ನಿರಿ" ಎಂದನು. ಇಬ್ಬರೂ ಬಂಡಿಯಲ್ಲಿ ಕುಳಿತರು. ರಾಜನು ಉದಯಸಿಂಹನನ್ನು ಕುರಿತು,

"ಯಾರೊಂದಿಗೆ ನಿಮಗೆ ಜಗಳ ?"

"ಭದ್ರಸಿಂಹನಲ್ಲಿ"

"ಕಾರಣವೇನು ?"

"ಅವನು ಪ್ರಕಟಿಸುವ ಪತ್ರಿಕೆಯಲ್ಲಿ—ತಾಳಿ, ತಾಳಿ ; ಆ ಪತ್ರಿಕೆಯನ್ನೇ ಕೊಡುತ್ತೇನೆ ; ನೀವೇ ಅದನ್ನು ಓದಿನೋಡಿ" ಎಂದು ರಾಜನ ಕೈಯಲ್ಲಿ ತಾನು ತಂದಿದ್ದ ಪತ್ರಿಕೆಯನ್ನು ಕೊಟ್ಟನು. ಅದರಲ್ಲಿ ಈ ರೀತಿ ಇದ್ದಿತು :—

"ಯವನದೇಶದ ಅರಸಾದ ಕ್ಷಿತೀಂದ್ರನು ಶತ್ರುಗಳ ಪಾಲಾಗಿ ಮರಣವನ್ನು ಹೊಂದಿದ್ದನೆಂಬುವುದು ಎಲ್ಲರಿಗೂ ತಿಳಿದ ಸಂಗತಿ ; ನಮ್ಮ ದೇಶದಿಂದ ಹೋಗಿ ಅವನಲ್ಲಿ ಸೈನ್ಯಾಧಿಪನಾಗಿದ್ದು ಅವನ ನಂಬುಗೆಗೆ ಪಾತ್ರನಾಗಿದ್ದ ವಿಷಯಲಂಪಟನ ದ್ರೋಹದಿಂದ ಅವನಿಗೆ ಆ ಗತಿಯಾಯಿತು."

ರಾಜನು ಅದನ್ನು ಓದಿ "ಇದರಲ್ಲಿ ಅಸಮಾಧಾನಕ್ಕೆ ಕಾರಣವೇನು ?" ಯಾವನೋ ವಿಷಯಲಂಪಟನೆಂಬುವನು ಯವನದೇಶದಲ್ಲಿ ರಾಜದ್ರೋಹ ಮಾಡಿದರೆ ಇಲ್ಲಿ ನಮಗೇನು ?" ಎಂದು ಕೇಳಲು, ಉದಯಸಿಂಹನು,

"ಅವನೇ ನನ್ನ ತಂದೆ ; ಅವನು ಆ ಅರಸನನ್ನು ಕಾಪಿಡಲು ಮಾಡಿದ ಸಾಹಸ ಕಾರ್ಯಗಳನ್ನು ಯಾರೋ ಅನ್ಯಾಯವಾಗಿ ಹೀಗೆ ಬರೆದಿದ್ದಾರೆ."

"ಇದು ಭದ್ರಸಿಂಹನು ಪ್ರಚುರಪಡಿಸುತ್ತಲಿರುವ 'ಸಿಂಹನಾದ' ಎಂಬ ಪತ್ರಿಕೆ. ಅವನು ನಿಮ್ಮ ಸ್ನೇಹಿತನಾದುದರಿಂದ ಅವನೊಂದಿಗೆ ಜಗಳವಾಡುವುದಕ್ಕಿಂತ ಪ್ರತ್ಯಕ್ಷದಲ್ಲಿ ಕಂಡು ಮಾತನಾಡುವುದು ಒಳ್ಳೆಯದು ಎಂದು ನನಗೆ ತೋರುತ್ತದೆ."

"ಅವನಿಗೂ ಆ ಸ್ನೇಹಭಾವವು ಇದ್ದಿದ್ದರೆ ನೀವು ಹೇಳುವುದು ಸರಿ."

"ಒಂದು ವೇಳೆ ಆ ವರ್ತಮಾನವು ನಿಜವಾಗಿದ್ದರೋ ?"

"ತಂದೆಗಾದ ಅವಮಾನವನ್ನು ಸಹಿಸಿಕೊಂಡು ಇರುವುದಕ್ಕಿಂತ ದ್ವಂದ್ವಯುದ್ಧದಲ್ಲಿ ಸಾಯುವುದು ಮೇಲು."

"ನಾನೊಂದು ಬುದ್ಧಿವಾದವನ್ನು ಹೇಳುತ್ತೇನೆ, ಕೇಳುತ್ತೀರೋ ?"

"ಹೇಳಿ ನೋಡೋಣ."

"ವಿಷಯವು ಸುಳ್ಳೋ, ನಿಜವೋ, ಮೊದಲು ವಿಚಾರಿಸಿ."

"ಯಾರನ್ನು ವಿಚಾರಿಸಲಿ ?"

"ಈ ಸಮಾಚಾರವು ಕೋಮಲೆಗೆ ಗೊತ್ತಿರಬಹುದು. ಅವಳನ್ನು ವಿಚಾರಿಸೋಣ. ಒಂದು ವೇಳೆ ನಿಜವಾಗಿದ್ದರೋ ?"

"ಅದು ನಿಜವೆಂದು ನಾನೆಂದಿಗೂ ನಂಬುವುದಿಲ್ಲ."

"ಹಾಗಾದರೆ ಇನ್ನೊಂದು ಹೇಳುತ್ತೇನೆ ಕೇಳಿ."

"ಅದೇನು ?"

"ಭದ್ರಸಿಂಹನ ಬಳಿಗೆ ಒಬ್ಬರೇ ಹೋಗಿ ಅವನ ಸಂಗಡ ನೀವು ಮಾತನಾಡಿ ನೋಡಿ."

"ಅದು ಪದ್ಧತಿಗೆ ವಿರೋಧ"

"ಆದರೇನು ? ಸಾಕ್ಷಿಗಳಿಲ್ಲದೆ ನೀವಿಬ್ಬರೇ ಇದ್ದರೆ ಮಾತುಗಳಲ್ಲಿ ಹೆಚ್ಚು ಕಡಿಮೆಯಾದರೂ ತಡೆಯುತ್ತದೆ. ಒಂದು ವೇಳೆ ಸಮಾಧಾನವೂ ಉಂಟಾಗ ಬಹುದು."

"ನಿಮ್ಮ ಅಭಿಪ್ರಾಯವು ಚೆನ್ನಾಗಿ ತಿಳಿಯಲಿಲ್ಲ."

"ಭದ್ರಸಿಂಹನು ಒಬ್ಬನೇ ಇದ್ದು ಅವನಿಗೆ 'ಆ ವರ್ತಮಾನವು ತಪ್ಪು, ಮುಂದಣ ಪತ್ರಿಕೆಯಲ್ಲಿ ತಿದ್ದಿಕೊಳ್ಳಬೇಕು' ಎಂದು ನೀವು ಹೇಳಿದರೆ ಅವನು ಒಂದುವೇಳೆ ಒಪ್ಪಬಹುದು. ಹಾಗೆ ಅವನು ಒಪ್ಪುವುದಾದರೆ ನಿಮ್ಮ ಕೆಲಸವಾಯಿತು. ಮನುಷ್ಯರು ತಮ್ಮ ತಪ್ಪನ್ನು ಇತರರ ಮುಂದೆ ಸಾಧಾರಣವಾಗಿ ಒಪ್ಪಿಕೊಳ್ಳರು. ಅದಕ್ಕಾಗಿ ಹೇಳಿದೆ."

"ಹಾಗಾದರೆ ನನ್ನೊಬ್ಬನನ್ನೇ ಹೋಗು ಎನ್ನುತ್ತೀರಿ ?"

"ಅಹುದು. ಅದರಲ್ಲಿ ಗುಣವಿದೆ. ಒಬ್ಬನಿಂದ ಒಂದು ಕೆಲಸವಾಗಬೇಕಾದರೆ ಅವನ ಮನಸ್ಸನ್ನು ನೋಯಿಸದಂತೆ ನಾವು ಕೆಲಸ ಮಾಡಿಕೊಳ್ಳಬೇಕು."

"ನೀವು ಹೇಳುವುದು ನಿಜ. ನಾನು ಹಾಗೆ ಮಾಡಿಯೂ ಒಂದು ವೇಳೆ ದ್ವಂದ್ವಯುದ್ಧ ನಡೆಯುವುದಾದರೆ, ಆಗಲಾದರೂ ನೀವು ನನ್ನ ಸಾಕ್ಷಿಯಾಗಿ ಬರುವಿರೋ ?"

"ನಿಮ್ಮ ವಿಷಯದಲ್ಲಿ ನನ್ನಿಂದಾಗುವ ಸಹಾಯವನ್ನು ವಂಚನೆಯಿಲ್ಲದೆ ಮಾಡುತ್ತೇನೆ. ನನ್ನಿಂದಾಗದ ಕೆಲಸಕ್ಕೆ ನಾನು ಎಂದಿಗೂ ಪ್ರವರ್ತಿಸುವುದಿಲ್ಲ."

"ಅದು ಏಕೆ ಹಾಗೆ ?"

"ಅದರ ಕಾರಣ ಮುಂದೆ ನಿಮಗೇ ಗೊತ್ತಾಗಬಹುದು."

"ಹಾಗಾದರೆ ಚಿತ್ರಸೇನ ವೀರಸಿಂಹರನ್ನು ಕೇಳಿ ನೋಡುತ್ತೇನೆ."

"ಹುಂ, ಹಾಗೆಯೇ ಮಾಡಿ ; ಅವರಾದರೆ ಅನುಕೂಲ."

"ಅವಶ್ಯವಿದ್ದರೆ ಆಯುಧಗಳನ್ನು ಉಪಯೋಗಿಸುವ ಹೂಟವನ್ನಾದರೂ ಹೇಳಿ ಕೊಡುತ್ತೀರೋ ?"

"ಅದೂ ನನ್ನಿಂದಾಗದು."

"ನೀವು ಒಬ್ಬ ವಿಜಾತೀಯ ಪುರುಷರು. ಯಾವುದಕ್ಕೂ ಕೈಹಾಕುವುದಿಲ್ಲ."

"ಅದೇ ನನ್ನ ನಿಯಮ."

ಹೀಗೆಂದು ರಾಜನು ಹೇಳುತ್ತಲೆ ಉದಯಸಿಂಹನು ಅಲ್ಲಿಂದ ಹೊರಟು ಸಿಂಹನಾದ ಪತ್ರಿಕೆಯನ್ನು ಪ್ರಕಟಿಸುವ ಸ್ಥಳಕ್ಕೆ ಹೋದನು. ಉದಯಸಿಂಹನನ್ನು

ಕಾಣುತ್ತಲೆ ಭದ್ರಸಿಂಹನು 'ಎಂದೂ ಅಲ್ಲಿಗೆ ಬಾರದೆ ಇದ್ದವನು ಇಂದು ಬಂದನಲ್ಲಾ' ಎಂದು ಆಶ್ಚರ್ಯಗೊಂಡು,

"ಉದಯಸಿಂಹ, ಇದೇನು ಅಪರೂಪವಾಗಿ ಇಲ್ಲಿಗೆ ಬಂದೆ ?"

"ನಿನ್ನ ಪತ್ರಿಕೆಯ ವಿಚಾರವಾಗಿ ಕೆಲವು ಮಾತನಾಡಲು ಬಂದೆ."

"ಅದರ ವಿಷಯವೇನು ?"

"ಅದರಲ್ಲಿ ನಮ್ಮ ಮನೆಯವರೊಬ್ಬರನ್ನು ನಿಂದನೆ ಮಾಡಿದೆ."

"ನನ್ನ ಪತ್ರಿಕೆಯಲ್ಲಿ ಅಂತಹುದಾವುದೂ ಇರಲಾರದಲ್ಲ ?"

"ನೆನ್ನೆಯ ಪತ್ರಿಕೆಯಲ್ಲಿ ಯವನದೇಶದ ವರ್ತಮಾನ ಎಂದು ಬರೆದಿರುವುದನ್ನು ನೋಡು."

"ಹಾಗೆಂದರೇನು ?"

"ಏನೂ ತಿಳಿಯದವನಂತೆ ಮಾತನಾಡುತ್ತೀಯೇ ; ನಿನ್ನ ಪತ್ರಿಕೆಯಲ್ಲಿ ಬರುವ ಸಮಾಚಾರಗಳು ನಿನಗೇ ತಿಳಿಯದೇ ?"

"ಯವನದೇಶದ ವರ್ತಮಾನವೇ ? ನನಗೆ ತಿಳಿಯದು" ಎಂದು ಹೇಳಿ ಒಬ್ಬ ಸೇವಕನನ್ನು ಕರೆದು ಹಿಂದಿನ ದಿನದ ಪತ್ರಿಕೆಯೊಂದನ್ನು ತರಹೇಳಿ, ಆ ಭಾಗವನ್ನು ಓದಿ ನೋಡಿ,

"ಅದರಲ್ಲಿ ಹೇಳಿರುವ ಉದ್ಯೋಗಸ್ಥನು ನಿನಗೆ ಸಂಬಂಧೀಕನೋ ?"

"ಅಹುದು."

"ಹಾಗಾದರೆ ಏನು ಮಾಡಬೇಕೆನ್ನುತ್ತೀಯೆ ?"

"ಅದರಲ್ಲಿ ಬರೆದಿರುವುದು ಸುಳ್ಳು ಎಂದು ನಾಳೆಯ ದಿನದ ಪತ್ರಿಕೆಯಲ್ಲಿ ಪ್ರಕಟಿಸಬೇಕು."

"ಏಕಾಏಕಿ ಹಾಗೆ ಬರೆದರೆ ಪತ್ರಿಕೆಯ ಗೌರವವು ನಿಂತೀತೇ ?"

"ಹಾಗೆ ಬರೆಯದಿದ್ದರೆ ನಾನು ಸುಮ್ಮನಿರೆನು" ಎಂದು ಉದಯಸಿಂಹನು ಕೋಪದಿಂದ ಹೇಳಲು, ಭದ್ರಸಿಂಹನಿಗೂ ಕೋಪ ಬಂದು,

"ಉದಯಸಿಂಹ, ಈ ಗೊಡ್ಡು ಬೆದರಿಕೆಗೆಲ್ಲಾ ನಾನು ಹೆದರುವೆನೇ ? ಬೇಕಾಗಿದ್ದರೆ ನಿನ್ನ ಮನೆಯವರನ್ನು ಹೆದರಿಸು" ಎಂದು ಮೂದಲಿಸಿದನು.

"ನನ್ನನ್ನು ನೀನರಿಯದವನಲ್ಲ, ನಾನು 'ಸುಮ್ಮನೆ ಇರೆನು' ಎಂದು ಹೇಳಿದರೆ ಅದರ ಅರ್ಥವು ನಿನಗೆ ಸ್ಪಷ್ಟವಾಗಿರಬಹುದು."

"ನಿನ್ನ ಈ ದಿನದ ಚರ್ಯೆಯನ್ನು ನೋಡಿದರೆ ನಿನ್ನೊಂದಿಗೆ ಸ್ನೇಹ ಮಾಡಿದುದೇ ತಪ್ಪೆಂದು ತೋರುತ್ತದೆ. ಇದು ಹಾಗಿರಲಿ. ಕೋಪವನ್ನು ಬಿಟ್ಟು ಮಾತನಾಡೋಣ. ಅದರಲ್ಲಿ ಹೇಳುವ ವಿಷಯಲಂಪಟನು ಯಾರು ? ಅವನು ನಿನಗೇನಾಗಬೇಕು ?"

"ನಮ್ಮಪ್ಪ."

"ನಿನ್ನ ತಂದೆಯೇ ?" ಎಂದು ಭದ್ರಸಿಂಹನು ಪುನಃ ಆ ವರ್ತಮಾನವನ್ನು ಓದಿ ನೋಡಿ "ವಿಷಯಲಂಪಟನೇ ರಾಜಸಿಂಹರೆಂದು ಈ ಪತ್ರಿಕೆಯಲ್ಲಿ ಹೇಳಿಲ್ಲ" ಎಂದನು.

"ಹೇಳದೆ ಇದ್ದರೂ ತಿಳಿದಂಥವರಿಗೆ ಅದು ಗೊತ್ತಾಗದೆ ಇರದು. ಅದಕ್ಕಾಗಿಯೇ ನೀನು ಅದು ಸುಳ್ಳೆಂದು ಬರೆದೇ ತೀರಬೇಕೆಂದು ಹೇಳಿದೆ."

"ಬರೆದೇ ತೀರಬೇಕು" ಎಂದು ಉದಯಸಿಂಹನು ಒತ್ತಿ ಹೇಳಲು, ಭದ್ರಸಿಂಹನಿಗೆ ಕೋಪಬಂದು "ಆ ವರ್ತಮಾನವು ಸುಳ್ಳೆಂದು ತಿಳಿದ ಹೊರತು ನಾನು ಹಾಗೆ ಬರೆಯೆನು" ಎಂದನು.

"ಏನೆಂದೆ ?"

"ಇದು ವಿಚಾರಕ್ಕೆ ಯೋಗ್ಯವಾದ ಸಂಗತಿ ; ನಿನಗೋಸ್ಕರ ಏನು ಕಷ್ಟವಾದರೂ ಪಟ್ಟು ವಿಚಾರಿಸಿ ನೋಡಿ ಸುಳ್ಳಾಗಿದ್ದರೆ ಅನಂತರ ನೀನು ಹೇಳುವಂತೆ ಬರೆಯುತ್ತೇನೆ."

"ಅದರಲ್ಲಿ ವಿಚಾರಕ್ಕೆ ಕಾರಣವೇ ಇಲ್ಲ. ಅದು ನಿಜವಾದರೆ ಅದಕ್ಕೆ ತಕ್ಕ ಕಾರಣವನ್ನು ಹೇಳು ; ಇಲ್ಲವಾದರೆ ಸುಳ್ಳೆಂದು ಪತ್ರಿಕೆಯಲ್ಲಿ ಬರಿ."

ಉದಯಸಿಂಹನ ಮಾತಿನ ವೇಗವನ್ನೂ ಅವನ ಮುಖಭಾವವನ್ನೂ ನೋಡಿ, ಭದ್ರಸಿಂಹನು "ನಿನ್ನನ್ನು ನೋಡಿದರೆ ಕೆಣಕಲೋಸುಗ ಬಂದಿರುವಂತೆ ತೋರುತ್ತದೆ ; ಅದನ್ನು ಪ್ರಕಾರಾಂತವಾಗಿ ಏತಕ್ಕೆ ಹೇಳುತ್ತೀಯೆ ?" ಎಂದನು.

"ನಾನು ಹೇಳುವಂತೆ ನೀನು ಬರೆಯದಿದ್ದರೆ ಯುದ್ಧ ಮಾಡುವುದೇ ಸರಿ."

"ಹಾಗಾದರೆ ನಿನಗೆ ಹೇಳುವುದಕ್ಕೆ ಇದೇ ಬದಲು :— 'ಆ ಸಮಾಚಾರವನ್ನು ಬರೆದವನು ನಾನಲ್ಲ ; ನೀನು ಇಷ್ಟು ದೂರ ಹೇಳಿದ ಮೇಲೆ ಅದಕ್ಕೆ ಸಂಬಂಧ ಪಟ್ಟವರಾರಾದರೂ ಅದು ಸುಳ್ಳೆಂದು ಬರೆಯುವವರೆಗೆ ಅದನ್ನು ಬದಲಾಯಿಸುವುದಲ್ಲ."

"ಹಾಗಾದರೆ ಯುದ್ಧಕ್ಕೆ ಸಿದ್ಧನಾಗು."

"ಅಗತ್ಯವಾಗಿ ಆಗಲಿ. ಆದರೆ ಇನ್ನು ಮೂರು ವಾರಗಳವರೆಗೆ ನನಗೆ ಅವಕಾಶ ಬೇಕು ; ಆಮೇಲೆ ನಾವು ನಾವು ಬಡಿದಾಡಿ ಯಾರಾದರೂ ಒಬ್ಬರು ಸಾಯೋಣ. ಇನ್ನು ಪುನಃ ಈ ಪ್ರಸ್ತಾಪವನ್ನು ಎತ್ತಬೇಡ" ಎಂದು ಭದ್ರಸಿಂಹನು ಹೇಳಲು ಉದಯಸಿಂಹನು ಅದಕ್ಕೆ ಒಪ್ಪಿ ಹೊರಟುಹೋದನು.

## ೫೫
# ಪಾನಕ

ಉದಯಸಿಂಹನು ಭದ್ರಸಿಂಹನ ಕಾರ್ಯಾಲಯದಿಂದ ಮನೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ಜಯವೀರನು ಸಂತೋಷಚಿತ್ತನಾಗಿ ಬೇಗಬೇಗನೆ ಎಲ್ಲಿಯೋ ಹೋಗುತ್ತಿದ್ದುದನ್ನು ಕಂಡು "ಇವನೇ ಸುಖಪುರುಷ" ಎಂದುಕೊಂಡನು. ನಿಜವಾಗಿಯೂ ಆ ವೇಳೆಯಲ್ಲಿ ಜಯವೀರನ ಚಿತ್ತವು ಆನಂದ ತರಂಗದಲ್ಲಿ ಕ್ರೀಡಿಸುತ್ತಲಿದ್ದಿತು. ಆಗತಾನೇ ದೀನನಾಥನು ತನ್ನನ್ನು ಬಂದು ಕಾಣುವಂತೆ ಹರಿದಾಸನ ಸಂಗಡ ಅವನಿಗೆ ಹೇಳಿ ಕಳುಹಿಸಿದ್ದನು. ವೃದ್ಧನು ಹೇಳತಕ್ಕುದನ್ನು ಜಾಗ್ರತೆಯಾಗಿ ತಿಳಿದುಕೊಳ್ಳಬೇಕೆಂದು ಜಯವೀರನು ಬಂಡಿಗೆ ಕಾಯದೆ ಬಿರಬಿರನೆ ನಡೆದುಕೊಂಡು ಹೋದನು. ಹರಿದಾಸನು ಮುದುಕನಾದುದರಿಂದ ಅವನ ಸಂಗಡ ನಡೆಯಲಾರದೆ ಹಿಂದೆ ಓಡುತ್ತ ಮನೆಯನ್ನು ಸೇರಿ ಜಯವೀರನನ್ನು ವೃದ್ಧನ ಕೊಠಡಿಯಲ್ಲಿ ಬಿಟ್ಟು ಬಾಗಿಲನ್ನು ಮುಚ್ಚಿಕೊಂಡನು.

ಜಯವೀರನು ವೃದ್ಧನ ಮುಂದೆ ಕುಳಿತ ಕೂಡಲೇ ವಿಮಲೆಯೂ ಬಂದು ನಿಂತಳು. ಆಗ ವೃದ್ಧನು ಅವರಿಬ್ಬರನ್ನೂ ಕಟಾಕ್ಷಿಸಿ ವಿಮಲೆಗೆ ಕುಳಿತುಕೊಳ್ಳುವಂತೆ ಸನ್ನೆಮಾಡಿದನು. ಅವಳು ಕುಳಿತುಕೊಂಡು ತಾತನನ್ನು ನೋಡಿ "ತಾತ, ನೀನು ನನ್ನೊಡನೆ ಹೇಳಿದುದನ್ನು ಇವರಿಗೆ ನಾನು ತಿಳಿಸಬಹುದೋ" ಎನ್ನಲು, ಮುದುಕನು "ಹುಂ" ಎಂದನು.

ಬಳಿಕ ವಿಮಲೆಯು ಜಯವೀರನನ್ನು ನೋಡಿ "ಸ್ವಾಮೀ, ನನ್ನ ತಾತನು ನಿಮಗೆ ಕೆಲವು ಸಂಗತಿಗಳನ್ನು ತಿಳಿಸಬೇಕೆಂದು ಅಪೇಕ್ಷಿಸಿ ನಿಮ್ಮನ್ನು ಇಲ್ಲಿಗೆ ಕರೆಸಿದನು. ಅವನು ಹೇಳಿದುದನ್ನು ಸ್ವಲ್ಪವೂ ತಪ್ಪದಂತೆ ನಾನು ನಿಮಗೆ ತಿಳಿಸುತ್ತೇನೆ" ಎಂದಳು.

"ಅದನ್ನು ಕೇಳಬೇಕೆಂದೇ ನಾನು ಬಹು ವೇಗವಾಗಿ ಇಲ್ಲಿಗೆ ಬಂದೆನು" ಎಂದು ಜಯವೀರನು ಹೇಳಲು, ವಿಮಲೆಯು ಮಾತನಾಡುವುದಕ್ಕೆ ಹೊರಟು ಲಜ್ಜೆಯಿಂದ ತಲೆಬಾಗಿ ನೆಲವನ್ನು ನೋಡಲಾರಂಭಿಸಿದಳು. ಜಯವೀರನು ಆ ಮರ್ಮವನ್ನರಿತವನಾಗಿ ಇದು ತನಗೆ ಶುಭಸೂಚನೆಯಾದ ಸಮಾಚಾರವೆಂದು ಊಹಿಸಿ ಉಲ್ಲಾಸಯುಕ್ತನಾದನು.

"ತಾತನು ಈ ಮನೆಯನ್ನು ಬಿಟ್ಟು ಪ್ರತ್ಯೇಕವಾಗಿ ಒಂದು ಮನೆಯನ್ನು ಮಾಡಿ ಅಲ್ಲಿ ವಾಸಮಾಡಬೇಕೆಂದಿದ್ದಾನೆ."

"ನೀನು ಇಲ್ಲದೆ ಇದ್ದರೆ ಅವರಿಗೆ ಯಾರು ಉಪಚಾರ ಮಾಡುವರು ?"

"ನಾನು ಅವನ ಜತೆಯಲ್ಲಿಯೇ ಇರುತ್ತೇನೆ. ಬೇರೆ ಮನೆಗೆ ಹೋದ ಮೇಲೆ

ಯಾವುದಾದರೂ ಒಂದು ಒಳ್ಳೆಯ ದಿನದಲ್ಲಿ ನಿಮಗೆ ಕೊಟ್ಟ ಮಾತು ನೆರವೇರುತ್ತದೆ. ಅಲ್ಲಿಯವರೆಗೆ ನೀವು ಆತುರಪಟ್ಟು ಯಾವುದನ್ನೂ ಮಾಡಕೂಡದು. ಇದೇ ನನ್ನ ತಾತನ ಅಭಿಪ್ರಾಯ."

"ಹಾಗೆಯೇ ಆಗಲಿ. ಸತ್ಯವಾಗಿಯೂ ಏನನ್ನೂ ಮಾಡುವುದಿಲ್ಲ" ಎಂದು ಜಯವೀರನು ಪ್ರಮಾಣ ಮಾಡಿ ವಿಮಲೆಯ ಮುಖವನ್ನು ನೋಡಲು, ಅವಳು ನಾಚಿಕೊಂಡು ಅತ್ತ ಕಡೆ ತಿರುಗಿ, ಹರಿದಾಸನು ಬೆವತು ಬಾಯಾರಿ ನಿಂತಿದ್ದುದನ್ನು ಕಂಡು "ಹರಿದಾಸ, ನೀನು ಬಿಸಿಲಿನಲ್ಲಿ ಹೋಗಿ ಬಳಲಿರುವಂತಿದೆ ; ತಾತನಿಗೆ ಈಗ ತಾನೇ ಪಾನಕವನ್ನು ಮಾಡಿ ಅಡುಗೆಯ ಮನೆಯಲ್ಲಿ ಇಟ್ಟು ಬಂದಿದ್ದೇನೆ. ಇದಕ್ಕೆ ಇನ್ನೂ ಪಂಡಿತರು ಕೊಟ್ಟ ಔಷಧಿಯನ್ನು ಸೇರಿಸಿಲ್ಲ ; ಸ್ವಲ್ಪ ಕುಡಿದು ಬಾ, ಹೋಗು" ಎಂದಳು.

"ಅಮ್ಮಾ, ನನಗೆ ಓಡಿ ಓಡಿ ಸಾಕಾಯಿತು. ನಾನು ಎಷ್ಟು ಓಡಿದರೂ ಜಯವೀರರನ್ನು ಹಿಂಬಾಲಿಸಲು ಆಗಲಿಲ್ಲ. ನನಗೇನೋ ಬಲು ಬಾಯಾರಿಕೆ, ಪಾನಕವನ್ನು ಕುಡಿಯುತ್ತೇನೆ" ಎಂದು ಹೇಳಿ, ಅಡುಗೆಯ ಮನೆಗೆ ಹೋಗಿ ಎರಡು ಬಟ್ಟಲು ಪಾನಕವನ್ನು ಕುಡಿದನು.

ಜಯವೀರನು ದೀನನಾಥನ ಇಂಗಿತವನ್ನು ತಿಳಿದು ತನ್ನ ಮನೋಭೀಷ್ಟವು ಜಾಗ್ರತೆಯಾಗಿಯೇ ಪೂರ್ತಿಯಾಗುವುದು ಎಂದು ಸಂತೋಷಪಡುತ್ತ "ಇನ್ನು ನಾನು ಹೋಗಿಬರುತ್ತೇನೆ" ಎಂದು ಎದ್ದನು. ಆಗ ವಿಮಲೆಯು ಪುನಃ "ತಾತನು ಹೇಳಿದುದನ್ನು ಎಲ್ಲಿಯಾದರೂ ಮರೆತೀರಿ" ಎಂದು ಅವನೊಡನೆ ಹೇಳುತ್ತಿದ್ದಾಗ ಯಾರೋ ಬಾಗಿಲನ್ನು ತಟ್ಟಿದ ಸದ್ದಾಯಿತು. ಜಯವೀರನು ಯಾರಿರಬಹುದೆಂದು ಪ್ರಶ್ನೆ ಮಾಡಲು ವಿಮಲೆಯು "ವೈದ್ಯರು ಬರುವ ಹೊತ್ತು ; ಬಹುಶಃ ಅವರೇ ಬಂದಿರಬಹುದು" ಎಂದು ಹೇಳಿ ಬಾಗಿಲನ್ನು ತೆರೆಯುವಂತೆ ಹರಿದಾಸನಿಗೆ ಹೇಳಿದಳು. ಬಾಗಿಲನ್ನು ತೆರೆಯಬೇಕೆಂದು ಮೂರು ನಾಲ್ಕು ಅಡಿಗಳನ್ನಿಟ್ಟಾಗ ತಲೆ ತಿರುಗಿ ಕೈಕಾಲುಗಳು ನಡುಗಿ ಕೆಳಗೆ ಬೀಳುವಂತಾಗಲು, ಅವನು ಹತ್ತಿರದಲ್ಲಿದ್ದ ಕುರ್ಚಿಯನ್ನು ಹಿಡಿದುಕೊಂಡು ಹಾಗೆಯೇ ನಿಂತನು. ಅದನ್ನು ನೋಡುತ್ತಲಿದ್ದ ವಿಮಲೆಯು "ಹರಿದಾಸ, ಇದೇನಿದು ? ಹಾ ! ಹಾ ! ಹರಿದಾಸನು ಕೆಳಗೆ ಬೀಳುವಂತಿದೆ" ಎನ್ನಲು, ಜಯವೀರನು ತಟ್ಟನೆ ಅವನನ್ನು ಹಿಡಿದುಕೊಂಡನು.

ಆಗ ಹರಿದಾಸನು ಯಜಮಾನನನ್ನು ನೋಡಿ "ಸ್ವಾಮೀ, ನನಗೆ ಬಹಳ ಆಯಾಸವಾಗಿದೆ. ತಲೆಯೊಳಗೆ ಸಾವಿರಾರು ಸೂಜಿಗಳು ಚುಚ್ಚುವಂತೆ ಹಿಂಸೆಯಾಗುತ್ತಿದೆ" ಎಂದು ಹೇಳುತ್ತ ಹಾಗೆಯೇ ಪ್ರಜ್ಞೆತಪ್ಪಿ ಒದರಿಕೊಂಡು ಬಿದ್ದನು. ತಕ್ಷಣವೇ ಮೈ ಬೆವತುಹೋಯಿತು. ಜಯವೀರನು ಅವನನ್ನು ಮೆಲ್ಲಗೆ ಕೆಳಗೆ ಮಲಗಿಸಿದನು. ಅಷ್ಟು ಹೊತ್ತಿಗೆ ದೀನನಾಥನ ಕೋಣೆಯಲ್ಲಿ ಆಗುತ್ತಿದ್ದ ಗಲಭೆಯನ್ನು

ಕೇಳಿ, ವಲ್ಲಭದೇವನು ಓಡಿಬಂದನು. ಕೂಡಲೇ ಜಯವೀರನು ಅವನ ಕಣ್ಣಿಗೆ ಬೀಳದಂತೆ ಸಮೀಪದ ತೆರೆಯ ಮರೆಯಲ್ಲಿ ಅಡಗಿಕೊಂಡನು. ತನ್ನ ಆಪ್ತಸೇವಕನಿಗೆ ಈ ಅವಸ್ಥೆಯು ಪ್ರಾಪ್ತವಾಯಿತಲ್ಲಾ ಎಂದು ದೀನನಾಥನಿಗೆ ದುಃಖವುಂಟಾಗಿ ಅವನ ಮುಖದ ನರಗಳೆಲ್ಲವೂ ಉಬ್ಬಿಹೋದುವು.

ವಲ್ಲಭದೇವನು ನೋಡುತ್ತಿದ್ದ ಹಾಗೆಯೇ ಜ್ಞಾನತಪ್ಪಿ ಮೆಯ್ಯು ಸೆಡೆದು ಬಿದ್ದಿದ್ದ ಆಳು ಕೈಕಾಲುಗಳನ್ನು ಒದರಲು ಪ್ರಾರಂಭಿಸಿದನು. ನೊರೆಯು ಸುರಿಯಲು ಮೊದಲಾಯಿತು. ಆಗ ವಲ್ಲಭದೇವನ ಮುಖವು ಬಿಳ್ಚಿರಿ ಅವನು "ಪಂಡಿತರೇ, ಪಂಡಿತರೇ," ಎಂದು ಕೂಗಿಕೊಂಡನು. ವಿಮಲೆಗೆ ಯಾವುದೂ ತೋರದೆ ತನ್ನ ಮಲತಾಯಿಯ ಬಳಿಗೆ ಓಡಿಹೋಗಿ "ಅಮ್ಮಾ, ಬೇಗ ಬಾ, ಬೇಗ ಬಾ" ಎಂದು ಕೂಗಿಕೊಂಡಳು. ನಾಗಮಣಿಯು ಏನು ಸಮಾಚಾರವೆಂದು ಗದ್ದರಿಸಿಕೊಂಡು ನಿಧಾನವಾಗಿ ಬಂದು ತನ್ನ ಮಾವನ ಮುಖವನ್ನು ಮೊದಲು ನೋಡಿ ಅವನು ಸುಖವಾಗಿರುವುದನ್ನೂ ಆಳು ಕೆಳಗೆ ಬಿದ್ದು ಒದ್ದಾಡುತ್ತಲಿರುವುದನ್ನೂ ಕಂಡು ಬೆಚ್ಚಿದಳು. ಆಗ ಅವಳ ಮುಖದಲ್ಲಿ ಒಂದು ವಿಧವಾದ ವಿಕಾರವು ಉಂಟಾಯಿತು. ಅದನ್ನು ಕಂಡು ವೃದ್ಧನು ಕ್ರೂರದೃಷ್ಟಿಯಿಂದ ಅವಳನ್ನು ನೋಡಲು ಅವಳು ಆ ತೀಕ್ಷ್ಣವಾದ ದೃಷ್ಟಿಪಾತವನ್ನು ತಡೆಯಲಾರದೆ "ಅಯ್ಯೋ, ಈ ಅವಸ್ಥೆಯನ್ನು ನೋಡಿ ಸಹಿಸಲಾರೆನಲ್ಲಾ" ಎಂದು ಹೇಳುತ್ತ ಹೊರಗೆ ಹೊರಟುಹೋದಳು. ವಲ್ಲಭದೇವನು ಪಂಡಿತನನ್ನು ಕರೆತರಲು ಹೋದನು. ಅವರಿಬ್ಬರೂ ಹೋದಮೇಲೆ ವಿಮಲೆಯು ಜಯವೀರನಿದ್ದ ಬಳಿಗೆ ಹೋಗಿ "ಈಗ ನೀನು ಹೋಗಿ ಬಾ, ಬೇಕಾದರೆ ನಾನು ಹೇಳಿಕಳುಹಿಸುತ್ತೇನೆ" ಎಂದು ಅವನನ್ನು ಹೊರಗೆ ಕಳುಹಿಸಿಬಿಟ್ಟಳು.

ಜಯವೀರನು ಅತ್ತ ಹೋದ ಕೂಡಲೇ ವಲ್ಲಭದೇವನೂ ಅಶ್ವಿನೀಕುಮಾರನೂ ಅಲ್ಲಿಗೆ ಬಂದರು. ಪಂಡಿತನು ರೋಗಿಯನ್ನು ನೋಡಿ,

"ಎಲ್ಲರೂ ಹೊರಗೆ ಹೋಗಿರಿ" ಎಂದು ಹೇಳಲು,

'"ನಾನೂ ಹೊರಗೆ ಹೋಗಬೇಕೆ ?" ಎಂದು ವಿಮಲೆಯು ಕೇಳಿದಳು.

"ಅಹುದಮ್ಮಾ, ಮುಖ್ಯವಾಗಿ ನೀನೇ ಹೊರಗೆ ಹೋಗಬೇಕು."

ಅವಳಿಗೆ ಆ ಮಾತನ್ನು ಕೇಳಿ ಅತ್ಯಾಶ್ಚರ್ಯವಾಗಿ, ವೈದ್ಯನು ಹೀಗೆ ಹೇಳುವುದಕ್ಕೆ ಕಾರಣವೇನು ಎಂದು ಯೋಚಿಸುತ್ತಾ ಹೊರಗೆ ಹೊರಟಳು. ಪಂಡಿತನು ಅವಳನ್ನು ನೋಡುತ್ತಾ ವ್ಯಾಕುಲಚಿತ್ತನಾಗಿ ಕೋಣೆಯ ಬಾಗಿಲನ್ನು ಮುಚ್ಚಿಕೊಂಡನು.

ಇತ್ತ ವಲ್ಲಭದೇವನು ಪಂಡಿತನನ್ನು ನೋಡಿ "ಪಂಡಿತರೆ, ಸೇವಕನಿಗೆ ಜ್ಞಾನ ತಿರುಗುವಂತಿದೆ ; ಅಷ್ಟೇನೂ ಗಾಬರಿಗೆ ಕಾರಣವಿಲ್ಲವೆಂದು ತೋರುತ್ತದೆ" ಎನ್ನಲು, ಅವನು ತಲೆಯನ್ನು ತೂಗುತ್ತ "ಇದು ನಿಮ್ಮ ಅತ್ತೆ ಮಾವಂದಿರ ರೋಗದಂತೆಯೇ ಇದೆ. ವಿಚಾರಿಸಿ ನೋಡೋಣ" ಎಂದು ಹರಿದಾಸನನ್ನು ನೋಡುತ್ತಲಿದ್ದು ಅವನಿಗೆ ಜ್ಞಾನ ಬಂದ ಮೇಲೆ, "ನಿನಗೇನಾಗುತ್ತಿದೆ ?" ಎಂದು ಕೇಳಿದನು.

"ಸ್ವಾಮೀ, ಈಗ ನನಗೆ ಸ್ವಲ್ಪ ವಾಸಿ."

"ಹಾಗಾದರೆ ಔಷಧಿಯನ್ನು ಮಾಡಿಕೊಟ್ಟರೆ ಕುಡಿಯುವೆಯೋ ?"

"ಹೂಂ, ಕೊಡಿ, ಕುಡಿಯುತ್ತೇನೆ ; ನನ್ನನ್ನು ಮಾತ್ರ ಮುಟ್ಟಬೇಡಿರಿ. ಮೈಯ್ಯೆಲ್ಲ ಪಟ ಪಟ ಎಂದು ಒಡೆಯುವಂತಿದೆ. ಮುಟ್ಟಿದರೆ ಮೂರ್ಛೆ ಬರುತ್ತದೆ"

"ನಿನಗೆ ಎಲ್ಲಿ ನೋವು ?"

"ಮೈಯೆಲ್ಲವೂ."

"ಕಣ್ಣಿಗೆ ಪ್ರಕಾಶವಾಗಿ ಬೆಳಕು ಕಾಣುವುದೋ ?"

"ಹೂಂ."

"ಕಿವಿಯಲ್ಲಿ ಶಬ್ದವಾಗುತ್ತದೆಯೋ ?"

"ಹೂಂ, ವಿಪರೀತ ಶಬ್ದ."

"ಯಾವಾಗ ?"

"ಈಗ."

"ಅದು ಏಕಾಏಕಿ ಉಂಟಾಯಿತೋ ?"

"ಅಹುದು."

"ಈ ಚಿಹ್ನೆಗಳು ಯಾವುವೂ ನಿನ್ನೆ ಇರಲಿಲ್ಲವೋ ?"

"ಇಲ್ಲ."

"ನಿದ್ದೆ ಬರುತ್ತದೆಯೋ ?"

"ಇಲ್ಲ."

"ನೀನು ಇಂದು ಏನನ್ನು ತಿಂದೆ ?"

"ಯಾವುದನ್ನೂ ತಿನ್ನಲಿಲ್ಲವಲ್ಲ. ವಿಪರೀತ ಬಾಯಾರಿಕೆಯಾಯಿತು. ಯಜಮಾನರಿಗಾಗಿ ಮಾಡಿಟ್ಟಿದ್ದ ಪಾನಕದಲ್ಲಿ ಎರಡು ಬಟ್ಟಲನ್ನು ಕುಡಿದೆನು."

"ಆ ಪಾನಕವೆಲ್ಲಿ", ಎಂದು ಪಂಡಿತನು ಕೇಳಲು, "ಅಲ್ಲಿ" ಎಂದು ಅಡಿಗೆಯ ಮನೆಯ ಕಡೆ ಕೈ ತೋರಿಸಿದನು. ಪಂಡಿತನು ಅದನ್ನು ತರಲು ಅಡುಗೆಯ ಮನೆಗೆ ಆತುರವಾಗಿ ಹೋಗುತ್ತಲಿದ್ದಾಗ ಮುಂದೆ ಹೋಗುತ್ತಿದ್ದ ನಾಗಮಣಿಯನ್ನು ನೋಡದೆ ಅವಳ ಮೇಲೆ ಮುಗ್ಗರಿಸಿಬಿದ್ದು ಆ ಪಾನಕವನ್ನು ಪಾತ್ರದೊಂದಿಗೆತ್ತಿಕೊಂಡು ಬಂದು, ಅದನ್ನು ಹರಿದಾಸನಿಗೆ ತೋರಿಸಿ,

"ನೀನು ಕುಡಿದ ಪಾನಕ ಇದೇಯೋ ?" ಎಂದು ಕೇಳಲು,

"ಅಹುದು."

"ಈ ಪಾನಕದ ರುಚಿಯು ಹೇಗಿದ್ದಿತು ?"

"ಕಹಿಯಾಗಿದ್ದಿತು."

ಪಂಡಿತನು ಆ ಪಾನಕದ ನಾಲ್ಕಾರು ತೊಟ್ಟುಗಳನ್ನು ತನ್ನ ಅಂಗೈಯಲ್ಲಿ ಬಿಟ್ಟುಕೊಂಡು

ನಾಲಗೆಯಿಂದ ನೆಕ್ಕಿ ನೋಡಿ, ಉಗುಳಿ ನೀರಿನಿಂದ ಬಾಯನ್ನು ಮುಕ್ಕಳಿಸಿ "ಸರಿ, ಸರಿ ; ಅದೇ ಸಂದೇಹವೇ ಇಲ್ಲ' ಎಂದುಕೊಂಡನು.

"ಪಂಡಿತರೇ, ತಿರುಗಿ ನೋವೂ, ಸೆಳೆತವೂ, ಮೂರ್ಛೆಯೂ ಬರುವಂತಿವೆ. ಜಾಗ್ರತೆಯಾಗಿ ಏನಾದರೂ ಮದ್ದನ್ನು ಕೊಡಿರಿ. ಇಲ್ಲದಿದ್ದರೆ ಸಾಯುವೆನು" ಎಂದು ಹರಿದಾಸನು ಕಿರಿಚಿಕೊಳ್ಳಲು, ಪಂಡಿತನು "ಇವನಿಗೆ ಏನನ್ನು ಮಾಡಿದರೂ ಬದುಕುವುದಿಲ್ಲ" ಎಂದು ಯೋಚಿಸಿ, "ಚಿಕಿತ್ಸೆ ಮಾಡಬೇಕು ; ಇವನನ್ನು ಬೇರೆ ಕೋಣೆಗೆ ಕರೆದುಕೊಂಡು ಹೋಗಿ" ಎಂದು ಹೇಳಿದನು. ಅವನನ್ನು ಬೇರೆ ಕೊಠಡಿಗೆ ಸಾಗಿಸುತ್ತಲಿದ್ದಾಗ ಪಂಡಿತನು ದೀನನಾಥನನ್ನು ಕುರಿತು,

"ಸ್ವಾಮೀ, ತಾವು ಸುಖವಾಗಿದ್ದೀರೋ ?" ಎಂದು ಕೇಳಲು,

"ಹುಂ."

"ಎದೆಯಲ್ಲಿ ಏನಾದರೂ ಒತ್ತುತ್ತದೆಯೋ ?"

"ಇಲ್ಲ."

"ಹೊಟ್ಟೆಯು ಭಾರವಾಗಿದೆಯೋ ?"

"ಇಲ್ಲ."

"ಈ ಪಾನಕವನ್ನು ಹರಿದಾಸನು ಮಾಡಿದನೋ ?"

"ಇಲ್ಲ."

"ವಿಮಲೆಯು ಮಾಡಿದಳೋ ?"

"ಹುಂ."

"ಹರಿದಾಸನಿಗೆ ಆ ಪಾನಕವನ್ನು ಕುಡಿಯುವಂತೆ ಯಾರು ಹೇಳಿದರು ? ವಲ್ಲಭದೇವನೋ ?"

"ಅಲ್ಲ."

"ನಾಗಮಣಿಯೋ ?"

"ಅಲ್ಲ."

"ನಿಮ್ಮ ಮೊಮ್ಮಗಳೋ ?"

"ಅಹುದು."

ವೃದ್ಧನು ಹೀಗೆ ಹೇಳುತ್ತಲೆ ಪಂಡಿತನು ಹಣೆಯನ್ನು ಚಚ್ಚಿಕೊಳ್ಳುತ್ತ "ಅಯ್ಯೋ ದೇವರೇ", ಎನ್ನುತ್ತ ಹರಿದಾಸನನ್ನು ಮಲಗಿಸಿದ್ದ ಕೋಣೆಗೆ ಓಡಿ ಹೋದನು. ಆ ಕೋಣೆಗೆ ಹೋಗುವುದರೊಳಗಾಗಿಯೇ ಅವನ ಪ್ರಾಣವು ಹೋಗಿದ್ದಿತು. ಆದರೆ ಅದು ಯಾರಿಗೂ ತಿಳಿದಿರಲಿಲ್ಲ. ಪಂಡಿತನು ಬಂದ ಕೂಡಲೇ ವಲ್ಲಭದೇವನು "ಅವನು ಪುನಃ ಮೂರ್ಛೆ ಹೋದಂತಿದೆ" ಎನ್ನಲು, ವೈದ್ಯನು ಅವನ ಕೈಯನ್ನು ನೋಡಿ "ಪ್ರಾಣ ಹೋಯಿತು" ಎಂದನು.

ಪಂಡಿತನು ಹಾಗೆಂದ ಕೂಡಲೇ ವಲ್ಲಭದೇವನಿಗೆ ಕೈಕಾಲು ನಡುಗಿ ಮೈ ಬೆವರಿ "ಏನು ಸತ್ತುಹೋದನೇ ?" ಎಂದನು.

"ಅವನಿಗೆ ಯಾರೋ ವಿಷಪ್ರಾಶನ ಮಾಡಿಸಿ ಕೊಂದರು."

"ಅಯ್ಯೋ, ನನ್ನ ಮನೆಯಲ್ಲಿ ಎಷ್ಟು ಸಾವು ?"

"ಇದು ಸಾವಲ್ಲ ; ಕೊಲೆ."

"ಪಂಡಿತರೇ, ನನಗುಂಟಾಗಿರುವ ಭಯವನ್ನೂ ದುಃಖವನ್ನೂ ಹೇಳಲಾರೆ. ನನಗೆ ಹುಚ್ಚು ಹಿಡಿದಂತಾಗಿದೆ."

"ಇರಬಹುದು. ಆದರೆ ನೀವು ಈ ಘಾತುಕರಾರಿರಬಹುದೆಂದು ಕಂಡುಹಿಡಿದು ಅವರಿಗೆ ತಕ್ಕ ಶಿಕ್ಷೆಯನ್ನು ಮಾಡಬೇಕು. ಹಾಗೆ ಮಾಡದಿದ್ದರೆ ಮುಂದೆ ಇನ್ನೆಷ್ಟು ಕೊಲೆಗಳು ಆಗುವುವೋ ? ಇದುವರೆಗೆ ನಿಮ್ಮ ದಾಕ್ಷಿಣ್ಯಕ್ಕಾಗಿ ನಾನು ಸುಮ್ಮನಿದ್ದೆನು. ಇನ್ನು ಮುಂದೆ ಹಾಗಿರಲಾರೆ" ಎಂದು ಪಂಡಿತನು ಹೇಳಲು, ವಲ್ಲಭದೇವನು,

"ನನ್ನ ಮನೆಯಲ್ಲಿಯೇ ಕೊಲೆ ? ನನ್ನ ಮನೆಯಲ್ಲಿ ?" ಎಂದು ಹೇಳುತ್ತ ಸುತ್ತಲೂ ನೋಡಿದನು.

"ನ್ಯಾಯಾಧಿಪತಿಗಳೇ, ಮಮತೆಯನ್ನು ಬಿಟ್ಟು ನಿಮ್ಮ ಕೆಲಸವನ್ನು ಮಾಡಿರಿ. ಆ ವಿಷಯದಲ್ಲಿ ಸಂದೇಹವೇ ಇಲ್ಲ."

"ನಿಮಗೆ ಯಾರ ಮೇಲೆ ಅನುಮಾನ ?"

"ಈ ಕೊಲೆಗಳಿಂದ ಯಾರಿಗಾದರೂ ಪ್ರಯೋಜನವುಂಟೇ ಎಂದು ಯೋಚಿಸಿದಲ್ಲಿ ಇಂಥವರೇ ಎಂದು ಗೊತ್ತಾಗಿ ಹೋಗುತ್ತದೆ."

"ಪಂಡಿತರೇ, ಮನುಷ್ಯನ ಊಹೆಯು ಎಷ್ಟೋ ಸಾರಿ ತಪ್ಪಾಗಿಹೋಗಿದೆ. ನಿರಪರಾಧಿಯಾದವರು ಅನ್ಯಾಯವಾಗಿ ಶಿಕ್ಷೆಗೆ ಗುರಿಯಾಗಿದ್ದಾರೆ. ದಯವಿಟ್ಟು ನೀವು ಅದನ್ನು ಯೋಚಿಸಿ. ಈ ಕೊಲೆಯು—"

"ಓಹೋ ? ಕೊಲೆಯೆಂದು ನೀವು ಒಪ್ಪಿದಿರಲ್ಲ."

"ಅದಕ್ಕೇನೂ ಸಂದೇಹವಿಲ್ಲ. ಇವುಗಳನ್ನು ನೋಡಿದರೆ ನಾಳೆ ನನ್ನನ್ನೂ ಹೀಗೆಯೇ ಕೊಲ್ಲುವರೆಂದು ತೋರುತ್ತದೆ."

"ವಲ್ಲಭದೇವರೇ, ಲೋಕದಲ್ಲಿ ಎಲ್ಲಾ ಪ್ರಾಣಿಗಳಿಗಿಂತಲೂ ಮನುಷ್ಯನಿಗೀಗ ಅಹಂಭಾವವು ಹೆಚ್ಚು. 'ತಾನುಂಟಾದರೆ ಮೂರು ಲೋಕವುಂಟು' ಎಂಬ ನಾಣ್ಣುಡಿಯು ಸುಳ್ಳಲ್ಲ. ಇವನು ತನಗಾಗಿಯೇ ಸೂರ್ಯಚಂದ್ರಾದಿಗಳು ಬೆಳಗುವುದೆಂದೂ ಮಳೆ ಬೆಳೆಗಳು ಆಗುವುವೆಂದೂ ತಿಳಿದುಕೊಂಡಿದ್ದಾನೆ. ಮೃತ್ಯುವು ತನ್ನೊಬ್ಬನನ್ನೇ ಬಾಯಿಗೆ ಹಾಕಿಕೊಂಡು ಹೋಗುವಂತೆ ಭಾವಿಸುತ್ತಾನೆ. ಹಿಂದೆ ನಿಮ್ಮ ಮಾವನೂ ಅತ್ತೆಯೂ ಹೇಗೆ ಸತ್ತರು ? ವಿಷಪ್ರಯೋಗದಿಂದಲ್ಲವೆ ? ಈಗ ನಿಮ್ಮ ತಂದೆ—"

"ಏನು ಹೇಳಿದಿರಿ ? ನಮ್ಮಪ್ಪನೇ ? ಏನು ?"

"ಇದು ಹರಿದಾಸನನ್ನು ಕೊಲ್ಲಬೇಕೆಂದು ಮಾಡಿದ ಕೃತ್ಯವಲ್ಲ ; ನಿಮ್ಮ ತಂದೆಯನ್ನು ಕೊಲ್ಲಬೇಕೆಂದು ಮಾಡಿದ ಕೃತ್ಯ. ಗ್ರಹಚಾರ ಕಡಿಮೆಯಾಗಿ ಆಳಿಗೆ ಬಡಿಯಿತು."

"ನಮ್ಮ ತಂದೆಯೂ ಆ ಪಾನಕವನ್ನು ಕುಡಿದನಲ್ಲಾ ? ಅವನೇಕೆ ಸಾಯಲಿಲ್ಲ ?"

"ನಿಮ್ಮ ಅತ್ತೆ ಸತ್ತ ರಾತ್ರಿ ನಿಮ್ಮ ಮನೆಯ ಹಿಂದಣ ತೋಟದಲ್ಲಿ ನಾನು ಹೇಳಿದುದು ಜ್ಞಾಪಕವಿಲ್ಲವೇ ? ನಿಮ್ಮ ತಂದೆಗಳ ರೋಗಕ್ಕಾಗಿ ಅವರಿಗೆ ಔಷಧದಲ್ಲಿ ವಿಷವನ್ನು ಬೆರೆಸಿಕೊಡುತ್ತಿದ್ದೇನೆ. ನಾನು ಸೇರಿಸುವ ವಿಷಕ್ಕಿಂತ ಹೆಚ್ಚಾಗಿ ಅವರ ಪಾನಕದಲ್ಲಿ ಸೇರಿದೆ ; ಆದರೂ ಅವರಿಗೆ ವಿಷಸೇವನಾಬಲದಿಂದ ವಿರೋಧವು ಆಗಲಿಲ್ಲ."

"ಪಂಡಿತರೇ, ಈ ವೇಳೆಯಲ್ಲಿ ನನ್ನನ್ನು ಬಿಟ್ಟುಕೊಡಕೂಡದು ; ಕರುಣಿಸಬೇಕು" ಎಂದು ವಲ್ಲಭದೇವನು ಪ್ರಾರ್ಥಿಸಿದನು.

"ಆ ಪಾಪಿಯ ದೌಷ್ಟ್ಯವನ್ನು ನೋಡಿರಿ. ಅವರ ಆಸ್ತಿಗಳನ್ನು ಅಪಹರಿಸುವುದಕ್ಕಾಗಿ ವಿಷವನ್ನು ಮೊದಲು ನಿಮ್ಮ ಮಾವನಿಗೂ ಬಳಿಕ ನಿಮ್ಮ ಅತ್ತೆಗೂ ಪ್ರಯೋಗ ಮಾಡಿ, ನಿಮ್ಮ ತಂದೆಗಳು ಅವರ ಆಸ್ತಿಯನ್ನೆಲ್ಲಾ ಧರ್ಮಕ್ಕೆ ಬರೆಸುವವರೆಗೂ ಸುಮ್ಮನಿದ್ದು ಅವರು ಶಾಸನವನ್ನು ಬದಲಾಯಿಸಿದ ಒಡನೆಯೇ ಅವರಿಗೆ ವಿಷಪ್ರಯೋಗ ವಾಗಿದೆ"

"ಅಯ್ಯೋ, ದೇವರೇ, ಹೀಗೂ ಉಂಟೇ ? ಏನಾದರೂ ಆಗಲಿ ; ಪಂಡಿತರೇ, ತಾವು ನನ್ನನ್ನು ಕಾಪಿಡಬೇಕು."

"ನಿಮ್ಮಲ್ಲಿ ನನಗೆ ಪೂರ್ಣ ವಿಶ್ವಾಸವೂ ಸ್ನೇಹವೂ ಇದ್ದುದರಿಂದ ನಾನು ಇದುವರೆಗೆ ಸುಮ್ಮನಿದ್ದನು. ಇನ್ನು ಸುಮ್ಮನಿದ್ದರೆ ದೇವರು ಮೆಚ್ಚನು."

"ಪಂಡಿತರೇ, ನನ್ನ ಮಗಳ ಮೇಲೆ ಕೃಪೆಯನ್ನು ಇಡಿ."

"ಆಹಾ, ತಾವೇ ಅವಳ ಹೆಸರನ್ನು ಹೇಳೋಣಾಯಿತು."

"ಆದರೂ ನನ್ನ ಮಗಳ ಅಂತಹ ದುಷ್ಟಕೃತ್ಯಗಳನ್ನು ಮಾಡುವವಳಲ್ಲ. ಅವಳ ಹೃದಯವು ಪರಿಶುದ್ಧವಾದುದು."

"ನಿಮ್ಮ ಮಾವನವರಿಗೆ ಔಷಧಿಗಳನ್ನು ಗಂಟುಕಟ್ಟಿ ಕಳುಹಿಸಿದವಳೂ ಅವಳೇ ; ನಿಮ್ಮ ಅತ್ತೆಯವರ ಪಕ್ಕದಲ್ಲಿದ್ದು ಔಷಧಿಗಳನ್ನು ಕೊಡುತ್ತಿದ್ದವಳೂ ಅವಳೇ. ಈಗ ವಿಷಮಿಶ್ರವಾದ ಪಾನಕವನ್ನು ಮಾಡಿಟ್ಟಿದ್ದವಳೂ ಅವಳೇ. ಹೀಗಿರುವಲ್ಲಿ ಅವಳೇ ಪಾತಕಿ ಎಂಬುದರಲ್ಲಿ ಸಂದೇಹವೇ ಇಲ್ಲ."

"ಪಂಡಿತರೇ, ನೀವು ಹೇಳುವುದೇನೋ ಸರಿ ; ಆದರೆ ಇದು ಬಯಲಿಗೆ ಬಂದರೆ ನನ್ನ ಮಾನವು ನಿಲ್ಲದು. ನೀವು ಅದನ್ನು ಕಾಪಿಡಬೇಕು ; ಇಲ್ಲದಿದ್ದರೆ ನಾನು ಪ್ರಾಣತ್ಯಾಗ ಮಾಡುತ್ತೇನೆ."

"ಅವಳು ಒಂದೇ ಕೊಲೆ ಮಾಡಿ ಪಶ್ಚಾತ್ತಾಪ ಪಟ್ಟಿದ್ದರೆ ನಾನು ಸುಮ್ಮನೆ ಇರುತ್ತಿದ್ದೆನು.

ಒಂದಾಯಿತು, ಎರಡಾಯಿತು, ಮೂರಾಯಿತು ; ಇನ್ನು ಮುಂದೆ ಎಷ್ಟಾಗುವುದೋ ? ಆದುದರಿಂದ ಈಗ ನಾನು ಸುಮ್ಮನಿರಲಾರೆ. ಮಾನ ಹೋಗುವುದೆಂದು ಹೇಳಿದಿರಲ್ಲವೇ ? ನಾನು ಹೇಳುವಂತೆ ನೀವು ಅವಳನ್ನು ಶಿಕ್ಷಿಸಿದರೆ ನಿಮಗೆ ಶಾಶ್ವತವಾದ ಯಶಸ್ಸುಂಟಾಗುವುದು. ಇತರರಿಗೆ ಅವಳು ಪ್ರಯೋಗಿಸುತ್ತಲಿರುವ ವಿಷವನ್ನು ಅವಳಿಗೇ ಕುಡಿಸಿಬಿಡಿರಿ, ಸಾಕು."

ಹೀಗೆಂದು ವೈದ್ಯನು ಹೇಳುತ್ತಲೆ ವಲ್ಲಭದೇವನು ಕೈಗಳನ್ನು ಜೋಡಿಸಿಕೊಂಡು "ಸ್ವಾಮೀ, ಪಂಡಿತರೇ, ಈ ಸಾರಿ ನನ್ನನ್ನು ಮನ್ನಿಸಿಬಿಡಿ" ಎಂದು ಹೇಳಲು, ಪಂಡಿತನ ಮನವು ಕರಗಿ,

"ನೀವು ಇಷ್ಟು ಹೇಳುವುದರಿಂದ ಈ ಸಾರಿಯೂ ಸುಮ್ಮನೆ ಇರುತ್ತೇನೆ. ಮುಂದೆ ನಿಮ್ಮ ಮನೆಯಲ್ಲಿ ಯಾರಾದರೂ ಬೇನೆ ಬಿದ್ದರೆ ನನ್ನನ್ನು ಮಾತ್ರ ಕರೆಸಬೇಡಿ. ಒಂದು ವೇಳೆ ಕರೆದರೂ ನಾನು ಬರಲಾರೆ."

"ಪಂಡಿತರೇ, ನನ್ನನ್ನು ಹಾಗೆ ಕೈಬಿಡಬೇಡಿ. ಹರಿದಾಸನ ವಿಚಾರದಲ್ಲಿ ಹೇಗಾದರೂ ಸರಿಮಾಡಿ ; ಇಲ್ಲದಿದ್ದರೆ ಆಳುಗಳು ತಮ್ಮ ಮನಬಂದಂತೆ ಆಡಿಕೊಳ್ಳುವರು."

ವಲ್ಲಭದೇವನ ಮಾತಿಗೆ ಪಂಡಿತನು ಒಪ್ಪಿ ಈಚೆಗೆ ಬಂದು, ಹರಿದಾಸನು ಬಿಸಿಲಿನಲ್ಲಿ ಓಡಾಡಿದುದರಿಂದ ವಿಷಮಜ್ವರ ಬಂದು ಸತ್ತುಹೋದನು, ಎಂದು ಗಟ್ಟಿಯಾಗಿ ಹೇಳಿ ಹೊರಟುಹೋದನು. ಅವನತ್ತ ಹೋಗುತ್ತಲೆ ಮನೆಯಲ್ಲಿದ್ದ ಆಳುಗಳೆಲ್ಲರೂ ಈ ಮನೆಯಲ್ಲಿ ಜನರು ಇದ್ದಕ್ಕಿದ್ದಹಾಗೆ ಸಾಯುತ್ತಾರೆ. ಇದು ಸಾವಿನ ಮನೆ. ಇನ್ನು ಮೇಲೆ ಇಲ್ಲಿದ್ದರೆ ನಾವೂ ಹೀಗೆಯೇ ಸಾಯುವೆವು ಎಂದು ತಮ್ಮ ತಮ್ಮ ಸಂಬಳಗಳನ್ನು ತೆಗೆದುಕೊಳ್ಳಲು ನಾಗಮಣಿಯ ಬಳಿಗೆ ಬಂದರು. ಆಗ ಅವಳು ಅವರೆಲ್ಲರಿಗೂ ಬೇಡವೆಂದು ಎಷ್ಟು ಹೇಳಿದರೂ ಕೇಳದೆ, ಅವರು "ಅಮ್ಮಾ, ನಿಮ್ಮಷ್ಟು ಒಳ್ಳೆಯವರೂ, ದಯಾಳುಗಳೂ ಸಭ್ಯರೂ ಇತರ ಕಡೆ ನಮಗೆ ಸಿಕ್ಕಲಾರರು. ನಿಮ್ಮನ್ನೂ ವಿಮಲೆಯನ್ನೂ ಬಿಟ್ಟುಹೋಗುವುದಕ್ಕೆ ನಮಗೆ ಮನಸ್ಸು ಬರುವುದಿಲ್ಲ. ಇಲ್ಲಿ ಇರುವುದಕ್ಕೇನೋ ನಮಗೆ ದಿಗಿಲಾಗುತ್ತದೆ. ದಯವಿಟ್ಟು ನಮ್ಮ ಸಂಬಳಗಳನ್ನು ಕೊಡಿಸಿಬಿಟ್ಟರೆ ಸಾಕು. ನಾವು ಬೇರೆ ಎಲ್ಲಿಗಾದರೂ ಹೊರಟು ಹೋಗುತ್ತೇವೆ" ಎಂದರು. ಅವರ ಮಾತುಗಳನ್ನು ಕೇಳಿ ವಿಮಲೆಯು ಕಣ್ಣಿನಲ್ಲಿ ನೀರನ್ನು ತುಂಬಿಕೊಂಡಳು.

ಆ ವೇಳೆಗೆ ವಲ್ಲಭದೇವನು ಬಂದು ವಿಮಲೆಯು ಅಳುತ್ತಿರುವುದನ್ನು ನೋಡಿ ಹೆಂಡತಿಯ ಕಡೆಗೆ ತಿರುಗಲು, ಅವಳ ಮುಖವು ಎರಡು ಕರಿಯ ಮೋಡಗಳ ನಡುವೆ ಹುಟ್ಟಿದ ಧೂಮಕೇತುವಿನಂತೆ ಕಾಣುತ್ತಿದ್ದಿತು.

## ೫೬
## ಕಳವು

ದುರ್ಮತಿಯಿಂದ ರಾಜಸಿಂಹನು ಅಪಮಾನ ಪಡೆದು ತನ್ನ ಮನೆಗೆ ಹೋದ ಬಳಿಕ ಅನಂತರಾಜುವು ದುರ್ಮತಿಯನ್ನು ನೋಡುವುದಕ್ಕೆ ಬಂದನು. ಅವನು ಬಂದ ಸುದ್ದಿ ತಿಳಿದ ಒಡನೆಯೇ ದುರ್ಮತಿಯು ತಲೆಬಾಗಿಲಿಗೆ ಬಂದು ಮರ್ಯಾದೆಯೊಡನೆ ಅವನನ್ನು ಒಳಕ್ಕೆ ಕರೆದುಕೊಂಡು ಹೋಗಿ ಆಸನದಲ್ಲಿ ಕೂರಿಸಿ ತಾನೂ ಕುಳಿತುಕೊಂಡನು.

ಇಬ್ಬರೂ ಕುಳಿತು ಮಾತನಾಡುತ್ತಿದ್ದಾಗ ಅನಂತರಾಜುವು ಪ್ರಸ್ತಾಪತ್ವೇನ ಮದುವೆಯ ಮಾತನ್ನು ತೆಗೆದು "ನಾನು ಈಗ ಕನ್ಯಾರ್ಥಿಯಾಗಿ ಬಂದಿರುವೆನು. ನಿಮ್ಮ ಮಗಳನ್ನು ವಿವಾಹ ಮಾಡಿಕೊಟ್ಟರೆ ಕೃತಾರ್ಥನಾಗುವೆನು" ಎಂದು ಹೇಳಲು, ಅವನ ಬಾಯಿಂದ ಆ ಮಾತು ಬಂದರೆ ಸಾಕೆಂದು ಇದ್ದ ದುರ್ಮತಿಯು ಒಡನೆಯೇ ಒಪ್ಪಿಕೊಂಡರೆ ತನ್ನ ಗೌರವಕ್ಕೆ ಕಡಮೆ ಎಂದು ಯೋಚಿಸಿ, "ಸ್ವಾಮೀ, ತಾವು ಇನ್ನೂ ಚಿಕ್ಕಪ್ರಾಯದವರು. ಈಗಾಗಲೇ ತಮಗೆ ಮದುವೆಯ ಯೋಚನೆಯೇತಕ್ಕೆ ?" ಎಂದನು.

"ಸ್ವಾಮೀ, ನಮ್ಮ ದೇಶದ ದೊಡ್ಡಮನೆತನದವರಲ್ಲಿ ತರುಣರು ನನ್ನ ವಯಸ್ಸಿನಲ್ಲಿಯೇ ಮದುವೆ ಮಾಡಿಕೊಳ್ಳುವ ಪದ್ಧತಿ. ದೇಹವು ಶಾಶ್ವತವಲ್ಲ ; ಅನುಕೂಲವಿದ್ದಾಗ ಸುಖಪಡುವುದೀಗ ಜಾಣರ ಕೆಲಸ."

"ತಾವು ಅಪ್ಪಣೆ ಕೊಡಿಸುವುದು ಸರಿ ; ಆದರೂ ಈ ವಿಷಯವನ್ನು ನನ್ನ ಹೆಂಡತಿ ಮಕ್ಕಳೊಡನೆ ಪ್ರಸ್ತಾಪ ಮಾಡಿ ನೋಡುತ್ತೇನೆ. ಒಂದು ವೇಳೆ ಅವರು ಒಪ್ಪಿಕೊಂಡರೆ ನಿಮ್ಮ ಪರವಾಗಿ ನಿಂತು ಕೆಲಸ ಮಾಡುವವರಾರು ?"

"ನನ್ನ ತಂದೆಯವರು ಇಲ್ಲಿಂದ ಹೊರಡುವಾಗ 'ನೀನು ಮದುವೆ ಮಾಡಿಕೊಂಡು ಈ ದೇಶದಲ್ಲಿಯೇ ನಿಲ್ಲುವ ಪಕ್ಷಕ್ಕೆ ನಿನ್ನ ವೆಚ್ಚಕ್ಕಾಗಿ ವರ್ಷವೊಂದಕ್ಕೆ ಒಂದೂವರೆ ಲಕ್ಷ ವರಹಗಳನ್ನು ಕೊಡುತ್ತೇನೆ' ಎಂದು ಹೇಳಿ ಹೋಗಿದ್ದಾರೆ. ಮದುವೆಯ ವೆಚ್ಚಕ್ಕಾಗಿ ಒಂದು ಲಕ್ಷ ವರಹಗಳನ್ನು ಕಳುಹಿಸುತ್ತಾರೆ. ಮದುವೆಯ ಏರ್ಪಾಡಿಗೆ ಇನ್ನೇನು ಮಾಡಬೇಕಾಗಿದೆ ?"

"ಮಗಳಿಗೆ ನಾನೂ ಐದು ಲಕ್ಷ ವರಹಗಳನ್ನು ಬಳುವಳಿಯಾಗಿ ಕೊಡುತ್ತೇನೆ. ಇದಲ್ಲದೆ ನನ್ನ ಕಾಲಾನಂತರ ನನ್ನ ಆಸ್ತಿಯೆಲ್ಲವೂ ಅವಳಿಗೇ ಸೇರುತ್ತದೆ."

"ಸ್ವಾಮೀ, ಸದ್ಯಕ್ಕೆ ಇಷ್ಟಾದರೆ ಸಾಕು. ಮುಂದೆ ಒಂದು ವೇಳೆ ನನ್ನ ಭಾಗದ ಮೂಲಧನ ಸುಮಾರು ಐದು ಕೋಟಿ ವರಹಗಳನ್ನು, ನಮ್ಮಪ್ಪನು ನನ್ನ ಕೈಯಲ್ಲಿಯೇ ಕೊಟ್ಟು ನಾನು ಅದನ್ನು ನಿಮ್ಮಲ್ಲಿಟ್ಟರೆ ನಿಮ್ಮ ಅನುಭವ, ಬುದ್ಧಿ ಚಾತುರ್ಯಗಳಿಂದ

ಅದನ್ನು ಸ್ವಲ್ಪ ಕಾಲದಲ್ಲಿಯೇ ವೃದ್ಧಿಪಡಿಸಿ ನಮ್ಮ ಆದಾಯವನ್ನು ಒಂದಕ್ಕೆರಡಾಗಿ ಮಾಡಲಾರಿರಾ ?"

"ನಾನು ಸಾಧಾರಣವಾಗಿ ನೂರಕ್ಕೆ ನಾಲ್ಕಕ್ಕಿಂತ ಹೆಚ್ಚಾಗಿ ಯಾರಿಗೂ ಬಡ್ಡಿ ಕೊಡುವುದಿಲ್ಲ. ನೀವು ಅಳಿಯಂದಿರಾಗುವುದರಿಂದ ಐದರ ಹಾಗೆ ಬಡ್ಡಿ ಕೊಡುತ್ತೇನೆ. ನೀವು ಈಗ ಮೂಲಧನವೆಂದು ಹೇಳಿದಿರಲಿಲ್ಲ ; ಅದರಲ್ಲಿ ನಿಮ್ಮ ತಾಯಿಯ ಆಸ್ತಿಯೂ ಸೇರಿದೆಯೋ ?"

"ಓಹೋ, ಅದು ಬೇರೆ ಎರಡು ಕೋಟಿ ವರಹಗಳು ಹಾಗೆಯೇ ಇವೆ."

"ಅದನ್ನೂ ನಿಮ್ಮ ತಂದೆಗಳು. ನಿಮ್ಮ ವಶದಲ್ಲಿಯೇ ಕೊಡುವರೋ ?"

"ಅವರಿಗೆ ನಾನೊಬ್ಬನೇ ಮಗ. ಹಣಕಾಸುಗಳನ್ನು ಲೆಕ್ಕ ಮಾಡಿ ಮಾಡಿ ಅವರು ಬೇಸತ್ತಿದ್ದಾರೆ. ಈಗ ಒಂದು ವರ್ಷದ ಹಿಂದೆಯೇ ಆಸ್ತಿಯನ್ನೆಲ್ಲಾ ನನ್ನ ವಶಮಾಡಿ ತಾವು ನಿಶ್ಚಿಂತರಾಗಿರಬೇಕೆಂದು ಯೋಚಿಸಿದ್ದರು. ನನಗೆ ಮದುವೆಯಾಗುವವರೆಗೆ ಹಾಗೆ ಮಾಡಬೇಡಿರೆಂದು ನಾನೇ ಕೇಳಿಕೊಂಡುದರಿಂದ ಅವರು ಸುಮ್ಮನಾದರು."

"ಹಾಗೋ, ಹಾಗಾದರೆ ಸರಿ" ಎಂದು ದುರ್ಮತಿಯು ಸಂತುಷ್ಟಚಿತ್ತನಾಗಿ "ಅದೇನು, ನಿಮ್ಮ ಪೋಷಕರಾದ ಮಲಯಸಿಂಹರು ಈ ಪ್ರಸ್ತಾಪವನ್ನೇ ಮಾಡಲಿಲ್ಲವಲ್ಲಾ" ಎಂದು ಕೇಳಿದನು.

"ಸ್ವಾಮೀ, ಅವರ ನಡತೆಯೇ ಒಂದು ರೀತಿ; ಇಂಥ ಕೆಲಸಗಳಲ್ಲಿ ಅವರು ಮುಂದಾಳಾಗಿ ನಿಲ್ಲುವುದೇ ಇಲ್ಲ. ಆದರೂ ಅವರಿಗೆ ನನ್ನಲ್ಲಿ ಸಂಪೂರ್ಣ ವಿಶ್ವಾಸವುಂಟು" ಎಂದು ಹೇಳಿ "'ಸ್ವಾಮೀ, ಇದುವರೆಗೆ ಮಾವನವರ ಸಂಗಡ ಮಾತಾಯಿತು ; ಇನ್ನು ಮೇಲೆ ಸಾಹುಕಾರರ ಸಂಗಡ ಮಾತನಾಡಬೇಕು" ಎಂದು ನಗುತ್ತ "'ರಾಜಾ ಮಲಯಸಿಂಹರು ನಿಮ್ಮ ಮೇಲೆ ಇಪ್ಪತ್ತು ಸಾವಿರ ವರಹಗಳಿಗೆ ಒಂದು ಹುಂಡಿಯನ್ನು ಕೊಟ್ಟಿದ್ದಾರೆ ; ಆ ಹಣವನ್ನು ದಯವಿಟ್ಟು ಮನೆಗೆ ಕಳುಹಿಸಿಕೊಡಬೇಕು" ಎಂದು ಹುಂಡಿಯನ್ನು ದುರ್ಮತಿಯ ಕೈಯಲ್ಲಿ ಕೊಡಲು, "ಅಗತ್ಯವಾಗಿ ಕಳುಹಿಸಿಕೊಡುತ್ತೇನೆ" ಎಂದು ಅವನು ಹೇಳಿದನು. ಬಳಿಕ ಅನಂತರಾಜುವು ಹೋದನು.

ಮಾರನೆಯ ದಿನ ದುರ್ಮತಿಯು ಕಳುಹಿಸಿಕೊಟ್ಟ ಹಣದಲ್ಲಿ ಅನಂತರಾಜುವು ಇನ್ನೂರು ವರಹಗಳನ್ನು ತನ್ನ ಆಳಿನ ಕೈಯಲ್ಲಿ ಕೊಟ್ಟು ಮಿಕ್ಕ ಹಣವನ್ನು ಒಳಗಿಟ್ಟು ಕೆಲವು ಸ್ನೇಹಿತರನ್ನು ನೋಡಲು ಹೊರಟವನು ರಾತ್ರಿ ಊಟದ ಹೊತ್ತಿಗೆ ಮನೆಗೆ ಬಂದನು. ಅವನು ಬರುವುದನ್ನೇ ಕಾದಿದ್ದ ಆಳು,

"ಮಹಾಸ್ವಾಮೀ, ಅಂದು ಬಂದಿದ್ದ ಮುದುಕನು ಪುನಃ ಬಂದಿದ್ದನು" ಎಂದು ಹೇಳಿ ಅವನು ಕೊಟ್ಟಿದ್ದ ಕಾಗದವನ್ನು ಕೊಟ್ಟನು.

"ಯಾವ ಮುದುಕ ?"

"ತಾವು ಮಾಸಾಶನ ಕೊಡುತ್ತಿರಲ್ಲಾ ಅವನು."

"ಓಹೋ ! ಅವನೇ, ಪೂರ್ವದಲ್ಲಿ ನಮ್ಮಪ್ಪನ ಆಳು. ನಿನ್ನಲ್ಲಿದ್ದ ಹಣವನ್ನು ಅವನಿಗೆ ಕೊಡಹೇಳಿದ್ದೆನಲ್ಲ ; ಕೊಟ್ಟೆಯೋ ?"

"ಕೊಟ್ಟೆ ; ಅದು ತನಗೆ ಬೇಡವೆಂದು ಅವನು ಹೇಳಿದನು" ಎಂದು ಹೇಳುತ್ತಲೆ ಅನಂತರಾಜುವಿಗೆ ಗಾಬರಿಯಾಗಿ,

"ಇನ್ನೇನಾದರೂ ಹೇಳಿದನೋ ?"

"ಸ್ವಾಮೀ, ಇನ್ನೇನೂ ಹೇಳಲಿಲ್ಲ ; ನಿಮಗೆ ಕೊಡಹೇಳಿ ಈ ಲೇಖನವನ್ನು ಕೊಟ್ಟು ಹೊರಟುಹೋದನು."

"ನಾಳೆಯ ಬೆಳಿಗ್ಗೆ ಒಂಭತ್ತು ಗಂಟೆಗೆ ಸರಿಯಾಗಿ ನೀನು ಬಂದು ನನ್ನನ್ನು ನೋಡಬೇಕು" ಎಂದು ಆ ಕಾಗದದಲ್ಲಿ ಬರೆದಿದ್ದಿತು. ಅದನ್ನು ಅನಂತರಾಜುವು ಓದಿಕೊಂಡು "ಅಯ್ಯೋ ಪಾಪ" ಎಂದು ಗಟ್ಟಿಯಾಗಿ ಹೇಳಿಕೊಂಡು ಒಳಕ್ಕೆ ಹೋಗಿ ಆ ಕಾಗದವನ್ನು ದೀಪದಲ್ಲಿ ಸುಟ್ಟನು. ರಾತ್ರೆ ಮಲಗುವುದಕ್ಕೆ ಮುಂಚೆ ಆಳುಗಳನ್ನು ಕರೆದು "ನಾನು ನಾಳೆ ಮುಂಜಾನೆ ಅಷ್ಟು ಹೊತ್ತಿಗೇ ಎದ್ದು ಹಳ್ಳಿಗೆ ಹೋಗಬೇಕು. ರಾತ್ರೆ ಮನೆಗೆ ಬರುತ್ತೇನೆ" ಎಂದು ಹೇಳಿ ತನ್ನ ಕುದುರೆಯವನ ಉಡುಪನ್ನು ತೆಗೆದಿಟ್ಟುಕೊಂಡು ಮಲಗಿದನು.

ಬೆಳಿಗ್ಗೆ ಎಲ್ಲರಿಗಿಂತ ಮುಂಚೆಯೇ ಅನಂತರಾಜುವು ಎದ್ದು ರಾತ್ರೆ ತೆಗೆದಿಟ್ಟುಕೊಂಡಿದ್ದ ಉಡುಪನ್ನು ಹಾಕಿಕೊಂಡು ಕದರ್ಥಕನ ಬಿಡಾರಕ್ಕೆ ಹೋದನು. ಅವನು ಬರುತ್ತಾನೆಂದು ಕಾದಿದ್ದ ಕದರ್ಥಕನು,

"ಅದು ಸರಿ ; ಹೇಳಿದ ವೇಳೆಗೆ ಸರಿಯಾಗಿ ಬಂದುಬಿಟ್ಟೆ" ಎಂದನು.

"ಒಳ್ಳೆಯ ವೇಳೆ ; ನಿನ್ನ ಮೋರೆ ಸುಟ್ಟರು, ನೀನು ನನಗೆ ಇಲ್ಲದ ತೊಂದರೆಯನ್ನು ಕೊಡುತ್ತೀಯೆ."

"ಕೋಪಿಸಿಕೊಳ್ಳಬೇಡ. ನಿನಗಾಗಿ ತಿಂಡಿಯನ್ನು ತರಿಸಿ ಸಿದ್ಧಪಡಿಸಿದ್ದೇನೆ ನೋಡು. ಬಾ, ಇಬ್ಬರೂ ತಿನ್ನೋಣ."

"ಈ ಹಾಳು ಊಟಕ್ಕಾಗಿ ನನ್ನನ್ನು ಬರಹೇಳಿದೆಯಾ ?"

"ನಿನ್ನೊಂದಿಗೆ ಸ್ವಲ್ಪ ಮಾತನಾಡಬೇಕಾಗಿದೆ ; ಊಟಮಾಡುತ್ತ ಮಾತನಾಡುವುದು ಸುಖವೆಂದು ಕೇಳಿಲ್ಲವೇ ?"

"ನಿನಗೆ ಬೇಕಾದ ಹಣವನ್ನು ಒದಗಿಸಿಕೊಟ್ಟ ಮೇಲೆ ಕೂಡ ನನ್ನನ್ನು ಇಲ್ಲಿಗೆ ಏತಕ್ಕೆ ಬರಹೇಳಿದೆ ?"

"ನೀನು ಎಷ್ಟು ದಿನಗಳು ಹೀಗೆ ಕೊಟ್ಟೀಯೆ ? ನಾನು ಎಷ್ಟು ದಿನಗಳು ಹೀಗೆ ತೆಗೆದುಕೊಂಡೇನು ? ಅದೃಷ್ಟವು ಒಂದೇ ರೀತಿಯಾಗಿರುವುದಿಲ್ಲ ; ನನಗೂ ವಯಸ್ಸು ಆಗುತ್ತ ಬಂದಿತು ; ಮುಪ್ಪಿನ ಕಾಲಕ್ಕೆ ಏನನ್ನಾದರೂ ಏರ್ಪಾಡು ಮಾಡಿಕೊಳ್ಳೋಣವೆಂದು

ನಿನ್ನನ್ನು ಬರಹೇಳಿದೆ. ನೀನು ಪುಣ್ಯವಂತ ; ದುರ್ಮತಿಯ ಮಗಳನ್ನು ಮದುವೆಯಾಗುತ್ತೀಯಂತೆ !"

"ದುರ್ಮತಿ ಯಾರು ?"

"ದುರ್ಮತಿ ಯಾರೇ ? ಓಹೋ ತಪ್ಪಿದೆ. ಶ್ರೀಮಂತ ಧಾನ್ಯಾಗಾರಪತಿ ದುರ್ಮತಿಗಳ ಕುಮಾರಿಯೆಂದು ಹೇಳಬೇಕಾಗಿದ್ದಿತೇನೋ ? ಹಿಂದೆ ಒಂದಾನೊಂದು ಕಾಲದಲ್ಲಿ ಅವನೂ ನಾನೂ ಸ್ನೇಹಿತರಾಗಿದ್ದೆವು. ಆಗ ರಾಜಸಿಂಹನಿಗೂ ಅವನಿಗೂ ನನ್ನ ಆಶ್ರಯ ಬೇಕಾಗಿದ್ದಿತು. ನಾನೇನು ಸಾಧಾರಣದವನೆಂದು ತಿಳಿದೆಯೋ ? ನನಗೂ ದೊಡ್ಡವರ ಸ್ನೇಹವಿದೆ. ಸ್ವಲ್ಪ ಹಣಕಾಸಿನಲ್ಲಿ ಅನುಕೂಲವಾಗಿದ್ದಿದ್ದರೆ ನಾನೂ ನಿನ್ನಂತೆ ಅವರ ಜತೆಯಲ್ಲಿ ಓಡಾಡಬಹುದಾಗಿದ್ದಿತು."

"ಕದರ್ಥಕ, ನಿನಗೆ ಹೊಟ್ಟೆಯಕಿಚ್ಚು ಹೆಚ್ಚಾಯಿತು."

"ನನಗೆ ಹೊಟ್ಟೆಯಕಿಚ್ಚೇ ?"

"ಅಹುದು, ಈಗ ಎರಡು ತಿಂಗಳ ಹಿಂದೆ ಅನ್ನಕ್ಕೆ ಮಾರ್ಗವಾದರೆ ಸಾಕೆಂದು ಹೇಳುತ್ತಿದ್ದೆ ; ಅದಕ್ಕೆ ಅನುಕೂಲವಾಯಿತು. ಆಮೇಲೆ ತಿಂಗಳಿಗೆ ಇನ್ನೂರು ವರಹಗಳು ಸಿಕ್ಕಿದರೆ ಸಾಕು, ನೆಮ್ಮದಿಯಾಗಿರುತ್ತೇನೆ ಎನ್ನುತ್ತಿದ್ದೆ ; ಅದಾಯಿತು ; ಈಗ ಅದೂ ಸಾಲದು ಎಂದು ನನ್ನನ್ನು ನೋಡಿ ಹೊಟ್ಟೆಯಕಿಚ್ಚುಪಡುತ್ತೀಯೆ ; ಎಷ್ಟು ಕೊಟ್ಟರೆ ತಾನೇ ನಿನಗೆ ತೃಪ್ತಿಯಾದೀತು ?"

"ಭದ್ರದತ್ತ, ಕೋಪಮಾಡಬೇಡವಪ್ಪ" ಎಂದು ಕದರ್ಥಕನು ಹೇಳುತ್ತಲೆ ಅನಂತರಾಜುವಿಗೆ ಭಯವುಂಟಾಗಿ ಮಾತು ಹೊರಡದೆ ಹೋಯಿತು.

"ಅಪ್ಪಾ ಅನಂತರಾಜು, ನಾನೊಂದು ಯೋಚನೆಯನ್ನು ಹೇಳುತ್ತೇನೆ, ಕೇಳು. ಅದರಂತೆ ಏರ್ಪಾಡು ಮಾಡು."

ಕದರ್ಥಕನು ಯೋಚನೆ ಎಂದರೆ ಬೀಜಾವಾಪವಾಯಿತೆಂದೂ, ಏರ್ಪಾಡೆಂದರೆ ಫಲ ಕೈಗೆ ಬಂದಿತೆಂದೂ ಅನಂತರಾಜುವು ಬಲ್ಲನು. ಅದಕ್ಕಾಗಿಯೇ, ಕದರ್ಥಕನು ಯೋಚನೆ, ಏರ್ಪಾಡು ಎನ್ನುತ್ತಲೇ ಅನಂತರಾಜುವು ಗಾಬರಿಪಟ್ಟನು. ಆದರೂ ತನ್ನ ಚಿತ್ತವೃತ್ತಿಯನ್ನು ಅವನಿಗೆ ತೋರ್ಪಡಿಸದೆ,

"ನಿನ್ನ ಯೋಚನೆ ಏರ್ಪಾಡುಗಳಾವುವು ಹೇಳು, ನೋಡೋಣ" ಎಂದನು.

"ನಿನ್ನ ಕೈಯಿಂದ ಒಂದು ಕಾಸೂ ವೆಚ್ಚವಾಗದಂತೆ ನಾನು ಹಣಗಾರನಾಗುವುದು."

"ಅದೇನು ಹೇಳು."

"ನನಗೆ ಎಲ್ಲಿಂದಲಾದರೂ ಹದಿನೈದು ಸಾವಿರ—ತಾಳು ತಾಳು ; ನೆಮ್ಮದಿಯಾಗಿರುವುದಕ್ಕೆ ಹದಿನೈದು ಸಾವಿರ ಸಾಲದು; ಮೂವತ್ತುಸಾವಿರ—ವರಹಗಳನ್ನು ನೀನು ತಂದು ಕೊಟ್ಟರೆ ಎಲ್ಲಿಗಾದರೂ ದೂರ ದೇಶಕ್ಕೆ ಹೋಗಿ ಅದನ್ನು

ಬಂಡವಾಳವಾಗಿಟ್ಟುಕೊಂಡು ನೆಮ್ಮದಿಯಾಗಿ ಜೀವನ ಮಾಡಿಕೊಳ್ಳುತ್ತೇನೆ. ಅಷ್ಟು ಹಣವನ್ನು ತಂದುಕೊಡಬಲ್ಲೆಯಾ ?"

"ನಾನು ಅದನ್ನು ಎಲ್ಲಿಂದ ತರಲಿ ? ಕದ್ದುತಾನೇ ತರಬೇಕು. ಹಾಗೆ ಮಾಡಿದರೆ ನಾವಿಬ್ಬರೂ ಪುನಃ ಅಲ್ಲಿಗೆ ಹೋಗಬೇಕಾಗುವುದು."

"ನನ್ನನ್ನು ಕೇಳಿದರೆ ಅಲ್ಲಿಯ ಸ್ಥಿತಿಗೂ ಇಲ್ಲಿಯ ಸ್ಥಿತಿಗೂ ಏನೂ ವ್ಯತ್ಯಾಸವಿಲ್ಲ" ಎಂದು ಕದರ್ಥಕನು ಹೇಳಲು, ಅನಂತರಾಜುವಿಗೆ ಮತ್ತಷ್ಟು ಗಾಬರಿಯಾಯಿತು. ಅದನ್ನು ಕಂಡು ಕದರ್ಥಕನು,

"ಗಾಬರಿಯೇಕಪ್ಪ ? ನಿನ್ನಿಂದ ಆಗದಿದ್ದರೆ ಹಣ ಸಿಕ್ಕುವ ಸ್ಥಳವನ್ನಾದರೂ ಹೇಳು ; ನಾನೇ ಏರ್ಪಾಡು ಮಾಡಿಕೊಳ್ಳುತ್ತೇನೆ" ಎಂದನು.

"ಅದಕ್ಕೇನು, ಆಗಲಿ ; ಯೋಚಿಸಿ ಹೇಳುತ್ತೇನೆ."

"ಅಲ್ಲಿಯವರೆಗೆ ನನಗೆ ಐದು ನೂರು ವರಹಗಳ ಮಾಸಾಶನವನ್ನು ಕೊಡುತ್ತಾ ಇರು."

"ಅಷ್ಟು ಹಣ ಕೊಡಬೇಕಾದರೆ ನನಗೆ ಬಹಳ ಕಷ್ಟವಾಗುತ್ತದೆ."

"ಕುಬೇರರ ಮನೆಗಳಲ್ಲಿ ಓಡಾಡುತ್ತಲಿರುವ ನಿನಗೆ ಏನು ಕಡಮೆ" ಎಂದು ಕದರ್ಥಕನು ಕೇಳಲು ಅನಂತರಾಜುವಿಗೆ ಕೋಪ ಬಂದು, ಕೋಪಿಸಿಕೊಂಡರೆ ಕೆಲಸವು ಕೆಟ್ಟುಹೋದೀತು, ಬೇರೆ ಉಪಾಯವನ್ನು ಮಾಡಿ ಇವನ ತಂಟೆಯನ್ನು ತಪ್ಪಿಸಿಕೊಳ್ಳಬೇಕೆಂದು ಯೋಚಿಸಿ,

"ಅದು ನಿಜ; ನನ್ನ ರಕ್ಷಕನು ಶ್ರೀಮಂತ, ದಯಾಳು, ಅಲ್ಲದೆ ಬಹು ಧಾರಾಳಿ" ಎಂದನು.

"ಅವನು ನಿನಗೇನು ಕೊಡುತ್ತಾನೆ ?"

"ತಿಂಗಳಿಗೆ ಐದು ಸಾವಿರ ವರಹಗಳನ್ನು."

"ಅಬ್ಬಬ್ಬಾ, ಅಷ್ಟು ಹಣವನ್ನು ಕೊಡುತ್ತಾನೆಯೇ ? ಅಷ್ಟನ್ನೂ ಏನು ಮಾಡುತ್ತೀಯೆ ?"

"ವೆಚ್ಚಮಾಡುವುದು ಕಷ್ಟವೇ ? ನನಗೂ ನಿನ್ನಂತೆಯೇ ಮೂಲಧನದ ಮೇಲೆ ಆಸೆ ಹುಟ್ಟಿದೆ. ಅದು ಕೈಗೆ ಬಂದರೆ ಅನುಕೂಲ."

"ಅದು ಕೈಗೆ ಬರುವುದು ಹೇಗೆ ?"

"ನನ್ನ ರಕ್ಷಕನು ತನ್ನ ಮರಣಶಾಸನದಲ್ಲಿ ನನಗೆ ಐದು ಲಕ್ಷ ವರಹಗಳನ್ನು ಬರೆದಿಟ್ಟಿದ್ದಾನೆ. ಅವನು ಸತ್ತಮೇಲೆಯೇ ಅದು ನನ್ನ ಕೈಗೆ ಬರುವುದು."

"ಅವನಿಗೆಷ್ಟು ಆಸ್ತಿ ?"

"ಅವನಿಗಿರುವ ಆಸ್ತಿ ಅವನಿಗೇ ಗೊತ್ತಿಲ್ಲ."

"ಹಾಗೆಯೂ ಉಂಟೇ ?"

“ಅವನಿಗೆ ಗೊತ್ತಿಲ್ಲದಷ್ಟು ಹಣ ಬರುತ್ತದೆ. ಇಡುವುದಕ್ಕೆ ಸ್ಥಳವಿಲ್ಲದೆ ಮನೆಯಲ್ಲಿ ಸಿಕ್ಕಿದ ಕಡೆ ಬಿಸಾಡುತ್ತಾನೆ. ನೆನ್ನೆ ತಾನೇ ಒಂದು ಲಕ್ಷ ವರಹಗಳನ್ನು ತರಿಸಿಕೊಂಡನು.”

“ಅಷ್ಟು ಹಣಗಾರನಾಗಿದ್ದರೆ ಅವನ ಮನೆಯು ಬಲು ಸೊಗಸಾಗಿರಬಹುದು.”

“ಅದರ ಮುಂದೆ ಅರಮನೆ ತಾನೆ ಏನು ?”

“ಆಹಾ, ಅಂತಹ ಮನೆಯನ್ನು ನಾನು ನೋಡಬೇಕಲ್ಲ.”

“ನೀನು ಅದನ್ನು ನೋಡುವುದಕ್ಕೆ ಆಗುವುದಿಲ್ಲ.”

“ಅದರ ನಕ್ಷೆಯನ್ನಾದರೂ ಬರೆದುಕೊಂಡು, ನೋಡೋಣ.”

“ಅದಕ್ಕೇನು ಆಗಬಹುದು” ಎಂದು ಅನಂತರಾಜುವು ಒಂದು ಕಾಗದವನ್ನು ತೆಗೆದುಕೊಂಡು ಅಲ್ಲಿದ್ದ ಲೇಖನಿಯಿಂದ ರಾಜಾ ಮಲಯಸಿಂಹನ ಮನೆಯ ನಕ್ಷೆಯನ್ನು ಬರೆದು ಕದರ್ಥಕನಿಗೆ ಕೊಟ್ಟನು.

“ಆ ಮನೆಯ ಕಿಟಕಿಗಳು ಸಣ್ಣವೋ, ದೊಡ್ಡವೋ ?”

“ಅಂತಹ ಮನೆಗಳಿಗೆ ಸಣ್ಣ ಕಿಟಕಿಗಳನ್ನು ಎಂದಿಗೂ ಇಡರು ; ನಿನ್ನಂಥವರು ಅವುಗಳಲ್ಲಿ ಧಾರಾಳವಾಗಿ ನುಗ್ಗಬಹುದು.”

“ಮನೆಯಲ್ಲಿ ನಾಯಿಗಳುಂಟೋ ?”

“ಇಲ್ಲ. ನಿನ್ನೆಯ ದಿನ ಅವನ ಸಂಗಡ ಮಾತನಾಡುತ್ತಿದ್ದಾಗ ‘ನಾಯಿ ಇಲ್ಲದೆ ಇರುವುದರಿಂದ ನೀನಿಲ್ಲದ ವೇಳೆಯಲ್ಲಿ ಯಾರಾದರೂ ಕಳ್ಳರು ಮನೆಗೆ ನುಗ್ಗಿದರೆ ಕಷ್ಟ’ ಎಂದು ಹೇಳಿದೆ. ಅದಕ್ಕೆ ಅವನು ಅಲಕ್ಷ್ಯದಿಂದ, ‘ಹೋದರೆ ಹೋಯಿತು’ ಎಂದು ಹೇಳಿಬಿಟ್ಟನು.”

“ಅವನ ಆಳುಗಳು ಹೇಗೆ ?”

“ಅವರೆಲ್ಲರೂ ಬಹು ಯೋಗ್ಯರು. ನಮ್ಮ ಸ್ವಾಧೀನವಾಗರು.”

“ರಾಜನು ಮನೆಯನ್ನು ಯಾವಾಗಲಾದರೂ ಬಿಟ್ಟುಹೋಗುವುದು ಉಂಟೋ ?”

“ಆಗಾಗ ಸಂಪಗೆಯ ವನದ ಮನೆಗೆ ಹೋಗುತ್ತಾನೆ. ಅಲ್ಲದೆ ಕೆಲವು ದಿನಗಳು ಅಲ್ಲಿಯೇ ನಿಂತುಬಿಡುವುದುಂಟು.”

“ಅದು ನಿನಗೆ ಹೇಗೆ ಗೊತ್ತು ?”

“ನಾಳೆಯ ದಿನದಿಂದ ಮೂರು ದಿವಸಗಳು ಅಲ್ಲಿಯೇ ಇರುವುದಾಗಿ ಏರ್ಪಾಡು ಮಾಡಿಕೊಂಡು ನನ್ನನ್ನು ಅಲ್ಲಿಗೆ ಊಟಕ್ಕೆ ಬರಹೇಳಿದ್ದಾನೆ” ಎಂದು ಅನಂತರಾಜುವು ಹೊರಡುವ ಪ್ರಯತ್ನಮಾಡಿ ""ನಿನಗೆ ಐದು ನೂರು ವರಹಗಳು ಯಾವಾಗ ಬೇಕಾಗುತ್ತೆ ?” ಎಂದು ಕೇಳಿದನು.

“ಈಗಲೇ ಬೇಕು.”

"ಇಗೋ ತೆಗೆದುಕೋ" ಎಂದು ಅವನಿಗೆ ತಾನು ತಂದಿದ್ದ ಹಣವನ್ನು ಕೊಟ್ಟು ಹೊರಟಾಗ "ಭದ್ರದತ್ತ ನನಗೊಂದು ಉಪಕಾರ ಮಾಡಬೇಕು" ಎಂದನು.

"ಅದೇನು ಹೇಳು ನೋಡೋಣ."

"ಕುದುರೆಯವನ ಉಡುಪನ್ನು ಉಟ್ಟು ಬೆರಳಲ್ಲಿ ಅಷ್ಟು ಬೆಲೆಯುಳ್ಳ ವಜ್ರದ ಉಂಗುರವನ್ನು ಹಾಕಿಕೊಂಡು ಬೀದಿಯಲ್ಲಿ ಹೋದರೆ ನೋಡಿದವರು ಏನೆನ್ನುವರು ? ಅದನ್ನು ಇಲ್ಲಿ ಇಟ್ಟು ಹೋಗು; ಬೇಕಾದಾಗ ಕೇಳು, ಕೊಟ್ಟುಬಿಡುತ್ತೇನೆ" ಎಂದು ಕದರ್ಥಕನು ಹೇಳಲು ಅನಂತರಾಜುವು ಸದ್ದಿಲ್ಲದೆ ಉಂಗುರವನ್ನು ತೆಗೆದುಕೊಟ್ಟು ಹೊರಟು ಹೋದನು.

ಅವನು ಹೊರಟುಹೋದ ತರುವಾಯ ಕದರ್ಥಕನು ಕೊಠಡಿಯ ಬಾಗಿಲನ್ನು ಮುಚ್ಚಿಕೊಂಡು ಒಳಗೆ ಕುಳಿತು ಉಂಗುರದಲ್ಲಿರುವುದು ನಿಜವಾದ ವಜ್ರವೋ ಅಲ್ಲವೋ ಎಂದು ಗಾಜಿನ ಮೇಲೆ ಗೀಚಿ ನೋಡಿ ಸರಿಯಾದ ವಜ್ರವೆಂದು ದೃಢಪಡಿಸಿಕೊಂಡು, ಶತ್ರುಗಳನ್ನು ಜಯಿಸಲಿಚ್ಛೆಯುಳ್ಳ ಸೇನಾಪತಿಯು ಅವರ ದುರ್ಗದ ನಕ್ಷೆಯನ್ನು ಚೆನ್ನಾಗಿ ಪರೀಕ್ಷಿಸಿ ನೋಡುವಂತೆ ರಾಜಾ ಮಲಯಸಿಂಹನ ಮನೆಯ ನಕ್ಷೆಯನ್ನು ಪರೀಕ್ಷಿಸಿ ನೋಡಿ ಭದ್ರದತ್ತನಿಗೆ ಐದು ಲಕ್ಷ ವರಹಗಳು ಜಾಗ್ರತೆಯಾಗಿ ಕೈ ಸೇರುವಂತೆಯೂ ನನಗೂ ಅಷ್ಟು ಬಂಡವಾಳವಾಗುವಂತೆಯೂ ಮಾಡುತ್ತೇನೆ ಎಂದುಕೊಂಡನು.

ಮಾರನೆಯ ದಿನ ಬೆಳಗ್ಗೆ ಭದ್ರಕನು ರಾಜಾ ಮಲಯಸಿಂಹನ ಬಳಿಗೆ ಬಂದು "ಮಹಾಸ್ವಾಮೀ, ತಮ್ಮಪ್ಪಣೆಯಾದಂತೆ ಸಮುದ್ರ ತೀರದಲ್ಲಿ ಎರಡು ಗ್ರಾಮಗಳನ್ನು ಕೊಂಡು ಅಲ್ಲಿ ವಾಸಮಾಡಲು ಅನುಕೂಲವಾಗಿರುವಂತೆ ಒಂದು ದೊಡ್ಡ ಮನೆಯನ್ನು ಕಟ್ಟಿಸಿ, ಕೊಲ್ಲಿಯಲ್ಲಿ ನಮ್ಮ ಹಡಗುಗಳನ್ನು ಸಿದ್ಧಪಡಿಸಿ, ಅಲ್ಲಿಂದ ಇಲ್ಲಿಗೆ ಕುದುರೆ ಟಪ್ಪೆಗಳನ್ನು ಇಡಿಸಿ ಬಂದೆನು" ಎಂದು ತಿಳಿಸಲು, ರಾಜನು ಸಂತೋಷಪಟ್ಟು "ನಮ್ಮ ಕುದುರೆಗಳನ್ನೆಲ್ಲಾ ಸಂಪಗೆಯ ವನದ ಮನೆಗೆ ತೆಗೆದುಕೊಂಡು ಹೋಗು ; ಇನ್ನು ಸ್ವಲ್ಪ ಹೊತ್ತಿಗೆ ನಾನೂ ಬರುತ್ತೇನೆ. ಅವುಗಳಲ್ಲಿ ವೇಗಶಾಲಿಗಳಾದ ನಾಲ್ಕು ಕುದುರೆಗಳನ್ನು ಯಾವಾಗಲೂ ಸಿದ್ಧವಾಗಿಡುವಂತೆ ಏರ್ಪಾಡುಮಾಡು" ಎಂದನು.

ಭದ್ರಕನು ಅತ್ತ ಹೋದ ಕೂಡಲೇ ಭೈರವನು ರಾಜನಿಗೆ ಒಂದು ಲೇಖನವನ್ನು ತೆಗೆದುಕೊಟ್ಟನು. ಅದನ್ನು ರಾಜನು ಬಿಚ್ಚಿನೋಡಲು ಈ ರೀತಿ ಬರೆದಿದ್ದಿತು.

"ರಾಜರಲ್ಲಿ ವಿಜ್ಞಾಪನೆ :—

ಈ ರಾತ್ರಿ ಒಬ್ಬನು ನಿಮ್ಮ ಮನೆಗೆ ನುಗ್ಗಿ ಬೆಲೆಬಾಳುವ ಕಾಗದಗಳನ್ನು ಅಪಹರಿಸಬೇಕೆಂದಿದ್ದಾನೆ. ನೀವು ಪೊಲೀಸಿನವರಿಗೆ ವರ್ತಮಾನ ಕೊಟ್ಟರೆ ಕೆಲಸವು ಕೆಟ್ಟುಹೋಗುವುದು. ನಿಮ್ಮ ಧೈರ್ಯ ಶೌರ್ಯ ಸಾಹಸಗಳಿಗೆ ಎಣೆಯಿಲ್ಲವೆಂದು ಬಲ್ಲೆನು.

ಆದುದರಿಂದ ಆಳುಗಳನ್ನು ಇಟ್ಟುಕೊಳ್ಳದೆ ತಾವು ಒಬ್ಬರೇ ಕಾದಿದ್ದರೆ ಬರುವವನು ಇಂಥವನೆಂದು ತಿಳಿಯಬರುವುದು."

ಹೀಗೆಂದಿದ್ದ ಕಾಗದವನ್ನು ಓದಿ ನೋಡಿ, ಯಾವನೋ ಯಾವುದೋ ಅಪಾಯ ಬರುವುದೆಂದು ಸೂಚಿಸಿ ನನ್ನನ್ನು ತುಂಬ ಅಪಾಯದಲ್ಲಿ ಸಿಕ್ಕಿಸಬೇಕೆಂದು ಈ ಹೂಟವನ್ನು ಹೂಡಿರಬಹುದೆಂದು ತಿಳಿದು ಆ ಲೇಖನವನ್ನು ಪೋಲೀಸು ಅಧಿಕಾರಿಗೆ ಕಳುಹಿಸಿಕೊಡಬೇಕೆಂದುಕೊಂಡು, ಹಾಗೆಯೇ ಆಲೋಚನೆಮಾಡಿ "ಅವರು ನನ್ನ ಪತ್ರಗಳನ್ನು ಕದಿಯಲಿಕ್ಕೆ ಬರಲಾರರು ; ಬಹುಶಃ ನನ್ನನ್ನು ಕೊಲ್ಲಬೇಕೆಂದು ಬಂದಾರು. ಆದುದರಿಂದ ಪೋಲೀಸು ಅಧಿಕಾರಿಗೆ ತಿಳಿಸಿ ಪ್ರಯೋಜನವಿಲ್ಲ. ಅವನು ನಿಜವಾಗಿಯೂ ಶತ್ರುವಾಗಿದ್ದರೆ ನಾನೇ ಅವನನ್ನು ಏತಕ್ಕೆ ಶಿಕ್ಷಿಸಬಾರದು ?' ಎಂದುಕೊಂಡು ಭೈರವನನ್ನು ಕೂಗಿ "ಎಲಾ, ನೀವೆಲ್ಲರೂ ಈಗಲೇ ಸಂಪಗೆಯ ವನದ ಮನೆಗೆ ನಡೆಯಿರಿ. ಈ ರಾತ್ರಿ ಅಲ್ಲಿಯೇ ಊಟಮಾಡಿಕೊಂಡು ಮಲಗಿಕೊಳ್ಳಿರಿ" ಎಂದು ಅಪ್ಪಣೆಮಾಡಲು, ಭೈರವನು "ಹಾಗಾದರೆ ಇಲ್ಲಿ ರಾತ್ರಿ ಯಾರಿರಬೇಕು ?" ಎಂದು ಕೇಳಿದನು.

"ಕಾವಲುಗಾರನೊಬ್ಬನಿದ್ದರೆ ಸಾಕು."

"ಮಹಾಸ್ವಾಮೀ, ಕಾವಲುಗಾರನಿರುವ ಸ್ಥಳಕ್ಕೂ ಮನೆಗೂ ಬಹುದೂರ ; ಒಂದು ವೇಳೆ ಮನೆಗೆ ಕಳ್ಳರು ಬಿದ್ದರೆ ಅವನಿಗೆ ಸಮಾಚಾರವೇ ತಿಳಿಯುವುದಿಲ್ಲ."

"ಅದೆಲ್ಲಾ ನಿನಗೇಕೆ ? ನಾನು ಹೇಳಿದಂತೆ ಮಾಡು, ನಡೆ" ಎಂದು ಗದ್ದರಿಸಿಕೊಳ್ಳಲು, "ಅಪ್ಪಣೆ" ಎಂದು ಹೊರಟುಹೋದನು.

ಆ ಮಧ್ಯಾಹ್ನವೇ ಎಲ್ಲರೂ ಸಂಪಗೆಯ ವನದ ಮನೆಗೆ ಹೋದರು. ಇನ್ನೂ ಬೆಳಕಿರುವಾಗಲೇ ರಾಜನೂ ಹೊರಟನು. ಹೊರಡುವುದಕ್ಕೆ ಮುಂಚೆ ಅವನು ಕೆಳಗಣ ಕಿಟಕಿಗಳ ಮರದ ಕದಗಳನ್ನೂ ಮಹಡಿಯ ಕಿಟಕಿಗಳ ಕನ್ನಡಿಯ ಕದಗಳನ್ನೂ ಮುಚ್ಚಿ, ಎಲ್ಲಾ ಬಾಗಿಲುಗಳಿಗೂ ಬೀಗ ಹಾಕಿಕೊಂಡನು. ಅಲ್ಲಿ ರಾತ್ರಿಯ ಊಟಮಾಡಿಕೊಂಡು ವಾಮನಭಟ್ಟನನ್ನು ಜತೆಯಲ್ಲಿ ಕರೆದುಕೊಂಡು ಯಾರಿಗೂ ತಿಳಿಯದಂತೆ ಹೊರಟು ತನ್ನ ಮನೆಗೆ ಬಂದು, ಸುತ್ತಲೂ ನೋಡಿ ಯಾರೂ ಇಲ್ಲದಿರುವುದನ್ನು ಕಂಡು ತೋಟದ ಸಣ್ಣ ಬೀಗವನ್ನು ತೆಗೆದು ಒಳಕ್ಕೆ ಹೋಗಿ ಪುನಃ ಬಾಗಿಲಿಗೆ ಬೀಗ ಹಾಕಿ, ಕಾವಲುಗಾರನಿಗೆ ತಿಳಿಯದಂತೆ ಮನೆಯ ತಲೆಬಾಗಿಲನ್ನು ತೆರೆದುಕೊಂಡು ಒಳಹೊಕ್ಕು ಮಲಗುವ ಕೊಠಡಿಯನ್ನು ಸೇರಿದನು.

ಅಂದು ಅಮಾವಾಸ್ಯೆ ; ಅಂಧಕಾರವು ಗಾಢವಾಗಿ ಕವಿದಿದ್ದಿತು. ರಾಜನು ಹದಿನಾಲ್ಕು ವರ್ಷ ಅಂಧಕೂಪದಲ್ಲಿದ್ದು ಪಾಠವಾಗಿದ್ದುದರಿಂದಲೂ, ವಾಮನಭಟ್ಟನು ಬಾಲ್ಯದಲ್ಲಿ ಕಾಡಿನೊಳಗೆ ರಾತ್ರಿಯೂ ಹಗಲೂ ವಿಶೇಷ ಸಂಚಾರಮಾಡಿದ್ದುದರಿಂದಲೂ, ಅವರಿಬ್ಬರಿಗೂ ಕತ್ತಲಲ್ಲಿ ಚೆನ್ನಾಗಿ ಕಣ್ಣು ಕಾಣುತ್ತಲಿದ್ದಿತು. ಇಬ್ಬರೂ ಬೀದಿಯನ್ನು ನೋಡುತ್ತ ಕುಳಿತಿದ್ದರು. ರಾತ್ರಿ ಒಂದು ಗಂಟೆಯವರೆಗೆ ಯಾರ ಸುಳಿವೂ ತೋರಲಿಲ್ಲ. ಒಂದು

ಗಂಟೆ ಹೊಡೆದ ಮೇಲೆ ರಾಜನು ಕುಳಿತಿದ್ದ ಪಕ್ಕದ ಕೋಣೆಯಲ್ಲಿ ಏನೋ ಸದ್ದಾಯಿತು. ರಾಜನು ಕಿವಿಗೊಟ್ಟು ಕೇಳಲು ಯಾರೋ ಕನ್ನಡಿಯನ್ನು ಕುಯ್ಯುವಂತೆ ತಿಳಿಯಿತು. ಆಗ ಅವನು ವಾಮನಭಟ್ಟನಿಗೆ ಜಾಗರೂಕನಾಗಿರೆಂದು ಸಂಜ್ಞೆಮಾಡಿ ಎಷ್ಟು ಜನ ಬಂದಿರುವರೆಂದು ಬೀದಿಯನ್ನು ನೋಡಲು ಯಾವನೋ ಒಬ್ಬನು ಮಾತ್ರ ಬೀದಿಯ ಕೊನೆಯಲ್ಲಿ ಕಾದಿರುವುದನ್ನು ಕಂಡನು. 'ಬಂದಿರುವರು ಇಬ್ಬರೇ ; ಒಬ್ಬನು ನೂಲೇಣಿಯನ್ನು ಹಾಕಿ ಮೇಲಕ್ಕೆ ಹತ್ತಿ ಒಳಗೆ ನುಗ್ಗುವುದಕ್ಕಾಗಿ ಕಿಟಕಿಯ ಕನ್ನಡಿಯನ್ನು ಕುಯ್ಯುತ್ತಿದ್ದಾನೆ. ಮತ್ತೊಬ್ಬನು ಬೀದಿಯಲ್ಲೇ ಕಾದಿದ್ದಾನೆ. ಒಳಕ್ಕೆ ಬರುವವನು ಏನು ಮಾಡುತ್ತಾನೆಯೋ ನೋಡೋಣ' ಎಂದುಕೊಂಡು ಆ ಕೋಣೆಯ ಬಾಗಿಲ ಕಿಂಡಿಯಲ್ಲಿ ನೋಡುತ್ತಲಿದ್ದನು.

ಮನೆಗೆ ನುಗ್ಗಿದವನು ಕಿಟಕಿಯ ಕನ್ನಡಿಯು ಕೆಳಗೆ ಬಿದ್ದರೆ ಸದ್ದಾಗುವುದೆಂದು ಅದನ್ನು ಉಪಾಯವಾಗಿ ತೆಗೆದು, ಕಿಂಡಿಯಿಂದ ಒಳಕ್ಕೆ ಕೈಹಾಕಿ ಬಾಗಿಲ ಚಿಲಕವನ್ನು ತೆರೆದು ಕೊಠಡಿಯೊಳಕ್ಕೆ ಇಳಿದನು. ಸ್ವಲ್ಪಹೊತ್ತು ಸುತ್ತಮುತ್ತ ನೋಡಿ ಮನೆಯೊಳಗೆ ಯಾರೂ ಇಲ್ಲವೆಂದು ಧೈರ್ಯ ಮಾಡಿಕೊಂಡು, ತನ್ನ ಸೊಂಟದಿಂದ ಬೀಗದ ಕೈ ಗೊಂಚಲನ್ನು ತೆಗೆದುಕೊಂಡನು. ಆ ಸದ್ದನ್ನು ಕೇಳಿ ರಾಜನು ಇವನು ಬರಿಯ ಕಳ್ಳ ; ಪ್ರಾಣ ತೆಗೆಯುವುದಕ್ಕಾಗಿ ಬಂದಿಲ್ಲ ಎಂದುಕೊಂಡು ನೋಡುತ್ತಲಿದ್ದನು. ಕಳ್ಳನು ಅಲ್ಲಿದ್ದ ದೊಡ್ಡ ಪೆಟ್ಟಿಗೆಯ ಬೀಗವನ್ನು ತೆಗೆಯಬೇಕೆಂದು ಸರಿಯಾದ ಬೀಗದ ಕೈಯನ್ನು ಹುಡುಕುತ್ತಿದ್ದನು. ಸರಿಯಾದ ಬೀಗದಕೈ ಸಿಕ್ಕಲಿಲ್ಲವಾಗಿ ಅವನು ಅಂಗಿಯ ಜೇಬಿಗೆ ಕೈಹಾಕಿ ಯಾವುದನ್ನೋ ತೆಗೆದು ಅದರ ಹಿಡಿಯನ್ನು ಬಲವಾಗಿ ಒತ್ತಲು ಒಂದು ಮಂದವಾದ ಬೆಳಕು ಹೊರಟಿತು. ಅದರಿಂದ ರಾಜನು ಕಳ್ಳನ ಮುಖವನ್ನು ಕಂಡು "ಓಹೋ, ಇವನೇ ? ಚಿಂತೆಯಿಲ್ಲ' ಎಂದು ಕೊಂಡನು.

ಪಕ್ಕದ ಕೋಣೆಯ ಬೆಳಕನ್ನು ಕಂಡು, ವಾಮನಭಟ್ಟನು ತನ್ನ ಕೈ ಕೊಡಲಿಯನ್ನು ಸಿದ್ಧಮಾಡಿಕೊಳ್ಳಲು, ರಾಜನು ಸುಮ್ಮನಿರೆಂದು ಸನ್ನೆ ಮಾಡಿ, ಬೇಗ ಬೇಗ ಉಟ್ಟ ಬಟ್ಟೆಗಳನ್ನು ತೆಗೆದು ಒಂದು ಉಕ್ಕಿನ ಕವಚವನ್ನು ತೊಟ್ಟು, ಅದರ ಮೇಲೆ ಸನ್ಯಾಸಿಯ ಉಡುಪನ್ನು ಹಾಕಿಕೊಂಡು, ಗಡ್ಡ ಮೀಸೆಗಳನ್ನು ಕಟ್ಟಿಕೊಂಡನು. ಬೀದಿಯಲ್ಲಿ ನಿಂತಿದ್ದವನು ಏನು ಮಾಡುತ್ತಾನೆಂದು ನೋಡಲು. ಅವನು ಒಂದು ಕಡೆ ಕುಳಿತು ಅಲ್ಲಿ ತಿರುಗಾಡುವವರನ್ನು ಲಕ್ಷ್ಯಮಾಡದೆ ತನ್ನ ಮನೆಗೆ ಬಿದ್ದ ಕಳ್ಳನ ಜಾಡೆಯನ್ನೇ ನೋಡುತ್ತಿದ್ದನು. ಅದನ್ನು ಕಂಡು ರಾಜನು ನಸುನಕ್ಕು, "ನಾನು ಕೂಗಿದ ಕೂಡಲೇ ಸಿದ್ಧವಾಗಿ ಬಾ" ಎಂದು ವಾಮನಭಟ್ಟನಿಗೆ ಸನ್ನೆಮಾಡಿ ಒಂದು ಲಾಂದರವನ್ನು ಹೊತ್ತಿಸಿಕೊಂಡು ಕಳ್ಳನಿದ್ದ ಕೋಣೆಯ ಬಾಗಿಲನ್ನು ಸದ್ದಿಲ್ಲದೆ ತೆರೆದು, ಲಾಂದರದ ಮುಚ್ಚಳವನ್ನು ತೆಗೆದು ಆ ಕೋಣೆಯನ್ನೆಲ್ಲ ಬೆಳಕಿನಿಂದ ತುಂಬಿಸಿದನು. ಅದನ್ನು ಕಂಡು ಕಳ್ಳನಿಗೆ ಪರಮಾಶ್ಚರ್ಯವಾಗಿ ತನ್ನ ಕೆಲಸವನ್ನು ಬಿಟ್ಟು ಎದ್ದು ಬೆಳಕಿನ ಕಡೆಗೆ ತಿರುಗಿದನು.

# ೫೭
# ಬೆನ್ನ ಬಿಡದ ವಿಧಿ

ಕಳ್ಳನು ಅತ್ತಕಡೆ ತಿರುಗಿ ನೋಡಿದಾಗ ರಾಜನು "ಓಹೋ ಕದರ್ಥಕರೇ, ಇಷ್ಟು ಹೊತ್ತಿನಲ್ಲಿ ಇಲ್ಲಿ ಏನು ಮಾಡುತ್ತಿದ್ದೀರಿ ?" ಎಂದನು.

"ನಿರ್ಮಲಾನಂದರು ! ನಿರ್ಮಲಾನಂದರು ! ಬಾಗಿಲನ್ನು ಹಾಕಿರುವಾಗ ಇವರು ಹೇಗೆ ಬಂದರು ?" ಎಂದು ಆಶ್ಚರ್ಯಪಡುತ್ತ ಕದರ್ಥಕನು ಸ್ತಂಭೀಭೂತನಾಗಿ ಕೈಯ್ಯಲ್ಲಿದ್ದ ಬೀಗದ ಕೈಯ ಗೊಂಚಲನ್ನು ತೊಪ್ಪನೆ ಕೆಳಗೆ ಹಾಕಿದನು. ರಾಜನು ಕಿಟಕಿಗೂ ಕುರ್ಥಕನಿಗೂ ನಡುವೆ ನಿಂತು,

"ನಾನೇ ನಿರ್ಮಲಾನಂದನು. ನಿನ್ನ ಜ್ಞಾಪಕಶಕ್ತಿಯು ಇನ್ನೂ ಚೆನ್ನಾಗಿ ಇದೆ. ನೀನು ನನ್ನನ್ನು ಕಂಡು ಹತ್ತು ವರ್ಷಗಳಾಗಿದ್ದರೂ ಮುಖವನ್ನು ಕಂಡ ಒಡನೆಯೇ ನನ್ನ ಗುರುತು ಹಿಡಿದೆ. ರಾಜಾ ಮಲಯಸಿಂಹನ ಮನೆಯಲ್ಲಿ ಕಳ್ಳತನ ಮಾಡುವುದಕ್ಕೆ ಬಂದೆಯೋ ?" ಎಂದು ಕೇಳಿದನು.

"ಸ್ವಾಮೀ ಆನಂದರೇ, ಸತ್ಯವಾಗಿಯೂ ನನಗೆ ತಿಳಿಯದು."

"ಕನ್ನಡಿಯನ್ನು ಕುಯ್ದ ಕಿಟಕಿ, ಮಸಕುಮಾಡಿದ ದೀಪ, ಬೀಗದ ಕೈ ಗೊಂಚಲು, ಅರ್ಧ ತೆರೆದ ಪೆಟ್ಟಿಗೆ, ಇವೇ ನೀನು ಏತಕ್ಕೆ ಇಲ್ಲಿಗೆ ಬಂದೆ ಎಂಬುದನ್ನು ಸೂಚಿಸುವುವು" ಎಂದು ರಾಜನು ಹೇಳಲು, ಕದರ್ಥಕನಿಗೆ ಮಾತೇ ಹೊರಡದೆ ಓಡಿಹೋಗಬೇಕೆಂದು ದಾರಿಯನ್ನು ಹುಡುಕುತ್ತಿದ್ದನು.

"ಬಂದಿಶಾಲೆಯಲ್ಲಿದ್ದವನು ಹೇಗೆ ಹೊರಗೆ ಬಂದೆ ?"

"ಸ್ವಾಮೀ, ಯಾರೋ ಒಬ್ಬ ಧರ್ಮಿಷ್ಠರು ಬಿಡಿಸಿದರು."

"ಅವರು ನಿನ್ನನ್ನು ಸೆರೆಯಿಂದ ಬಿಡಿಸಿ ಒಳ್ಳೆಯ ಪುಣ್ಯವನ್ನು ಕಟ್ಟಿಕೊಂಡರು !"

"ಸ್ವಾಮೀ, ಹೊಟ್ಟೆ ಕೆಟ್ಟುದು."

"ಎಲ್ಲಾ ಪಾತಕಿಗಳು ಹೀಗೆಯೇ ಹೇಳುವುದು."

"ದಾರಿದ್ರ್ಯ, ಮಹಾಸ್ವಾಮೀ, ದಾರಿದ್ರ್ಯದೋಷ"

"ಛೀ ! ಸುಳ್ಳು ಏಕೆ ಹೇಳುತ್ತೀಯೆ ? ದರಿದ್ರನಾದರೆ ತಿರುಪವನ್ನು ಎತ್ತು ; ಕಳ್ಳತನ ಏಕೆ ಮಾಡಬೇಕು ? ಐವತ್ತು ಸಾವಿರ ವರಹಗಳು ಬಾಳುವ ವಜ್ರದುಂಗುರವನ್ನು ನಾನು ನಿನಗೆ ಕೊಟ್ಟೆನು ; ಅದನ್ನು ಮಾರಿ ಬಂದ ಹಣದಿಂದ ನೆಮ್ಮದಿಯಾಗಿ ಜೀವಿಸದೆ ಅದರ ಜತೆಗೆ ಉಂಗುರವನ್ನೂ ಹಾರಿಸಬೇಕೆಂದು ಆ ವರ್ತಕನನ್ನು ಕೊಂದೆ. ಅದೂ ದಾರಿದ್ರ್ಯ ದೋಷವೋ ?"

"ಸ್ವಾಮೀ, ನನ್ನ ಹೆಂಡತಿಯ ಪ್ರೇರಣೆಯಿಂದ ಆ ಕೆಲಸ ನಡೆಯಿತು. ಈ ಸಾರಿ ಕ್ಷಮಿಸಿದರೆ ಮುಂದೆ ಎಂದಿಗೂ ಇಂತಹ ಕೆಲಸಕ್ಕೆ ಬಾರೆನು."

"ಆಗ ನಿನ್ನನ್ನು ಶೂಲಕ್ಕೆ ಹಾಕುತ್ತಿದ್ದರು. ಅದನ್ನು ತಪ್ಪಿಸಿದುದಕ್ಕಾಗಿ ಈಗ ನೀನು ನನ್ನ ಸ್ನೇಹಿತನಾದ ರಾಜಾ ಮಲಯಸಿಂಹನ ಮನೆಗೆ ನುಗ್ಗಿದೆ ಯಲ್ಲವೇ ?"

"ಆನಂದರೇ, ತಾವು ಒಬ್ಬರೇ ಇದ್ದೀರೋ ? ನನ್ನನ್ನು ಹಿಡಿದುಕೊಡಬೇಕೆಂದು ಪೋಲೀಸಿನವರನ್ನು ಕರೆದುಕೊಂಡು ಬಂದಿದ್ದೀರೋ ?"

"ನಾನೊಬ್ಬನೇ ಇದ್ದೇನೆ. ನೀನು ನಿಜವನ್ನು ಹೇಳಿದಲ್ಲಿ ಈ ಸಾರಿಯೂ ಬಿಟ್ಟು ಬಿಡುತ್ತೇನೆ"

ಅಗ ಕದರ್ಥಕನು ಎರಡು ಕೈಗಳನ್ನೂ ಜೋಡಿಸಿಕೊಂಡು ಆನಂದನ ಸಮೀಪಕ್ಕೆ ಬಂದು ""ಸ್ವಾಮೀ, ತಾವು ಮಹಾತ್ಮರು ; ತಮ್ಮನ್ನು ಬಿಟ್ಟರೆ ನನಗೆ ಯಾರೂ ಗತಿ ಇಲ್ಲ. ಈ ಸಾರಿಯೂ ನನ್ನನ್ನು ಬಿಟ್ಟುಕೊಟ್ಟರೆ ನಾನು ಎಂದೆಂದಿಗೂ ತಮಗೆ ಕೃತಜ್ಞನಾಗಿರುವೆನು. ಮುಂದೆ ಇಂತಹ ಕೆಲಸಗಳಿಗೆ ಎಂದಿಗೂ ಹೋಗುವುದಿಲ್ಲ" ಎಂದನು.

"ನಿನ್ನನ್ನು ಬಂದಿಶಾಲೆಯಿಂದ ಬಿಡಿಸಿದವನು ಯಾರು ?"

"ವಿಜಯಧ್ವಜರು."

"ಅವನು ಇನ್ನಾರನ್ನಾದರೂ ಬಿಡಿಸಿದನೋ ?"

"ಹುಂ. ನನ್ನ ಜತೆಯಲ್ಲಿ ಭದ್ರದತ್ತನೆಂಬುವನನ್ನೂ ಬಿಡಿಸಿದರು."

"ಆ ಭದ್ರದತ್ತನೆಲ್ಲಿದ್ದಾನೆ ?"

"ಅವನು ಒಬ್ಬ ಶ್ರೀಮಂತನ ಮಗನಾಗಿದ್ದಾನೆ."

"ಅದು ಹೇಗೆ?"

"ಅವನು ಒಬ್ಬ ಶ್ರೀಮಂತನ ಹೊಟ್ಟೆಯಲ್ಲಿ ಹುಟ್ಟಿದ ಮಗ."

"ಆ ಶ್ರೀಮಂತನ ಹೆಸರೇನು ?"

"ರಾಜಾ ಮಲಯಸಿಂಹ"

"ಏನು ? ಭದ್ರದತ್ತನು ರಾಜಾಮಲಯಸಿಂಹನ ಮಗನೇ ?" ಎಂದು ಆನಂದನು ಆಶ್ಚರ್ಯಪಡುತ್ತಲಿದ್ದಾಗ ಕದರ್ಥಕನು,

"ಮಹಾಸ್ವಾಮೀ, ಅಹುದು. ಆ ರಾಜನು ಅವನಿಗೆ ಒಬ್ಬ ತಂದೆಯನ್ನು ಏರ್ಪಡಿಸಿ ಅವರಿಬ್ಬರಿಗೂ ವರ್ಷಾಶನವನ್ನು ನಡೆಸುತ್ತಲಿದ್ದಾನೆ."

"ಹಾಗೋ ! ಭದ್ರದತ್ತನಿಗೆ ಈಗ ಯಾವ ಹೆಸರು ?"

"ಶ್ರೀಮಂತ ಅನಂತರಾಜು."

"ನನ್ನ ಸ್ನೇಹಿತ ರಾಜಾ ಮಲಯಸಿಂಹನ ಮನೆಗೆ ಬರುತ್ತ ಹೋಗುತ್ತಲಿರು ವನೋ ?"

"ಅಹುದು."

"ಅವನು ಶ್ರೀಮಂತ ದುರ್ಮತಿಗಳ ಕುಮಾರಿಯನ್ನು ಮದುವೆಯಾಗ ಬೇಕೆಂದಿದ್ದಾನೆಯಲ್ಲವೇ ?"

"ಅಹುದು ಸ್ವಾಮೀ."

"ಅವನು ಇಂಥವನೆಂದು ತಿಳಿದು ನೀನು ಏಕೆ ಸುಮ್ಮನಿದ್ದೀಯೆ ?"

"ಸ್ವಾಮೀ, ಅವನು ನನ್ನ ಜತೆಗಾರ ; ಅವನಿಗೆ ಅನುಕೂಲವಾಗುವುದಾದರೆ ಅದಕ್ಕೆ ಅಡ್ಡಿಯಾಗಿ ಬರುವುದು ನನಗೆ ಧರ್ಮವಲ್ಲ."

"ಸರಿ ಸರಿ ; ಕಳ್ಳನಿಗೆ ಕಳ್ಳ ಸಹಾಯ. ಅವನು ಇಂಥವನೆಂದು ದುರ್ಮತಿಗೆ ತಿಳಿಸುವುದೂ ನಿನ್ನ ಕೆಲಸವಲ್ಲ. ನನ್ನ ಕೆಲಸ" ಎಂದು ಆನಂದನು ಹೇಳಲು, ಕದರ್ಥಕನು,

"ಸ್ವಾಮೀ, ತಾವು ಹಾಗೆ ಮಾತ್ರ ಮಾಡಕೂಡದು" ಎಂದು ಬೇಡಿಕೊಂಡನು.

"ಏಕೆ ?"

"ತಾವು ಹಾಗೆ ಮಾಡಿದರೆ ನಮ್ಮಿಬ್ಬರ ನಾಶಕ್ಕೂ ಕಾರಣವಾಗುತ್ತದೆ."

"ನಿಮ್ಮಂಥ ಪಾಪಿಗಳಿಗೆ ಸಹಾಯ ಮಾಡುವುದು ತಪ್ಪು. ನಾನು ಈ ಸಂಗತಿಯನ್ನು ಅವರಿಗೆ ಅಗತ್ಯ ತಿಳಿಸುತ್ತೇನೆ" ಎಂದು ಆನಂದನು ಹೇಳುತ್ತಿದ್ದ ಹಾಗೆಯೇ ಕದರ್ಥಕನು ತನ್ನ ದಟ್ಟಿಯಲ್ಲಿ ಸಿಕ್ಕಿಬಿದ್ದ ಕಠಾರಿಯನ್ನು ನಿಮಿಷ ಮಾತ್ರದಲ್ಲಿ ಹಿರಿದು "ಇನ್ನು ಮೇಲೆ ತಾವು ಎಂದಿಗೂ ಹೇಳಲಾರಿರಿ" ಎಂದು ಆನಂದನ ಎದೆಯನ್ನು ತಿವಿದನು. ಕಠಾರಿಯು ಮೊನೆ ಬಗ್ಗಿ ಹಿಂದಕ್ಕೆ ಪುಟಹಾರಿ ಬರಲು ಕದರ್ಥಕನು ಆಶ್ಚರ್ಯಪಟ್ಟನು. ಆ ಕ್ಷಣವೇ ಆನಂದನು ಅವನ ಕೈಯನ್ನು ಬಲವಾಗಿ ಹಿಡಿದು ತಿರುವಿದನು. ಆ ನೋವನ್ನು ಸಹಿಸಲಾರದೆ ಕದರ್ಥಕನು ಕೂಗಿಕೊಳ್ಳುತ್ತ ಕೆಳಗೆ ಬೀಳಲು, ಆನಂದನು ಅವನ ಎದೆಯ ಮೇಲೆ ಒಂದು ಕಾಲನ್ನಿಟ್ಟು "ಎಲಾ ನೀಚ ! ಪಾಪಿ ! ನಿನ್ನನ್ನು ನಾನು ಏತಕ್ಕೆ ಕೊಲ್ಲದೆ ಬಿಡಬೇಕು ?" ಎಂದನು.

ಕೆಳಗೆ ಬಿದ್ದಿದ್ದ ಕದರ್ಥಕನು "ಬೇಡ, ಬೇಡ !" ಎಂದು ಅವನ ಕಾಲುಗಳನ್ನು ಹಿಡಿದುಕೊಂಡನು. ಆಗ ಆನಂದನು ಸ್ವಲ್ಪ ಯೋಚಿಸಿ "ಹೋಗಲಿ, ಏನು" ಎಂದು ಎದೆಯ ಮೇಲಿಟ್ಟಿದ್ದ ಕಾಲನ್ನು ತೆಗೆದನು. ಬಳಿಕ ಕದರ್ಥಕನು ಎದ್ದು, "ಅದೇನು ಕೈಯ್ಯೋ ? ಎಷ್ಟು ಬಲವೋ ? ಅಪ್ಪಪ್ಪ! ನನ್ನ ತೋಳೇ ಮುರಿದುಹೋಯಿತು" ಎಂದು ಅದನ್ನು ಸ್ವಲ್ಪ ಸ್ವಲ್ಪವಾಗಿ ನೀವಿಕೊಳ್ಳುತ್ತಲಿದ್ದನು.

"ನಿಮ್ಮಂಥ ಕ್ರೂರಜಂತುಗಳನ್ನು ಜಯಿಸಲೋಸುಗ ದೇವರು ತಕ್ಕ ಬಲವನ್ನು ನನಗೆ ಅನುಗ್ರಹಿಸಿದ್ದಾನೆ. ಆ ಪರಮದಯಾಳುವಾದ ದೇವರ ನಿಯಮವನ್ನು ನೆರವೇರಿಸುವುದಕ್ಕಾಗಿಯೇ ಈಗಲೂ ನಿನ್ನನ್ನು ಜೀವಸಹಿತ ಬಿಟ್ಟಿದ್ದೇನೆ. ಈಗ ನಾನು ಹೇಳುವಂತೆ ಒಂದು ಕಾಗದವನ್ನು ಬರೆದು ಕೊಡು" ಎಂದು ಅಲ್ಲಿ ಮೇಜಿನ ಮೇಲಿದ್ದ ಕಾಗದ, ಲೇಖನಿ, ಮಸೀ ಕುಡಿಕೆಯನ್ನು ಕೊಟ್ಟನು.

"ಮಹಾಸ್ವಾಮೀ, ನನಗೆ ಬರೆಯುವುದಕ್ಕೆ ಬಾರದು."

"ಸುಳ್ಳು, ಬರೆ" ಎಂದು ರಾಜನು ಗದ್ದರಿಸಲು ಕದರ್ಥಕನು ಬೆದರಿ ಆನಂದನು ಹೇಳಿದಂತೆ ಒಂದು ಲೇಖನವನ್ನು ಬರೆದನು. ಅದೇನೆಂದರೆ :

"ಶ್ರೀಮಂತ ಧನಾಗಾರಪತಿ ದುರ್ಮತಿಗಳ ಸಮುಕ್ಷಮುಕ್ಕೆ—

ನಿಮ್ಮ ಮನೆಗೆ ಬಂದು ನಿಮ್ಮ ಮಗಳನ್ನು ಮದುವೆಯಾಗಬೇಕೆಂದು ಅಪೇಕ್ಷಿಸುತ್ತಲಿರುವ ಅನಂತರಾಜುವೆಂಬುವನು ಶ್ರೀಮಂತನ ಮಗನಲ್ಲ. ಅವನು ನನ್ನಂತೆಯೇ ಕೊಲೆ ಮಾಡಿ ಯಾವಜ್ಜೀವವೂ ಸೆರೆಯಲ್ಲಿ ನರಳುತ್ತಿದ್ದವನು. ನಾವಿಬ್ಬರೂ ಒಂದೇ ದಿನ ಬಂದಿಶಾಲೆಯಿಂದ ತಪ್ಪಿಸಿಕೊಂಡು ಬಂದೆವು. ಅವನ ನಿಜವಾದ ಹೆಸರು ಭದ್ರದತ್ತ ಅವನ ತಂದೆತಾಯಿಗಳಾರೋ ಅವನಿಗೆ ತಿಳಿಯದು. ನಿಜವಾದ ಹೆಸರೂ ಗೊತ್ತಿಲ್ಲ."

"ಇಗೋ ಸ್ವಾಮೀ, ಬರೆದೆ."

"ರುಜು ಮಾಡು."

"ನನ್ನನ್ನು ಹಾಳುಮಾಡಿಬಿಡುತ್ತೀರಾ ?"

"ನಿನ್ನ ನಾಶವನ್ನು ಕೋರುವವನಾಗಿದ್ದರೆ ಈಗಲೇ ನಿನ್ನನ್ನು ಪೋಲೀಸಿನವರ ಕೈಗೆ ಕೊಡುತ್ತಲಿದ್ದೆ. ಅಲ್ಲದೆ ಈ ಲೇಖನವು ದುರ್ಮತಿಯ ಕೈಗೆ ಸೇರುವುದರೊಳಗಾಗಿ ನೀನು ಯಾವ ವಿಧವಾದ ಭಯವೂ ಇಲ್ಲದಂತೆ ಆಗುವೆ. ಧೈರ್ಯವಾಗಿ ರುಜು ಹಾಕು" ಎಂದು ರಾಜನು ಹೇಳಲು ಕದರ್ಥಕನು ರುಜು ಹಾಕಿ, ಧನಾಗಾರಪತಿ ದುರ್ಮತಿಗಳಿಗೆ ಎಂದು ವಿಳಾಸವನ್ನು ಬರೆದನು. ರಾಜನು ಆ ಲೇಖನವನ್ನು ತೆಗೆದಿಟ್ಟುಕೊಂಡು "ಇನ್ನು ತೊಲಗು" ಎಂದನು.

"ಹೇಗೆ ಹೋಗಲಿ ?"

"ಹೇಗೆ ಬಂದೆಯೋ ಹಾಗೆಯೇ ಹೋಗು."

"ಸ್ವಾಮೀ, ನಾನು ಕಿಟಕಿಯಿಂದ ಇಳಿಯುವಾಗ ತಾವು ನನ್ನನ್ನು ಏನು ಮಾಡುತ್ತೀರೋ."

"ನಾನು ನಿನಗೆ ಶಿಕ್ಷೆ ಮಾಡಬೇಕೆಂದಿದ್ದರೆ ಈಗಲೇ ಮಾಡುತ್ತಲಿದ್ದೆ. ನೀನು ಸುಖವಾಗಿರಬೇಕೆಂದು ನಿನಗೆ ವಜ್ರದುಂಗುರವನ್ನು ಕೊಟ್ಟೆ; ಅದನ್ನು ಮಾರಿ ಬಂದ ಹಣವನ್ನು ಇಟ್ಟುಕೊಂಡು ನೆಮ್ಮದಿಯಾಗಿರದೆ ದುರಾಸೆಯಿಂದ ಕೊಲೆಯನ್ನು ಮಾಡಿದೆ. ನನ್ನ ಸ್ನೇಹಿತ ವಿಜಯಧ್ವಜನು ದಯೆಯಿಟ್ಟು ನಿನ್ನನ್ನು ಬಂದಿಶಾಲೆಯಿಂದ ಬಿಡಿಸಿದರೆ ಇಲ್ಲಿ ಕಳ್ಳತನ ಮಾಡಲು ಬಂದೆ."

"ಸ್ವಾಮೀ, ಇದೊಂದು ಸಾರಿ ಕ್ಷಮಿಸಿ ನೋಡಿ."

"ಹಾಗೆಯೇ ಆಗಲಿ ಹೋಗು ; ನೀನು ಸುಖವಾಗಿ ನಿನ್ನ ಬಿಡಾರವನ್ನು ಸೇರಿದಲ್ಲಿ ದೇವರು ನಿನ್ನನ್ನು ಮನ್ನಿಸಿದನೆಂದು ಭಾವಿಸುತ್ತೇನೆ. ಅನಂತರ, ನಿನಗೆ ಬೇಕಾದ ಸಹಾಯವನ್ನು ನಾನು ಮಾಡಿಕೊಡುತ್ತೇನೆ."

"ತಮ್ಮಿಂದ ಯಾವ ಅಪಾಯವೂ ಉಂಟಾಗದಿದ್ದರೆ ನಾನು ಸುಖವಾಗಿ ನನ್ನ ಬಿಡಾರವನ್ನು ಸೇರುತ್ತೇನೆ."

"ಎಲಾ, ನಾನು ನಿನ್ನ ಗೋಜಿಗೆ ಬರುವುದಿಲ್ಲ, ಧೈರ್ಯವಾಗಿರು" ಎಂದು ತನ್ನ ಕೈಗಳನ್ನು ಕಟ್ಟಿಕೊಂಡು ಆನಂದನು ದೂರದಲ್ಲಿ ನಿಂತನು. ಆಗ ಕದರ್ಥಕನು ನೂಲೇಣಿಯಿಂದ ಕಿಟಕಿಯ ಮಾರ್ಗವಾಗಿ ಇಳಿದು ತೋಟದ ಗೋಡೆಯನ್ನು ಹತ್ತಿ ಬೀದಿಗೆ ದುಮ್ಮಿಕ್ಕುವ ವೇಳೆಗೆ ಸರಿಯಾಗಿ ಬೀದಿಯಲ್ಲಿ ಮೊದಲಿಂದಲೂ ಕಾಯುತ್ತಿದ್ದವನು ಸರ್‍ರೆಂದು ಓಡಿಬಂದು ತನ್ನ ಬಾಕಿನಿಂದ ಅವನ ಎದೆಯ ಮೇಲೆ ಮೂರು ನಾಲ್ಕಾವೃತ್ತಿ ಬಲವಾಗಿ ತಿವಿದನು. ಕದರ್ಥಕನು ಒಡನೆಯೇ ಜ್ಞಾನತಪ್ಪಿ ನೆಲದ ಮೇಲೆ ಬೀಳಲು ಅವನು ಸತ್ತನೆಂದು ಊಹಿಸಿ ಆ ಘಾತುಕನು ಓಡಿಹೋದನು.

ಇದನ್ನೆಲ್ಲಾ ಕಿಟಕಿಯಿಂದ ನೋಡುತ್ತಿದ್ದ ಆನಂದನು ಕೆಳಗೆ ಇಳಿದು ಕದರ್ಥಕನು ಬಿದ್ದಿದ್ದ ಸ್ಥಳಕ್ಕೆ ಲಾಂದರವನ್ನು ತೆಗೆದುಕೊಂಡು ವಾಮನಭಟ್ಟನ ಜತೆಯಲ್ಲಿ ಬಂದನು. ಆ ವೇಳೆಗೆ ಅವನಿಗೆ ಜ್ಞಾನ ಬಂದು "ಅಯ್ಯೋ ಯಾರೂ ದಿಕ್ಕಿಲ್ಲವೇ? ನನ್ನನ್ನು ಕೊಂದು ಓಡಿಹೋದನಲ್ಲಾ !" ಎಂದು ದೀನಸ್ವರದಿಂದ ಕೂಗಿಕೊಂಡನು. "ಏನು ಸಮಾಚಾರ?" ಎಂದು ಆನಂದನು ಕೇಳಲು ಕದರ್ಥಕನು "ಏನು ಗಾಯ ! ಎಷ್ಟು ರಕ್ತ ! ನನ್ನ ಪರಿಣಾಮವು ಇಂದಿಗೆ ಮುಗಿಯಿತು" ಎಂದು ಪುನಃ ಮೂರ್ಛಿತನಾದನು. ಆಗ ಆನಂದನು ಕಾವಲುಗಾರನನ್ನು ಕೂಗಿ ಸಮೀಪದಲ್ಲಿರುವ ವೈದ್ಯನನ್ನು ಕರೆದುಕೊಂಡು ಬರುವಂತೆ ಅಪ್ಪಣೆ ಮಾಡಿ ವಾಮನಭಟ್ಟನಿಂದ ಕದರ್ಥಕನ ಮೈಯ ಮೇಲಿದ್ದ ಬಟ್ಟೆಯನ್ನು ತೆಗೆಯಿಸಿ ಗಾಯವನ್ನು ನೋಡಿ ಇವನು ಬದುಕುವುದಿಲ್ಲ ಎಂದುಕೊಂಡು ನ್ಯಾಯಾಧಿಪತಿ ವಲ್ಲಭದೇವನನ್ನು ಕರೆದುಕೊಂಡು ಬಾರೆಂದು ವಾಮನಭಟ್ಟನನ್ನು ಕಳುಹಿಸಿದನು.

"ಅಯ್ಯೋ ! ಇವನಿಗಾದ ಸಹಾಯಕ್ಕೆ ಇವನು ಎಷ್ಟೋ ನೆಮ್ಮದಿಯಾಗಿರಬಹುದಾಗಿದ್ದಿತು. ಬೆನ್ನು ಬಿಡದು ವಿಧಿ ಎಂಬುದು ಸುಳ್ಳಲ್ಲ" ಎಂದು ಆನಂದನು ಯೋಚಿಸುತ್ತಿದ್ದಾಗ ಕದರ್ಥಕನು ಪುನಃ ಕಣ್ಣುಬಿಟ್ಟು

"ಸ್ವಾಮೀ ಆನಂದರೇ, ನಾನೇನೂ ಬದುಕುವುದಿಲ್ಲ. ನನ್ನ ಕೊಂದ ಆ ಘಾತಕನ ವಿಷಯದಲ್ಲಿ ನನ್ನ ಅರಿಕೆಯೊಂದಿದೆ. ಅದನ್ನು ತಾವು ಅಗತ್ಯ ನ್ಯಾಯಾಧಿಪತಿಗಳಿಗೆ ತಿಳಿಸಬೇಕು."

"ಅವರಿಗೆ ಹೇಳಿ ಕಳುಹಿಸಿದ್ದೇನೆ."

"ಅಯ್ಯೋ ! ಅವರು ಎಷ್ಟು ಹೊತ್ತಿಗೆ ಬರುತ್ತಾರೋ ? ಅದರೊಳಗಾಗಿಯೇ ನನ್ನ ಪ್ರಾಣವು ಹೋಗುವಂತಿದೆ. ಮೊದಲು ಒಬ್ಬ ವೈದ್ಯನನ್ನು ಕರೆಸಿ."

"ಅವನಿಗೂ ಹೇಳಿ ಕಳುಹಿಸಿದ್ದೇನೆ."

"ಆ ಪಾಪಿ ಅನ್ಯಾಯವಾಗಿ ನನ್ನನ್ನು ಕೊಂದ."

"ಅವನಾರು ಬಲ್ಲೆಯಾ ?"

"ಭದ್ರದತ್ತ ನಾನು ಇಲ್ಲಿ ಕಳವು ಮಾಡಬಂದರೆ ರಾಜನನ್ನು ನಾನು ಕೊಲ್ಲುವೆನೋ ಅಥವಾ ಅವನು ನನ್ನನ್ನು ಕೊಲ್ಲುವನೋ, ಹೇಗಾದರೂ ತನಗೆ ಅನುಕೂಲವೆಂದು ಯೋಚಿಸಿ, ನನಗೆ ಈ ಮನೆಯ ನಕ್ಷೆಯನ್ನು ಕೊಟ್ಟು, ಎರಡೂ ಆಗದೆ ನಾನಿಳಿದು ಬಂದುದನ್ನು ಕಂಡು ನನ್ನನ್ನು ಈ ರೀತಿ ಕೊಂದಿದ್ದಾನೆ."

"ಅದು ಹೇಗೆ ಅವನಿಗನುಕೂಲ ?"

"ತಾನು ರಾಜನ ಮಗನಾದುದರಿಂದ ರಾಜನನ್ನು ನಾನು ಕೊಂದರೆ ಅವನ ಆಸ್ತಿಯೆಲ್ಲಾ ತನಗೆ ಬರುವುದೆಂದೂ, ರಾಜನು ನನ್ನನ್ನು ಕೊಂದರೆ ನನ್ನಿಂದ ತನಗೆ ಯಾವ ತೊಂದರೆಯೂ ಉಂಟಾಗದೆಂದೂ ಅವನ ಯೋಚನೆ, ಅಯ್ಯೋ, ಯಾರೂ ಬರಲಿಲ್ಲವಲ್ಲಾ ! ನನ್ನ ಪ್ರಾಣವು ಹೋಗುವಂತೆ ಇದೆ" ಎಂದು ಕೂಗಿಕೊಂಡನು. ಆಗ ಆನಂದನು ತನ್ನ ಜೇಬಿನಲ್ಲಿದ್ದ ಸಣ್ಣ ಸೀಸೆಯನ್ನು ತೆಗೆದು ಎರಡು ತೊಟ್ಟು ದ್ರಾವಕವನ್ನು ಅವನ ಬಾಯಿಗೆ ಬಿಟ್ಟನು. ಅದು ಗಂಟಲಿನಲ್ಲಿ ಇಳಿದ ಸ್ವಲ್ಪ ಹೊತ್ತಿಗೆ ಕರ್ದರ್ಕನು "ಉಸ್ ಅಪ್ಪಾ, ಈಗ ಜೀವ ಕೂಡಿತು. ಸ್ವಾಮೀ, ಇನ್ನೆರಡು ತೊಟ್ಟು ಬಿಡಿರಿ" ಎಂದು ಅಂಗಲಾಚಿಕೊಳ್ಳಲು, ಆನಂದನು "ಇನ್ನೊಂದು ತೊಟ್ಟ ಬಿಟ್ಟರೆ ನಿನ್ನ ಪ್ರಾಣವು ಈಗಲೇ ಹೋಗುವುದು" ಎಂದನು.

"ಇನ್ನೂ ಯಾರೂ ಬರಲಿಲ್ಲವಲ್ಲ ! ನಾನು ಹೇಳಿದುದನ್ನೆಲ್ಲಾ ತಾವಾದರೂ ನ್ಯಾಯಾಧಿಪತಿಗೆ ತಿಳಿಸಿ."

"ಅಪ್ಪಾ ! ನಾನು ತಿಳಿಸುವುದಕ್ಕಿಂತ ನೀನೇ ತಿಳಿಸಿದರೆ ಅನುಕೂಲ. ಬೇಕಾದರೆ ನೀನು ಹೇಳುವುದನ್ನೆಲ್ಲಾ ನಾನು ಬರೆಯುತ್ತೇನೆ, ಅದಕ್ಕೆ ರುಜುಮಾಡು."

"ಮಹಾಸ್ವಾಮೀ, ಹಾಗಾದರೂ ಮಾಡಿ."

"ಬರೆಯುತ್ತೇನೆ ಹೇಳು."

"ನ್ಯಾಯಾಧಿಪರಿಗೆ—ಸ್ವಾಮೀ, ನನ್ನ ಜತೆಯಲ್ಲಿ ೫೯ನೆಯ ಬಂಧಿಯಾಗಿದ್ದ ಭದ್ರದತ್ತನಿಂದ ನಾನು ತಿವಿಯಲ್ಪಟ್ಟು ಸಾಯುತ್ತಿದ್ದೇನೆ" ಎಂದು ಕರ್ದರ್ಕನು ಹೇಳಿದುದನ್ನು ಆನಂದನು ಬರೆದು ಅವನಿಂದ ರುಜು ಹಾಕಿಸಿದನು.

"ಆನಂದರೇ, ಆ ಚಂಡಾಲನನ್ನು ಶೂಲಕ್ಕೆ ಏರಿಸುವುದಕ್ಕೆ ಇಷ್ಟೇ ಸಾಕೋ ? ಇದು ಸಾಲದಿದ್ದರೆ ನಾನು ಹೇಳಿದುದನ್ನೆಲ್ಲಾ ತಾವು ನ್ಯಾಯಾಧಿಪತಿಗೆ ತಿಳಿಸಿ ಅವನನ್ನು ಹೇಗಾದರೂ ಶೂಲಕ್ಕೆ ಏರಿಸುವಂತೆ ಮಾಡಿಸಬೇಕು. ಇಲ್ಲದಿದ್ದರೆ ನನ್ನ ಆತ್ಮವು ತೃಪ್ತಿಪಡಲಾರದು."

"ಅಪ್ಪಾ, ನೀನು ಹೇಳಿರುವುದರ ಜತೆಗೆ ನನಗೆ ತಿಳಿದುದನ್ನೂ ಹೇಳುತ್ತೇನೆ. ಧೈರ್ಯವಾಗಿ ಸಾಯಿ."

"ತಮಗೆ ತಿಳಿದಿರುವುದೇನು ?"

"ನಿನಗೆ ಈ ಮನೆಯ ನಕ್ಷೆಯನ್ನು ಕೊಟ್ಟು, ರಾಜ ಮಲಯಸಿಂಹನಿಗೆ ನೀನು ಬರುತ್ತೀಯೆ ಎಂದು ಒಂದು ಕಾಗದವನ್ನು ಬರೆದು, ನಿನ್ನ ಹಿಂದೆಯೇ ಬಂದು ಬೀದಿಯಲ್ಲಿ ಕಾದಿದ್ದು ನೀನು ಇಳಿಯುವ ವೇಳೆಗೆ ಸರಿಯಾಗಿ ಓಡಿ ಬಂದು ನಿನ್ನನ್ನು ತಿವಿದುದು."

"ಇಷ್ಟೆಲ್ಲಾ ತಿಳಿದಿದ್ದು ಅವನು ನನ್ನನ್ನು ಕೊಂದರೆ ತಾವು ಸುಮ್ಮನೆ ನೋಡುತ್ತಿದ್ದಿರಲ್ಲಾ ?"

"ನಿನ್ನ ಬಿಡಾರವನ್ನು ನೀನು ಸುಖವಾಗಿ ಸೇರಿದರೆ ದೇವರು ನಿನ್ನನ್ನು ಮನ್ನಿಸಿದನೆಂದು ಭಾವಿಸುತ್ತೇನೆ ; ಅನಂತರ ನಿನಗೆ ಸಹಾಯ ಮಾಡುತ್ತೇನೆ ಎಂದು ಮೊದಲೇ ನಾನು ಹೇಳಿದ್ದೆನಲ್ಲಾ ; ನಿನಗೆ ಜ್ಞಾಪಕವಿದೆಯೋ ? ನಿನ್ನನ್ನು ಶಿಕ್ಷಿಸಲು ದೇವರು ಭದ್ರದತ್ತನನ್ನು ಕಳುಹಿಸಿದನೆಂದು ನಾನು ಸುಮ್ಮನಿದ್ದೆನು."

"ದೇವರು, ದೇವರು ; ದೇವರೆಲ್ಲಿದ್ದಾನೆ ? ಅವನಿದ್ದರೆ ಹೀಗೆಲ್ಲ ಏಕೆ ನಡೆಯುತ್ತಲಿದ್ದಿತು ? ನಿಮ್ಮಂತಹ ಸನ್ಯಾಸಿಗಳು ತಮ್ಮ ಹೊಟ್ಟೆಯ ಪಾಡಿಗಾಗಿ ಹೀಗೆಲ್ಲ ದೇವರು ದಿಂಡರು ಎಂದು ಹೇಳುತ್ತಾರೆಯೇ ಹೊರತು ದೇವರು ಎಂಬುದಾವುದೂ ಇಲ್ಲ. ನಾನು ಇದನ್ನೆಲ್ಲ ನಂಬುವುದೂ ಇಲ್ಲ."

"ಅಪ್ಪಾ, ಹಾಗೆ ಮಾತ್ರ ಹೇಳಬೇಡ. ದೇವರನ್ನು ದೃಢಭಕ್ತಿಯಿಂದ ನಂಬಿದರೆ ಅವನು ಎಂದಿಗೂ ಕೈಬಿಡನೆಂಬುದಕ್ಕೆ ನಾನೇ ಸಾಕ್ಷಿ."

"ಸ್ವಾಮೀ, ಈಗ ನನಗೆ ನಿಮ್ಮ ತತ್ವಬೋಧನೆಯೇನೂ ಬೇಡ ; ವೈದ್ಯನನ್ನು ಮೊದಲು ಕರೆಸಿರಿ. ಅವನು ಬಂದರೆ ನನ್ನನ್ನು ಹೇಗಾದರೂ ಬದುಕಿಸಿಕೊಳ್ಳುವನು."

"ವೈದ್ಯನು ಬಂದು ಏನು ಮಾಡಿದರೂ ನೀನು ಬೇರೆ ಬದುಕಲಾರೆ. ನಾನು ಆ ದ್ರಾವಕದ ಎರಡು ತೊಟ್ಟನ್ನು ನಿನ್ನ ಬಾಯಿಗೆ ಬಿಡದಿದ್ದಿದ್ದರೆ ನೀನು ಇಷ್ಟು ಹೊತ್ತಿಗೆ ಯಮಲೋಕದಲ್ಲಿ ಇರುತ್ತಲಿದ್ದೆ. ನೀನಿರುವ ಸ್ವಲ್ಪ ಕಾಲದಲ್ಲಿ ನಾನು ಹೇಳುವುದನ್ನು ಚೆನ್ನಾಗಿ ಕೇಳು."

"ನೀವು ಅಪೂರ್ವ ಸನ್ಯಾಸಿಗಳು. ಪ್ರಾಣ ಹೋಗುತ್ತಿರುವಾಗ ಇಲ್ಲದ ಹಿಂಸೆಯನ್ನು ಮಾಡುತ್ತೀರಿ."

"ನಿನ್ನ ಸ್ನೇಹಿತನಿಗೆ ಇಲ್ಲದ ತೊಂದರೆಯನ್ನು ಕೊಟ್ಟು ಅನ್ಯಾಯವಾಗಿ ಬಂದಿಶಾಲೆಗೆ ಸಾಗಿಸಿದಾಗ ನೀನು ಅದನ್ನು ತಪ್ಪಿಸದೆ ಸುಮ್ಮನಿದ್ದೆ ; ಅದಕ್ಕಾಗಿ ನಿನಗೆ ದೇವರು ದಾರಿದ್ರ್ಯವನ್ನು ಕೊಟ್ಟನು. ಅನಂತರ ದೇವರಿಗೆ ಕರುಣೆಯುಂಟಾಗಿ, ಯಾವನಿಗೆ ಕಾರಾಗೃಹ ಪ್ರಾಪ್ತವಾಯಿತೋ ಅವನಿಂದಲೇ, ನಿನ್ನ ದಾರಿದ್ರ್ಯವು ತೀರುವಂತೆ ನಿನಗೆ ಒಂದು ಒಳ್ಳೆಯ ರತ್ನವನ್ನು ಕೊಡಿಸಿದನು. ಅಷ್ಟರಲ್ಲಿ ನೀನು ತೃಪ್ತಿಪಡದೆ ಆ ರತ್ನವನ್ನು ಕೊಂಡುಕೊಳ್ಳಬೇಕೆಂದು ಬಂದ ವರ್ತಕನನ್ನು ದುರಾಸೆಯಿಂದ ಕೊಂದು ಪಾಪವನ್ನು ಕಟ್ಟಿಕೊಂಡೆ ; ಅದಕ್ಕಾಗಿ ನಿನಗೆ ಪುನಃ ಶಿಕ್ಷೆಯಾಯಿತು. ನೀನು ಬಂದಿಶಾಲೆಯಲ್ಲಿದ್ದಾಗ

ದೇವರು ವಿಜಯಧ್ವಜನ ಮೂಲಕ ನಿನ್ನನ್ನು ಬಿಡಿಸಿ ಸನ್ಮಾರ್ಗದಲ್ಲಿ ನಡೆದುಕೊಳ್ಳುವುದಕ್ಕೆ ನಿನಗೆ ಅನುಕೂಲವನ್ನು ಮಾಡಿಕೊಟ್ಟನು. ಅದನ್ನೂ ಬಗೆಯದೆ ದುರ್ಮಾರ್ಗಪ್ರವೃತ್ತಿಯನ್ನೂ ಬಿಡದೆ ಕಳವು ಮಾಡಬೇಕೆಂದು ಇಲ್ಲಿಗೆ ಬಂದೆ. ನಿನ್ನ ವಿಷಯದಲ್ಲಿ ದೇವರಿಗೆ ಬೇಸರಹುಟ್ಟಿ ನಿನ್ನನ್ನು ಶಿಕ್ಷಿಸಲು ಈಗ ಭದ್ರದತ್ತನನ್ನು ಕಳುಹಿಸಿದನು."

"ಸ್ವಾಮೀ, ನಾನು ಸಾಯುತ್ತೇನೆ. ಆ ಚಂಡಾಲ ಭದ್ರದತ್ತನು ತಪ್ಪಿಸಿಕೊಂಡು ಸುಖವಾಗಿದ್ದಾನೆ. ದೇವರಿದ್ದರೆ ಅವನನ್ನೂ ಏತಕ್ಕೆ ಶಿಕ್ಷಿಸಲಿಲ್ಲ ?"

"ದೇವರ ಶಿಕ್ಷೆಯನ್ನು ಯಾರೂ ತಪ್ಪಿಸಲಾರರು. ಅವನಿಗೂ ತಕ್ಕ ಕಾಲದಲ್ಲಿ ಶಿಕ್ಷೆಯಾಗುವುದು."

"ನನ್ನನ್ನು ಅವನು ಕೊಲ್ಲುವನೆಂದು ತಿಳಿದು ನೀವು ನನಗೆ ಸಹಾಯ ಮಾಡದೆ ತಟಸ್ಥರಾಗಿದ್ದೀರಿ ; ನಿಮ್ಮನ್ನೂ ದೇವರು ಶಿಕ್ಷಿಸದಿರನು."

"ನನ್ನನ್ನೇ !" ಎಂದು ಆನಂದನು ನಗುತ್ತ ಕದರ್ಥಕನನ್ನು ನೋಡಿ "ನೀನು ಮಾಡಿದ ಕೆಲಸ ತಪ್ಪೆಂದು ನೊಂದುಕೊಂಡಿದ್ದರೆ ನಾನು ನಿನಗೆ ಸಹಾಯ ಮಾಡುತ್ತಲಿದ್ದೆನು. ಹಾಗೆ ಮಾಡದೆ ನನ್ನನ್ನು ಕೊಲ್ಲಬೇಕೆಂದು ಕೈಯೆತ್ತಿದೆ ; ಆದುದರಿಂದ ದೈವಚಿತ್ತವಿದ್ದಂತಾಗಲಿ ಎಂದು ನಾನು ಸುಮ್ಮನಿದ್ದೆನು."

"ದೈವವೂ ಇಲ್ಲ. ಚಿತ್ತವೂ ಇಲ್ಲ. ಇದನ್ನು ನಾನು ಹೇಗೆ ಬಲ್ಲೆನೋ ನೀವೂ ಹಾಗೆಯೇ ಬಲ್ಲಿರಿ."

"ಅಯ್ಯೋ ಪಾಪಿ ! ಹಾಗೆ ಹೇಳಬೇಡ. ದೇವರಿರುವುದೂ ಸತ್ಯ ; ಅವನನ್ನು ಭಕ್ತಿಯಿಂದ ಭಜಿಸಿದವರಿಗೆ ಇಹಪರಗಳಲ್ಲಿ ಒಳ್ಳೆಯ ಗತಿಯು ದೊರೆಯುವುದೂ ಸತ್ಯ. ಮಾಡಿದ ತಪ್ಪಿಗೆ ಮನಃಪೂರ್ವಕವಾಗಿ ನೊಂದುಕೊಂಡು ಕೈಯೊಡ್ಡಿ ಪ್ರಾರ್ಥಿಸಿದರೆ ಅವನು ಎಂದಿಗೂ ಕೈ ಬಿಡನು."

"ದೇವರೇ ಇಲ್ಲದಿರುವಾಗ ಪ್ರಾರ್ಥನೆಯೇತಕ್ಕೆ ?"

"ಹಾಗೆ ಹೇಳಬೇಡ. ಅವನಿರುವುದಕ್ಕೂ ನಂಬಿದವರನ್ನು ಅವನು ಕೈಬಿಡನೆಂಬುದಕ್ಕೂ ನಾನೇ ಸಾಕ್ಷಿ. ನನಗೆ ಬಂದಿದ್ದ ವಿಪತ್ತನ್ನೆಲ್ಲ ಪರಿಹರಿಸಿ ನನ್ನನ್ನು ಧನಿಕನನ್ನಾಗಿ ಮಾಡಿ ನಾನು ಅಪೇಕ್ಷಿಸಿದುದನ್ನೆಲ್ಲಾ ನನಗೆ ಕರುಣಿಸಿದ್ದಾನೆ."

"ಹಾಗಾದರೆ ನೀವು ಯಾರು ?

"ನನ್ನನ್ನು ಚೆನ್ನಾಗಿ ನೋಡು."

"ನೀವು ನಿರ್ಮಲಾನಂದರು."

"ಈಗ ನೋಡು" ಎಂದು ತಲೆಗೆ ಕಟ್ಟಿದ ವಸ್ತ್ರವನ್ನೂ ಗಡ್ಡ ಮೀಸೆಗಳನ್ನೂ ತೆಗೆದನು.

"ಆ ಕಪ್ಪು ಕೂದಲಿಲ್ಲದಿದ್ದರೆ ನೀವೇ ವಿಜಯಧ್ವಜರೆಂದು ಹೇಳುತ್ತಲಿದ್ದೆ"

"ನಾನು ಆನಂದನೂ ಅಲ್ಲ. ವಿಜಯಧ್ವಜನೂ ಅಲ್ಲ. ನಾನು—" ಎಂದು ಅವನ ಕಿವಿಯಲ್ಲಿ ತನ್ನ ಹೆಸರನ್ನು ಹೇಳಿದನು.

ಆಗ ಕದರ್ಥಕನಿಗೆ ಜ್ಞಾನೋದಯವಾಗಿ "ಸ್ವಾಮೀ, ದೇವರೇ, ಇದುವರೆಗೆ ನಿನ್ನನ್ನು ನಂಬದೆ ನಾನು ಗತಿಹೀನನಾದೆನು. 'ಗತಿವಿಹೀನರಿಗಕಟ ನೀನೇ ಗತಿಯೆಲೈ ಗೋವಿಂದ ರಿಪುಬಾ। ಧಿತರಿಗಬಲರಿಗಾರ್ತರಿಗೇ ನೀ ಪರಮಬಂಧುವಲಾ ॥' ಎಂದು ಹೇಳುತ್ತ ಕೇವಲ ಭಕ್ತಿಯುಕ್ತನಾಗಿ ದೇವರನ್ನು ಧ್ಯಾನಿಸುತ್ತ ದೇಹವನ್ನು ಬಿಟ್ಟನು. ಅದನ್ನು ಕಂಡು ಆನಂದನು ಹೃಷ್ಟನಾಗಿ ಒಬ್ಬ ಪಾಪಿಯು ಸದ್ಗತಿ ಹೊಂದಿದನು ಎಂದುಕೊಂಡನು.

ಮಾರನೆಯ ದಿನ ಬೆಳಿಗ್ಗೆ ಕದರ್ಥಕನ ಕೊಲೆಯ ವರ್ತಮಾನವು ಊರಲ್ಲೆಲ್ಲ ಹರಡಿತು. ಕೇಳಿದವರಿಗೆಲ್ಲಾ ರಾಜನು ತಾನಿಲ್ಲದ ವೇಳೆಯಲ್ಲಿ ಇದು ನಡೆಯಿತು ; ತನ್ನ ಸ್ನೇಹಿತರು ನಿರ್ಮಲಾನಂದರು ಅದನ್ನು ತನಗೆ ಹೇಳಿದರೆಂದು ಹೇಳುತ್ತಲಿದ್ದನು. ಭದ್ರದತ್ತನ ಹೆಸರು ಕಿವಿಗೆ ಬಿದ್ದಾಗಲೆಲ್ಲಾ ಭದ್ರನು ಬೆಚ್ಚುತ್ತಿದ್ದನು. ನ್ಯಾಯಾಧಿಪತಿಯಾದ ವಲ್ಲಭದೇವನು ಬಂದು ಎಲ್ಲವನ್ನೂ ನೋಡಿ ಭದ್ರದತ್ತನನ್ನು ಹಿಡಿದು ತರುವಂತೆ ಪೋಲೀಸಿನವರಿಗೆ ಆಜ್ಞಾಪಿಸಿದನು.

ಮೂರು ವಾರಗಳು ಕಳೆದುಹೋದವು ; ಆದರೂ ಭದ್ರದತ್ತನು ಸಿಕ್ಕಲಿಲ್ಲ. ಅಷ್ಟರೊಳಗಾಗಿ ಅನಂತರಾಜುವು ವಿಲಾಸಿನಿಯ ಸಂಗಡ ತನ್ನ ಮದುವೆಯ ವಿಷಯವನ್ನು ನಿಶ್ಚಯಮಾಡಿಕೊಂಡು ತಕ್ಕ ಏರ್ಪಾಡನ್ನು ಮಾಡಿಕೊಳ್ಳುತ್ತಲಿದ್ದನು. ಈ ಸಂಭ್ರಮದಲ್ಲಿ ಎಲ್ಲರೂ ಭದ್ರದತ್ತನನ್ನು ಮರೆತರು.

## ೫೮
## ವಿಚಾರಣೆ

ಭದ್ರಸಿಂಹನು ಉದಯಸಿಂಹನನ್ನು ಕೇಳಿಕೊಂಡ ಮೂರು ವಾರಗಳು ಕಳೆಯುತ್ತ ಬಂದವು ; ಅವನ ಹುಟ್ಟೇ ತೋರಲಿಲ್ಲ. ಅವನು ಎಲ್ಲಿಗೆ ಹೋದನೆಂಬುದೇ ಯಾರಿಗೂ ತಿಳಿಯದು. ಹೀಗಿರುವಲ್ಲಿ ಒಂದಾನೊಂದು ದಿನ ಬೆಳಿಗ್ಗೆ ಭದ್ರಸಿಂಹನು ಉದಯಸಿಂಹನನ್ನು ನೋಡುವುದಕ್ಕೆ ಬಂದನು. ಅವನನ್ನು ನೋಡಿದ ಕೂಡಲೆ ಉದಯಸಿಂಹನು "ಭದ್ರಸಿಂಹ, ಇಷ್ಟು ದಿನ ಎಲ್ಲಿಗೆ ಹೋಗಿದ್ದೆ ? ನಾನು ನಿನ್ನ ಮನೆಗೆ ಬರಬೇಕೆಂದಿದ್ದೆ ; ನೀನಾಗಿಯೇ ಬಂದುದನ್ನು ನೋಡಿದರೆ ಶುಭಸೂಚಕವಾಗಿ ತೋರುತ್ತದೆ" ಎಂದನು.

"ಅಪ್ಪಾ, ಉದಯ ! ನಿನ್ನ ಸ್ನೇಹಕ್ಕಾಗಿ ಕಾಲ, ದ್ರವ್ಯ, ದೇಹಶ್ರಮ ಯಾವುದನ್ನೂ ಲೆಕ್ಕಿಸದೆ ಯವನದೇಶಕ್ಕೆ ಹೋಗಿ ಈಗತಾನೇ ಬಂದೆನು."

"ನೀನೇ ಅಲ್ಲಿಗೆ ಹೋಗಿ ಬಂದೆಯಾ ?"

"ನೀನಲ್ಲದೆ ಇನ್ನಾರಾದರೂ ಆಗಿದ್ದರೆ ಯುದ್ಧಮಾಡಿ ಒಂದು ನಿಮಿಷದಲ್ಲಿ ಪ್ರತ್ಯರ್ಥಿಯನ್ನು ಸಂಹರಿಸುತ್ತಲಿದ್ದೆನು. ನಿನ್ನ ವಿಷಯ ಹಾಗಲ್ಲ ; ಅದಕ್ಕಾಗಿ ನಾನೇ ಅಲ್ಲಿಗೆ ಹೋಗಿ ವಿಚಾರಿಸಿಕೊಂಡು ಬಂದೆನು."

"ಅದೇನು ಸಮಾಚಾರ ? ಮೊದಲು ಹೇಳು."

"ಹೇಳುವುದಕ್ಕೆ ನನಗೆ ಸಂಕೋಚವಾಗುತ್ತದೆ."

"ಮೋಸಹೋದೆನೆಂದು ಹೇಳಲು ಸಂಕೋಚಪಡುತ್ತೀಯೋ ? ಚಿಂತೆಯಿಲ್ಲ, ಹೇಳು."

"ಪತ್ರಿಕೆಯಲ್ಲಿ ಪ್ರಕಟವಾಗಿರುವ ಸಮಾಚಾರ ನಿಶ್ಚಯ" ಎಂದು ಭದ್ರಸಿಂಹನು ಹೇಳಲು ಉದಯಸಿಂಹನ ಮೈಯೆಲ್ಲ ಬೆವತು ಮುಖವು ಬಿಳ್ಚೇರಿ ಸ್ವಲ್ಪ ಕಾಲ ಮಾತೇ ಹೊರಡದೆ "ಅದು ನಿಜವೋ ?" ಎಂದು ಕೇಳಲು,

"ಇಗೋ ನೋಡು, ಅಲ್ಲಿಯ ಮುಖ್ಯ ಮಂತ್ರಿಗಳು ನಾಲ್ವರು ನಿಜವೆಂದು ಬರೆದುಕೊಟ್ಟಿದ್ದಾರೆ" ಎಂದು ತಾನು ತಂದಿದ್ದ ಕಾಗದವನ್ನ ಅವನಿಗೆ ಕೊಟ್ಟನು. ಅದನ್ನು ಓದಿ ನೋಡಿ ಉದಯಸಿಂಹನು,

"ಭದ್ರಸಿಂಹ, ರಾಜಾ ಮಲಯಸಿಂಹನು ನನ್ನೊಡನೆ 'ಅವನ ಸ್ನೇಹವನ್ನು ವೃಥಾ ಹಾಳುಮಾಡಿಕೊಳ್ಳಬೇಡ ; ಅವನ ಸಂಗಡ ಮಾತನಾಡಿ ಈ ವಿಚಾರವನ್ನು ವ್ಯವಸ್ಥೆಮಾಡಿಕೋ' ಎಂದು ಹೇಳಿದ್ದನು. ಅವನ ಮಾತಿನಂತೆ ನಡೆದುದರಿಂದ ನಿನ್ನ ಸ್ನೇಹವು ನನಗೆ ಉಳಿಯಿತು. ಇದಕ್ಕಾಗಿ ನನಗೆ ತುಂಬ ಸಂತೋಷವಾಗುತ್ತದೆ" ಎಂದು ಹೇಳಿ ಅವನನ್ನು ಅಪ್ಪಿಕೊಂಡನು. ಉತ್ತರಕ್ಷಣದಲ್ಲಿಯೇ ಕಾಗದವನ್ನು ನೋಡಿ ದುಃಖವು ಬಂದಿತು.

"ಪುನಃ ಸಂಕಟವೇತಕ್ಕೆ ?" ಎಂದು ಭದ್ರಸಿಂಹನು ಕೇಳಲು, ಅವನು,

"ಭದ್ರಸಿಂಹ, ನನ್ನ ಹೃದಯದಲ್ಲಿ ಒಂದು ಶೂಲ ನೆಟ್ಟಂತೆ ಆಗಿದೆ ; ಅದರ ವೇದನೆಯನ್ನು ಸಹಿಸಲಾರೆ. ನನ್ನ ತಂದೆಯನ್ನು ಎಷ್ಟೋ ಮರ್ಯಾದೆಯಿಂದಲೂ ವಿಶ್ವಾಸದಿಂದಲೂ ಕಾಣುತ್ತಿದ್ದೆ ; ಈಗ ಹೇಗೆ ಅವನ ಮುಖವನ್ನು ನೋಡಲಿ ? ನನ್ನ ತಾಯಿಗೆ ಈ ಸಂಗತಿ ತಿಳಿದರೆ ಎಷ್ಟು ಸಂಕಟಪಡುತ್ತಾಳೋ ?"

"ನೀನು ಶೂರನಾಗಿದ್ದು ಹೀಗೆ ಸಂಕಟಪಡುವುದು ಸರಿಯಲ್ಲ. ನಿನ್ನ ಶತ್ರುಗಳಾರೋ ಮರೆಯಲ್ಲಿದ್ದುಕೊಂಡು ಈ ಕೆಲಸವನ್ನು ಮಾಡುವಂತೆ ತೋರುತ್ತದೆ. ಇದು ಇಷ್ಟರಲ್ಲೇ ಹೋಗದು. ನೀನು ಈಗಲೇ ಧೈರ್ಯಗೆಟ್ಟರೆ ಮುಂದೆ ಪ್ರಬಲವಾಗಿ ಒದಗುವ ಕಷ್ಟಪರಂಪರೆಗಳಲ್ಲಿ ಏನು ತಾನೇ ಮಾಡಬಲ್ಲೆ ?"

"ನೀನು ಹೇಳುವುದನ್ನು ನೋಡಿದರೆ ಇದು ಇಷ್ಟಕ್ಕೇ ನಿಲ್ಲದೆಂದು ತೋರುತ್ತದೆ?"

"ನನ್ನ ಅಭಿಪ್ರಾಯವೇನೋ ಹಾಗೆಯೇ ಸರಿ."

"ಆ ವರ್ತಮಾನವನ್ನು ನಿನ್ನ ಪತ್ರಿಕೆಗೆ ಕೊಟ್ಟವರು ಯಾರು ?"

"ನೀನು ದುರ್ಮತಿಯ ಮಗಳನ್ನು ಮದುವೆ ಮಾಡಿಕೊಳ್ಳುತ್ತೀಯೋ ?"

"ಆ ವಿಚಾರವೇಕೆ ?"

"ಈ ವಿಷಯದಲ್ಲಿ ಅವನಿಗೂ ಸ್ವಲ್ಪ ಸಂಬಂಧವಿರುವ ಹಾಗೆ ಇದೆ."

"ಅದು ಹೇಗೆ ?" ಎಂದು ಉದಯಸಿಂಹನು ಕೋಪಾವಿಷ್ಟನಾಗಿ ಕೇಳಲು, ಭದ್ರಸಿಂಹನು,

"ನಾನು ಕೇಳಿದುದಕ್ಕೆ ನೀನು ವಿಪರೀತಾರ್ಥ ಮಾಡಬೇಡ ; ನನಗೆ ತೋರಿದುದನ್ನು ಹೇಳಿದೆ. ಅದು ನಿಜವೋ ಸುಳ್ಳೋ ತಿಳಿಯದು."

"ಆ ಮದುವೆಯು ನಿಂತುಹೋಯಿತು."

"ಒಳ್ಳೆಯ ಕೆಲಸವಾಯಿತು. ಈಗ ಎಲ್ಲಿಯಾದರೂ ಸುತ್ತಿಕೊಂಡು ಬರೋಣ ಬಾ ; ರಾಜಾ ಮಲಯಸಿಂಹನ ಬಳಿಗೆ ಹೋದರೆ ಅವರು ಯಾವ ಪ್ರಶ್ನೆಯನ್ನೂ ಮಾಡದೆ ವಿನೋದವಾಗಿ ಮಾತನಾಡುತ್ತ ನಮ್ಮ ದುಃಖವನ್ನು ಒಂದು ನಿಮಿಷದಲ್ಲಿ ಹೋಗಲಾಡಿಸುವನು" ಎಂದು ಭದ್ರಸಿಂಹನು ಹೇಳಲು, ಉದಯಸಿಂಹನು ಒಪ್ಪಿ ಅವನ ಜತೆಯಲ್ಲಿ ಹೊರಟನು.

ಇಬ್ಬರೂ ತನ್ನ ಮನೆಗೆ ಬಂದುದನ್ನು ನೋಡಿ ಮಲಯಸಿಂಹನು,

"ಓಹೋ ! ಇತ್ತ ಬಿಜಯಮಾಡಬೇಕು. ನೀವು ಒಟ್ಟಿಗೆ ಬಂದುದನ್ನು ನೋಡಿದರೆ ನಿಮ್ಮ ನಿಮ್ಮ ಅಸಮಾಧಾನವೆಲ್ಲಾ ತೊಲಗಿಹೋಯಿತೆಂದು ಕಾಣುತ್ತದೆ" ಎನ್ನಲು, ಭದ್ರಸಿಂಹನು,

"ಆ ಪೊಳ್ಳು ಸುದ್ದಿಯು ತಾನಾಗಿಯೇ ಸತ್ತಿತು. ಅದನ್ನು ನಾವೆಲ್ಲರೂ ಮರೆತುಬಿಡೋಣ."

"ಈ ಮಾತನ್ನು ನಾನು ಉದಯಸಿಂಹರಿಗೆ ಮೊದಲೇ ಹೇಳಿದ್ದೆನು" ಎಂದು ಹೇಳಿ ಅವನ ಮುಖವನ್ನು ನೋಡಿ, ಅವನು ಖಿನ್ನನಾದುದನ್ನು ಕಂಡು,

"ಉದಯಸಿಂಹರೇ, ಮನಸ್ಸಿಗೆ ಸಮಾಧಾನವಾದ ಮೇಲೆ ಕೂಡ ಏಕೆ ಹೀಗೆ ಖಿನ್ನರಾಗಿದ್ದೀರಿ ?"

"ನನಗೆ ತಲೆ ನೋವು."

"ನನ್ನಲ್ಲಿ ಅದಕ್ಕೆ ಅತ್ಯುತ್ತಮವಾದ ಔಷಧವಿದೆ."

"ಅದೇನು ?"

"ಪ್ರವಾಸ."

"ಹಾಗೆಯೇ ?"

"ನನಗೂ ಸದ್ಯಕ್ಕೆ ಈ ಊರಿನಲ್ಲಿ ಇರುವುದಕ್ಕೆ ಬೇಸರ ಹುಟ್ಟಿದೆ ; ನೀವು ಬಂದರೆ ನಾನೂ ಬರುತ್ತೇನೆ."

"ನಿಮಗೆ ಬೇಸರ ಹುಟ್ಟಿರುವುದಕ್ಕೆ ಏನು ಕಾರಣ ?"

"ಕಳ್ಳತನ ಮಾಡಬೇಕೆಂದು ನನ್ನ ಮನೆಗೆ ನುಗ್ಗಿದ ಕದರ್ಥಕನನ್ನು ಯಾವನೋ ಒಬ್ಬ ಭದ್ರದತ್ತನು ಕೊಂದನಂತೆ. ಆ ಕದರ್ಥಕನನ್ನು ದುರ್ಮತಿಗಳೂ ವಲ್ಲಭದೇವರೂ ಬಲ್ಲರಂತೆ ; ಅದಕ್ಕಾಗಿ ಈ ಪಟ್ಟಣದಲ್ಲಿರುವ ಒಬ್ಬೊಬ್ಬ ಕಳ್ಳನನ್ನೂ ಹಿಡಿದು ಕದರ್ಥಕನ ಜತೆಯಲ್ಲಿ ಬಂದಿದ್ದವನು ಅವನೇಯೋ ಎಂದು ಕೇಳಲು ನನ್ನ ಮನೆಗೆ ಕಳುಹಿಸುತ್ತಾರೆ. ಹೀಗೆ ಕಳ್ಳರು ನಿತ್ಯವೂ ಬಂದು ನನ್ನ ಮನೆಯ ಸನ್ನಿವೇಶವನ್ನು ನೋಡಿಕೊಂಡು ಹೋಗುವುದು ಒಳ್ಳೆಯದಲ್ಲ. ಆದುದರಿಂದ ಅವರ ಕಾಟವನ್ನು ತಪ್ಪಿಸಿಕೊಳ್ಳಲು ಈ ಊರನ್ನೇ ಬಿಟ್ಟು ಎಲ್ಲಿಯಾದರೂ ಹೊರಗೆ ಹೋಗಿ ಬರೋಣವೆಂದು ಯೋಚಿಸಿದ್ದೇನೆ."

"ಎಲ್ಲಿಗೆ ಹೋಗಬೇಕೆಂದು ಯೋಚಿಸಿದ್ದೀರಿ ?"

"ಸಮುದ್ರ ತೀರಕ್ಕೆ."

"ಹಾಗಾದರೆ ನಾನು ಬರುತ್ತೇನೆ."

"ಈ ದಿನ ಸಾಯಂಕಾಲ ನೀವು ಇಲ್ಲಿಗೆ ಬಂದರೆ ಬಂಡಿಯು ಸಿದ್ಧವಾಗಿರುವುದು. ಜತೆಯಲ್ಲಿ ಭದ್ರಸಿಂಹನೂ ಬಂದರೆ ಬಹಳ ಸಂತೋಷ" ಎಂದು ರಾಜನು ಹೇಳಲು, ಭದ್ರಸಿಂಹನು,

"ನನಗೆ ಬರುವುದಕ್ಕೆ ಆಗದು; ಇದಲ್ಲದೆ ಪತ್ರಿಕೆಗಳಲ್ಲಿ ಮುಂದೇನು ಬರುವುದೋ ಅದನ್ನು ನೋಡುತ್ತಿರಬೇಕು."

ಆ ಮಾತನ್ನು ಕೇಳಿ ಉದಯಸಿಂಹನು ಸಂತೋಷಪಟ್ಟುಕೊಂಡು,

"ಭದ್ರಸಿಂಹ, ಆಪ್ತನೆಂದರೆ ನೀನೇ ಸರಿ" ಎಂದನು.

ಅನಂತರ ಭದ್ರಸಿಂಹನು "ನನಗೆ ಕೆಲಸವಿದೆ, ಅಪ್ಪಣೆಯಾದರೆ ಹೋಗಿಬರುವೆನು" ಎಂದು ಹೇಳಿ ಹೊರಟುಹೋದನು.

ಅವನು ಹೊರಟ ಮೇಲೆ ರಾಜನು ಉದಯಸಿಂಹನನ್ನು ನೋಡಿ,

"ನೀವು ನನ್ನ ಜತೆಯಲ್ಲಿ ಬಂದರೆ ನಿಮ್ಮ ತಾಯಿಯವರು ಒಪ್ಪುತ್ತಾರೆಯೋ ?"

"ನಿಮ್ಮ ವಿಷಯದಲ್ಲಿ ನನ್ನ ತಾಯಿಗೆ ಕಿಂಚಿತ್ತಾದರೂ ಸಂಶಯವಿಲ್ಲ. ಈ ಸಂಗತಿಯನ್ನು ನಾನು ಎಷ್ಟೋ ಸಾರಿ ನಿಮ್ಮ ಸಂಗಡ ಅರಿಕೆ ಮಾಡಿಕೊಂಡಿದ್ದೇನೆ."

"ಹೆಂಗಸರ ಚಿತ್ತವು ಮರದ ನೆರಳಿನಂತೆ."

"ನನ್ನ ತಾಯಿಯು ನಾಡಾಡಿ ಹೆಂಗಸಲ್ಲ. ಅವಳು ಬಹು ಬುದ್ಧಿಶಾಲಿನಿ, ವಿವೇಕಿನಿ ; ಚೆನ್ನಾಗಿ ಪರಿಶೋಧಿಸಿದ ಹೊರತು ಯಾರನ್ನೂ ನಂಬಳು. ನಂಬಿದ ಮೇಲೆ ತನ್ನ ಅಭಿಪ್ರಾಯವನ್ನು ಎಂದಿಗೂ ಬದಲಾಯಿಸಳು" ಎಂದು ಉದಯಸಿಂಹನು ಹೇಳಲು, ಮಲಯಸಿಂಹನು ನಿಟ್ಟುಸಿರನ್ನು ಬಿಟ್ಟು "ಹಾಗಾದರೆ ಸರಿ ; ಸಾಯಂಕಾಲ ಹೊರಡೋಣ, ಸಹಾಲಕ್ಕೆ ಬನ್ನಿ" ಎಂದನು.

ಸಾಯಂಕಾಲ ಇಬ್ಬರೂ ಪ್ರಯಾಣ ಹೊರಟು ರಾತ್ರಿ ಹನ್ನೊಂದು ಗಂಟೆಯ ಸಮಯದಲ್ಲಿ ಭದ್ರಕನು ಮೊದಲೇ ಸಿದ್ಧಮಾಡಿದ್ದ ಮನೆಯನ್ನು ಸೇರಿ ಊಟ ಮಾಡಿ ಮಲಗಿದರು.

ರಾಜನು ಯಾವ ಮನೆಯಲ್ಲಿದ್ದರೂ ಅದು ಅರಮನೆಯೇ ; ಅವನು ಎಲ್ಲಿ ಹೋದರೂ ಅವನ ಸಂಪತ್ತಿನ ಮಹತ್ವವು ಮುಂದಾಗಿಹೋಗುತ್ತಲಿದ್ದಿತು. ಆದುದರಿಂದಲೇ ಉದಯಸಿಂಹನು ಯಾವ ಕಿರಿಕಿರಿಯೂ ಇಲ್ಲದಂತೆ ಎರಡು ದಿನಗಳು ಬೇಟೆಯಾಡಿಕೊಂಡು ಸುಖವಾಗಿದ್ದನು. ಮಾರನೆಯ ದಿನ ಬೆಳಿಗ್ಗೆ ಏಳುವುದರೊಳಗಾಗಿಯೆ ತನ್ನ ಆಳು ಸೂಕ್ಷ್ಮಬುದ್ಧಿಯು ಬಂದುದನ್ನು ತಿಳಿದು ಉದಯಸಿಂಹನು ಗಾಬರಿಯಿಂದ ಎದ್ದು 'ಏನು ಬಂದೆ ? ತಾಯಿಯು ಕ್ಷೇಮವೇ' ಎಂದು ಅವನನ್ನು ಕೇಳಲು, ಅವನು 'ತಾಯಿಯವರು ಸುಖವಾಗಿದ್ದಾರೆ' ಎಂದು ಹೇಳಿ ತಾನು ತಂದಿದ್ದ ಕಾಗದವನ್ನು ಕೊಟ್ಟನು.

"ಇದನ್ನು ಯಾರು ಕೊಟ್ಟರು ?"

"ಭದ್ರಸಿಂಹರು"

ಉದಯಸಿಂಹನು ಕಾಗದವನ್ನು ಓದಿ ಕಿಟ್ಟೆಂದು ಕಿರಿಚಿಕೊಂಡನು. ಕೈಕಾಲುಗಳು ನಡುಗಿದವು ; ಕಣ್ಣು ಮಬ್ಬಾಯಿತು ; ಸೂಕ್ಷ್ಮಬುದ್ಧಿಯು ಅವನನ್ನು ಬೀಳದಂತೆ ಹಿಡಿದುಕೊಂಡನು. ಅದನ್ನು ನೋಡಿ ರಾಜನು "ಅಯ್ಯೋ ಪಾಪ, ತಂದೆ ಮಾಡಿದ ಪಾಪ ಫಲವನ್ನು ಮಗನು ಉಣ್ಣಬೇಕಾಗಿದೆ" ಎಂದುಕೊಂಡು, ಏನೂ ತಿಳಿಯದವನಂತೆ ತನ್ನ ಕೆಲಸದಲ್ಲಿ ಇದ್ದನು.

ಉದಯಸಿಂಹನು ಸ್ವಲ್ಪಹೊತ್ತಿಗೆ ಚೇತರಿಸಿಕೊಂಡು ಸೂಕ್ಷ್ಮಬುದ್ಧಿಯನ್ನು ನೋಡಿ, "ನಿನ್ನ ಕುದುರೆ ಇಲ್ಲಿಂದ ಹಿಂತಿರುಗಿ ಊರಿಗೆ ಹೋಗಬಲ್ಲುದೋ" ಎಂದು ಕೇಳಲು, ಅವನು "ಮಹಾಸ್ವಾಮೀ, ಅದು ಬರುವಾಗಲೇ ಎಡವಿ ಕುಂಟಾಯಿತು" ಎಂದನು.

"ನೀನು ಬರುವಾಗ ಮನೆಯಲ್ಲಿ ಏನಾದರೂ ಜಗಳವಿದ್ದಿತೋ ?"

"ಅಮ್ಮನವರು ಅಳುತ್ತಿದ್ದರು. ನಾನು ತಮ್ಮ ಬಳಿಗೆ ಬರುತ್ತೇನೆಂದು ತಿಳಿದು ತಮ್ಮನ್ನು ಜಾಗ್ರತೆಯಾಗಿ ಕರೆದುಕೊಂಡು ಬರುವಂತೆ ಹೇಳಿದರು."

ಅದನ್ನು ಕೇಳಿ ಉದಯಸಿಂಹನು ಅತಿ ಖಿನ್ನನಾಗಿ ರಾಜನಿದ್ದೆಡೆಗೆ ಹೋಗಿ ಅವನನ್ನು ಕುರಿತು,

"ರಾಜರೇ, ತಮ್ಮ ಸಹವಾಸವನ್ನೂ ಆತಿಥ್ಯವನ್ನೂ ನೋಡಿ ಇನ್ನಷ್ಟು ದಿನಗಳು ಇಲ್ಲಿಯೇ ಇರಬೇಕೆಂದು ಮಾಡಿದ್ದೆನು ; ಆದರೆ ದೈವಸಂಕಲ್ಪವು ಬೇರೆಯಾಯಿತು. ನಾನು ಅಮರಪುರಕ್ಕೆ ಈಗಲೇ ಹೊರಡಬೇಕಾಗಿ ಬಂದಿದೆ"

"ಅಲ್ಲೇನಾದರೂ ಅನಾಹುತ ಸಂಭವಿಸಿತೋ ?"

"ಈಗ ನನ್ನನ್ನು ಏನೂ ಕೇಳಬೇಡಿರಿ. ಒಂದು ಕುದುರೆಯನ್ನು ಕೊಡಿಸಿರಿ" ಎಂದು ಉದಯಸಿಂಹನು ಹೇಳಿದ ಕ್ಷಣವೇ ರಾಜನು ಭದ್ರಕನನ್ನು ಕರೆದು "ನಮ್ಮ ಕುದುರೆಗಳಲ್ಲಿ ಉದಯಸಿಂಹರ ಸವಾರಿಗಾಗಿ ಒಂದು ಒಳ್ಳೆಯ ಕುದುರೆಯನ್ನು ಸಿದ್ಧಪಡಿಸು" ಎಂದು ಆಜ್ಞಾಪಿಸಿದನು.

"ಸ್ವಾಮೀ ರಾಜರೇ, ಒಂದು ಮಜಲಿಗೆ ಈ ಕುದುರೆಯು ಸರಿ ; ಮುಂದಣ ಮಜಲಿಗೆ ಏನು ಮಾಡಲಿ ?"

"ತಾವು ಏನನ್ನೂ ಮಾಡತಕ್ಕದ್ದಿಲ್ಲ. ಈ ಕುದುರೆಯಿಂದ ಇಳಿದ ಕೂಡಲೆ ಇನ್ನೊಂದು ಸಿದ್ಧವಾಗಿರುತ್ತದೆ."

"ರಾಜರೇ, ನಾನು ಹೀಗೆ ಹಠಾತ್ತಾಗಿ ಹೊರಡುವುದು ನಿಮಗೆ ಆಶ್ಚರ್ಯವಾಗಿರಬಹುದು. ನಾನು ಹೊರಟ ಮೇಲೆ ಈ ಪತ್ರಿಕೆಯನ್ನು ಓದಿ ನೋಡಿರಿ. ಊರಿಗೆ ಹೋಗಬೇಕೆಂಬ ನನ್ನ ಆತುರದ ಕಾರಣವು ನಿಮಗೆ ಗೊತ್ತಾಗುತ್ತದೆ" ಎಂದು ಪತ್ರಿಕೆಯನ್ನು ರಾಜನಲ್ಲಿ ಕೊಟ್ಟು ಅವನ ಅಪ್ಪಣೆಯನ್ನು ಪಡೆದು ಹೊರಟನು.

ರಾಜನು ಆ ಪತ್ರಿಕೆಯನ್ನು ಓದಿ ನೋಡಲು ಅದರಲ್ಲಿ "ಈಗ ಕೆಲವು ವಾರಗಳ ಹಿಂದೆ 'ಸಿಂಹನಾದ' ಪತ್ರಿಕೆಯಲ್ಲಿ ಅಮರಪುರದ ಅಧಿಕಾರಿ ವಿಷಯಲಂಪಟರೆಂಬುವರು ಕ್ಷಿತೀಂದ್ರನ ಸೈನ್ಯಾಧಿಪರಾಗಿದ್ದು ಅವನನ್ನು ಕೃತ್ರಿಮ ಸಂಧಾನದಿಂದ ಕೊಂದು ಅವನ ರಾಜ್ಯವನ್ನು ಶತ್ರುಗಳಿಗೆ ಮಾರಿದರೆಂದು ಪ್ರಕಟಿತವಾಗಿದ್ದಿತು. ಆ ವಿಷಯಲಂಪಟರು ಈಗ ಶ್ರೀಮಂತ ರಾಜಸಿಂಹರಾಗಿದ್ದಾರೆಂದು ನಮಗೆ ತಿಳಿಯಬಂದಿದೆ. ಇಂತಹ ದೊಡ್ಡವರಿಂದ ಆ ನೀಚಕೃತ್ಯವು ನಡೆಯಿತೆಂದು ಕೇಳಿ ವಿಷಾದಪಡುತ್ತೇವೆ" ಎಂದಿದ್ದಿತು. ಉದಯಸಿಂಹನು ಅಮರಪುರವನ್ನು ಬಿಟ್ಟ ಮಾರನೆಯ ದಿನ 'ಸಮದರ್ಶಿ' ಎಂಬ ಮತ್ತೊಂದು ದಿನಪತ್ರಿಕೆಯಲ್ಲಿ ಈ ವಿಷಯವು ಪ್ರಕಟವಾಗಿದ್ದಿತು.

ಉದಯಸಿಂಹನು ಕುದುರೆಯನ್ನು ವೇಗವಾಗಿ ಓಡಿಸುತ್ತ ಮಧ್ಯಾಹ್ನ ಎರಡು ಗಂಟೆಯ ವೇಳೆಗೆ ಭದ್ರಸಿಂಹನ ಮನೆಗೆ ಹೋದನು. ಅವನು ಮನೆಯಲ್ಲೇ ಇದ್ದನು.

"ಭದ್ರಸಿಂಹ, ನಿನ್ನ ಕಾಗದವನ್ನು ನೋಡಿ ಹಾಗೆಯೇ ಹೊರಟು ಬಂದೆನು. ಆಪ್ತನೆಂದರೆ ನೀನೇ ಹೊರತು ಮತ್ತಾರೂ ಇಲ್ಲ. ಈ ಪ್ರಸ್ತಾಪವು ಪುನಃ ಹೇಗೆ ಪ್ರಾರಂಭವಾಯಿತು ?"

"ನನಗೆ ಒಂದು ವಿಧವಾದ ಅನುಮಾನವು ಹುಟ್ಟಿ ಆ ಪತ್ರಿಕಾ ಸಂಪಾದಕನ ಬಳಿಗೆ ಹೋಗಿ 'ಅಪ್ಪಾ, ನೀನು ರಾಜಸಿಂಹರ ವಿಷಯದಲ್ಲಿ ಬರೆದಿರುವುದು ನಿಜವೋ ಸುಳ್ಳೋ ? ಸುಳ್ಳಾದರೆ ನಿನ್ನ ಪ್ರಾಣಕ್ಕೆ ಬಂದೀತು' ಎಂದು ಹೇಳಲು, ಅವನು 'ನನಗೆ ಆ ಭಯವಿಲ್ಲ. ಯವನದೇಶದಿಂದ ಈ ವರ್ತಮಾನ ತಂದವರು ಅದನ್ನು ಸಮರ್ಥಿಸುವ ಸರ್ಕಾರೀ ಕಾಗದಗಳನ್ನು ನನ್ನಲ್ಲಿ ಕೊಟ್ಟಿದ್ದಾರೆ. ಒಂದು ವೇಳೆ ರಾಜಸಿಂಹರು ಈ ವಿಷಯದಲ್ಲಿ ಅವಿವೇಕದಿಂದ ಪ್ರವೇಶಮಾಡಿದರೆ ಅದು ಅವರ ನಾಶಕ್ಕೆ ಕಾರಣವಾದೀತು' ಎಂದನು.

ಅದರ ಮೇಲೆ ನನಗಾವುದೂ ತೋರದೆ ನಿನ್ನ ಬಳಿಗೆ ಸೂಕ್ಷ್ಮ ಬುದ್ಧಿಯನ್ನು ಕಳುಹಿಸಿದೆನು.

"ಅವನನ್ನು ಕಳುಹಿಸಿದ ಮೇಲೆ ಇಲ್ಲಿ ನಡೆದುದನ್ನು ಹೇಳುತ್ತೇನೆ, ಕೇಳು. ರಾಜಸಿಂಹರು ಈ ಪತ್ರಿಕೆಯನ್ನು ತರಿಸುತ್ತಿರಲಿಲ್ಲವಾಗಿ ಈ ವಿಷಯವು ಊರಿಗೆಲ್ಲ ತಿಳಿದಿದ್ದರೂ ಅವರಿಗೆ ಮಾತ್ರ ತಿಳಿದಿರಲಿಲ್ಲ. ಅವರು ಆ ದಿನ ಎಂದಿನಂತೆ ಮಂತ್ರಾಲೋಚನಾ ಸಭೆಗೆ ಹೋದರು. ಸಭಿಕರೆಲ್ಲರೂ ಎಂದಿಗಿಂತ ಮುಂದಾಗಿ ಅಲ್ಲಿ ಸೇರಿದ್ದರು. ಒಬ್ಬೊಬ್ಬ ಸಭಿಕರೂ ಒಂದೊಂದು ಪತ್ರಿಕೆಯನ್ನು ಇಟ್ಟುಕೊಂಡಿದ್ದರು. ಕೆಲವರು ಅದನ್ನು ಓದುತ್ತಿದ್ದರು ; ಮತ್ತೆ ಕೆಲವರು ವ್ಯಾಖ್ಯಾನ ಮಾಡುತ್ತಿದ್ದರು. ರಾಜಸಿಂಹರನ್ನು ಕಂಡರೆ ಸಭಿಕರಿಗಾಗುತ್ತಿರಲಿಲ್ಲ. ಕೇವಲ ಹೀನಸ್ಥಿತಿಯಲ್ಲಿದ್ದು ತಟ್ಟನೆ ಶ್ರೀಮಂತರಾದುದರಿಂದ ಅವರಿಗೆ ತುಂಬ ಹೆಮ್ಮೆಯಿದ್ದಿತು. ಆಗರ್ಭ ಶ್ರೀಮಂತರಿಗೆ ಅವರನ್ನು ನೋಡಿದರೆ ನಗು ; ಪ್ರಾಜ್ಞರು ಅವರನ್ನು ಪರಿತ್ಯಾಗಮಾಡುವರು ; ಗೌರವಸ್ಥರಿಗೆ ಅವರಲ್ಲಿ ತಿರಸ್ಕಾರಬುದ್ಧಿ. ಅಂತೂ ಎತ್ತ ಕಡೆ ತಿರುಗಿದರೂ ಅವರಿಗೆ ಪೆಟ್ಟೇ. 'ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು' ಎಂಬಂತೆ ಈಗ ಅವರ ಸ್ಥಿತಿಯು ಆಗಿಹೋಯಿತು. ಅವರು ಸಭೆಗೆ ಬಂದ ಒಡನೆಯೇ ಸಭಾನಾಯಕನು ಎದ್ದು ನಿಂತು 'ಸಭಿಕರೇ, ಈಗ ನಾನು ಓದುವುದನ್ನು ಎಲ್ಲರೂ ದಯವಿಟ್ಟು ಸಾವಧಾನವಾಗಿ ಕೇಳಬೇಕು. ಈ ಸಂಗತಿಯು ನಿಜವಾದರೆ ನಮ್ಮ ಸಭೆಯ ಗೌರವವನ್ನು ರಕ್ಷಿಸಿಕೊಳ್ಳಲು ನಾವು ತಕ್ಕುದನ್ನು ಮಾಡಬೇಕು ; ಇದು ಸುಳ್ಳಾದರೆ ಇಂಥ ವರ್ತಮಾನ ಹುಟ್ಟಿಸಿದವರನ್ನು ಹಿಡಿದು ಶಿಕ್ಷೆಮಾಡಬೇಕು. ಅನೇಕ ಸಂದರ್ಭಗಳಲ್ಲಿ ಜನರು ಅಸೂಯೆಯಿಂದ ಹೀಗೆ ಸುಳ್ಳು ಬರೆಯುವುದುಂಟು ; ನಮ್ಮ ರಾಜಸಿಂಹರೇ ಇದಿರಿಗೆ ಇರುವುದರಿಂದ ಈ ಭಾಗದಲ್ಲಿ ನಮ್ಮ ಕೆಲಸವು ಸುಲಭವಾಗುವುದು' ಎಂದು ಹೇಳಿ 'ಸಿಂಹನಾದ' ಪತ್ರಿಕೆಯಲ್ಲಿ ಬರೆದಿದ್ದುದನ್ನು ಮೊದಲು ಓದಿ, ಅನಂತರ 'ಸಮದರ್ಶಿ' ಎಂಬ ದಿನ ಪತ್ರಿಕೆಯಲ್ಲಿದ್ದುದನ್ನೂ ಓದಿದನು.

"ಆಗ ರಾಜಸಿಂಹನು ತಾವು ತಂದಿದ್ದ ಯಾವುದೋ ಒಂದು ಪುಸ್ತಕವನ್ನು ಓದುತ್ತಲಿದ್ದರು. ಯವನದೇಶ, ವಿಷಯಲಂಪಟ, ರಾಜಸಿಂಹ ಎಂಬ ಮಾತುಗಳು ಕಿವಿಗೆ ಬೀಳಲು ಅವರ ಮನವು ಸಭಾನಾಯಕನು ಓದಿದ ಸಮಾಚಾರದ ಮೇಲೆ ಬಿದ್ದು, ಕೊನೆಗೆ ಮುಖವು ಬಣ್ಣಗೆಟ್ಟು ಸುಣ್ಣದ ಗೋಡೆಯಂತಾಯಿತು. ಅವರ ಮುಖಭಾವವನ್ನು ನೋಡಿ ಕೆಲವರಿಗೆ ಅವರಲ್ಲಿ ಮರುಕವುಂಟಾಯಿತು. ಶತ್ರುವಾದರೂ ಕೆಳಗೆ ಬಿದ್ದಾಗ ಉದಾರ ಹೃದಯರು ಮರುಕವನ್ನು ತೋರುವರು. ಆಗ ಸಭಾನಾಯಕನು 'ಸಭಿಕರೇ, ಇಲ್ಲಿ ಈ ಪ್ರಸ್ತಾಪವನ್ನು ಮಾಡಕೂಡದೆಂದಿದ್ದೆನು; ಆದರೆ ನಮ್ಮಲ್ಲಿ ಕೆಲವರು ಈ ವಿಷಯವು ಇತ್ಯರ್ಥವಾಗದಿದ್ದರೆ ಸಭೆಯ ಗೌರವವು ಹಾಳಾಗುವುದು' ಎಂದು ಹೇಳಿದರು. "ಈ ವಿಚಾರದಲ್ಲಿ ತಮ್ಮ ಅಭಿಪ್ರಾಯ ವೇನು ?'

ಎಂದು ಕೇಳಲು, ಸಭಿಕರೆಲ್ಲರೂ ಇತ್ಯರ್ಥವಾಗಬೇಕೆಂದು ಒಪ್ಪಿದರು. ಆಗ ಸಭಾನಾಯಕನು ರಾಜಸಿಂಹರನ್ನು ಕುರಿತು 'ಸ್ವಾಮೀ, ಈ ವಿಷಯದಲ್ಲಿ ತಾವು ಹೇಳತಕ್ಕುದೇನಿದೆ ? ಅದಕ್ಕೆ ಎಷ್ಟು ಕಾಲ ಬೇಕು ?' ಎಂದು ಕೇಳಿದನು.

"ಆಗ ರಾಜಸಿಂಹರು ಎದ್ದು 'ಈ ವಿಷಯವಾಗಿ ಯೋಚನೆ ಮಾಡಬೇಕಾದುದೇನೂ ಇಲ್ಲ. ಪತ್ರಿಕೆಗಳಲ್ಲಿ ಅವರಿವರು ಸ್ವೇಚ್ಛೆಯಾಗಿ ಬರೆಯುವುದುಂಟೆಂಬುದು ಎಲ್ಲರಿಗೂ ತಿಳಿದಿದೆ. ಇಂತಹ ಸಂದರ್ಭಗಳಲ್ಲಿ ಯಾವನಾದರೂ ತಮ್ಮ ಹೆಸರಿನಲ್ಲಿ ಬರೆಯಬೇಕೆಂಬುದೂ ತಮಗೆಲ್ಲ ವೇದ್ಯವಾಗಿದೆ. ಊರು, ಹೆಸರು, ಒಂದೂ ಇಲ್ಲದೆ ಯಾವನೋ ಏನೋ ಬರೆದಿರುವುದರಿಂದ ಅದನ್ನು ನಾನು ಗಣನೆಗೆ ತಾರೆನು. ಹಾಗೂ ಈ ಮಹಾಸಭಿಕರಲ್ಲಿ ಯಾರಿಗಾದರೂ ಈ ವಿಷಯವನ್ನು ಕೂಲಂಕಷವಾಗಿ ತಿಳಿಯಬೇಕೆಂಬ ಅಭಿಪ್ರಾಯವಿದ್ದರೆ ನನ್ನಲ್ಲಿ ಕೆಲವು ಕಾಗದಗಳಿವೆ, ಅವನ್ನು ತಂದು ತೋರಿಸುತ್ತೇನೆ' ಎಂದು ಹೇಳಲು, ಸಭಿಕರಲ್ಲಿ ಕೆಲವರು 'ಅವರು ಹೇಳುವುದು ನ್ಯಾಯ' ಎಂದರು ; ಮಿಕ್ಕವರೆಲ್ಲರೂ 'ಪತ್ರಿಕಾ ಪ್ರಸಂಗವಾದ ಮೇಲೆ ಅದನ್ನು ಇತ್ಯರ್ಥ ಮಾಡಿಬಿಡುವುದೇ ಮೇಲು' ಎಂದರು. ಆಗ ಸಭಾನಾಯಕನು ರಾಜಸಿಂಹರನ್ನು ಕುರಿತು 'ಸ್ವಾಮೀ, ಸಭಿಕರಲ್ಲಿ ಅನೇಕರು ಇತ್ಯರ್ಥಮಾಡುವುದೇ ಮೇಲೆಂದು ಅಭಿಪ್ರಾಯಪಡುತ್ತಾರಾಗಿ ತಮ್ಮಲ್ಲಿರುವ ಪತ್ರಗಳನ್ನು ತೆಗೆದುಕೊಂಡು ಬಂದರೆ ಉತ್ತಮ' ಎಂದನು. ಆಗ ರಾಜಸಿಂಹರು ಮನೆಗೆ ಹೋಗಿ ಬೇಕಾದುದನ್ನು ತೆಗೆದುಕೊಂಡು ಬಂದರು.

"ಅವರು ಮರಳಿ ಸಭೆಗೆ ಬರುವುದರೊಳಗಾಗಿ ರಾಜಸಿಂಹರ ವಿಚಾರಣೆಯಾಗುತ್ತದೆ ಎಂಬ ವರ್ತಮಾನವು ಊರೆಲ್ಲ ಹಬ್ಬಿ, ಎಲ್ಲರೂ ಸಭಾಸ್ಥಾನದಲ್ಲಿ ಬಂದು ಕಿಕ್ಕಿರಿದಿದ್ದರು. ರಾಜಸಿಂಹರು ಮನೆಗೆ ಹೋಗಿ ಬಂದ ಮೇಲೆ ಸಭಾಧ್ಯಕ್ಷನು 'ಸ್ವಾಮೀ ರಾಜಸಿಂಹರೇ, ಈ ವಿಷಯದಲ್ಲಿ ತಾವು ಹೇಳುವುದು ಏನಾದರೂ ಇದ್ದರೆ ದಯೆಮಾಡಿ ತಿಳಿಸಬೇಕು' ಎಂದನು. ಆಗ ನಿಮ್ಮ ತಂದೆಗಳು ಕ್ಷಿತೀಂದ್ರನಿಗೆ ತಮ್ಮಲ್ಲಿದ್ದ ನಂಬುಗೆಯನ್ನೂ ವಿಶ್ವಾಸವನ್ನೂ ತೋರಿಸಲು ಅವನ ಬರೆಹದಲ್ಲಿದ್ದ ಅನೇಕ ಕಾಗದಗಳನ್ನೂ, ಚಕ್ರವರ್ತಿಯ ಸಂಗಡ ಸಮಾಧಾನ ಮಾಡಿಕೊಂಡು ಬರಲೋಸುಗ ಸರ್ವಸ್ವಾತಂತ್ರ್ಯವನ್ನು ಕೊಟ್ಟು ತತ್ಸೂಚಕವಾಗಿ ತಮ್ಮಲ್ಲಿ ಕೊಟ್ಟಿದ್ದ ಮುದ್ರೆಯುಂಗುರವನ್ನೂ ಸಭಾನಾಯಕನ ಮುಂದಿಟ್ಟು, ಗ್ರಹಚಾರವಶಾತ್ ಸಮಾಧಾನವಾಗದೆ ತಾವು ಹಿಂತಿರುಗಿ ಬರುವುದರೊಳಗಾಗಿ ರಾಜನು ಸತ್ತಿದ್ದನೆಂದೂ, ಸಾಯುವಾಗ ತನ್ನ ಹೆಂಡತಿ ಮಕ್ಕಳನ್ನು ತಮ್ಮ ಪೋಷಣೆಯಲ್ಲಿರುವಂತೆ ಹೇಳಿದ್ದನೆಂದೂ, ತಾವು ಅವನಿಗೆ ದ್ರೋಹಮಾಡಿದ್ದರೆ ಅವನು ಹೀಗೆಲ್ಲ ಮಾಡುತ್ತಲಿದ್ದನೇ ಎಂದೂ ಕೇಳಿದರು.

"ಅವರು, ಹೀಗೆಂದು ಹೇಳುತ್ತಲೆ ಸಭಿಕರಲ್ಲಿ ಅವರಿಗೆ ಅನುಕೂಲರಾಗಿದ್ದವರು 'ಅಯ್ಯೋ, ಪಾಪ, ಇವರಿಗೆ ಆಗದಿದ್ದವರಾರೋ ಇಲ್ಲದ ಅಪವಾದವನ್ನು ತಂದು ಅವಮಾನ

ಮಾಡಬೇಕೆಂದು ಈ ರೀತಿ ಪತ್ರಿಕೆಯಲ್ಲಿ ಸುಳ್ಳು ಬರೆದಿದ್ದಾರೆ' ಎಂದು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಲಿದ್ದರು. ಪ್ರತಿಕೂಲರಾದವರು 'ರಾಜಸಿಂಹರು ಇಷ್ಟು ಅಲ್ಪ ಕಾಲದಲ್ಲಿ ಇಷ್ಟು ದೊಡ್ಡ ಸ್ಥಿತಿಯನ್ನು ಹೊಂದಿದ್ದನ್ನು ನೋಡಿದರೆ ಆ ಪತ್ರಿಕೆಯಲ್ಲಿ ಬರೆದಿರುವ ಸಮಾಚಾರವು ಸುಳ್ಳಾಗಿರಲಾರದು. ನಿಜವೆಂದು ಹೇಳುವುದಕ್ಕೆ ನಮ್ಮಲ್ಲಿ ಸಾಧಕಗಳು ಇಲ್ಲವಾದುದರಿಂದ ಸುಮ್ಮನಿರಬೇಕಾಗಿದೆ' ಎಂದುಕೊಳ್ಳುತ್ತಲಿದ್ದರು.

"ಈ ಮಧ್ಯೆ ಯಾರೋ ಒಂದು ಲೇಖನವನ್ನು ಸಭಾನಾಯಕನಿಗೆ ಕೊಟ್ಟು ಕಳುಹಿಸಿದರು. ಅವರು ಅದನ್ನು ಓದಿ ಓದಿ ಕೊನೆಗೆ ರಾಜಸಿಂಹರನ್ನು ನೋಡಿ 'ಸ್ವಾಮೀ, ರಾಜಸಿಂಹರೇ, ಕ್ಷಿತೀಂದ್ರನು ತನ್ನ ಹೆಂಡತಿಯನ್ನೂ ಮಗಳನ್ನೂ ನಿಮ್ಮ ಪೋಷಣೆಯಲ್ಲಿ ಬಿಟ್ಟಿದ್ದನಷ್ಟೆ; ಅವರು ಏನಾದರು ?' ಎಂದು ಕೇಳಲು,

'ನನ್ನ ದುರದೃಷ್ಟಕ್ಕೆ ಸರಿಯಾಗಿ ನಾನು ಬರುವುದರೊಳಗಾಗಿಯೇ ಅವರು ಎಲ್ಲೋ ಮಾಯವಾಗಿದ್ದರು.'

" 'ನೀವು ಅವರನ್ನು ನೋಡಿದ್ದೀರೋ ?'

" 'ನನ್ನ ವಿಷಯದಲ್ಲಿ ಕ್ಷಿತೀಂದ್ರನಿಗೆ ಸಂಪೂರ್ಣವಾದ ನಂಬುಗೆಯಿದ್ದುದರಿಂದ ಅವನ ರಾಣಿವಾಸದಲ್ಲೆಲ್ಲಾ ನಾನು ತಡೆಯಿಲ್ಲದೆ ಓಡಾಡುತ್ತಲಿದ್ದೆ. ಆದುದರಿಂದ ಎಷ್ಟೋ ಸಲ ಅವರನ್ನು ನೋಡಿದ್ದೇನೆ.'

" 'ತರುವಾಯ ಅವರ ಸುದ್ದಿಯೇ ನಿಮಗೆ ಗೊತ್ತಾಗಲಿಲ್ಲವೋ ?'

" 'ಅವರು ದುಃಖಕ್ಕೆ ಸಿಕ್ಕಿ, ಹೊಟ್ಟೆಗೂ ಇಲ್ಲದೆ, ಸತ್ತುಹೋದರೆಂದು ಕೇಳಿದೆ. ಹೇಗಾದರೂ ಮಾಡಿ ಅವರನ್ನು ಹುಡುಕೋಣವೆಂದರೆ, ನನಗೆ ತಕ್ಕ ಉಪಪತ್ತಿಯಿರಲಿಲ್ಲ. ನನ್ನ ಜೀವವನ್ನು ಉಳಿಸಿಕೊಳ್ಳುವುದೇ ಕೃತಾವಸ್ಥೆಯಾಯಿತು.'

" 'ಇದಕ್ಕೆ ಸಾಕ್ಷಿಯುಂಟೋ ?'

" 'ಒಬ್ಬರೂ ಇಲ್ಲ. ಎಲ್ಲರೂ ಸತ್ತೂ ಕೆಟ್ಟೂ ಹೋದರು. ಕ್ಷಿತೀಂದ್ರನ ಕಾಗದಗಳು, ಅವನ ಮುದ್ರೆಯ ಉಂಗುರ, ಇವುಗಳಲ್ಲದೆ ಮತ್ತಾವುವೂ ಇಲ್ಲ. ಈ ಸಂಗತಿಗಳು ನಡೆದು ಎಷ್ಟೋ ವರ್ಷಗಳಾದುವು ; ಹಾಗೇನಾದರೂ ಸಾಕ್ಷಿಗಳು ಇದ್ದಿದ್ದರೆ ಇದುವರೆಗೂ ಜನರು ಸುಮ್ಮನೆ ಇರುತ್ತಿದ್ದರೇ ? ಇದಲ್ಲದೆ ಈ ಪತ್ರಿಕೆಯಲ್ಲಿ ಬರೆದಿರುವುದು ನಿಜವಾಗಿದ್ದರೆ ಈ ಮಹಾಸಭೆಗೆ ಬಂದು ಮುಖತಃ ಹೇಳದೆ ಊರೂ ಹೆಸರೂ ಇಲ್ಲದೆ ಹೀಗೆ ಬರೆಯುತ್ತಲಿದ್ದರೇ ? ಅದು ಸುಳ್ಳೆಂದು ಹೇಳಲು ಈ ಎರಡು ಕಾರಣಗಳೇ ಸಾಕು.'

" 'ಈ ಕಾರಣಗಳನ್ನು ಹೇಳುತ್ತಲೆ ಪ್ರತಿಕೂಲರೂ ನಿಜ,ನಿಜ,' ಎಂದು ಹೇಳತೊಡಗಿದರು. ಆಗ ಸಭಾನಾಯಕನು ಎದ್ದು ನಿಂತು 'ಸಭಿಕರೇ, ಈ ವಿಷಯವಾಗಿ ಸಾಕ್ಷಿಯನ್ನು ಹೇಳಲು ಯಾರೋ ಬಾಗಿಲಲ್ಲಿ ಬಂದು ನಿಂತಿರುವಂತೆ ಈ ಲೇಖನದಿಂದ ತಿಳಿಯಬರುತ್ತಿದೆ. ಅವರನ್ನು ಕರೆಸಿ ಕೇಳುವುದು ಉಚಿತವೆಂದು ನಿಮಗೆ ತೋರಿದ

ಸಂದರ್ಭದಲ್ಲಿ ಕರೆಸುತ್ತೇನೆ' ಎಂದನು. ನಿನ್ನ ತಂದೆಗೆ ಪ್ರತಿಕೂಲಕಕ್ಷಿ ಬಲವಾಗಿದ್ದುದರಿಂದ ಅನೇಕರು 'ಕರೆಸಿ ಕೇಳುವುದು ಮೇಲು' ಎಂದರು.

" 'ಹಾಗಾದರೆ ಅವರು ಬರೆದಿರುವ ಈ ಲೇಖನವನ್ನು ಓದುತ್ತೇನೆ, ಕೇಳಿರಿ,' ಎಂದು ಸಭಾನಾಯಕನು ಅದನ್ನು ಓದಿದನು. ಅದರಲ್ಲಿ ಹೀಗಿದ್ದಿತು :—

" 'ಸಭಾನಾಯಕರಿಗೆ ಬಿನ್ನಹ. ಕ್ಷಿತೀಂದ್ರನ ಅಂತ್ಯಕಾಲದಲ್ಲಿ ಅವನ ಸಮೀಪದಲ್ಲಿಯೇ ಇದ್ದು ಅವನ ಹೆಂಡತಿಯೂ ಮಗಳೂ ಏನಾದರೆಂಬುದನ್ನು ನಾನು ಚೆನ್ನಾಗಿ ಬಲ್ಲೆನು ; ಸಭೆಯಲ್ಲಿ ಈಗ ವಿಚಾರಣೆ ನಡೆಯುತ್ತಲಿರುವ ಸಂಗತಿಯನ್ನೂ ಸಭಿಕರಿಗೆ ತೃಪ್ತಿಕರವಾಗಿ ತಿಳಿಸಬಲ್ಲೆನು. ತಮ್ಮ ಅಪ್ಪಣೆಯನ್ನು ನಿರೀಕ್ಷಿಸುತ್ತ ಬಾಗಿಲಲ್ಲಿಯೇ ಕಾದಿದ್ದೇನೆ' ಎಂದು ಓದಿ, ತರುವಾಯ ಆಳನ್ನು ಕೂಗಿ 'ಎಲಾ, ಬಾಗಿಲಲ್ಲಿ ನಿಂತಿರುವ ಸಾಕ್ಷಿಯನ್ನು ಕರೆದುಕೊಂಡು ಬಾ' ಎಂದು ಆಜ್ಞಾಪಿಸಿದನು.

"ಆಗ ದ್ವಾರಪಾಲಕನ ಸಂಗಡ ಅವಕುಂಠನವತಿಯಾದ ಹೆಂಗಸೊಬ್ಬಳು ಸಭೆಗೆ ಬಂದಳು. ಅನುಲೇಪನದ ವಾಸನೆಯಿಂದಲೂ ಆಕಾರದಿಂದಲೂ ಅವಳು ಯುವತಿಯೆಂದು ತಿಳಿಯಬಂದಿತು. ಅವಳು ಸಭಾನಾಯಕನ ಮುಂದೆ ನಿಂತು, ಮುಸುಕನ್ನು ತೆಗೆದು ತಲೆಬಾಗಿದಳು. ಅವಳು ಯವನ ದೇಶದವಳು, ಅವಳ ಸೌಂದರ್ಯವನ್ನು ನೋಡಿ ಎಲ್ಲರೂ ಮುಗ್ಧರಾದರು. ಅದುವರೆಗೂ ಎದ್ದುನಿಂತಿದ್ದ ರಾಜಸಿಂಹನು ಅವಳನ್ನು ನೋಡಿದೊಡನೆಯೇ ಭಯಪಟ್ಟು ದಿಗ್ಭ್ರಾಂತರಾದರು. ಆಗ ಸಭಾನಾಯಕನು ಅವಳನ್ನು ಕುರಿತು ಈ ರೀತಿ ಪ್ರಶ್ನೆ ಮಾಡತೊಡಗಿದನು.

" 'ಅಮ್ಮಾ, ಸಾಕ್ಷಿ ಹೇಳಲು ಬಂದಿರುವವಳು ನೀನೆಯೋ ?'

" 'ಮಹಾಸ್ವಾಮೀ, ಅಹುದು.'

" 'ಕ್ಷಿತೀಂದ್ರನ ಮರಣಕಾಲದಲ್ಲಿ ನಿನಗೆ ಎಷ್ಟು ವಯಸ್ಸು ?'

" 'ನಾಲ್ಕು'

" 'ಆ ವಯಸ್ಸಿನಲ್ಲಿ ನಡೆದುದು ನಿನಗೆ ಹೇಗೆ ಗೊತ್ತು ?'

" 'ವಯಸ್ಸು ಸಣ್ಣದಾಗಿದ್ದರೂ ಇದಿರಿಗಿದ್ದು ನೋಡಿ ಆಡಿ ಅನುಭವಿಸಿದವಳಾದುದರಿಂದ, ಆಗ ನಡೆದ ಸಂಗತಿಗಳೆಲ್ಲವೂ ಮನದಲ್ಲಿ ಚೆನ್ನಾಗಿ ನಟ್ಟುಹೋಗಿವೆ.'

" 'ಆಗಿನ ಸಂಗತಿಗಳು ನಿನಗೆ ಅಷ್ಟು ಚೆನ್ನಾಗಿ ಪರಿಚಯವಾಗಬೇಕಾಗಿದ್ದರೆ ನಿನಗೂ ಕ್ಷಿತೀಂದ್ರನಿಗೂ ಏನಾದರೂ ಸಂಬಂಧವುಂಟೋ ?'

" 'ಸ್ವಾಮೀ, ಉಂಟು. ನಾನು ಕ್ಷಿತೀಂದ್ರನ ಮಗಳು' ಎಂದು ಹೇಳಲು, ರಾಜಸಿಂಹನಿಗೆ ಸಿಡಿಲು ಬಡಿದಂತಾಯಿತು.

" 'ನಿನ್ನ ಹೆಸರೇನು ?'

“ ‘ಕೋಮಲೆ’

“ ‘ನೀನೇ ಅವನ ಮಗಳು ಎಂದು ನಂಬುವುದು ಹೇಗೆ ? ಅದಕ್ಕೆ ಏನಾದರೂ ಸಾಧಕಗಳು ನಿನ್ನಲ್ಲಿ ಉಂಟೋ ?’

“ ‘ಉಂಟು, ಮಹಾಸ್ವಾಮೀ, ಇಗೋ, ನಮ್ಮಪ್ಪನು ಬರೆಸಿದ ಜಾತಕ ; ಇದರಲ್ಲಿ ಅವನ ಹಸ್ತಾಕ್ಷರವೂ ರಾಜಮುದ್ರೆಯೂ ಇವೆ. ಇಗೋ, ಇದನ್ನು ಪರಾಂಬರಿಸಬೇಕು. ಇದೀಗ ಇವನು ನನ್ನನ್ನೂ ನನ್ನ ತಾಯಿಯನ್ನೂ ಸಂತೆಯಲ್ಲಿ ಬಂದಿಗಳನ್ನಾಗಿ ಮಾರಿದ ಕ್ರಯಪತ್ರ : ಇಗೋ, ಇದೀಗ ಆ ವ್ಯಾಪಾರಿಯಿಂದ ರಾಜಾ ಮಲಯಸಿಂಹರು ನನ್ನನ್ನು ಕೊಂಡ ಕ್ರಯಪತ್ರ’ ಎಂದು ಆ ಮೂರು ಕಾಗದಗಳನ್ನೂ ಸಭಾನಾಯಕನ ಕೈಗೆ ಕೊಟ್ಟಳು.

“ಜಾತಕದಲ್ಲಿ ಕ್ಷಿತೀಂದ್ರನ ಕೈಬರಹವೂ ರಾಜಮುದ್ರೆಯೂ ಇದ್ದುದರಿಂದ ಅದನ್ನು ಎಲ್ಲರೂ ಒಪ್ಪಿಕೊಂಡರು, ಕೆಲವರು ಕ್ರಯಪತ್ರವನ್ನು ಓದಬೇಕೆಂದು ಸಭಾನಾಯಕನನ್ನು ಕೇಳಿಕೊಂಡುದರಿಂದ ಅವನು ಈ ರೀತಿ ಓದಿದನು ;—

“ ‘ಸೆರೆಯಾಳುಗಳ ವ್ಯಾಪಾರಿಯೂ ಸುಲತಾನರ ಅಂತಃಪುರಕ್ಕೆ ಆಳುಗಳನ್ನು ಒದಗಿಸಿಕೊಡುವವನೂ ಆದ ಕರ್ಣಕುಂಭನೆಂಬ ನಾನು ರಾಜಾ ಮಲಯಸಿಂಹರಿಗೆ ಬರೆದುಕೊಟ್ಟ ಕ್ರಯಪತ್ರ—ಈ ದಿನ ನನ್ನ ಯಜಮಾನರು ಸುಲತಾನರಿಗೆ ಒಪ್ಪಿಸುವುದಕ್ಕಾಗಿ ರಾಜಾ ಮಲಯಸಿಂಹರಿಂದ ಎಂಟು ಲಕ್ಷ ವರಹ ಬೆಲೆಯುಳ್ಳ ಇಂದ್ರನೀಲಮಣಿಯನ್ನು ತೆಗೆದುಕೊಂಡು ಅದಕ್ಕೆ ಬದಲಾಗಿ ಸುಲತಾನರಿಗೋಸ್ಕರ ಇಂದಿಗೆ ಏಳು ವರ್ಷಗಳ ಹಿಂದೆ ಅಮರಪುರದ ಸರದಾರರಾದ ವಿಷಯಲಂಪಟರೆಂಬುವರಿಂದ ನಾನು ಕ್ರಯಕ್ಕೆ ತೆಗೆದುಕೊಂಡಿದ್ದ ಕ್ಷಿತೀಂದ್ರನ ಮಗಳಾದ ಕೋಮಲೆಯೆಂಬ ಹನ್ನೊಂದು ವಯಸ್ಸಿನ ಹುಡುಗಿಯರನ್ನು ಸುಲತಾನರ ಅನುಮತಿಯಂತೆ ರಾಜಾ ಮಲಯಸಿಂಹರಿಗೆ ಒಪ್ಪಿಸಿದ್ದೇನೆ. ಹಿಂದೆ ವಿಷಯಲಂಪಟರಿಂದ ನಾನು ಕ್ರಯಕ್ಕೆ ಕೊಂಡು ಪಡೆದಿದ್ದ ಕ್ರಯಪತ್ರವನ್ನೂ ಇದರ ಜತೆಯಲ್ಲಿ ಸೇರಿಸಿರುತ್ತೇನೆ.’

“ಹೀಗೆಂದು ಸಭಾನಾಯಕನು ಓದುತ್ತಿದ್ದಾಗ ಸಭೆಯೆಲ್ಲವೂ ನಿಶ್ಶಬ್ದವಾಗಿದ್ದಿತು. ರಾಜಸಿಂಹರ ಕಣ್ಣುಗಳು ಮಾತ್ರ ಕೋಮಲೆಯನ್ನು ನುಂಗುವುವೋ ಎಂಬಂತೆ ಬೆಂಕಿಯನ್ನು ಉಗಿಯುತ್ತಲಿದ್ದುವು. ಅಲ್ಲಿ ಸೇರಿದ್ದ ಜನರೆಲ್ಲರೂ ಕೋಮಲೆಯಲ್ಲಿ ಕನಿಕರವನ್ನು ತೋರಿಸುತ್ತಲೂ ರಾಜಸಿಂಹರಲ್ಲಿ ಅನುಮಾನಪಡುತ್ತಲೂ ಇದ್ದರು. ಆಗ ಸಭಾನಾಯಕನು ಕೋಮಲೆಯನ್ನು ನೋಡಿ

“ ‘ಅಮ್ಮ, ರಾಜಾ ಮಲಯಸಿಂಹರು ಈಗ ಈ ಊರಿನಲ್ಲಿರುತ್ತಾರೆ. ಅವರನ್ನು ಕರೆಸಿ ಈ ವಿಷಯವನ್ನು ವಿಚಾರಿಸಬಹುದೋ ?’ ಎಂದು ಕೇಳಿದನು.

“ ‘ರಾಜಾ ಮಲಯಸಿಂಹರು ಮೂರು ದಿನಗಳಿಂದಲೂ ಈ ಊರಿನಲ್ಲಿ ಇಲ್ಲ.’

“ ‘ಹೀಗೆ ಸಾಕ್ಷಿಯನ್ನು ಹೇಳೆಂದು ನಿನಗಾರು ಹೇಳಿದರು ?’

" 'ನನ್ನ ದುಃಖವೇ ಹೇಳಿಸಿತು."

" 'ನೀನು ಸಾಕ್ಷಿ ಹೇಳುವುದನ್ನು ರಾಜರು ಬಲ್ಲರೋ ?'

" 'ಅವರು ಕಾಣರು. ಅವರು ಊರಿಗೆ ಬಂದ ಮೇಲೆ ಏನೆನ್ನುತ್ತಾರೋ ಎಂದು ದಿಗಿಲಾಗಿದೆ. ನನ್ನ ತಂದೆಯ ರಾಜ್ಯವನ್ನು ಹಾಳುಮಾಡಿ, ಅವನನ್ನು ಕೊಂದು, ತಾಯಿಯನ್ನು ಸಾಯಿಸಿ, ನನ್ನನ್ನು ಸೆರೆಯಾಳಾಗಿ ಮಾರಿದ ಈ ಚಂಡಾಲನಿಗೆ ಎಂದು ತಕ್ಕ ಶಿಕ್ಷೆಯಾದೀತೋ ಎಂದು ಹಾರೈಸುತ್ತಿದ್ದ ನನಗೆ ತೃಪ್ತಿಯಾಯಿತು' ಎಂದು ಹೇಳುತ್ತಿದ್ದಾಗ ರಾಜಸಿಂಹರು ಪಿಟಿಪಿಟಾಯಿಸದೆ ಇದ್ದರು. 'ಅಯ್ಯೋ ! ಅಬಲೆಯ ವಾಕ್ಕೆಂಬ ಅಮೃತವೆ ಇವರಿಗೆ ವಿಷವಾಯಿತೇ' ಎಂದು ಸಭಾಸದರು ಮರುಕಗೊಂಡರು. ಆಗ ಸಭಾನಾಯಕನು ನಿನ್ನ ತಂದೆಯನ್ನು ನೋಡಿ,

" 'ರಾಜಸಿಂಹರೇ, ಇವಳು ಕ್ಷಿತೀಂದ್ರನ ಮಗಳೋ ?' ಎಂದು ಕೇಳಲು, ಅವರು,

" 'ಅಲ್ಲ, ಇದು ಹಗೆಗಳ ಕೃತ್ರಿಮಸಂಧಾನ' ಎಂದು ಎದ್ದು ನಿಲ್ಲುವುದಕ್ಕೆ ಹೋದರು ; ಸಾಧ್ಯವಾಗಲಿಲ್ಲ.

ಆಗ ಕೋಮಲೆಯ ಮುಖವು ಕೋಪದಿಂದ ಕೆಚ್ಚನಾಗಿ,

" 'ಎಲಾ ಪಾಪಿ, ವಿಷಯಲಂಪಟ, ನೀನು ನನ್ನನ್ನು ಕಾಣೆಯಾ ? ನಿನ್ನನ್ನು ನಾನು ಬಲ್ಲೆ. ನೀನು ನನ್ನ ತಂದೆಯ ಬಳಿ ಸೇನಾನಾಯಕನಾಗಿದ್ದು ಅವನ ಕೋಟೆಯನ್ನು ಶತ್ರುಗಳ ವಶ ಮಾಡಲಿಲ್ಲವೇ ? ನನ್ನ ತಂದೆಯಿಂದ ಪ್ರೇರಿತನಾಗಿ ಸಮಾಧಾನಮಾಡಿಕೊಂಡು ಬರಲು ಚಕ್ರವರ್ತಿಯ ಬಳಿಗೆ ಹೋಗಿ ಅಲ್ಲಿಂದ ಬಂದು ಅವನು ಮನ್ನಿಸಿದನೆಂದು ಸುಳ್ಳು ಕಾಗದವನ್ನು ತೋರಿಸಿ ನನ್ನ ತಂದೆಯ ಮುದ್ರೆಯ ಉಂಗುರವನ್ನು ಕಸುಕೊಂಡು ಅವನ ಆಪ್ತಸೇವಕನಿಗೆ ತೋರಿಸಿ ಮೋಸದಿಂದ ನೀನು ಅವನನ್ನೂ ನನ್ನ ತಂದೆಯನ್ನೂ ಕೊಂದವನಲ್ಲವೇ ? ನನ್ನ ತಾಯಿಯನ್ನೂ ನನ್ನನ್ನೂ ಸೆರೆಯಾಳಾಗಿ ಮಾರಿದ ಚಂಡಾಲನಲ್ಲವೇ ? ಕಟುಕ, ಕಟುಕ ! ನಿನ್ನ ಅರಸನಾದ ಕ್ಷಿತೀಂದ್ರನ ರಕ್ತದ ಕಲೆಯು ಇನ್ನೂ ನಿನ್ನ ಹಣೆಯ ಮೇಲೆ ಇದೆಯಲ್ಲ ! ಸಭಿಕರೇ, ಇವನ ಮುಖವನ್ನು ನೋಡಿ,'

"ಎಂದು ಹೇಳಲು, ಎಲ್ಲರೂ ರಾಜಸಿಂಹನ ಮುಖವನ್ನು ನೋಡಿದರು. ರಾಜಸಿಂಹರೂ ಹಣೆಯನ್ನು ಒರಸಿಕೊಂಡರು. ಆಗ ಸಭಾನಾಯಕನು 'ಅಮ್ಮಾ, ಇವರೇ ವಿಷಯಲಂಪಟರೆಂದು ಹೇಳಬಲ್ಲೆಯೋ ?' ಎಂದನು.

" 'ಸ್ವಾಮೀ, ಇವನು ನಮ್ಮನ್ನು ಸೆರೆಯಾಳುಗಳಾಗಿ ಮಾರಿದಾಗ ನನ್ನ ತಾಯಿಯು ಇವನನ್ನು ತೋರಿಸಿ 'ಮಗೂ, ಈ ಚಂಡಾಲನನ್ನು ಚೆನ್ನಾಗಿ ನೋಡಿಕೊಂಡಿರು. ಇವನೇ ನಿನ್ನ ತಂದೆಯನ್ನು ಕೊಂದವನು ; ಇವನೇ ನಮ್ಮನ್ನು ಸೆರೆಯಾಳುಗಳಾಗಿ ಮಾರಿದವನು ; ಇವನ ಮಿಕ್ಕ ಗುರುತುಗಳು ಯಾವುವೂ ಸಿಕ್ಕದಿದ್ದರೂ

ನಮ್ಮನ್ನು ಮಾರಿ ಕೈಯ್ಯೊಡ್ಡಿ ಹಣವನ್ನು ಒಂದೊಂದಾಗಿ ಎಣಿಸಿ ತೆಗೆದುಕೊಂಡ ಈ ನೀಚನ ಬಲಗಯ್ಯ ಗಾಯದ ಕಲೆಯನ್ನು ನೋಡಿಕೊಂಡಿರು' ಎಂದು ಹೇಳಿದ್ದಳು. ಈಗ ನನ್ನ ಗುರುತು ಇವನಿಗೆ ಇಲ್ಲವೆಂದು ಹೇಳಲಿ, ನೋಡೋಣ' ಎಂದು ಅವಳು ಹೇಳಿದಳು. ಕೋಮಲೆಯ ಒಂದೊಂದು ಮಾತೂ ರಾಜಸಿಂಹರ ಹೃದಯದಲ್ಲಿ ಒಂದೊಂದು ಬಾಣದಂತೆ ನೆಟ್ಟಿತು. ಅವರ ಶಕ್ತಿಯು ಕುಗ್ಗಿತು. ಅವರು ಅವಳ ಕೊನೆಯ ಮಾತನ್ನು ಕೇಳಿ ಸರಪರನೆ ಗಾಯದ ಕೈಯನ್ನು ಮರೆಸಿಕೊಂಡು ಹತಾಶರಾಗಿ ಏನನ್ನೂ ಆಡಲರಿಯದೆ ಬಳಲಿ ಕುರ್ಚಿಯ ಮೇಲೆ ಧೊಪ್ಪೆಂದು ಬಿದ್ದರು. ಈ ಅವಸ್ಥೆಯನ್ನು ನೋಡಿ ಸಭಾಸದರಿಗೆ ಅವರಲ್ಲಿದ್ದ ಮರುಕವು ಅಳಿದುಹೋಯಿತು. ಆಗ ಸಭಾನಾಯಕನು,

" 'ಸ್ವಾಮೀ, ರಾಜಸಿಂಹರೇ, ಅಧೈರ್ಯಪಡಬೇಡಿ. ಈ ವಿಚಾರದಲ್ಲಿ ಈಕೆಯನ್ನು ಕೇಳತಕ್ಕುದೇನಾದರೂ ಇದ್ದರೆ ಕೇಳಿಬಿಡಿ ; ಒಂದು ವೇಳೆ ಯವನ ದೇಶದಲ್ಲಿ ವಿಚಾರಿಸಿದಲ್ಲದೆ ವಿಷಯವು ಕೂಲಂಕಷವಾಗಿ ಇತ್ಯರ್ಥವಾಗುವುದಿಲ್ಲವೆಂದು ನೀವು ಹೇಳುವುದಾದರೆ ಇಬ್ಬರು ಸಭಿಕರನ್ನು ಅಲ್ಲಿಗೆ ಕಳುಹಿಸುತ್ತೇನೆ. ಏನು ಹೇಳುತ್ತೀರಿ' ಎಂದು ಕೇಳಲು, ರಾಜಸಿಂಹರು ಮಾತನಾಡಲರಿಯದೆ ಏನೂ ಇಲ್ಲ ; ಎಂದು ಕುಗ್ಗಿದ ಧ್ವನಿಯಿಂದ ಹೇಳಿಕೊಂಡರು. ಸಭಾನಾಯಕನು ಅವರನ್ನು ನೋಡಿ,

" 'ಕ್ಷಿತೀಂದ್ರನ ಮಗಳು ಹೇಳಿದುದೆಲ್ಲಾ ನಿಜವೋ ? ಅವಳು ನಿಮ್ಮ ಮೇಲೆ ಆಪಾದಿಸಿರುವ ಘೋರತರವಾದ ಕೃತ್ಯಗಳನ್ನು ಮಾಡಲಿಲ್ಲವೆಂದು ಹೇಳುವುದಕ್ಕೆ ನಿಮಗೆ ಧೈರ್ಯವಿದೆಯೋ ? ನಿಜವಾಗಿಯು ನೀವು ಆ ಕೃತ್ಯಗಳನ್ನು ಮಾಡಿದ್ದೀರೋ ?' ಎಂದು ಕೇಳಿದನು.

"ಆಗ ರಾಜಸಿಂಹರು ಬೀರಿದ ತೀವ್ರ ದೃಷ್ಟಿಯು ಕೋಪದಿಂದ ಅಬ್ಬರಿಸುವ ಹುಲಿಯನ್ನೂ ಬಗ್ಗಿಸಿಬಿಡುವಂತಿದ್ದಿತು. ನ್ಯಾಯವಿಮರ್ಶಕರು ಮಾತ್ರ ಜಗ್ಗದೆ ಹೋದರು. ರಾಜಸಿಂಹರು ತಲೆಯೆತ್ತಿ ನೋಡಿದರು. ಎಲ್ಲಿ ಆಕಾಶದಿಂದ ಮೇಲುಚಾವಣಿಯನ್ನು ಭೇದಿಸಿಕೊಂಡು ದಂಡವಿಧಾಯಕನಾದ ಭಗವಂತನೂ ಅವನ ಮಹಾ ಸಭೆಯೂ ಗೋಚರವಾಗುತ್ತದೆಯೋ ಎಂಬ ದಿಗಿಲುಬಿದ್ದವರಂತೆ ಎತ್ತಿದ ತಲೆಯನ್ನು ಒಡನೆಯೇ ತಗ್ಗಿಸಿಕೊಂಡರು. ತೊಟ್ಟಿದ್ದ ಅಂಗಿಯು ಕುತ್ತಿಗೆಯನ್ನು ಕಿವಿಚಿದಂತಾಗಲು, ಅದನ್ನು ಹರಿದು ಬಿಸುಟು, ಹುಚ್ಚರಂತೆ ಓಡಿಹೋಗಿ ಬಂಡಿಯಲ್ಲಿ ಕುಳಿತುಕೊಂಡು ಹೊರಟುಹೋದರು.

"ಆಗ ಸಭಾನಾಯಕನು ಸಭಿಕರನ್ನು ಕುರಿತು 'ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ?' ಎಂದು ಕೇಳಲು, ಅವರೆಲ್ಲರೂ ಏಕಾಭಿಪ್ರಾಯದಿಂದ 'ಸಂಶಯವೇ ಇಲ್ಲ. ರಾಜಸಿಂಹನು ದ್ರೋಹಿ, ಕೊಲೆಪಾತಕನು' ಎಂದರು. ಕೋಮಲೆಯು ಕೊನೆಯವರೆಗು ಇದ್ದು, ಸಭೆಯ ತೀರ್ಪನ್ನು ಕೇಳಿ ಸಭೆಗೆ

ವಂದಿಸಿ ಮುಖಕ್ಕೆ ಅವಕುಂಠವನ್ನು ಎಳೆದುಕೊಂಡು ಗಂಭೀರವಾಗಿ ಹೊರಟುಹೋದಳು.

"ಉದಯಸಿಂಹ, ನೀನಿಲ್ಲದಿದ್ದಾಗ ಇವುಗಳೆಲ್ಲವೂ ಇಲ್ಲಿ ನಡೆದುವು. ಸಭಾಸ್ಥಾನದಿಂದ ನಾನು ಮನೆಗೆ ಹೊರಟಾಗ ನನಗೆ ಒಂದು ಕಡೆ ದುಃಖ, ಒಂದು ಕಡೆ ಸಂತೋಷ. ನಿನ್ನ ತಂದೆಗೆ ಬಂದ ಕಷ್ಟವನ್ನು ನೋಡಿ ದುಃಖವೂ ಆ ಯುವತಿಯು ತನ್ನ ತಂದೆಯ ರಾಜ್ಯವನ್ನು ಹಾಳುಮಾಡಿ ತಂದೆತಾಯಿಗಳನ್ನು ಕೊಂದವನ ಮೇಲೆ ಆ ಮಹಾಸಭೆಯಲ್ಲಿ ಒಬ್ಬಳೇ ಧೈರ್ಯವಾಗಿ ನಿಂತು ತಪ್ಪನ್ನು ಹೊರಿಸಿದುದಕ್ಕಾಗಿ ಸಂತೋಷವೂ, ಏಕಕಾಲದಲ್ಲಿ ಉಂಟಾದುವು. ಆ ವೇಳೆಯಲ್ಲಿ ನೀನೇ ಅಲ್ಲಿದ್ದಿದ್ದರೇ ? ಆ ಯುವತಿಯ ಧೈರ್ಯವನ್ನು ನೋಡಿ ಮೆಚ್ಚುತ್ತಲಿದ್ದೆ" ಎಂದನು.

## ೫೯
## ಏಕಾಂತ ದರ್ಶನ

ಸ್ನೇಹಿತನು ಹೇಳಿದುದನ್ನೆಲ್ಲಾ ಕೇಳಿ ಉದಯಸಿಂಹನು,

"ಭದ್ರಸಿಂಹ, ಇಂದಿಗೆ ನನ್ನ ಅವತಾರ ಪೂರ್ತಿಯಾಯಿತು. ಇನ್ನು ನಾನು ಬದುಕಿದ್ದರೂ ಪ್ರಯೋಜನವಿಲ್ಲ. ನಮಗೆ ಹಗೆಯಾದವನನ್ನು ಕಂಡುಹಿಡಿದು ಕೊಲ್ಲದೆ ಬಿಡೆನು. ಇಲ್ಲದಿದ್ದರೆ ನಾನಾದರೂ ಸಾಯದೆ ಇರೆನು. ನೀನು ನನ್ನನ್ನು ಧಿಕ್ಕರಿಸದೆ ಇದ್ದರೆ ಈ ವಿಷಯದಲ್ಲಿ ಸಹಾಯವನ್ನು ಮಾಡಬೇಕು" ಎಂದನು.

"ನಿನ್ನನ್ನು ಧಿಕ್ಕರಿಸುವುದೇ ? ನಿನ್ನ ತಂದೆಯು ಮಾಡಿದ ಕೃತ್ಯಕ್ಕೆ ನೀನೇನು ಮಾಡಲಾದೀತು ? ನನ್ನಿಂದ ಆಗುವ ಸಹಾಯವನ್ನು ಅಗತ್ಯ ಮಾಡಿಕೊಡುತ್ತೇನೆ."

"ಈ ಕೆಲಸವನ್ನು ಯಾರು ಮಾಡಿರಬಹುದು, ಹೇಳು."

"ನಾನು ಯವನ ದೇಶಕ್ಕೆ ಹೋಗಿ ಅಲ್ಲಿಯ ಮುಖ್ಯ ಧನಾಗಾರಪತಿಯೊಡನೆ ಮಾತೆತ್ತುವುದಕ್ಕೆ ಮೊದಲೇ ಅವನು ಈಗ ಒಂದು ತಿಂಗಳ ಹಿಂದೆ ದುರ್ಮತಿಯು ಅದೇ ಸಮಾಚಾರವನ್ನು ವಿಚಾರಿಸಿಕೊಂಡು ಹೋದನೆಂದೂ ಹೇಳಿದನು."

"ಹಾಗೋ ! ಈಗ ಗೊತ್ತಾಯಿತು. ಮೊದಲಿನಿಂದಲೂ ಅವನಿಗೆ ನನ್ನ ತಂದೆಯಲ್ಲಿ ಅಸೂಯೆ. ಈಗ ಮದುವೆ ನಿಂತುಹೋದುದಕ್ಕೂ ಅದೇ ಕಾರಣ. ಆಗಲಿ, ಅವನಿಗೆ ತಕ್ಕುದನ್ನು ಮಾಡುತ್ತೇನೆ."

"ಉದಯಸಿಂಹ, ಅವನು ಮುದುಕ, ಸ್ವಲ್ಪ ಯೋಚಿಸಿ ಕೆಲಸಮಾಡು."

"ಅವನು ನನ್ನ ಮನೆತನಕ್ಕೆ ಗೌರವ ಕೊಟ್ಟ ಹಾಗೆಯೇ ನಾನೂ ಅವನ ವೃದ್ಧಾಪ್ಯಕ್ಕೆ ಗೌರವ ಕೊಡುತ್ತೇನೆ."

"ಆತುರಪಟ್ಟು ಯಾವುದನ್ನೂ ಮಾಡಬೇಡ."

"ಅವನ ಬಳಿಗೆ ಹೋಗಿ ಬರೋಣ, ಬಾ."

"ನಾನೂ ಬರಬೇಕೋ ?"

"ಅಹುದು, ಬಾ."

"ಹಾಗಾದರೆ ಹೋಗೋಣ, ನಡೆ."

ಭದ್ರಸಿಂಹನೂ ಉದಯಸಿಂಹನೂ ಬಂಡಿಯಲ್ಲಿ ಕುಳಿತುಕೊಂಡು ದುರ್ಮತಿಯ ಮನೆಗೆ ಹೋಗಿ ತಾವು ಬಂದ ಸಮಾಚಾರವನ್ನು ಹೇಳಿಕಳುಹಿಸಿದರು. ದುರ್ಮತಿಯು ಹಿಂದಿನ ದಿನ ನಡೆದುದನ್ನು ನೆನಸಿಕೊಂಡು ಅವರನ್ನು ನೋಡುವುದಕ್ಕೆ ಇಷ್ಟವಿಲ್ಲದೆ "ಈಗ ಯಾರನ್ನೂ ನೋಡುವುದಕ್ಕೆ ಆಗುವುದಿಲ್ಲ" ಎಂದು ಹೇಳಿಕಳುಹಿಸಿದನು. ಅಷ್ಟರೊಳಗೇ ಇಬ್ಬರೂ ಒಳಕ್ಕೆ ಹೋಗಿದ್ದರು. ಆಗ ದುರ್ಮತಿಯು ಅವರನ್ನು ಕುರಿತು,

"ಜನರನ್ನು ಒಳಗೆ ಬರಹೇಳುವುದಕ್ಕೂ ಹೇಳದಿರುವುದಕ್ಕೂ ನನ್ನ ಮನೆಯಲ್ಲಿಯೇ ನನಗೆ ಸ್ವಾತಂತ್ರ್ಯವಿಲ್ಲವೇ ?" ಎಂದು ಕೇಳಲು, ಉದಯಸಿಂಹನು,

"ಸ್ವಾಮೀ, ಕೆಲವು ಸಂದರ್ಭಗಳಲ್ಲಿ ಹೇಡಿತನದಿಂದ ಜನರು ಕೆಲವರನ್ನು ಒಳಕ್ಕೆ ಬಿಡುವುದಿಲ್ಲ."

"ನೀವು ಇಲ್ಲಿಗೆ ಏಕೆ ಬಂದಿರಿ ?"

"ನಮ್ಮಪ್ಪನಿಗೆ ಆದ ಅವಮಾನಕ್ಕಾಗಿ ನೀವೂ ನಾನೂ ಜನರಿಲ್ಲದ ಸ್ಥಳದಲ್ಲಿ ಸೇರಿ ಜಗಳವಾಡಬೇಕಾಗಿದೆ" ಎಂದು ಹೇಳಲು, ದುರ್ಮತಿಗೆ ಭಯವುಂಟಾಗಿ,

"ಹುಚ್ಚುನಾಯಿ ಮೇಲೆ ಬೀಳುವುದಾದರೆ ಅದನ್ನು ಯಾರಾದರೂ ಸುಮ್ಮನೆ ಬಿಟ್ಟಾರೋ ? ನಿಮ್ಮಪ್ಪನು ಮಾಡಿಕೊಂಡ ಕೆಲಸಕ್ಕೆ ನಾನೇನು ಮಾಡಲಿ ?"

"ನಮ್ಮಪ್ಪನ ತಪ್ಪು ನಿನ್ನಿಂದ ಹೊರಬಿದ್ದಿತು."

"ನಿನಗೇನು ಜ್ಞಾನವಿದೆಯೋ ಇಲ್ಲವೋ ? ನಾನು ಯವನ ದೇಶಕ್ಕೆ ಹೋಗಿದ್ದೆನೇ ? ಅಲ್ಲಿ ನಡೆದ ಸಮಾಚಾರಗಳು ನನಗೆ ಗೊತ್ತೇ ? ಕ್ಷಿತೀಂದ್ರನಿಗೆ ಕೇಡನ್ನು ಎಣಿಸೆಂದು ನಿಮ್ಮಪ್ಪನಿಗೆ ಹೇಳಿದೆನೇ ?"

"ಅವುಗಳನ್ನೆಲ್ಲಾ ಬಹಿರಂಗಪಡಿಸುವುದಕ್ಕೆ ನೀನಾರು ?"

"ನಾನು ಬಹಿರಂಗಪಡಿಸಿದೆನೇ ?"

"ಅಹುದು. ಆ ವಿಷಯವಾಗಿ ಯವನ ದೇಶಕ್ಕೆ ಬರೆದು ಸಮಾಚಾರ ತರಿಸಿಕೊಂಡವರಾರು ?"

"ಯಾರು ಬೇಕಾದರೂ ತರಿಸಬಹುದು."

"ನೀನೇ ಬರೆದು ತರಿಸಿದವನು."

"ನಾನೇನೋ ಬರೆದು ತರಿಸಿದೆ, ನಿಜ. ಮದುವೆ ಮಾಡುವುದಕ್ಕೆ ಮೊದಲು ವರನ ಕುಲಶೀಲಗಳನ್ನು ವಿಚಾರಿಸುವುದು ನ್ಯಾಯವೋ ತಪ್ಪೋ ?"

"ಅಲ್ಲಿಂದ ಈ ರೀತಿ ಬದಲು ಬರುವುದೆಂದು ತಿಳಿದೇ ನೀನು ಬರೆದೆ."

"ನನಗೆ ಆ ಸಮಾಚಾರವೇ ಗೊತ್ತಿಲ್ಲ ; ನನಗೆ ಯವನ ದೇಶಕ್ಕೆ ಬರೆಯಬೇಕೆಂಬುದೂ ತಿಳಿಯದು. ರಾಜಾ ಮಲಯಸಿಂಹನ ಸಂಗಡ ಮಾತನಾಡುತ್ತಲಿದ್ದಾಗ ನಿಮ್ಮ ತಂದೆಯ ಪೂರ್ವವೃತ್ತಾಂತವನ್ನು ಹೇಳುತ್ತ ಅವನಿಗೆ ಇಷ್ಟು ಸಂಪತ್ತು ಹೇಗೆ ಬಂದಿತೋ ಗೊತ್ತಿಲ್ಲ ಎಂದೆನು. ಆಗ ಅವನು 'ಆ ಆಸ್ತಿಯು ಎಲ್ಲಿ ಸಿಕ್ಕಿತು' ಎಂದು ಕೇಳಲು, ನಾನು 'ಯವನ ದೇಶದಲ್ಲಿ' ಎಂದೆನು. ಅದಕ್ಕೆ ಅವನು 'ಹಾಗಾದರೆ ಅಲ್ಲಿಯೇ ವಿಚಾರ ಮಾಡಿದರೆ ಗೊತ್ತಾಗುತ್ತದೆ' ಎಂದನು. ನಿನ್ನ ತಂದೆಯ ಮಾನಾಪಮಾನಗಳಿಂದ ನನಗೆ ಒಂದು ಕಾಸು ಕೂಡಾ ಲಾಭವಿಲ್ಲ" ಎಂದು ದುರ್ಮತಿಯು ತನ್ನ ಅಲ್ಪತನವನ್ನು ತೋರಿಸಲು, ಉದಯಸಿಂಹನು,

"ನಾನು ರಾಜಾ ಮಲಯಸಿಂಹನೊಡನೆ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನೀನು ಈಗ ಹೇಳಿದುದು ಸುಳ್ಳಾದರೆ ನಿನ್ನನ್ನು ಜೀವಸಹಿತ ಬಿಡೆನು" ಎಂದು ಭದ್ರಸಿಂಹನೊಡನೆ ರಾಜಾ ಮಲಯಸಿಂಹನ ಮನೆಗೆ ಹೊರಟನು.

ಹೋಗುತ್ತ ದಾರಿಯಲ್ಲಿ ಉದಯಸಿಂಹನು ಭದ್ರಸಿಂಹನನ್ನು ಕುರಿತು ಕ್ಷಿತೀಂದ್ರನ ಮಗಳನ್ನು ಕ್ರಯಕ್ಕೆ ಕೊಂಡ ಮಲಯಸಿಂಹನಿಗೆ ಈ ಸಂಗತಿಗಳೆಲ್ಲಾ ಚೆನ್ನಾಗಿ ತಿಳಿದಿವೆ. ಆದುದರಿಂದಲೇ ಅವನು ದುರ್ಮತಿಗೆ ಆ ರೀತಿ ಹೇಳಿ ನನ್ನ ಮುಂದೆ ಒಂದು ದಿನ ಕೋಮಲೆಯ ಮುಖದಿಂದ ಅವಳ ಚರಿತ್ರೆಯನ್ನು ಹೇಳಿಸಿದನು. ನಮ್ಮಪ್ಪನ ಶತ್ರುಗಳು ಮಾಡಿದ ಒಳಸಂಚಿನಲ್ಲಿ ಅವನೂ ಸೇರಿರುಬಹುದು ಎನ್ನಲು ಭದ್ರಸಿಂಹನು "ಹಾಗೆ ಹೇಳಬೇಡ ; ಅವನು ದೊಡ್ಡ ಮನುಷ್ಯ ; ದುರ್ಮತಿಯಂತೆ ನೀಚನಲ್ಲ ; ಬಹು ಪರಾಕ್ರಮಿ. ಏಕಾಏಕಿ ಅವನನ್ನು ಕೆಣಕಬೇಡ" ಎಂದನು.

"ಭದ್ರಸಿಂಹ, ಅವನು ಜಗಳಕ್ಕೆ ಎಲ್ಲಿ ಬರುವುದಿಲ್ಲವೋ ಎಂಬುದೇ ನನಗೆ ಯೋಚನೆ" ಎಂದು ಉದಯಸಿಂಹನು ಹೇಳಲು, ಅಷ್ಟರಲ್ಲಿ ಬಂಡಿಯು ಮಲಯಸಿಂಹನ ಮನೆಯ ಮುಂದೆ ನಿಂತಿತು. ರಾಜನು ಆಗತಾನೇ ಊರಿನಿಂದ ಬಂದು ಸ್ನಾನ ಮಾಡುತ್ತಲಿದ್ದನು.

"ರಾಜರು ಏನು ಮಾಡುತ್ತಾರೆ ?" ಎಂದು ಉದಯಸಿಂಹನು ಕಾವಲುಗಾರನನ್ನು ಕೇಳಲು,

"ಅವರು ಸ್ನಾನ ಮಾಡುತ್ತಾರೆ" ಎಂದನು.

"ಆಮೇಲೆ ?"

"ಊಟ ಮಾಡುತ್ತಾರೆ."

"ಬಳಿಕ ?"

"ಸ್ವಲ್ಪ ಮಲಗುತ್ತಾರೆ."

"ಆಮೇಲೆ ?"

"ಅವರ ಸ್ನೇಹಿತರಾರೋ ಬರುತ್ತಾರೆ."

"ರಾತ್ರಿ ?"

"ನಾಟಕಕ್ಕೆ ಹೋಗುತ್ತಾರೆ."

"ಅದು ಖಂಡಿತವೋ ?"

"ಖಂಡಿತ."

"ಅದೇ ನನಗೆ ಬೇಕಾಗಿದ್ದಿತು" ಎಂದು ಉದಯಸಿಂಹನು ಹಿಂತಿರುಗಿ ಹೊರಟು "ಭದ್ರಸಿಂಹ, ಈ ರಾತ್ರಿ ನೀನು ಚಿತ್ರಸೇನನನ್ನೂ ದಮನಕನನ್ನೂ ಕರೆದುಕೊಂಡು ಅಗತ್ಯ ನಾಟಕಕ್ಕೆ ಬರಬೇಕು" ಎನ್ನಲು, ಭದ್ರಸಿಂಹನು ಒಪ್ಪಿ ಮನೆಗೆ ಹೋದನು.

ಮನೆಗೆ ಹೋದ ಕೂಡಲೇ ಉದಯಸಿಂಹನು ತಾಯಿಯ ಬಳಿಗೆ ಹೋದನು. ಅವಳು ದುಃಖಪಡುತ್ತ ಹಾಸಿಗೆಯಲ್ಲಿ ಹೊರಳುತ್ತಿದ್ದಳು. ಮಗನನ್ನು ನೋಡಿದ ಕೂಡಲೇ ದುಃಖವು ಹೆಚ್ಚಿ ಅವಳು ಧಾರೆಧಾರೆಯಾಗಿ ಕಣ್ಣಿನಲ್ಲಿ ನೀರನ್ನು ಸುರಿಸಿದಳು. ಅದನ್ನು ಕಂಡು ಉದಯಸಿಂಹನು ಕಳವಳಗೊಂಡು "ಅಮ್ಮಾ, ರಾಜಸಿಂಹರಿಗೆ ಯಾರಾದರೂ ಶತ್ರುಗಳುಂಟೋ ?" ಎಂದು ಕೇಳಲು, ಮಗನು ಅಪ್ಪ ಎನ್ನದೆ ರಾಜಸಿಂಹರು ಎಂದುದನ್ನು ಕಂಡು, ಅವಳು ಬೆಚ್ಚಿ "ಮಗೂ, ನಿನ್ನ ಅಪ್ಪಾಜಿಯವರ ಸ್ಥಿತಿಯಲ್ಲಿರುವರಿಗೆ ಗೂಢಶತ್ರುಗಳು ಇದ್ದೇ ಇರುವರು" ಎಂದಳು. ಆ ಮಾತನ್ನು ಕೇಳಿ ಉದಯಸಿಂಹನು,

"ಅಮ್ಮಾ, ನೀನು ಕುಶಾಗ್ರಬುದ್ಧಿಯುಳ್ಳವಳು. ಆದುದರಿಂದ ಅಪ್ಪಾಜಿಯವರಿಗೆ ಹಗೆಗಳಾರಿರಬಹುದು ಯೋಚಿಸಿ ಹೇಳು ; ನೋಡೋಣ."

"ಹೇಗೆ ಹೇಳಲಾದೀತಪ್ಪ ?"

"ಹಿಂದೆ ನಮ್ಮ ಮನೆಯಲ್ಲಿ ಚಂದ್ರಿಕಾವಿಹಾರದ ದಿನ ಅತಿಥಿಗಳಿಗೆ ಭೋಜನ ಮಾಡಿಸಿದ ಪದಾರ್ಥಗಳಲ್ಲಿ ಮಲಯಸಿಂಹನು ಒಂದನ್ನಾದರೂ ಮುಟ್ಟಲಿಲ್ಲ. ಹಗೆಗಳ ಮನೆಯಲ್ಲಿ ತಿನ್ನುವುದಿಲ್ಲವೆಂದು ಬಲ್ಲವರು ಹೇಳುವುದನ್ನು ಕೇಳಿದ್ದೇನು. ಅದರಿಂದ ಅವನೇ ಹೀಗೆ ಮಾಡಿದನೆಂದು ನನಗೆ ತೋರುತ್ತದೆ."

"ಇದಕ್ಕೂ ಅದಕ್ಕೂ ಏನು ಸಂಬಂಧ ? ಅವನು ತಮ್ಮ ಶತ್ರುವೆಂದು ಎಣಿಸುತ್ತೀಯೋ ? ನಿನಗೆ ಆ ಅಭಿಪ್ರಾಯವು ಇದ್ದರೆ ಅದು ತಪ್ಪು. ಅವನು ನಿನ್ನನ್ನು ಕಳ್ಳರ ಕಯ್ಯಿಂದ ಬಿಡಿಸಲಿಲ್ಲವೇ ? ನಿನ್ನ ಮನೆಯಲ್ಲಿ ಫಲಾಹಾರ ಮಾಡಲಿಲ್ಲವೇ ? ಈಗ ಅವನು ನಿನ್ನ ಕೂಡ ಸ್ನೇಹವಾಗಿಲ್ಲವೇ ?"

ಉದಯಸಿಂಹನು ವ್ಯಂಗ್ಯಭಾವದಿಂದ ನಕ್ಕನು. ಅದರ ಅಭಿಪ್ರಾಯವನ್ನು ಅವಳು ತಿಳಿದು ಆಗಿನ ಸ್ಥಿತಿಯಲ್ಲಿ ಅವನು ಮನೆಯನ್ನು ಬಿಟ್ಟು ಹೊರಗೆ ಹೋದರೆ ಏನಾದರೂ ಅವಿವೇಕ ನಡೆದೀತೆಂದು ಭಯಪಟ್ಟು,

"ಮಗೂ, ನನ್ನ ದೇಹಸ್ಥಿತಿಯನ್ನು ವಿಚಾರಿಸಲೋಸುಗ ನೀನು ಬಂದೆ; ನನಗೇನೋ

ಮೈಯ್ಯು ಚೆನ್ನಾಗಿಲ್ಲ. ಆದುದರಿಂದ ನೀನು ನನ್ನ ಜತೆಯಲ್ಲಿಯೇ ಇದ್ದುಕೊಂಡು ನನ್ನನ್ನು ಉಪಚರಿಸುತ್ತಿರಬೇಕು."

"ಅಮ್ಮಾ, ನೀನು ಹೇಳಿದ ಮಾತಿಗೆ ನಾನು ಎಂದೂ ಬದಲನ್ನು ಹೇಳತಕ್ಕವನಲ್ಲ. ಈ ಹೊತ್ತು ನನಗೆ ಅಗತ್ಯವಾದ ಒಂದು ಕೆಲಸವಿದೆ; ಅದಕ್ಕಾಗಿ ಈ ದಿನ ನಾನು ನಿಲ್ಲುವುದಕ್ಕಾಗುವುದಿಲ್ಲ."

ಮಗನು ಹೀಗೆಂದುದನ್ನು ಕೇಳಿ ರಾಧಾಬಾಯಿಯು "ಅಪ್ಪಾ, ನೀನು ದೊಡ್ಡವನಾಗಿಹೋದೆ ; ನಿನ್ನ ಇಷ್ಟಬಂದಂತೆ ಮಾಡು" ಎಂದು ಸಂಕಟದಿಂದ ಹೇಳಲು, ಆ ಮಾತುಗಳು ಕಿವಿಗೆ ಬೀಳದವನಂತೆ ಉದಯಸಿಂಹನು ಹೊರಟು ಹೋದನು.

ಅವನು ಅತ್ತ ಹೋಗುತ್ತಲೇ ರಾಧಾಬಾಯಿಯು ತನ್ನ ಆಪ್ತಸೇವಕನನ್ನು ಕರೆದು "ನೀನು ಇಂದು ನಾಳೆ ಎರಡು ದಿನಗಳೂ ಉದಯಸಿಂಹರ ಹಿಂದೆಯೇ ಇದ್ದುಕೊಂಡು ಅವರು ಎಲ್ಲೆಲ್ಲಿ ಹೋಗುತ್ತಾರೆ, ಏನೇನು ಮಾಡುತ್ತಾರೆ, ಎಂಬುದನ್ನು ನೋಡುತ್ತಲಿದ್ದು ನನಗೆ ತಿಳಿಸುತ್ತಲಿರು" ಎಂದು ಅಪ್ಪಣೆ ಮಾಡಿದಳು.

ಇತ್ತ ಭದ್ರಸಿಂಹನು ದಮನಕನನ್ನು ನೋಡಿ ಅವನು ಸಿಕ್ಕದೇ ಇದ್ದುದರಿಂದ ಚಿತ್ರಸೇನನನ್ನು ಕರೆದುಕೊಂಡು ಸುಮಾರು ಒಂಭತ್ತು ಗಂಟೆಯ ವೇಳೆಗೆ ಉದಯಸಿಂಹನ ಮನೆಗೆ ಬಂದನು. ಆಮೇಲೆ ಅವರೆಲ್ಲರೂ ನಾಟಕ ಶಾಲೆಗೆ ಹೋದರು. ಆ ವೇಳೆಗೆ ನಾಟಕವು ಇನ್ನೂ ಪ್ರಾರಂಭವಾಗಿರಲಿಲ್ಲ; ರಾಜಾ ಮಲಯಸಿಂಹನೂ ಬಂದಿರಲಿಲ್ಲ. ಎರಡನೆಯ ಅಂಕವು ಪ್ರಾರಂಭವಾದಾಗ ರಾಜನು ಬಂದನು. ಆ ಅಂಕವು ಮುಗಿದ ಕೂಡಲೇ ಉದಯಸಿಂಹನು ತನ್ನಿಬ್ಬರು ಸ್ನೇಹಿತರ ಸಂಗಡ ಮಲಯಸಿಂಹನ ಬಳಿಗೆ ಹೋದನು. ಜಯವೀರನೊಡನೆ ಮಾತನಾಡುತ್ತಲಿದ್ದ ಮಲಯಸಿಂಹನು ಅವರು ಮೂವರೂ ಬಂದುದನ್ನು ನೋಡಿ, ನಗೆಮೊಗದೊಡನೆ ಇದಿರಿಗೆ ಬಂದು "ಬಿಜಯಮಾಡಬೇಕು, ಬಿಜಯ ಮಾಡಬೇಕು" ಎಂದನು. ಆಗ ಉದಯಸಿಂಹನು,

"ಈ ಕಪಟಸ್ನೇಹಕ್ಕಾಗಿ ನಾನು ನಿಮ್ಮಲ್ಲಿಗೆ ಬರಲಿಲ್ಲ ; ನಿಮ್ಮಿಂದ ಕೆಲವು ಸಂಗತಿಗಳನ್ನು ವಿಶದವಾಗಿ ತಿಳಿಯಬೇಕೆಂದು ಬಂದೆನು."

"ಏನು ! ನಾಟಕಶಾಲೆಯಲ್ಲಿಯೇ ?"

"ಮಿಕ್ಕ ಕಡೆಗಳಲ್ಲಿ ಸ್ನಾನ, ಊಟ, ಅಲ್ಲವೇ ನಿದ್ದೆ ಮಾಡುತ್ತಲಿರುವವರನ್ನು ಕಂಡ ಕಡೆ ಪ್ರಶ್ನೆ ಮಾಡಬೇಕು ; ನಿರ್ವಾಹವಿಲ್ಲ."

"ನಾನು ನಿಮಗೆ ಸಿಕ್ಕದವನೇ? ಮೂರು ದಿನಗಳಿಂದ ನಿಮ್ಮ ಜತೆಯಲ್ಲಿಯೇ ಇದ್ದೆನಲ್ಲ ?"

"ನೀವು ಅಯೋಗ್ಯರೆಂದು ಆಗ ನಾನು ಕಂಡಿರಲಿಲ್ಲ" ಎಂದು ಎಲ್ಲರಿಗೂ

ಕೇಳುವಂತೆ ಗಟ್ಟಿಯಾಗಿ ಹೇಳಿದನು. ಇದನ್ನು ಕೇಳಿ ಮಲಯಸಿಂಹನು ಕೋಪಗೊಂಡು,

"ಉದಯಸಿಂಹ, ಏನಂದೆ ? ನಿನಗೆ ಬುದ್ಧಿಗಿದ್ಧಿ ಇದೆಯೋ ಇಲ್ಲವೋ ?" ಎಂದನು.

"ನಿಮ್ಮ ಕೃತ್ರಿಮ ಸಂಧಾನಗಳು ಇಂದು ನನಗೆ ಗೊತ್ತಾಯಿತು. ಅದಕ್ಕೆ ತಕ್ಕದನ್ನು ಮಾಡದೆ ಬಿಡೆನು."

"ಹಾಗೋ ! ನನ್ನೊಡನೆ ಸೆಣಸುವುದಾದರೆ ಹೀಗೆ ಸುಮ್ಮನೆ ಅವಿವೇಕದಿಂದ ಇಲ್ಲಿ ಏಕೆ ಕೂಗುತ್ತೀಯೆ ? ನನ್ನ ಮನೆಗೆ ಬಂದು ಹೇಳಬಹುದಾಗಿದ್ದಿತು. ನೀನು ಬಂದ ವಿಚಾರವೇನೋ ಗೊತ್ತಾಯಿತು. ನಡೆ, ನಡೆ ; ಇನ್ನು ಇಲ್ಲಿ ನಿಲ್ಲಬೇಡ, ಹೆಚ್ಚು ಮಾತನಾಡಿದರೆ ಇಲ್ಲಿಂದ ಹೊರಗೆ ದಬ್ಬಿಸಿಬಿಡುವೆನು" ಎಂದು ರಾಜನು ಅಬ್ಬರಿಸಲು, ಉದಯಸಿಂಹನು ಕಿಂ, ಕಂ ಎನ್ನದೆ ಆಚೆಗೆ ಹೊರಟುಹೋದನು.

ಆಗ ಜಯವೀರನು ಮಲಯಸಿಂಹನನ್ನು ನೋಡಿ "ರಾಜರೇ, ಅವನಿಗೆ ನೀವು ಏನು ಮಾಡಿದಿರಿ ?" ಎನ್ನಲು,

"ಏನೂ ಇಲ್ಲವಲ್ಲ" ಎಂದನು.

"ಹಾಗಾದರೆ ಅವನು ಏಕೆ ಹೀಗೆ ಕೂಗಾಡಿದ ?"

"ಅವನ ಅಪ್ಪನಿಗೆ ಅಪಮಾನವಾದುದರಿಂದ ಅವನು ಹಾಗೆ ಕಿರಿಚಿಕೊಂಡ."

"ಆ ವಿಷಯದಲ್ಲಿ ನಿಮಗೆ ಏನಾದರೂ ಸಂಬಂಧವುಂಟೋ ?"

"ಅವರಪ್ಪನ ದ್ರೋಹವನ್ನು ಕೋಮಲೆಯು ಸಭೆಯಲ್ಲಿ ತಿಳಿಸಿಬಿಟ್ಟಳು. ಬಹುಶಃ ಅದಕ್ಕಾಗಿರಬಹುದು."

"ಕೋಮಲೆಯು ಕ್ಷಿತೀಂದ್ರನ ಮಗಳೆಂದು ನನಗೆ ಇದುವರೆಗೂ ತಿಳಿಯದು. ಈಗ ಉದಯಸಿಂಹನಿಗೇನು ಮಾಡುತ್ತೀರಿ ?"

"ಮಾಡುವುದೇನು ? ನಾಳೆ ಹತಮಾಡುತ್ತೇನೆ ?"

"ಅಯ್ಯೋ, ಪಾಪ ! ತಾಯಿಗೆ ಅವನೊಬ್ಬನೇ ಮಗ ; ಅವನೆಂದರೆ ತಂದೆಗೆ ಪ್ರಾಣ."

"ಅವನ ತಂದೆಯ ಸುದ್ದಿಯನ್ನು ನನ್ನ ಸಂಗಡ ಹೇಳಬೇಡಿ ; ಅವನು ಮಾಡಿದ ಪಾಪಕ್ಕೆ ಫಲವನ್ನು ಅನುಭವಿಸಿಯೇ ತೀರಬೇಕು."

"ರಾಜರೇ," ಎಂದು ಜಯವೀರನು ಏನೋ ಹೇಳತೊಡಗಲು, ಅಷ್ಟರಲ್ಲಿ ಮಲಯಸಿಂಹನು "ಅಗೋ ! ಆ ಮನೋಹರವಾದ ಸಂಗೀತವನ್ನು ಕೇಳಿ" ಎಂದನು. ಉದಯಸಿಂಹನ ಪ್ರಸ್ತಾಪವು ರಾಜನಿಗೆ ಇಷ್ಟವಿಲ್ಲವೆಂದು ತಿಳಿದು ಜಯವೀರನು ಸುಮ್ಮನಾದನು.

ಮೂರನೆಯ ಅಂಕವು ಮುಗಿಯಿತು. ಆಗ ಭದ್ರಸಿಂಹನು ಒಬ್ಬನೇ ರಾಜನ ಬಳಿಗೆ ಬಂದನು. ರಾಜನು ಅವನನ್ನು ಆದರದೊಡನೆ ಬರಮಾಡಿಕೊಂಡು ಆಸನವನ್ನು ಕೊಟ್ಟು "ಏನು ಬಿಜಯಮಾಡಿದಿರಿ ?" ಎಂದು ಕೇಳಲು ಅವನು,

"ಸ್ವಾಮೀ, ಈಗ ಉದಯಸಿಂಹರು ತಮ್ಮ ಬಳಿಗೆ ಬಂದಿದ್ದ ವಿಷಯದಲ್ಲಿ ತಮಗೇನಾದರೂ ಸಂಬಂಧವುಂಟೇ, ದಯಮಾಡಿ ತಿಳಿಸಬೇಕು" ಎಂದನು.

"ನನ್ನ ಕೋರಿಕೆಯೆಲ್ಲವೂ ಹಾಳಾಗುವ ಸ್ಥಿತಿ ಬಂದಿತು."

"ಅದು ಹೇಗೆ ?"

"ಇದುವರೆಗೂ ನಾನೊಬ್ಬ ವಿಲಕ್ಷಣಪುರುಷನೆಂದು ನೀವೆಲ್ಲರೂ ತಿಳಿದುಕೊಂಡಿದ್ದಿರಿ. ಆ ವೈಲಕ್ಷಣ್ಯದ ಪರಾಕಾಷ್ಠೆಯನ್ನು ಹೊಂದುವ ಸಮಯದಲ್ಲಿ ನನ್ನನ್ನೂ ನಿಮ್ಮಂತೆಯೇ ಒಬ್ಬನೆಂದು ಭಾವಿಸಿ ಕಾರಣವನ್ನು ಕೇಳುತ್ತಿದ್ದಿರಿ. ಇದನ್ನು ನೋಡಿದರೆ ನಗು ಬರುತ್ತದೆ."

"ಅದೇನೋ ಇರಬಹುದು. ಆದರೂ ವಾಸ್ತವಾಂಶವನ್ನು ತಿಳಿಯಲೋಸುಗ ಕೆಲವು ಸಂದರ್ಭಗಳಲ್ಲಿ–" ಎಂದು ಹೇಳುವುದರೊಳಗಾಗಿ, ಮಲಯಸಿಂಹನು,

"ಸ್ವಾಮೀ, ಭದ್ರಸಿಂಹರೇ, ರಾಜಾ ಮಲಯಸಿಂಹನ ಸಮಾಚಾರವಿನ್ನೂ ನಿಮಗೆ ತಿಳಿಯದು. ಅವನು ತನಗಲ್ಲದೆ ಮತ್ತೊಬ್ಬನಿಗೂ ತಲೆಬಾಗುವವನಲ್ಲ. ನಾನು ಸರ್ವಸ್ವತಂತ್ರ ; ನಾನು ಮಾಡುವುದನ್ನೆಲ್ಲಾ ಚೆನ್ನಾಗಿಯೇ ಮಾಡುತ್ತೇನೆ. ನಿಮ್ಮ ಸ್ನೇಹಿತನು ನನ್ನೊಡನೆ ಯುದ್ಧ ಮಾಡಬೇಕೆಂದಿದ್ದರೆ ಇಗೋ, ಸಿದ್ಧವಾಗಿದ್ದೇನೆ. ಯುದ್ಧಮರ್ಯಾದೆಯಂತೆ ಅವಮಾನಪಟ್ಟವನು ಆಯುಧ ವರಣ ಮಾಡಬೇಕು. ನಿಮ್ಮ ಸ್ನೇಹಿತನನ್ನು ಕೊಲ್ಲುತ್ತೇನೆಂಬ ಧೈರ್ಯವು ನನಗಿರುವುದು ; ಆದುದರಿಂದ ಅವನೇ ಶಸ್ತ್ರವರಣವನ್ನು ಮಾಡಲಿ. ಅವನು ವರಿಸುವ ಆಯುಧ, ಯುದ್ಧಕಾಲ, ಯುದ್ಧರಂಗ, ಇವುಗಳನ್ನು ನೀವು ತಿಳಿಸಿದರೆ ನಾನು ಆ ವೇಳೆಗೆ, ಆ ಸ್ಥಳದಲ್ಲಿ, ಆ ಆಯುಧದೊಡನೆ ಸಿದ್ಧವಾಗಿರುತ್ತೇನೆ" ಎಂದನು.

ಅದಕ್ಕೆ ಭದ್ರಸಿಂಹನು "ಹಾಗಾದರೆ ನಾಳೆ ಬೆಳಿಗ್ಗೆ ಎಂಟು ಗಂಟೆಯ ವೇಳೆಗೆ ಮಾರಿಯ ತೋಪಿಗೆ ಬಂದುಬಿಡಿ ; ಕೈಕೋವಿಯೇ ಆಯುಧ" ಎಂದು ಹೇಳಲು, ರಾಜನು

"ಸರಿ, ನಾಟಕವನ್ನು ನೋಡುವುದಕ್ಕೆ ನನಗೆ ಅವಕಾಶವನ್ನು ಕೊಡಿ ; ಪುನಃ ಪುನಃ ಇಲ್ಲಿಗೆ ಬಂದು ನನ್ನನ್ನು ತೊಂದರೆ ಮಾಡಬೇಡವೆಂದು ನಿಮ್ಮ ಜತೆಗಾರನಿಗೆ ದಯೆಮಾಡಿ ಹೇಳಿ" ಎಂದನು.

ರಾಜನ ಶಾಂತಭಾವವನ್ನು ನೋಡಿ ಭದ್ರಸಿಂಹನಿಗೆ ಪರಮಾಶ್ಚರ್ಯವಾಯಿತು. ಅವನು ಹೊರಟುಹೋದ ಮೇಲೆ ಮಲಯಸಿಂಹನು ಜಯವೀರನನ್ನು ನೋಡಿ,

"ನಾಳೆಯ ದಿನ ಬೆಳಿಗ್ಗೆ ಏಳು ಗಂಟೆಗೆ ನೀವು ನಿಮ್ಮ ಭಾವ ಮನೋಮೋಹನನ್ನು ಕರೆದುಕೊಂಡು ಬರುವುದಕ್ಕೆ ಆಗುತ್ತದೆಯೋ ?"

"ಅಗತ್ಯವಾಗಿ ಬರುತ್ತೇನೆ ; ಈ ಜಗಳಕ್ಕೆ ಏನು ಕಾರಣ ?"

"ಕಾರಣವನ್ನು ತಿಳಿಯದೆ ಇರುವುದೇ ಒಳ್ಳೆಯದು."

"ಹಾಗಾದರೆ ಬೇಡಿ."

"ಇದಕ್ಕೆ ಸರಿಯಾದ ಕಾರಣವು ಉದಯಸಿಂಹನಿಗೇ ತಿಳಿಯದು. ಅವನು ಕಣ್ಣು ಮುಚ್ಚಿಕೊಂಡು ಕೆಲಸಮಾಡುತ್ತಾನೆ. ಇದರ ನಿಜವಾದ ಕಾರಣವು ನನಗೆ ಗೊತ್ತು, ಆ ಪರಮಾತ್ಮನಿಗೆ ಗೊತ್ತು. ಇದನ್ನು ಬಲ್ಲ ಪರಮಾತ್ಮನು ನಮ್ಮ ಕಡೆಗೆ ಇರುತ್ತಾನೆ."

"ನಿಮ್ಮ ಕಡೆ ಇನ್ನೊಬ್ಬ ಸಾಕ್ಷಿ ಯಾರು ?"

"ನನಗೆ ಅಮರಪುರದಲ್ಲಿ ನೀವೂ ಮನೋಮೋಹನನೂ ಅಲ್ಲದೆ ಮತ್ತಾರೂ ಹಿತೈಷಿಗಳಿಲ್ಲ. ಅವನೂ ಬರುತ್ತಾನೆಯೋ ?"

"ಆ ಯೋಚನೆಯನ್ನು ಬಿಡಿ. ಅವನೂ ಬರುತ್ತಾನೆ."

"ಅಷ್ಟು ಸಾಕು. ಸ್ವಲ್ಪ ತಾಳಿ. ತೆರೆಯನ್ನು ಎತ್ತಿದರು ಇಂಥ ಮನೋಹರವಾದ ಸಂಗೀತವನ್ನು ಎಂದಿಗೂ ಬಿಡೆನು" ಎಂದು ಮಲಯಸಿಂಹನು ಅದು ಮುಗಿಯುವವರೆಗೂ ಕೇಳುತ್ತಿದ್ದು ಮನೆಗೆ ಹೊರಟನು. ಜಯವೀರನೂ ತನ್ನ ಮನೆಗೆ ಹೋದನು.

ರಾಜಾ ಮಲಯಸಿಂಹನು ಮನೆಗೆ ಹೋದ ಒಡನೆಯೇ ವಾಮನ ಭಟ್ಟನನ್ನು ಕರೆದು, ಕೈಕೋವಿಯ ಪೆಟ್ಟಿಗೆಯನ್ನು ತರಹೇಳಿ ಅದರಲ್ಲಿ ಅನುಕೂಲವಾದುದೊಂದನ್ನು ತೆಗೆದಿಟ್ಟುಕೊಂಡು ಪರಿಶೋಧಿಸುತ್ತಿದ್ದಾಗ ಭೈರವನು ಒಳಕ್ಕೆ ಬಂದು "ಮಹಾಸ್ವಾಮೀ, ಯಾವಳೋ ಒಬ್ಬ ಹೆಂಗಸು ಮುಸುಕು ಹಾಕಿಕೊಂಡು ತಮ್ಮನ್ನು ಅತ್ಯವಶ್ಯವಾಗಿ ನೋಡಬೇಕೆಂದು ಬಂದಿದ್ದಾಳೆ" ಎಂದು ಹೇಳುತ್ತಿದ್ದ ಹಾಗೆಯೇ ಅವಳು ಒಳಗೆ ಬಂದಳು. ಆಗ ರಾಜನು ಭೈರವನಿಗೆ ಬಾಗಿಲು ಮುಚ್ಚಿಕೊಂಡು ಹೊರಗೆ ಹೋಗೆಂದು ಹೇಳಿ, ಆಮೇಲೆ "ಅಮ್ಮಾ, ನೀವು ಯಾರು ? ಇಲ್ಲಿಗೆ ಬಂದ ನಿಮಿತ್ತವೇನು ?" ಎಂದು ಕೇಳಿದನು. ಕೂಡಲೇ ಆ ಹೆಂಗಸು, ಅತ್ತಿತ್ತ ನೋಡಿ ಕೊಠಡಿಯಲ್ಲಿ ಬೇರೆ ಯಾರೂ ಇಲ್ಲವೆಂದು ದೃಢಪಡಿಸಿಕೊಂಡು, ಮುಸುಕನ್ನು ತೆಗೆದು ರಾಜನ ಕೈಯಲ್ಲಿದ್ದ ಕೋವಿಯನ್ನು ಕಂಡು ಎರಡು ಕೈಗಳನ್ನೂ ಜೋಡಿಸಿಕೊಂಡು "ಧರ್ಮದೇವ, ನನ್ನ ಮಗನನ್ನು ಕೊಲ್ಲಲಾಗದು" ಎಂದು ಬೇಡಿಕೊಂಡಳು.

ಆ ಹೆಸರನ್ನು ಕೇಳುತ್ತಲೇ ಮಲಯಸಿಂಹನು ಬೆಚ್ಚಿ, ಹಿಂದಕ್ಕೆ ಸರಿದು "ರಾಧಾಬಾಯಿಯವರೇ, ನೀವು ಈಗ ಯಾವ ಹೆಸರನ್ನು ಹೇಳಿದಿರಿ ?"

"ನಿನ್ನ ಹೆಸರು. ಮಿಕ್ಕವರೆಲ್ಲರೂ ಆ ಹೆಸರನ್ನು ಮರೆತರೂ ನಾನು ಮರೆಯಲಿಲ್ಲ. ಈಗ ನಿನ್ನ ಮುಂದೆ ಬಂದು ನಿಂತು ನಿನ್ನನ್ನು ಪ್ರಾರ್ಥಿಸುವವಳು ರಾಧಾಬಾಯಿಯಲ್ಲ, ಲಲಿತಾಂಗಿ."

"ಲಲಿತಾಂಗಿ ! ಲಲಿತಾಂಗಿಯು ಆಗಲೇ ಸತ್ತುಹೋದಳು. ಈಗ ಆ ಹೆಸರಿನ ಹೆಂಗಸನ್ನು ನಾನು ಕಾಣೆನು."

"ಲಲಿತಾಂಗಿಯು ಸತ್ತಿಲ್ಲ ; ಬದುಕಿದ್ದಾಳೆ. ಧರ್ಮದೇವ, ನೀನು ಈ ಪಟ್ಟಣಕ್ಕೆ

ಬಂದ ದಿನವೇ ನಿನ್ನ ಗುರುತನ್ನು ಕಂಡುಹಿಡಿದೆನು. ನಿನ್ನನ್ನು ನೋಡುವುದಕ್ಕೆ ಮೊದಲೇ ನಿನ್ನ ಧ್ವನಿಯಿಂದಲೇ ನಿನ್ನನ್ನು ತಿಳಿದೆನು. ಅಂದಿನಿಂದ ನಿನ್ನ ಒಂದೊಂದು ಕಾರ್ಯವನ್ನೂ ಭಯದಿಂದಲೂ ಆತುರದಿಂದಲೂ ನೋಡುತ್ತಿದ್ದೇನೆ. ರಾಜಸಿಂಹರಿಗೆ ಯಾರಿಂದ ಅಪಮಾನವು ಆಯಿತು, ಎಂಬುದನ್ನೂ ಬಲ್ಲೆ"

"ವಿಷಯಲಂಪಟನಿಗೋ ? ಪೂರ್ವದ ಹೆಸರಿನಿಂದ ಸಂಬೋಧಿಸಿ ಮಾತನಾಡುತ್ತಿರುವಾಗ ಅವನ ಆಗಿನ ಹೆಸರನ್ನೇ ಹೇಳೋಣ."

"ವಿಷಯಲಂಪಟ" ಎಂಬ ಹೆಸರನ್ನು ಮಲಯಸಿಂಹನು ದ್ವೇಷಾತಿರೇಕದಿಂದ ಹೇಳಿದುದನ್ನು ಕಂಡು ಲಲಿತಾಂಗಿಯು ಭಯದಿಂದ ಗಡಗಡನೆ ನಡುಗಿ,

"ಧರ್ಮದೇವ, ನೀನು ಏನು ಹೇಳಿದರೂ ಸರಿ; ನನ್ನ ಮಗನನ್ನು ಮಾತ್ರ ಉಳಿಸು."

"ಮಗನ ವಿಷಯದಲ್ಲಿ ನನಗೆ ಶತ್ರುತ್ವವಿದೆಯೆಂದು ಯಾರು ಹೇಳಿದರು ?"

"ಯಾರೂ ಇಲ್ಲ, ಮಕ್ಕಳ ವಿಷಯದಲ್ಲಿ ಹೆತ್ತವಳಿಗೆ ಸ್ವಭಾವವಾಗಿ ಇರುವ ಪ್ರೀತಿಯೇ ; ಇದುವರೆಗೆ ನಡೆದುದೆಲ್ಲವನ್ನೂ ನಾನು ಬಲ್ಲೆ ನಾಟಕ ಶಾಲೆಯಲ್ಲಿ ನಡೆದುದನ್ನೂ ನೋಡಿದೆನು."

"ನೀನು ಎಲ್ಲವನ್ನೂ ಕಂಡಿದ್ದ ಪಕ್ಷದಲ್ಲಿ ಆ ವಿಷಯಲಂಪಟನ ಮಗ ನಾಟಕ ಶಾಲೆಯಲ್ಲಿ ನನಗೆ ಅಪಮಾನಮಾಡಿರುವುದನ್ನೂ ಕಂಡಿರಬಹುದು."

"ನೀನೇ ಅವನ ತಂದೆಯ ದುರವಸ್ಥೆಗೆ ಕಾರಣನೆಂದು ತಿಳಿದು ಅವನು ಹಾಗೆ ಮಾಡಿದನು."

"ಅದು ದುರವಸ್ಥೆಯಲ್ಲ ; ದಂಡನೆ. ರಾಜಸಿಂಹನನ್ನು ದೇವರೇ ಶಿಕ್ಷಿಸಿದನು. ನಾನಲ್ಲ."

"ನೀನೇನು ದೇವರೇ ? ಎಲ್ಲರೂ ಮರೆತಿದ್ದಾಗ ನೀನು ಏಕೆ ಅದನ್ನು ಬಹಿರಂಗಪಡಿಸಿದೆ ? ನಿನಗೂ ಯವನದೇಶಕ್ಕೂ ಸಂಬಂಧವೇನು ? ಕ್ಷಿತೀಂದ್ರನಿಗೆ ದ್ರೋಹಮಾಡಿದುದರಿಂದ ನಿನಗೇನಾಯಿತು ?"

"ಅದು ನಿಜ. ಅದು ಕೋಮಲೆಗೂ ರಾಜಸಿಂಹನಿಗೂ ಸಂಬಂಧಿಸಿದ್ದು. ನನಗೂ ಅವುಗಳಿಗೂ ಯಾವ ಸಂಬಂಧವೂ ಇಲ್ಲ. ನನಗೆ ಇರುವ ಕೋಪ ತಾಪಗಳು ಅಮರ ದೇಶದ ಸೇನಾಪತಿಯ ಮೇಲೂ ಅಲ್ಲ ; ರಾಜಸಿಂಹನ ಮೇಲೂ ಅಲ್ಲ ; ಲಲಿತಾಂಗಿಯ ಗಂಡನಾದ ವಿಷಯಲಂಪಟನಮೇಲೆ."

"ಆ ತಪ್ಪು ಅವರದಲ್ಲ; ನನ್ನದು. ಬಹುಕಾಲ ಕಾದಿದ್ದು ನೀನು ಬಾರದೇ ಹೋದುದರಿಂದ ಬೇರೆ ದಿಕ್ಕಿಲ್ಲದೆ ಅವರನ್ನು ಮದುವೆಯಾಗಬೇಕಾಯಿತು."

"ಏತಕ್ಕೆ ನಾನು ಬರಲಿಲ್ಲ ?"

"ಸೆರೆಯಲ್ಲಿದುದ್ದರಿಂದ."

"ಏತಕ್ಕೆ ನಾನು ಸೆರೆಮನೆಯಲ್ಲಿ ಇದ್ದೆ ?"

"ನನಗೆ ತಿಳಿಯದು."

"ನಾನು ಹೇಳುತ್ತೇನೆ ಕೇಳು". ಎಂದು ಊರ ಹೊರಗಿನ ತೋಪಿನಲ್ಲಿ ದುರ್ಮತಿ, ವಿಷಯಲಂಪಟ, ಕದರ್ಥಕರು ಸೇರಿ ಮಾಡಿದ ಒಳಸಂಚನ್ನು ವಿಸ್ತಾರವಾಗಿ ತಿಳಿಸಿ, ಅನಂತರ ಭಾಸ್ಕರನಿಗೆ ವಿಶೇಷ ದ್ರವ್ಯವನ್ನು ಕೊಟ್ಟು ತೆಗೆದುಕೊಂಡು ಬಂದಿದ್ದ ಕಾಗದವನ್ನು ಪೆಟ್ಟಿಗೆಯಿಂದ ತಂದು ಅವಳ ಕೈಯಲ್ಲಿ ಕೊಟ್ಟನು. ಅವಳು ಅದನ್ನು ಓದಿನೋಡಿ "ಅಬ್ಬಬ್ಬಾ ! ಈ ಕಾಗದ—"ಎಂದು ಮೈಯೆಲ್ಲಾ ಬೆವತು ನಿಲ್ಲಲಾರದೆ ನಿಂತಳು.

"ಆ ಕಾಗದ ! ಅದಕ್ಕೆ ಎರಡು ಲಕ್ಷ ವರಹಗಳನ್ನು ಕೊಟ್ಟೆನು. ಹಣ ಹೋದರೆ ಪೀಡೆ ಕಳೆಯಿತು. ಅದರಿಂದ ನಾನು ಮಾಡಿದ ಕೆಲಸವನ್ನು ನ್ಯಾಯವೆಂದು ಸಮರ್ಥಿಸುವುದಕ್ಕೆ ಅನುಕೂಲವಾಯಿತು."

"ಕಾಗದದ ಫಲವೇನು ?"

"ಮೊದಲು ನನ್ನನ್ನು ಸೆರೆಹಿಡಿದುದು ನಿನಗೆ ಗೊತ್ತೇ ಇದೆ. ಆ ಸೆರೆಯು ಎಷ್ಟು ದಿವಸವಿದ್ದಿತೆಂದು ನೀನು ಕಾಣೆ. ನಿನ್ನ ಮನೆಗೆ ಸ್ವಲ್ಪ ದೂರದಲ್ಲಿಯೇ ಜಲದುರ್ಗದ ಅಂಧಕೂಪದಲ್ಲಿ ಹದಿನಾಲ್ಕು ವರ್ಷಗಳ ಕಾಲ ಇದ್ದುದನ್ನು ನೀನೇನು ಬಲ್ಲೆ ? ಆ ದೀರ್ಘಕಾಲದಲ್ಲಿ ಒಂದೊಂದು ದಿವಸವೂ ನನ್ನ ಹಗೆಗಳಿಗೆ ಪ್ರತೀಕಾರವನ್ನು ಮಾಡಬೇಕೆಂದು ಸಂಕಲ್ಪಿಸಿಕೊಳ್ಳುತ್ತಿದ್ದುದನ್ನು ನೀನೇನು ಬಲ್ಲೆ ? ನನಗೆ ದ್ರೋಹ ಮಾಡಿದ ವಿಷಯಲಂಪಟನನ್ನು ನೀನು ಮದುವೆಯಾದುದೂ, ನನ್ನ ತಂದೆಯು ಅನ್ನ ನೀರಿಲ್ಲದೆ ಸತ್ತುದೂ ನನಗೆ ತಿಳಿಯಲಿಲ್ಲವೆಂದು ನೀನೇನು ಬಲ್ಲೆ ?"

"ಹಾಗೇ" ಎಂದು ಲಲಿತಾಂಗಿಯು ನಡುಗಿದಳು.

"ಸೆರೆಮನೆಯನ್ನು ಹೊಕ್ಕು ಹದಿನಾಲ್ಕು ವರ್ಷಗಳಾದ ಮೇಲೆ ನಾನು ಈಚೆಗೆ ಬಂದಾಗ ಇದೆಲ್ಲಾ ನನ್ನ ಕಿವಿಗೆ ಬಿದ್ದಿತು. ಅದಕ್ಕೋಸ್ಕರವೇ ಬದುಕಿರುವ ಲಲಿತಾಂಗಿಯೂ ಸತ್ತ ತಂದೆಗಾಗಿಯೂ ವಿಷಯಲಂಪಟನ ಮೇಲೆ ಹಗೆತೀರಿಸದೆ ಬಿಡೆನೆಂದು ಪ್ರತಿಜ್ಞೆ ಮಾಡಿದೆನು. ಈಗ ಆ ಪ್ರತಿಜ್ಞೆಯನ್ನು ಪೂರೈಸಿದೆನು."

"ವಿಷಯಲಂಪಟನೇ ಇದನ್ನೆಲ್ಲಾ ಮಾಡಿದನೆಂದು ನೀನು ಚೆನ್ನಾಗಿ ಬಲ್ಲೆಯೋ ?"

"ಬಲ್ಲೆ, ಇಷ್ಟೇ ಅಲ್ಲ ಚಕ್ರವರ್ತಿ ಸೈನ್ಯದಲ್ಲಿದ್ದು ಅವನ ಶತ್ರುವನ್ನು ಸೇರಿದುದೂ, ಕಳಿಂಗದೇಶದಲ್ಲಿ ಹುಟ್ಟಿ ಶತ್ರುಗಳನ್ನು ಸೇರಿ ತನ್ನ ದೇಶದವರ ಮೇಲೆಯೇ ಯುದ್ಧ ಮಾಡಿದುದೂ, ಕ್ಷಿತೀಂದ್ರನ ಉಪ್ಪನ್ನು ತಿಂದು ಅವನಿಗೆ ದ್ರೋಹಮಾಡಿದುದೂ, ಇವೆಲ್ಲ ಮನುಷ್ಯನಿಗೆ ಗೌರವವೋ ? ಅದನ್ನೆಲ್ಲಾ ನೋಡಿದರೆ ಈ ಕಾಗದದಲ್ಲಿ ಏನಿದೆ ? ತನ್ನ ಮೇಲಣ ಮೋಹದಿಂದ ವಂಚಿಸಿ ಮದುವೆಯಾದ ಗಂಡನ ತಪ್ಪನ್ನು ಮರೆಯುವುದೇನೋ ಹೆಂಡತಿಗೆ ಧರ್ಮ. ಆದರೆ ಆ ಹೆಂಗಸನ್ನೇ ಮದುವೆಯಾಗಬೇಕೆಂದಿದ್ದವನು ಹೇಗೆ ತಾನೇ

ಆ ಮೋಸವನ್ನು ಮರೆಯಲಾದೀತು ? ಅಮರಪುರದವರು ದ್ರೋಹಿಯನ್ನು ದಂಡಿಸದೆ ಹೋದರು. ಕಳಿಂಗದೇಶದವರು ಅವನನ್ನು ಕೊಲ್ಲದೆ ಬಿಟ್ಟುಬಿಟ್ಟರು. ಕ್ಷಿತೀಂದ್ರನು ಬೃಂದಾವನಸ್ಥನಾದುದರಿಂದ ಅವನಿಗೆ ಶಿಕ್ಷೆ ತಪ್ಪಿತು. ಆದರೆ ವಂಚಿತನಾಗಿ, ಬಲಿಹಾಕಿಸಿಕೊಂಡು, ಸತ್ತು ಇದ್ದ ನಾನು ಭಗವತ್ಕೃಪೆಯಿಂದ ಮರಳಿ ಜೀವಿತನಾಗಿ ಆ ದ್ರೋಹಿಯನ್ನು ಶಿಕ್ಷಿಸುವುದಕ್ಕೆ ಬಂದಿದ್ದೇನೆ" ಎಂದು ರಾಜನು ಹೇಳಲು, ಲಲಿತಾಂಗಿಯ ಮೈಯ್ಯನ್ನಡುಗಿ ಕೈಗಳು ಜೋಲುಬಿದ್ದು ಅವಳು ದಂಡಾಕಾರವಾಗಿ ನೆಲದಲ್ಲಿ ಬಿದ್ದು ಯಾವ ಬದಲನ್ನೂ ಹೇಳಲರಿಯದೆ, "ನನಗೋಸ್ಕರ ನನ್ನ ಮಗನನ್ನು ಉಳಿಸು" ಎಂದು ಮಾತ್ರ ಬಹು ದೈನ್ಯದಿಂದ ಬೇಡಿಕೊಂಡಳು.

ಆಕೆಯ ಪಾತಿವ್ರತ್ಯದ ಗೌರವದಿಂದ ರಮಣೀಭಾವದ ಉತ್ಕೃಷ್ಟಾನುರಾಗವೂ ಮಾತೃಭಾವದ ಪರಮ ಪ್ರೀತಿಯೂ ನಿರುದ್ಧವಾಯಿತು. ಅವಳ ಹಣೆಯು ನೆಲವನ್ನು ಮುಟ್ಟಿತು. ಅದನ್ನು ಕಂಡು ಮಲಯಸಿಂಹನು ಕೊಂಚ ಹಿಮ್ಮೆಟ್ಟಿದವನಾಗಿ "ತಾಯೇ, ಏಳಮ್ಮ" ಎಂದು ತಲೆಯನ್ನು ಹಿಡಿದೆತ್ತಿದನು. ಅವಳು ಎದ್ದು ಒಂದು ಮಣೆಯ ಮೇಲೆ ಕುಳಿತುಕೊಂಡು ದುಃಖದಿಂದಲೂ ದ್ವೇಷದಿಂದಲೂ ಭೀಷಣವಾಗಿದ್ದ ಆತನ ಪರಾಕ್ರಮ ವ್ಯಂಜಕವಾದ ಮುಖವನ್ನು ನೋಡುತ್ತಿದ್ದಳು.

"ಏನು, ಈ ಕುಲಪಾಂಸನರನ್ನು ಧ್ವಂಸಮಾಡದೆ ಉಳುಹುವುದೇ ! ಫಲಕಾರಿಯಾಗುವ ಸುಯೋಗದಲ್ಲಿಯೇ ಉದ್ದೇಶವನ್ನು ಪರಿತ್ಯಾಗಮಾಡುವುದೇ ?" ಎಂದು ಮಲಯಸಿಂಹನು ಹೇಳಿಕೊಳ್ಳುತ್ತ ಲಲಿತಾಂಗಿಯನ್ನು ನೋಡಿ,

"ತಾಯೀ, ಅದೆಂದಿಗೂ ಆಗದು" ಎಂದು ಹೇಳಿದನು. ಆಗ ಪುತ್ರವತ್ಸಲೆಯಾದ ಲಲಿತಾಂಗಿಯು ಅವನನ್ನು ನೋಡಿ,

"ಧರ್ಮದೇವ, ನಾನು ನಿನ್ನನ್ನು ಧರ್ಮದೇವ ಎಂದು ಕರೆಯುತ್ತಿರುವಾಗ ನೀನೇಕೆ ನನ್ನನ್ನು ಲಲಿತಾಂಗೀ ಎಂದು ಕರೆಯಲೊಲ್ಲೆ" ಎಂದು ಕೇಳಿದಳು.

"ಲಲಿತಾಂಗೀ, ನೀನು ಹೇಳುವುದು ನಿಜ. ಲಲಿತಾಂಗಿ, ಲಲಿತಾಂಗಿ, ಆ ಹೆಸರಿನಲ್ಲಿ ಇನ್ನೂ ಮಾಧುರ್ಯವು ಇಲ್ಲದೆ ಇಲ್ಲ. ಎಷ್ಟೋ ದಿವಸಗಳಾಗಿ ಹೋದ ಮೇಲೆ ಈ ದಿವಸವೇ ನಾನು ಆ ಹೆಸರನ್ನು ಸ್ಪಷ್ಟವಾಗಿ ಉಚ್ಚರಿಸಿದೆನು ಲಲಿತಾಂಗೀ, ದುರಂತವಾದ ಚಿಂತೆಯಿಂದ ಬಿಸುಸುಯ್ಯುತ್ತಿದ್ದಾಗಲೂ, ದಾರುಣವಾದ ಶೋಕದಿಂದ ಪರಿತಪಿಸುತ್ತಿದ್ದಾಗಲೂ, ನಿರಾಶೆಯಿಂದ ಕರ್ತವ್ಯಮೂಢನಾಗಿದ್ದಾಗಲೂ ಆ ಹೆಸರನ್ನೇ ಪ್ರಲಾಪಿಸುತ್ತಿದ್ದೆನು. ಸೆರೆಮನೆಯ ಅಂಧಕೂಪದಲ್ಲಿ ಚಳಿಯಿಂದ ಕೈಕಾಲುಗಳು ಸೇದುಗೊಂಡು ಹುಲ್ಲು ಹಾಸಿಗೆಯ ಮೇಲೆ ಬಿದ್ದಿರುವಾಗಲೂ ಆ ಹೆಸರೇ ನನ್ನ ಬಾಯಲ್ಲಿ ಇರುತ್ತಿದ್ದಿತು. ಬಿಸಿಲು ಬೇಗೆಯಿಂದ ಬೆಂದು ಬರಿಗಲ್ಲ ನೆಲದ ಮೇಲೆ ಹೊರಳುತ್ತಿದ್ದಾಗಲೂ ಆ ಹೆಸರನ್ನೇ ಪಾರಾಯಣ ಮಾಡುತ್ತಿದ್ದೆನು. ಹದಿನಾಲ್ಕು ವರ್ಷಗಳ ಕಾಲ ಪ್ರತಿ ದಿವಸವೂ ನಾನು ಕಂಬನಿಗರೆದೆನು, ಬಯ್ದೆನು. ಈಗ ನಾನು ಹಗೆತೀರಿಸಿಕೊಳ್ಳದೆ ಬಿಡುವುದಿಲ್ಲ" ಎನ್ನುತ್ತ

ತಾನು ಅತ್ಯಧಿಕವಾಗಿ ಪ್ರೀತಿಸುತ್ತಿದ್ದ ಆಕೆಯ ಪ್ರಾರ್ಥನೆಗಳಿಗೆ ಎಲ್ಲಿ ಮನಕರಗಿ ಅಧೀನನಾಗಿಹೋಗುವೆನೋ ಎಂದು ಶಂಕಿಸಿ ಮಲಯಸಿಂಹನು ದ್ವೇಷಸಾಧನೆಗೋಸ್ಕರ ಅನುಭವಿಸಿದ ಸಂಕಟಪರಂಪರೆಗಳನ್ನೆಲ್ಲಾ ನೆನೆಸಿಕೊಳ್ಳುತ್ತಿದ್ದನು. ಅದನ್ನು ಕಂಡು ವಿಪನ್ನೆಯಾದ ಆ ಪುತ್ರವತ್ಸಲೆಯು ಬಹು ದೈನ್ಯಭಾವದಿಂದ,

"ಧರ್ಮದೇವ, ನಿನಗೆ ಹಗೆ ತೀರಿಸಿಕೊಳ್ಳಬೇಕೆಂಬುದೇ ಸಂಕಲ್ಪವಾಗಿದ್ದರೆ ಕೇಡೆಣಿಸಿದವನ ಮೇಲೆಯೂ ನನ್ನ ಮೇಲೆಯೂ ಹಗೆ ತೀರಿಸಿಕೋ ; ಆದರೆ ನನ್ನ ಮಗನನ್ನು ಮಾತ್ರ ಉಳಿಸಿಕೊಡು" ಎಂದು ಪರಿಪರಿಯಾಗಿ ಬೇಡಿಕೊಂಡಳು.

"ತಂದೆ ಮಾಡಿದ ಪಾಪದ ಫಲವನ್ನು ಮಕ್ಕಳು ಎಷ್ಟೋ ತಲೆಯವರೆಗೂ ಉಂಡು ತೀರಿಸಬೇಕೆಂದು ಹಿರಿಯರು ಹೇಳಿದ್ದಾರೆ. ಆ ವಚನವನ್ನು ಅನ್ಯಥಾ ಮಾಡುವುದಕ್ಕೆ ನಾನು ಅವರಿಗಿಂತ ಹಿರಿಯನಲ್ಲ."

ಎಂದು ಮಲಯಸಿಂಹನು ಹೇಳಲು ಲಲಿತಾಂಗಿಯು ಎರಡು ಕಯ್ಗಳನ್ನೂ ಮುಂದಕ್ಕೆ ನೀಡಿಕೊಂಡು

"ಧರ್ಮದೇವ, ನಿನ್ನನ್ನು ನಾನು ಮೊತ್ತಮೊದಲು ನೋಡಿದ ದಿನದಿಂದಲೂ ನಿನ್ನ ಹೆಸರನ್ನು ಪೂಜಿಸುತ್ತಿದ್ದೇನೆ, ನಿನ್ನ ಸ್ಮರಣೆಯನ್ನು ಸದಾ ಗೌರವಿಸುತ್ತಿದ್ದೇನೆ. ನನ್ನ ಹೃದಯ ದರ್ಪಣದಲ್ಲಿ ಪ್ರತಿಫಲಿಸುವ ಅಕಳಂಕವಾದ ಆ ಉದಾತ್ತ ಮೂರ್ತಿಯನ್ನು ನೀನು ಪ್ರಯತ್ನಪೂರ್ವಕವಾಗಿ ಮಸಕಾಗುವಂತೆ ಮಾಡಬೇಡ. ನೀನು ಬದುಕಿದ್ದೀಯೆ ಎಂದು ತಿಳಿದಿದ್ದಾಗ ನಿನಗೆ ಮಂಗಳವಾಗಲೆಂದು ನಾನು ಸದಾ ದೇವರಿಗೆ ಹರಸಿಕೊಳ್ಳುತ್ತಿದ್ದೆನು. ನೀನು ಸತ್ತುಹೋದೆಯೆಂದು ತಿಳಿದ ಬಳಿಕ ನಿತ್ಯವೂ ನಿನ್ನನ್ನು ನೆನೆಸಿಕೊಂಡು ಕಂಬನಿಗರೆಯುತ್ತಿದ್ದೆನು. ಧರ್ಮದೇವ ; ಅಬಲೆಯಾದ ನಾನು ನಿನಗಾಗಿ ಅಳುವುದೂ ಮೊರೆಯಿಡುವುದೂ ಅಲ್ಲದೆ ಮತ್ತೇನು ಮಾಡಲಾದೀತು ಲಾಲಿಸು. ಹತ್ತು ವರ್ಷಗಳ ಕಾಲ ನನಗೆ ಪ್ರತಿದಿನವೂ ಒಂದೇ ತೆರನಾಗಿ ಕನಸು ಬೀಳುತ್ತಿದ್ದಿತು. ನೀನು ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನಪಟ್ಟು ಸತ್ತುಹೋಗಿದ್ದ ಬೇರೆಯೊಬ್ಬ ಸೆರೆಯಾಳನ್ನಿರಿಸಿದ್ದ ಚೀಲದೊಳಗೆ ಹುದುಗಿಕೊಂಡೆಯೆಂದೂ, ಸೆರೆಮನೆಯವರು ಹೆಣವೆಂದುಕೊಂಡೇ ನಿನ್ನನ್ನು ಸಮುದ್ರದ ತಡಿಗೆ ಸಾಗಿಸಿ ಕಡಿದಾದ ಬಂಡೆಯ ಮೇಲಿಂದ ನೀರಿಗೆ ಬಿಸುಟರೆಂದೂ, ನೀನು ನೀರಿಗೆ ಬೀಳುವಾಗ ಮರಣಭಯದಿಂದ ಕಿರುಚಿಕೊಂಡೆಯೆಂದೂ ಕೇಳಿದೆನು. ಈಗ ಪುತ್ರಭಿಕ್ಷೆಯನ್ನು ಬೇಡುವ ನಾನು ನನ್ನ ಮಗನಾಣೆಗೂ ಹತ್ತು ವರ್ಷಗಳವರೆಗೆ ಪ್ರತಿ ದಿನವೂ ಏಕಪ್ರಕಾರವಾಗಿ ಆ ದಾರುಣವಾದ ದೃಶ್ಯವೆಲ್ಲವನ್ನೂ ವಿಶದವಾಗಿ ಸ್ವಪ್ನದಲ್ಲಿ ನೋಡುತ್ತಿದ್ದೆನು. ಹತ್ತು ವರ್ಷಗಳ ಕಾಲ ಒಂದೊಂದು ದಿನವೂ ನನಗೆ ಆ ವಿಕಾರವಾದ ಕೂಗು ಕೇಳಿಸುತ್ತಿದ್ದಿತು. ನಾನು ಗಡಗಡನೆ ನಡುಗುತ್ತ ಎಚ್ಚರಗೊಳ್ಳುತ್ತಿದ್ದೆನು. ಧರ್ಮದೇವ, ನಾನೇನೋ ತಪ್ಪನ್ನು ಮಾಡಿದೆನು, ನಿಜ. ಆದರೂ ಬಲುವಾಗಿ ನೊಂದಿದ್ದೇನೆ

ದಯೆಯಿಟ್ಟು ನನಗೆ ನೀನು ಪುತ್ರದಾನವನ್ನು ಮಾಡಬೇಕು" ಎಂದು ಆಕೆಯು ಸೆರಗೊಡ್ಡಿ ಬಲುಬಗೆಯಿಂದ ಬೇಡಿಕೊಂಡಳು.

ಆಗ ಮಲಯಸಿಂಹನು ಅವಳನ್ನು ನೋಡಿ "ಲಲಿತಾಂಗೀ, ನೀನು ಹತ್ತಿರದಲ್ಲಿ ಇಲ್ಲದಿರುವಾಗ ನಿನ್ನ ತಂದೆಯು ಹೊಟ್ಟೆಗಿಲ್ಲದೆ ಸತ್ತುಹೋದನೆಂದರೆ ಎಷ್ಟು ಸಂಕಟವಾಗುತ್ತಿದ್ದಿತು ಬಲ್ಲೆಯಾ ? ಸೆರೆಮನೆಯಲ್ಲಿ ಸಂಕಟದಿಂದ ನರಳುತ್ತಿರುವಾಗ ಹೃದಯೇಶ್ವರಿಯಾದವಳು ಬೇರೊಬ್ಬನನ್ನು ಮದುವೆ ಮಾಡಿಕೊಂಡಳೆಂದರೆ ಎಷ್ಟು ಕೋಪ ಬರುತ್ತಿದ್ದಿತು ಬಲ್ಲೆಯಾ !" ಎನ್ನಲು, ಆಕೆಯು "ಧರ್ಮದೇವ, ನನಗೆ ಅದಾವುದೂ ತಿಳಿಯದು, ಹೃದಯೇಶ್ವರನಾದವನು ನನ್ನ ಮುದ್ದು ಕಂದನ ಜೀವವನ್ನು ತೆಗೆದುಹಾಕುವುದರಲ್ಲಿರುವನೆಂಬ ಸಂಕಟವೊಂದೀಗ ನನಗೆ ಗೊತ್ತು" ಎಂದು ಅತ್ಯಂತ ದೈನ್ಯದಿಂದಲೂ ನಿರಾಶೆಯಿಂದಲೂ ಸಂಕಟಪಡಲಾಗಿ, ಅದನ್ನು ಕಂಡು ಮಲಯಸಿಂಹನು ಮನದ ಉದ್ವೇಗವನ್ನು ತಡೆಯಲಾರದೆ ಬೆಚ್ಚನೆ ಸುಯ್ದನು. ಹಸಿದ ಹೆಬ್ಬುಲಿಯು ಮೆತ್ತಗಾಗಿ ಹೋಯಿತು. ವೈರಶೋಧನು ಜಿತನಾಗಿ ಹೋದನು. ಅವನು ಲಲಿತಾಂಗಿಯನ್ನು ನೋಡಿ "ನೀನು ಇಲ್ಲಿಗೆ ಏತಕ್ಕೋಸ್ಕರ ಬಂದಿದ್ದೀಯೆ ? ಮಗನನ್ನು ಬದುಕಿಸಿಕೊಳ್ಳುವುದಕ್ಕೆ ತಾನೇ ? ಒಳ್ಳೆಯದು, ಅವನು ಸಾಯುವುದಿಲ್ಲ" ಎಂದನು. ಆ ಮಾತನ್ನು ಕೇಳಿ ಲಲಿತಾಂಗಿಯು, "ಅಹಹ ! ಇಂತಹ ಉದಾರಹೃದಯವು ದೇವಾಂಶಪುರುಷನಲ್ಲಲ್ಲದೆ ಮತ್ತೊಬ್ಬರಲ್ಲಿ ತೋರುತ್ತದೆಯೇ ?" ಎಂದು ಆನಂದದುಃಖಬಾಷ್ಪಾಕುಲೆಯಾಗಿ ಕೊರಲ ಸೆರೆಗಳುಬ್ಬಿ ಗದಗದಿಸಲು ಅದನ್ನು ಕಂಡು ಮಲಯಸಿಂಹನ ಕಣ್ಣುಗಳಲ್ಲಿ ನೀರು ತುಂಬಿ ಉತ್ತರಕ್ಷಣದಲ್ಲಿಯೇ ಮಾಯವಾಗಿಹೋಯಿತು. ಅವನ ಆ ಬಾಷ್ಪಬಿಂದುಗಳು ದಿವ್ಯವಾದ ಮೌಕ್ತಿಕ ಮಣಿಗಿಂತಲು ಅಮೂಲ್ಯವೆನಿಸಿ ಒಪ್ಪುತ್ತಿದ್ದುವು.

ಆಕೆಯು ಅವನನ್ನು ನೋಡುತ್ತ "ಧರ್ಮಸೇನ, ನಿನ್ನನ್ನು ನಾನು ಎಂಥ ಮಹಾಪುರುಷನೆಂದು ಭಾವಿಸಿಕೊಂಡಿದ್ದೆನೋ ಅದು ಇಂದು ಕಂಡೆರುವಾಯಿತು" ಎಂದು ಅವನಿಗೆ ಬಹು ಕೃತಜ್ಞತೆಯಿಂದ ಕೈ ಜೋಡಿಸಿ 'ನಿನ್ನಲ್ಲಿ ನನಗೆ ಅತ್ಯಂತ ವಿಶ್ವಾಸವಿದೆ' ಎಂದು ಹೇಳಿದಳು.

"ಅದು ಒಳ್ಳೆಯದಾಯಿತು ; ಧರ್ಮದೇವನು ಆ ವಿಶ್ವಾಸಕ್ಕೆ ಪಾತ್ರವಾಗಿ ಇನ್ನು ತುಂಬ ದಿನಗಳು ಇರುವುದಿಲ್ಲ."

"ಧರ್ಮದೇವ, ಏನೆಂದೆ ?" ಎಂದು ಕೇಳಿದ ಲಲಿತಾಂಗಿಯ ಮಾತಿಗೆ ಮಲಯಸಿಂಹನು,

"ಲಲಿತಾಂಗೀ ನೀನು ನಿಯಮನ ಮಾಡಿದ ಮೇರೆಗೆ ನಾನು ದೇಹ ತ್ಯಾಗವನ್ನು ಮಾಡಿಬಿಡುತ್ತೇನೆ"

"ದೇಹತ್ಯಾಗ ಮಾಡುತ್ತೀಯಾ ? ಏಕೆ ? ಈಗ ಆ ಮಾತೇತಕ್ಕೆ ? ಆ ತೆರೆದ ಆಲೋಚನೆಗಳು ನಿನಗೆ ಹೇಗೆ ತಲೆದೋರಿದುವು ?"

"ಲಲಿತಾಂಗೀ, ಚೋಟುದ್ದದ ನಿನ್ನ ಮಗನು ನಾಟಕಶಾಲೆಯಲ್ಲಿ ತನ್ನ ಗೆಳೆಯರ ಮುಂದೆಯೂ ನನಗೆ ತಿಳಿದವರ ಮುಂದೆಯೂ ಮಿಕ್ಕ ಜನಗಳೆಲ್ಲರ ಮುಂದೆಯೂ ನನ್ನನ್ನು ತುಚ್ಛವಾಗಿ ನುಡಿದು ನನಗೆ ಅಪಮಾನ ಮಾಡಿ ನನ್ನ ಕ್ಷಮಾಗುಣವನ್ನೇ ತನ್ನ ಜಯವೆಂದು ತಿಳಿದು ಉಬ್ಬುತ್ತಿರುವಾಗ ನಾನು ಹೇಗೆ ತಾನೇ ಜೀವವನ್ನು ಹಿಡಿದಿರಲಾಗುತ್ತದೆ ? ನಿನ್ನನ್ನು ಬಿಟ್ಟರೆ ನಾನು ನನ್ನ ಗೌರವವನ್ನೂ ಅಪ್ರತಿಹತವಾದ ನನ್ನ ಶೌರ್ಯವನ್ನೂ ಅತ್ಯಧಿಕವಾಗಿ ಪ್ರೀತಿಸುತ್ತಿದ್ದೆನು. ಅದನ್ನೆಲ್ಲಾ ನೀನು ನಿನ್ನ ಒಂದು ನುಡಿಯಿಂದ ನುಚ್ಚುನುರಿಮಾಡಿಬಿಟ್ಟಿದ್ದೀಯೆ. ಆದುದರಿಂದ ನಾನು ಈ ನನ್ನ ದೇಹವನ್ನು ತ್ಯಜಿಸಿಬಿಡುತ್ತೇನೆ" ಎಂದು ಹೇಳಿದನು.

"ನೀನು ಮನ್ನಿಸಿಬಿಟ್ಟ ಮೇಲೆ ಯುದ್ಧವಾಗುವುದೇ ಇಲ್ಲ" ಎಂದು ಲಲಿತಾಂಗಿಯು ಹೇಳಿದಳು.

ಆ ಮಾತಿಗೆ ಮಲಯಸಿಂಹನು ಬಹು ಗಂಭೀರಧ್ವನಿಯಿಂದ,

"ಲಲಿತಾಂಗೀ, ಯುದ್ಧವು ನಡೆದೇ ನಡೆಯುತ್ತದೆ. ನಿನ್ನ ಮಗನ ನೆತ್ತರಿಂದ ನೆಲವು ನೆನೆಯುವುದಿಲ್ಲ. ಆದರೆ ನನ್ನ ರಕ್ತವು ಪ್ರವಹಿಸಿಬಿಡುತ್ತದೆ" ಎಂದು ಹೇಳಲು ಲಲಿತಾಂಗಿಯು ಭಯದಿಂದ ಚೀತ್ಕಾರ ಮಾಡುತ್ತ ಮಲಯಸಿಂಹನ ಬಳಿಗೆ ಒಂದು ಹಾರಿನಲ್ಲಿ ಬಂದು ತಟ್ಟನೆ ನಿಂತುಕೊಂಡು.

"ಧರ್ಮದೇವ, ನೀನು ಬದುಕಿರುವುದರಿಂದಲೂ, ನಿನ್ನನ್ನು ನಾನು ಮರಳಿ ನೋಡಿದುದರಿಂದಲೂ ಭಗವಂತನು ನಮ್ಮನ್ನು ಸಂರಕ್ಷಣೆ ಮಾಡುತ್ತಾನೆಂದು ನಿಶ್ಚಯವಾಗಿ ನಂಬಿದ್ದೇನೆ. ಅವನ ಸಹಾಯವನ್ನು ನಿರೀಕ್ಷಿಸುತ್ತ ನಿನ್ನ ಅಭಯವಚನವನ್ನು ನೆಚ್ಚಿಕೊಂಡಿದ್ದೇನೆ. ನನ್ನ ಮಗನು ಬದುಕುವನೆಂದು ನೀನು ಹೇಳಿದೆಯಲ್ಲವೇ ?"

ಅವಳಿಗೋಸ್ಕರ ಧೀರತೆಯಿಂದ ತಾನು ಮಾಡಿದ ಬಲಿದಾನವನ್ನು ಆಕೆಯು ಚಿತ್ತವಿಕಾರವಾವುದೂ ಇಲ್ಲದೆ ಒಪ್ಪುಗೊಂಡುದನ್ನು ಕಂಡು ಮಲಯಸಿಂಹನು ಅತ್ಯಾಶ್ಚರ್ಯಯುಕ್ತನಾದನು.

ಲಲಿತಾಂಗಿಯು ಮಲಯಸಿಂಹನು ಇದಿರಿಗೆ ಕೈ ನೀಡಿಕೊಂಡು,

"ಧರ್ಮದೇವ, ನೀನು ಉದಾತ್ತಹೃದಯನು. ಎಂತಹ ಉತ್ಕೃಷ್ಟವಾದ ಕಾರ್ಯವನ್ನು ಮಾಡಿದೆ ! ಯಾವ ತೆರದಿಂದಲೂ ಗತ್ಯಂತರವಿಲ್ಲದೆ ವಿಷಣ್ಣೆಯಾದ ಹೆಂಗಸೊಬ್ಬಳು ಮಾಡಿದ ಪ್ರಾರ್ಥನೆಯನ್ನು ನಡೆಸಿಕೊಟ್ಟು ಉತ್ಕೃಷ್ಟನೆನಿಸಿಕೊಂಡಿದ್ದೀಯೆ. ನನಗೆ ವಯೋಧರ್ಮದಿಂದ ಮುಪ್ಪು ತಲೆದೋರದಿದ್ದರೂ ನಾನು ದುಃಖಾತಿರೇಕದಿಂದ ಮುದಿಯಾಗಿ ಹೋಗಿದ್ದೇನೆ. ಪೂರ್ವದಲ್ಲಿ ಧರ್ಮದೇವನು ಯಾವ ಲಲಿತಾಂಗಿಯನ್ನು ಅತ್ಯಂತಾನುರಾಗದಿಂದ ಭಾವಿಸುತ್ತಿದ್ದನೋ ಆಕೆಯು ಈಗ ಒಂದು ಕಿರುನಗೆಯನ್ನಾಗಲಿ ಕಟಾಕ್ಷವನ್ನಾಗಲಿ ಬೀರುವ ಸಂಭವವಿಲ್ಲ. ನಿನಗೆ ಮೊದಲೇ ಹೇಳಿರುವಂತೆ ನಾನು ತುಂಬ ನೊಂದವಳು ; ಪ್ರತ್ಯಾಶೆಯಾಗಲಿ ಸಂತೋಷದ ನೆನಪಾಗಲಿ ಇಲ್ಲದೆ ದೇಹಯಾತ್ರೆಯನ್ನು ಸಾಗಿಸುವುದೆಂದರೆ

ಬಹು ಸಂಕುಚಿತವಾಗುತ್ತದೆ. ಇದರಿಂದ ಅನುಭವಿಸಬೇಕಾದುದೆಲ್ಲವೂ ಇನ್ನೂ ಮುಗಿದಿರುವಂತೆ ಕಾಣುವುದಿಲ್ಲ. ಇಲ್ಲ, ಇಲ್ಲ, ಇನ್ನೂ ಮುಗಿದಿಲ್ಲ. ನನ್ನ ಮನೋಭಾವವನ್ನು ಮತ್ತೊಮ್ಮೆ ನಿನಗೆ ತಿಳಿಸಿಬಿಡುತ್ತೇನೆ. ನಿನ್ನ ಈಗಣ ಕಾರ್ಯವು ಅತ್ಯಂತ ರಮಣೀಯ, ಅತ್ಯುಜ್ವಲ, ಅತ್ಯುತ್ಕೃಷ್ಟ"

"ಈಗ ನೀನು ಹಾಗೆಂದು ಹೇಳುತ್ತೀಯಾ ಲಲಿತಾಂಗೀ, ನಿನಗಾಗಿ ನಾನು ಎಷ್ಟುಮಟ್ಟಿಗೆ ಬಲಿದಾನ ಮಾಡಿದ್ದೇನೆ ಬಲ್ಲೆಯಾ ? ಭಗವಂತನು ಪ್ರಪಂಚವನ್ನು ಸೃಷ್ಟಿಮಾಡಿ ಅದು ಅಸ್ತಾವ್ಯಸ್ತತೆಯಿಂದಿರುವಾಗ ಮಾನವರ ಪಾಪಕಾರ್ಯಗಳಿಗಾಗಿ ಪರಿತಪಿಸುವ ಅಮಾನವ ರಮಣೀಯ ಅಶ್ರುಬಿಂದುಗಳನ್ನು ನಿವಾರಿಸುವುದಕ್ಕೋಸ್ಕರ ತನ್ನ ಸೃಷ್ಟಿಕಾರ್ಯವನ್ನು ನಿಲ್ಲಿಸಿಬಿಟ್ಟರೆ, ಸೃಷ್ಟಿಕಾರ್ಯವೆಲ್ಲವೂ ಮುಗಿದು, ಅದು ಸರಿಯಾಗಿರುವುದೋ ನೋಡಬೇಕೆಂದಿರುವಾಗ ಪರಮಾತ್ಮನು ಜ್ಯೋತಿಸ್ಸ್ವರೂಪನಾದ ಸೂರ್ಯದೇವನನ್ನು ಅಳಿಸಿಬಿಟ್ಟು ಜಗತ್ತೆಲ್ಲವನ್ನೂ ಅಂಧಕಾರದಲ್ಲಿ ನೂಕಿಬಿಟ್ಟರೆ ಆಗಲೂ ನನ್ನ ಜೀವವನ್ನು ಬಲಿಯಾಗಿ ಅರ್ಪಿಸುವುದರಿಂದ ನಾನು ಎಷ್ಟುಮಟ್ಟಿಗೆ ನಷ್ಟಪಟ್ಟಿರುವೆನೆಂಬುದನ್ನು ನೀನು ತಿಳಿಯಲಾರೆ ಬಲ್ಲೆಯಾ ?" ಎಂದನು.

ಅವನ ನುಡಿಯನ್ನು ಕೇಳಿ ಅವಳು ಆತನನ್ನು ವಿಸ್ಮಯದಿಂದಲೂ ಆಶ್ಚರ್ಯದಿಂದಲೂ, ಕೃತಜ್ಞತೆಯಿಂದಲೂ, ನೋಡುತ್ತಿದ್ದಳು. ಅಷ್ಟು ಚಿಂತೆಯ ಭಾರವನ್ನೂ ತನ್ನ ಬುದ್ಧಿಯು ತಡೆಯಲರಿಯದೋ ಎಂಬಂತೆ ಆತನು ತನ್ನ ಬಿಸಿಯಾದ ಕೈಗಳನ್ನು ಹಣೆಯ ಮೇಲೆ ಇರಿಸಿಕೊಂಡಿದ್ದನು.

ಆಗ ಲಲಿತಾಂಗಿಯು ಅವನನ್ನು ನೋಡಿ, "ಧರ್ಮದೇವ, ನಾನು ನಿನಗೆ ಇನ್ನೊಂದು ಮಾತನ್ನು ಹೇಳತಕ್ಕುದಿದೆ" ಎನ್ನಲಾಗಿ ಅವನು ಪರುಷ ಸ್ವರದಿಂದ ನಕ್ಕನು.

ಆಕೆಯು "ಧರ್ಮದೇವ, ನನ್ನ ಮೊಗವು ಕಳೆಗೆಟ್ಟಿದ್ದರೂ ಕಣ್ಣುಗಳಲ್ಲಿ ಹೊಳಪಿಲ್ಲದಿದ್ದರೂ, ಮೈಯು ಲಾವಣ್ಯಹೀನವಾಗಿದ್ದರೂ, ಹಿಂದಣ ಲಲಿತಾಂಗಿಯ ರೂಪಲಾವಣ್ಯಗಳೆಲ್ಲವೂ ಮಾರ್ಪಟ್ಟುಹೋಗಿದ್ದರೂ ನನ್ನ ಹೃದಯವೇನೋ ಒಂದೇ ರೀತಿಯಾಗಿರುತ್ತದೆ. ಧರ್ಮದೇವ, ನಿನಗೆ ಶುಭವಾಗಲಿ, ಇನ್ನಾವ ಆಸೆಯೂ ನನಗಿಲ್ಲ. ನಿನ್ನನ್ನು ಮತ್ತೊಂದು ಬಾರಿ ನೋಡಿದುದಾಯಿತು. ನೀನು ಮೊದಲಿನಂತೆಯೇ ಉದಾತ್ತಚರಿತ್ರನಾಗಿಯೂ ಮಹಾಮಹಿಮನಾಗಿಯೂ ಇದ್ದೀಯೆ. ನಿನಗೆ ಪರಮಾತ್ಮನು ಮಂಗಳವುಂಟುಮಾಡಲಿ" ಎಂದು ಹೇಳಿ ಅವನಿಗೆ ತಲೆಬಾಗಿ, ಆಕೆಯು ಕೊಠಡಿಯ ಬಾಗಿಲನ್ನು ತೆರೆದುಕೊಂಡು ಹೊರಟುಹೋದಳು.

ಮಲಯಸಿಂಹನು ಯಾವ ಮಾತನ್ನೂ ಆಡಲಿಲ್ಲ. ವೈರಪ್ರತೀಕಾರದ ಶಪಥವು ವಿಹತವಾಗಿ ಹೋದುದರಿಂದ ಆತನು ಮನದಲ್ಲಿ ಕಡುನೊಂದವನಾಗಿ ಚಿಂತಾಸಮುದ್ರದಲ್ಲಿ ಮಗ್ನನಾಗಿದ್ದನು. ಆಗ ಒಂದು ಗಂಟೆಯು ಹೊಡೆಯಿತು. ರಾಧಾಭಾಯಿಯ ಬಂಡಿಯು ಕಲ್ಲುಹಾಸಿದ ಹಾದಿಯಲ್ಲಿ ವೇಗವಾಗಿ ಹೊರಟುಹೋಯಿತು. ಮಲಯಸಿಂಹನು ತಲೆಯೆತ್ತಿ

ನೋಡಿ, 'ಅಯ್ಯೋ, ವೈರ ಪ್ರತಿಕ್ರಿಯೆ ಮಾಡುವೆನೆಂದು ಪ್ರತಿಜ್ಞೆ ಮಾಡಿದಾಗ ನನ್ನ ಈ ಹೃದಯವನ್ನು ಕಿತ್ತುಬಿಸುಡದೆ ಬುದ್ಧಿಗೆಟ್ಟೆನಲ್ಲಾ' ಎಂದುಕೊಂಡನು.

## ೬೦
## ತಾಯಿ ಮಕ್ಕಳು

ಮಲಯಸಿಂಹನು ಎಷ್ಟು ಹೊತ್ತು ಆ ರೀತಿ ಇದ್ದನೋ ತಿಳಿಯದು. ಎಚ್ಚತ್ತಾಗ ಬೆಳಗಿನ ಜಾವವಾಗಿದ್ದಿತು. 'ಅಯ್ಯೋ ! ನಾನೇನು ಅವಿವೇಕ ಮಾಡಿದೆ ? ಅಷ್ಟು ದಿನಗಳಿಂದ ಶ್ರಮಪಟ್ಟು ಕಟ್ಟುತ್ತಿದ್ದ ಕೋಟೆಯು ಒಂದು ನಿಮಿಷದಲ್ಲಿ ಶತ್ರುವಿನ ವಶವಾಗಿ ಹೋಯಿತಲ್ಲ ! ಜಾಲದುರ್ಗದಲ್ಲಿದ್ದಾಗ ಯಾರಿಗೂ ಬೇಡದವನೆಂದು ಇದ್ದ ನನ್ನನ್ನು ದೇವರು ಪರಮಕೃಪೆಯಿಂದ ದೊಡ್ಡವನನ್ನಾಗಿಯೂ, ಜ್ಞಾನಿಯನ್ನಾಗಿಯೂ, ಶ್ರೀಮಂತನನ್ನಾಗಿಯೂ ಮಾಡಿದನು. ಅಂತಹ ನಾನು ಇನ್ನು ಸ್ವಲ್ಪ ಹೊತ್ತಿನಲ್ಲಿ ಒಂದು ಹಿಡಿಮಣ್ಣಾಗಿ ಹೋಗುತ್ತೇನೆ. ಇಷ್ಟು ದೂರ ನನ್ನಿಂದ ಕಾರ್ಯಗಳನ್ನು ಮಾಡಿಸಿ ದೇವರು ಈಗ ನನ್ನನ್ನು ಕೈ ಬಿಟ್ಟನೇ ? ಅಥವಾ ನನ್ನ ಮನೋದಾರ್ಢ್ಯವನ್ನು ಪರೀಕ್ಷಿಸಲು ಈ ರೀತಿ ಏರ್ಪಾಡು ಮಾಡಿದನೋ ? ಏನಾದರೂ ಆಗಲಿ, ಅವನು ಮಾಡುವುದೆಲ್ಲಾ ಒಳ್ಳೆಯದಕ್ಕೇ ಎಂದು ನಾನು ದೃಢವಾಗಿ ನಂಬಿದ್ದೇನೆ. ನನಗೇನೂ ಸಾಯುವುದಕ್ಕೆ ಸಂಕಟವಿಲ್ಲ. 'ಜಾತಸ್ಯ ಮರಣಂ ಧ್ರುವಂ' ಹುಟ್ಟಿದವರಿಗೆ ಸಾವು ನಿಶ್ಚಯ. ಬುದ್ಧಿಯನ್ನೂ ಧನವನ್ನೂ ವ್ಯಯಮಾಡಿ, ಆ ಪಾತಕಿಗಳ ಶಿಕ್ಷೆಗಾಗಿ ಬಹುಕಾಲದಿಂದ ನಡೆಸಿದ ಏರ್ಪಾಡುಗಳು ಈಗ ಭಂಗವಾಗಿ ಅವರಿಗೆ ಶಿಕ್ಷೆಯು ಆಗದೆ ಲೋಕದಲ್ಲಿ ಕೆಟ್ಟ ಕೃತ್ಯಗಳನ್ನು ಮಾಡಿದರೂ ಶಿಕ್ಷೆಯಿಲ್ಲದೆ ಸುಖವಾಗಿರಬಹುದೆಂಬ ಜ್ಞಾನವು ಜನರಿಗೆ ಉಂಟಾಗುವುದಲ್ಲಾ ಎಂಬುದೀಗ ನನಗೆ ಸಂಕಟ. ಭಗವಂತನ ಚಿತ್ತದಲ್ಲಿ ನಾನು ಸಾಯಬೇಕೆಂದಿದ್ದರೆ ಹಾಗೆಯೇ ಆಗಲಿ ; ಶತ್ರುಗಳಿಗೆ ಹೆದರಿ ಕೈಲಾಗದೆ ಸತ್ತನೆಂದು ಮಾತ್ರ ಲೋಕವು ನನ್ನನ್ನು ಆಡಕೂಡದು. ಅಸಹಾಯಶೂರನಾದ ನಾನು ದೈವಸಂಕಲ್ಪದಿಂದ ಪ್ರಾಣಬಿಟ್ಟೆನೆಂದು ಜನರು ತಿಳಿಯಬೇಕು. ನಾನು ಸತ್ತು ಆ ಪಾಪಿಗಳಿಗೆ ಈ ಲೋಕದಲ್ಲಿ ಶಿಕ್ಷೆಯಾಗದಿದ್ದರೂ ಪರಲೋಕದಲ್ಲಿ ಆಗದೆ ಇರುವುದಿಲ್ಲ' ಎಂದುಕೊಂಡು ಹಾಗೆಯೇ ದೇವರ ಧ್ಯಾನವನ್ನು ಮಾಡಿ ತನ್ನ ಮರಣಶಾಸನವನ್ನು ಬರೆದಿಟ್ಟನು.

ಮಲಯಸಿಂಹನು ಶಾಸನವನ್ನು ಬರೆದಾಗ ಸೂರ್ಯಕಿರಣವು ಕೊಠಡಿಗೆ ತಲೆಹಾಕಿತು. ಅದನ್ನು ಬರೆದು ಮುಗಿಸಿ ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿದಾಗ ಪಕ್ಕದ ಕೋಣೆಯಲ್ಲಿ ಯಾರೋ ನಿಟ್ಟುಸಿರು ಬಿಟ್ಟಂತೆ ಕೇಳಿತು. ಇದಾರಿರಬಹುದೆಂದು ಆ ಕೋಣೆಯ ಬಾಗಿಲನ್ನು ತೆರೆದು ನೋಡಲು ಕೋಮಲೆಯು ಬಾಗಿಲ ಬಳಿ ಹಾಕಿದ್ದ ಕುರ್ಚಿಯ ಮೇಲೆ

ಕುಳಿತು ನಿದ್ದೆಮಾಡುತ್ತ ನಿಟ್ಟುಸಿರನ್ನು ಬಿಡುತ್ತಲಿದ್ದಳು. ಅದನ್ನು ಕಂಡ ರಾಜನು 'ಅಯ್ಯೋ ಪಾಪ ! ನನ್ನನ್ನು ನೋಡಬೇಕೆಂದು ಬಂದು, ಹತ್ತಿರ ಬಂದರೆ ಏನನ್ನು ಹೇಳುವೆನೋ ಎಂದು ಹೆದರಿ, ನನ್ನ ವಿಷಯವಾಗಿಯೇ ಸಂಕಟಪಡುತ್ತ, ಇನ್ನೂ ಯೌವನವಾದುದರಿಂದ ನಿದ್ದೆಯನ್ನು ತಡೆಯಲಾರದೆ ಕುರ್ಚಿಯ ಮೇಲೆ ನಿದ್ದೆಹೋಗಿದ್ದಾಳೆ. ಲಲಿತಾಂಗಿಗೆ ತನ್ನ ಮಗನ ನೆನಪು ಬಂದಿತು; ನನಗೆ ನನ್ನ ಮಗಳ ಜ್ಞಾಪಕವೇ ಬರಲಿಲ್ಲ. ಇವಳ ದೇಹಯಾತ್ರೆಗೆ ತಕ್ಕ ಏರ್ಪಾಟು ಮಾಡದೆ ಸಾಯುವುದು ಸರಿಯಲ್ಲ' ಎಂದು ಯೋಚಿಸಿ ಮರಳಿ ತನ್ನ ಕೊಟಡಿಗೆ ಹೋಗಿ ಪೆಟ್ಟಿಗೆಯಿಂದ ಶಾಸನವನ್ನು ತೆಗೆದು ಅದರಲ್ಲಿ "ನನಗೆ ಸುಮಾರು ಇಪ್ಪತ್ತು ಕೋಟಿ ದ್ರವ್ಯ ಆಸ್ತಿಯಿದೆ. ಅದರಲ್ಲಿ ಇಪ್ಪತ್ತು ಲಕ್ಷ ನನ್ನ ಯಜಮಾನ ಧನಕೋಟಿಯ ಮಗ ಜಯವೀರನಿಗೂ, ಒಂದು ಲಕ್ಷ ಭದ್ರಕನಿಗೂ, ಒಂದು ಲಕ್ಷ ವಾಮನಭಟ್ಟನಿಗೂ, ಐವತ್ತು ಸಾವಿರ ಭೈರವನಿಗೂ ಕೊಡಬೇಕೆಂದಿದ್ದೇನೆ. ಮಿಕ್ಕ ಆಸ್ತಿಯೆಲ್ಲವನ್ನೂ ನನ್ನ ಮಗಳಂತೆ ಸಾಕುತ್ತಲಿದ್ದ ಕ್ಷಿತೀಂದ್ರನ ಕುಮಾರಿ ಕೋಮಲೆಗೆ ಕೊಟ್ಟಿರುತ್ತೇನೆ. ನನ್ನ ಆಸ್ತಿಯಿರುವೆಡೆಯನ್ನು ಭದ್ರಕನು ಬಲ್ಲನು. ಜಯವೀರನು ಇಷ್ಟಪಟ್ಟು ಕೋಮಲೆಯನ್ನು ಮದುವೆಯಾದರೆ ನನ್ನ ಮನೋರಥವು ಪೂರ್ತಿಯಾಗುವುದು" ಎಂದು ಬರೆದು ಸೇರಿಸಿದನು.

ಈ ರೀತಿ ಬರೆದು ಮುಗಿಸಿದಾಗ ಹಿಂದೆ ಉಸ್ಸೆಂದು ಸದ್ದಾಯಿತು. ತಿರುಗಿನೋಡಲು ತನ್ನ ಹಿಂದೆ ಕೋಮಲೆಯು ನಿಂತಿದ್ದಳು. ಅವಳು ಪಕ್ಕದ ಕೊಠಡಿಯಲ್ಲಿ ನಿದ್ದೆಮಾಡುತ್ತಿದ್ದುದನ್ನು ಕಂಡು ಮರಳಿ ತನ್ನ ಕೊಠಡಿಗೆ ಇವನು ಬಂದಾಗ ಆ ಕೊಠಡಿಯ ಬಾಗಿಲನ್ನು ಮುಚ್ಚಿಕೊಂಡು ಬಂದಿರಲಿಲ್ಲ. ಆದುದರಿಂದ ಅವಳು ಸದ್ದಿಲ್ಲದೆ ಬಂದು ತನ್ನ ಹಿಂದೆ ನಿಂತಿದ್ದುದು ಅವನಿಗೆ ತಿಳಿಯಲಿಲ್ಲ. ತಾನು ಬರೆದುದನ್ನು ಅವಳು ಓದಿರಬಹುದೋ ಏನೋ ಎಂದು ರಾಜನಿಗೆ ಅನುಮಾನ ಹುಟ್ಟಿ "ಆ ಕಾಗದವನ್ನು ನೀನು ಓದಿದೆಯಾ ?" ಎಂದು ಕೇಳಲು, ಅವಳು,

"ಅದೇನು ಇಷ್ಟು ಹೊತ್ತಿನಲ್ಲಿ ಹೀಗೆ ಬರೆಯುತ್ತೀರಿ ? ನಿಮ್ಮ ಆಸ್ತಿಯು ನನಗೇತಕ್ಕೆ ? ಎಲ್ಲಾದರೂ ನನ್ನನ್ನು ಬಿಟ್ಟು ಹೊರಟುಹೋಗುತ್ತೀರೋ ?" ಎಂದಳು.

"ನಾನು ಒಂದು ಕಡೆಗೆ ಹೋಗಬೇಕಾಗಿದೆ ; ಅಲ್ಲಿ ನನಗೇನಾದರೂ ಒಂದು ವೇಳೆ ಅಪಾಯ ತಟ್ಟಿದರೆ ನನ್ನ ಮಗಳಾದ ನೀನು ಸುಖವಾಗಿರಬೇಡವೇ ?"

"ಈಗ ಸಾವಿನ ಯೋಚನೆ ನಿಮಗೇತಕ್ಕೆ ?"

"ತಿಳಿದವರು ಸಾಯುವುದಕ್ಕೆ ಸಿದ್ಧವಾಗಿರುವುದು ಒಳ್ಳೆಯದು."

"ನೀವು ಸತ್ತಮೇಲೆ ನನಗೆ ಆಸ್ತಿ ಏತಕ್ಕೆ ?" ಎಂದು ಕೈ ನೀಡಿ ಆ ಮರಣಶಾಸನವನ್ನು ತೆಗೆದು ಹರಿದುಬಿಟ್ಟಳು. ಅಷ್ಟು ಮಾಡಿದುದಕ್ಕೆ ಅವಳು ಬಳಲಿ ಮೂರ್ಛಿತಳಾಗಿ ನೆಲದ ಮೇಲೆ ದೊಪ್ಪನೆ ಬಿದ್ದಳು. ಆಗ ಅವಳನ್ನು ಎತ್ತಿಕೊಂಡು ರಾಜನು, 'ನಾನು ಇವಳನ್ನು ಇದುವರೆಗೂ ಮಗಳೆಂದೇ ಭಾವಿಸಿದ್ದೆನು. ಈಗ ಇವಳನ್ನು ನೋಡಿದರೆ ಇವಳಿಗೆ ನನ್ನ

ವಿಷಯದಲ್ಲಿ ಬೇರೆ ಭಾವವಿರುವಂತೆ ತೋರುತ್ತದೆ. ಇವಳ ಭಾವವು ಹಾಗಿದ್ದರೆ ಮುಂದೆ ನನಗೆ ಆನಂದವಾದೀತು' ಎಂದುಕೊಂಡು ಅವಳನ್ನು ಅವಳ ಕೊಠಡಿಯಲ್ಲಿ ದಾಸಿಗಳ ವಶದಲ್ಲಿ ಬಿಟ್ಟು ಮರಳಿ ತನ್ನ ಕೊಠಡಿಗೆ ಬಂದು ಬಾಗಿಲುಗಳನ್ನು ಮುಚ್ಚಿ ಹರಿದು ಬಿಸುಟಿದ್ದ ಶಾಸನವನ್ನು ಪುನಃ ಬರೆದು ಒಂದು ಲಕೋಟೆಯಲ್ಲಿ ಹಾಕಿ ಅದರ ಮೇಲೆ ಅರಗಿನ ಮುದ್ರೆಯನ್ನು ಹಾಕಿಬಿಟ್ಟನು. ಆ ವೇಳೆಗೆ ಜಯವೀರನೂ ಮನೋಮೋಹನನೂ ಬಂದರು.

ಆಗ ಜಯವೀರನು ಮಲಯಸಿಂಹನನ್ನು ನೋಡಿ "ರಾಜರೇ, ನಾವು ಹೊತ್ತಿಗೆ ಮುಂಚೆಯೇ ಬಂದಿದ್ದೇವೆ. ರಾತ್ರಿಯೆಲ್ಲಾ ನಿಜವಾಗಿಯೂ ನಮಗೆ ನಿದ್ದೆಯೇ ಹತ್ತಲಿಲ್ಲ" ಎಂದು ಹೇಳಲು, ಮಲಯಸಿಂಹನು, "ಅಪ್ಪಾ, ನಿಮ್ಮಂತಹ ಆಪ್ತರೀಗ ನನಗೆ ಬೇಕು" ಎಂದು ಹೇಳಿ ವಾಮನಭಟ್ಟನನ್ನು ಕೂಗಿ, "ಭಟ್ಟಾ, ಇದನ್ನು ನಮ್ಮ ವಕೀಲರ ಕೈಯಲ್ಲಿ ಕೊಟ್ಟು ಬಾ" ಎಂದು ಅವನ ಕೈಯಲ್ಲಿ ಆ ಲಕೋಟೆಯನ್ನು ಕೊಟ್ಟು ಅವನು ಅತ್ತ ಹೋದ ಮೇಲೆ ಜಯವೀರನನ್ನು ನೋಡಿ "ಅದೇ ನನ್ನ ಮರಣಶಾಸನ; ನನ್ನ ಕಾಲಾನಂತರ ನೀವು ಅದನ್ನು ನೋಡತಕ್ಕದ್ದು" ಎಂದನು.

"ನೀವು ಸಾಯುವುದೇ ?"

"ಯುದ್ಧಕ್ಕೆ ಪ್ರವೇಶ ಮಾಡಿದ ಮೇಲೆ ಸಾವಿಗೆ ಸಿದ್ಧವಾಗಿರಬೇಕಲ್ಲವೇ ?"

"ಅದು ಸರಿ" ಎಂದು ಜಯವೀರನು ತಲೆಯನ್ನು ಅಲುಗಿಸಿದನು.

"ಜಯವೀರರೇ, ನೆನ್ನೆ ರಾತ್ರಿ ಅಷ್ಟು ಅವಸರವಾಗಿ ಎಲ್ಲಿಗೆ ಹೋಗುತ್ತಿದ್ದಿರಿ ?"

"ಪಿಸ್ತೂಲಿನಿಂದ ಕಾದಾಡುವುದಕ್ಕೆ ಬದಲಾಗಿ ಕತ್ತಿಯಿಂದ ಕಾದಾಡುವ ವಿಚಾರವನ್ನು ಯೋಚಿಸುವುದಕ್ಕೆ ಭದ್ರಸಿಂಹನ ಒಳಗೆ ಹೋಗಿದ್ದೆನು."

"ಅವನು ಒಪ್ಪಿದನೋ ?"

"ಇಲ್ಲ."

"ಜಯವೀರರೇ, ನನ್ನ ಪಿಸ್ತೂಲಿನ ಸಾಧನೆಯನ್ನು ನೀವು ನೋಡಿದ್ದೀರೋ ? ಇಲ್ಲದಿದ್ದರೆ ಇರುವ ಸ್ವಲ್ಪ ಹೊತ್ತಿನಲ್ಲಿ ಅದರ ಚಮತ್ಕಾರವನ್ನು ನಿಮಗೆ ತೋರಿಸುತ್ತೇನೆ, ಬನ್ನಿರಿ" ಎಂದು ರಾಧಾಬಾಯಿಯು ಬಂದಿದ್ದಾಗ ತಾನು ಇಟ್ಟುಕೊಂಡಿದ್ದ ಪಿಸ್ತೂಲನ್ನೂ ಅದರ ಸಾಮಗ್ರಿಗಳನ್ನೂ ತೆಗೆದುಕೊಂಡು ಜಯವೀರ ಮನೋಮೋಹನರ ಸಂಗಡ ಮನೆಯ ಹಿಂದಣ ತೋಟಕ್ಕೆ ಹೋಗಿ, ಅಲ್ಲಿ ಒಂದು ಮರಕ್ಕೆ ಗುರುತಿನ ಚೀಟಿಯನ್ನು ಸಿಕ್ಕಿಸಿ ದೂರದಲ್ಲಿ ನಿಂತುಕೊಂಡು ಪಿಸ್ತೂಲನ್ನು ಹಾರಿಸಿ ಅದರಲ್ಲಿ ಹದಿನಾರು ಕಡೆ ರಂಧ್ರಗಳನ್ನು ಮಾಡಿದನು. ಹೀಗೆ ಲಕ್ಷ್ಯವನ್ನು ಭೇದಿಸಿದ ಮಲಯಸಿಂಹನ ಕರಲಾಘವವನ್ನು ನೋಡಿ ಅವರಿಬ್ಬರೂ ಬೆರಗಾಗಿ,

"ರಾಜರೇ, ನಿಮ್ಮ ಸಾಮರ್ಥ್ಯವು ಅನ್ಯಾದೃಶವಾದುದು. ಉದಯಸಿಂಹನು ತಾಯಿಗೆ

ಒಬ್ಬನೇ ಮಗ ; ಅವನು ಹತನಾದರೆ ಅವಳು ಹೇಗೆ ಹೊಟ್ಟೆ ಹಿಡಿದಾಳೋ ಕಾಣೆ ; ಅಂತೂ ಅವನನ್ನು ಕೊಲ್ಲಬೇಡಿ" ಎಂದರು.

"ಅದು ನಿಜ. ನನಗೆ ತಾಯಿಯೂ ಇಲ್ಲ ; ನಾನು ಸತ್ತರೆ ಸಂಕಟಪಡುವವರೂ ಇಲ್ಲ ; ಆದುದರಿಂದ ಈ ಯುದ್ಧದಲ್ಲಿ ನಾನೇ ದೇಹವನ್ನು ತ್ಯಜಿಸಿಬಿಡಬೇಕೆಂದಿದ್ದೇನೆ."

"ಅದು ಏಕೆ ?"

" ನಿನ್ನೆಯ ರಾತ್ರಿ ಸ್ವಪ್ನದಲ್ಲಿ ಪರಮಾತ್ಮನು ಪ್ರತ್ಯಕ್ಷನಾಗಿ ಬಂದು, 'ಮಲಯಸಿಂಹ, ನೀನು ಲೋಕದಲ್ಲಿ ಜನ್ಮವೆತ್ತಿ ಬಹುದಿನಗಳಾದವು. ಇನ್ನು ಇಲ್ಲಿರಬೇಡ, ಹೊರಡು' ಎಂದು ಅಪ್ಪಣೆಕೊಡಿಸಿದನು. ಅದಕ್ಕಾಗಿ –" ಎಂದು ರಾಜನು ಹೇಳಲು ಅವರಿಬ್ಬರೂ ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡು ಆಶ್ಚರ್ಯಚಕಿತರಾದರು. ಬಳಿಕ ರಾಜನು ಗಡಿಯಾರವನ್ನು ನೋಡಿ "ಸ್ವಾಮೀ, ಹೊತ್ತಾಗುತ್ತ ಬಂದಿತು ; ಅಲ್ಲಿಗೆ ಹೊರಡುವುದಕ್ಕೆ ಇದೀಗ ಸರಿಯಾದ ಕಾಲ ; ಬನ್ನಿ ಹೋಗೋಣ" ಎಂದು ಅವರನ್ನು ತನ್ನ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಮಾರಿಯ ತೋಪಿಗೆ ಹೋದನು. ಅವನು ಅಲ್ಲಿಗೆ ಹೋದಾಗ ಸರಿಯಾಗಿ ಎಂಟು ಗಂಟೆ ಹೊಡೆಯಿತು. ಇದಿರ ಕಡೆಯವರು ಯಾರೂ ಇನ್ನೂ ಬಂದಿರಲಿಲ್ಲ. ರಾಜನು ಬಂಡಿಯಿಂದಿಳಿದು ಜಯವೀರನನ್ನು ಪ್ರತ್ಯೇಕವಾಗಿ ಕರೆದುಕೊಂಡು ಹೋಗಿ "ಜಯವೀರರೇ, ಮದುವೆಯಾಗಬೇಕೆಂದು ಯಾವ ಹೆಣ್ಣನ್ನಾದರೂ ನಿಶ್ಚಯಮಾಡಿಕೊಂಡಿದ್ದೀರೋ" ಎಂದು ಕೇಳಲು, ಅವನು ರಾಜನ ಮುಖವನ್ನು ನೋಡುತ್ತ ಸುಮ್ಮನೆ ನಿಂತಿದ್ದನು.

"ನಿಮ್ಮ ಗುಟ್ಟನ್ನು ತಿಳಿಯಬೇಕೆಂದು ನಾನು ಕೇಳಲಿಲ್ಲ. ನಿಮ್ಮ ಪ್ರೀತಿಗೆ ಇನ್ನೂ ಯಾರೂ ಭಾಗಿಗಳಾಗದಿದ್ದರೆ—"

"ನಾನು ಒಬ್ಬಳನ್ನು ಮದುವೆಮಾಡಿಕೊಳ್ಳಬೇಕೆಂದು ಇದ್ದೇನೆ. ನಿಶ್ಚಿತಾರ್ಥವೂ ಆಗಿದೆ."

"ಹಾಗಾದರೆ ಇನ್ನೊಂದು ಆಸೆಯೂ ಭಗ್ನವಾಯಿತು ; ಅಯ್ಯೋ, ಕೋಮಲೆ !" ಎಂದು ರಾಜನು ಸಂಕಟಪಡಲು, ಜಯವೀರನು,

"ಸ್ವಾಮಿ, ತಮ್ಮ ಸಮಾಚಾರವನ್ನು ನಾನು ಅರಿಯದೆ ಇದ್ದಿದ್ದರೆ ಈಗ ನೀವು ಆಡಿದ ಮಾತಿನಿಂದ ನಿಮ್ಮ ಮನದಲ್ಲಿ ಕಳವಳವುಂಟಾಗಿ ಧೈರ್ಯಗೆಟ್ಟಿದ್ದೀರಿ ಎಂದು ಹೇಳುತ್ತಲಿದ್ದೆ."

"ನಾನೇ ಧೈರ್ಯಗೆಡುವವನು ? ಇಪ್ಪತ್ತು ವರ್ಷಗಳವರೆಗೂ ಉಳಿವು ಸಾವುಗಳ ಗುಣದೋಷಗಳನ್ನು ಪರಿಶೀಲನೆ ಮಾಡಿ ಸಾಯುವುದಕ್ಕಾಗಿ ತಕ್ಕ ಏರ್ಪಾಡುಗಳನ್ನೆಲ್ಲ ಮಾಡಿಕೊಂಡು, ಲೋಕದಲ್ಲಿ ಅನ್ಯಾದೃಶವಾದ ಸಾಹಸ ಕಾರ್ಯಗಳನ್ನೆಲ್ಲ ಮಾಡಿದ ನಾನು ಸಾಯುವುದಕ್ಕೆ ಹೆದರುವೆನೇ ? ನಾನು ಈಗ ನನಗಾಗಿ ಕಳವಳಪಡಲಿಲ್ಲ. ನನ್ನ ಮರಣಾನಂತರ ಕೋಮಲೆಗೆ ಯಾರೂ ದಿಕ್ಕಿಲ್ಲದೆ ಹೋಗುತ್ತಾರಲ್ಲ ಎಂದು ಸಂಕಟವಾಗುತ್ತಲಿದೆ.

ಜಯವೀರರೇ, ನೀವು ಸೈನ್ಯದಲ್ಲಿದ್ದರೂ ಇತರರ ಧೈರ್ಯವನ್ನು ಪರಿಶೋಧಿಸುವ ಶಕ್ತಿಯು ಇನ್ನೂ ಬಂದಿಲ್ಲವೇ ?" ಎಂದು ರಾಜನು ಹೇಳುತ್ತಿರುವ ವೇಳೆಗೆ ತೋಪಿಗೆ ಒಂದು ಬಂಡಿಯು ಬಂದು ನಿಂತಿತು.

ಅದರಿಂದ ಭದ್ರಸೇನನೂ ಚಿತ್ರಸೇನನೂ ಇಳಿದರು. ಅವರ ಹಿಂದೆಯೇ ದಮನಕನೂ ವೀರಸಿಂಹನೂ ಇಳಿದರು. ಉದಯಸಿಂಹನೇ ಇನ್ನೂ ಬರಲಿಲ್ಲ. ಎಲ್ಲರೂ ಸುಮಾರು ಅರ್ಧ ಗಂಟೆಯವರೆಗೆ ಕಾದಿದ್ದು ಹಿಂತಿರುಗಿ ಮನೆಗೆ ಹೋಗಬೇಕೆಂದಿದ್ದಾಗ ಉದಯಸಿಂಹನು ಕುದುರೆಯ ಮೇಲೆ ಸವಾರಿಮಾಡುತ್ತಾ ಅತಿ ವೇಗವಾಗಿ ಬರುತ್ತಿರುವುದನ್ನು ಕಂಡರು. ಆಗ ಭದ್ರಸಿಂಹನು, "ಏನು ಬುದ್ಧಿ ? ಕುದುರೆ ಸವಾರಿ ಮಾಡಿ ದಣಿಯಬೇಡವೆಂದು ಹೇಳಿದ್ದೆ ; ಆದರೂ ಬುದ್ಧಿಯಿಲ್ಲ" ಎಂದು ಹೇಳುತ್ತಿದ್ದಾಗಲೇ ಉದಯಸಿಂಹನು ಹತ್ತಿರಕ್ಕೆ ಬಂದು ಕುದುರೆಯಿಂದ ಇಳಿದನು. ಅವನ ಮುಖವು ಬಣ್ಣಗೆಟ್ಟಿದ್ದಿತು ; ಕಣ್ಣುಗಳು ರಾತ್ರಿಯೆಲ್ಲಾ ನಿದ್ದೆಗೆಟ್ಟಂತೆ ಕೆಂಪಗೆ ಇದ್ದುವು. ಕೂಡಲೇ ಅವನು ಎಲ್ಲರಿಗೂ ನಮಸ್ಕಾರ ಮಾಡಿ.

"ನಾನು ರಾಜಾ ಮಲಯಸಿಂಹರೊಡನೆ ಕೆಲವು ಮಾತುಗಳನ್ನಾಡಬೇಕೆಂದಿದ್ದೇನೆ. ಎಲ್ಲರೂ ದಯೆಮಾಡಿ ನನ್ನ ಜತೆಯಲ್ಲಿ ಬಂದು ಆ ಮಾತುಗಳನ್ನು ಆಲಿಸಬೇಕು" ಎಂದನು.

ಅವನು ಏನು ಹೇಳುತ್ತಾನೆಯೋ ಎಂದು ಎಲ್ಲರೂ ಕಾತುರರಾಗಿದ್ದರು. ರಾಜನು ಮಾತ್ರ "ಅವನು ಮರಳಿ ತುಚ್ಛವಾದ ಮಾತುಗಳನ್ನಾಡಿ ನನ್ನನ್ನು ರೇಗಿಸದೆ ಇರಲಿ" ಎಂದು ಹೇಳಿದನು. ಆಗ ಉದಯಸಿಂಹನು ರಾಜನ ಸಮೀಪಕ್ಕೆ ಬಂದು,

"ರಾಜರೇ, ನಾನು ನೆನ್ನೆ ರಾತ್ರಿ ನಾಟಕಶಾಲೆಯಲ್ಲಿ ಎಲ್ಲರ ಮುಂದೆಯೂ ಮನಸ್ವೀ ಆಡಿದಾಗ ನನ್ನ ತಂದೆಯು ಒಂದು ವೇಳೆ ತಪ್ಪಿದವನಾಗಿದ್ದರೂ ಅವನ ತಪ್ಪುಗಳನ್ನು ಹೊರಡಿಸುವುದಕ್ಕೆ ನಿಮಗೇನೂ ಕಾರಣವಿಲ್ಲವೆಂದು ತಿಳಿದಿದ್ದೆನು. ಮನೆಗೆ ಹೋದಮೇಲೆ ನೀವು ಹಾಗೆ ಮಾಡಿದುದಕ್ಕೆ ತಕ್ಕ ತಕ್ಕ ಕಾರಣಗಳು ಇದ್ದುವು ಎಂದೂ, ಇನ್ನಾರಾದರೂ ಆಗಿದ್ದರೆ ವಿಪರೀತವಾಗಿ ರಗಳೆ ಹಚ್ಚುತ್ತಿದ್ದರೆಂದೂ ತಿಳಿಯಿತು. ಆದುದರಿಂದ ನಿಮ್ಮ ವಿಷಯದಲ್ಲಿ ನಾನು ಅವಿವೇಕದಿಂದ ಮಾಡಿದ ಅಪರಾಧವನ್ನು ಕ್ಷಮಿಸಬೇಕು" ಎಂದು ಪ್ರಾರ್ಥಿಸಿದನು.

ಉದಯಸಿಂಹನು ಈ ರೀತಿ ಹೇಳಿದುದನ್ನು ಕೇಳಿ ಎಲ್ಲರೂ ಬೆರಗಾದರು. ದಮನಕನು ವೀರಸಿಂಹನನ್ನು ನೋಡಿ "ಇದರ ಅರ್ಥವೇನು ? ನಾನಾಗಿದ್ದರೆ ನನ್ನ ತಂದೆಗೆ ಅವಮಾನ ಮಾಡಿದವನನ್ನು ಎಂದಿಗೂ ಸುಮ್ಮನೆ ಬಿಡುತ್ತಿರಲಿಲ್ಲ" ಎಂದನು.

ಮಲಯಸಿಂಹನು 'ಆಹಾ ; ದೇವರು ದೊಡ್ಡವನು ; ಇನ್ನೂ ನನ್ನನ್ನು ಕೈಬಿಟ್ಟಿಲ್ಲ. ನಿನ್ನೆಯ ರಾತ್ರಿ ಲಲಿತಾಂಗಿಯು ಬಂದು ನನ್ನ ಮಗನ ಪ್ರಾಣದಾನವನ್ನು ಮಾಡಬೇಕೆಂದು ಬೇಡಿದಾಗ, ನಾನು ಸತ್ತರೂ ಸಾಯಲಿ ಎಂಬ ಯೋಚನೆಯು ಅವಳಿಗೆ

ಇದ್ದಿತೆಂದು ತಿಳಿದಿದ್ದೆನು. ಈಗ ಅವಳ ಯೋಚನೆ ಗೊತ್ತಾಯಿತು. ಅಪ್ಪನ ಹಿಂದಣ ಅವಿವೇಕ ಕೃತ್ಯವನ್ನು ಮಗನಿಗೆ ವಿಶದವಾಗಿ ಅವಳು ತಿಳಿಸದೆ ಇದ್ದಲ್ಲಿ ವಿಚಾರವು ಈ ರೀತಿಯಾಗಿ ಮುಗಿಯುತ್ತಿರಲಿಲ್ಲ. ಹಾಗೆ ಮಾಡುವುದು ತನಗೆ ಎಷ್ಟೇ ಸಂಕಟಕರವಾಗಿದ್ದರೂ, ಮಗನಿಗೆ ತಂದೆಯೆಂಬ ಗೌರವವೇ ತಪ್ಪಿಹೋಗುವುದಾದರೂ, ಧೈರ್ಯವಾಗಿ ಅದನ್ನು ಮಾಡಿದುದು ಬಹಳ ಶ್ಲಾಘ್ಯವಾದ ಕೆಲಸ. ಇದು ಸಾಧಾರಣವಾದ ಹೆಂಗಸಿನಿಂದ ಆಗತಕ್ಕದಲ್ಲ. ಇನ್ನು ಭಗವಂತನು ನನ್ನಿಂದಲೇ ದುಷ್ಟನಿಗ್ರಹವನ್ನು ಮಾಡಿಸುತ್ತಾನೆ' ಎಂದು ಮನಸ್ಸನ್ನು ನಿರ್ಧರ ಮಾಡಿಕೊಂಡನು.

ಉದಯಸಿಂಹನು ಮನೆಯಿಂದ ಹೊರಟ ಕಾಲುಗಂಟೆಯೊಳಗಾಗಿಯೇ ಹಿಂತಿರುಗಿ ಬಂದನು. ಅವನು ಬರುವುದನ್ನೇ ನೋಡುತ್ತಿದ್ದ ರಾಜಸಿಂಹನು ಮಗನು ಸುಖವಾಗಿ ಬಂದುದನ್ನು ಕಂಡು "ಇವನು ಶತ್ರುವನ್ನು ಹತಮಾಡಿ ಬಂದಿರಬಹುದು" ಎಂದು ಊಹಿಸುತ್ತ "ನನಗೆ ಆ ಸುದ್ದಿಯನ್ನು ತಿಳಿಸುವುದಕ್ಕೆ ಬರುವನು" ಎಂದು ನಿರೀಕ್ಷಿಸುತ್ತಿದ್ದನು. ಎಷ್ಟು ಹೊತ್ತಾದರೂ ಅವನು ಬಾರದೇ ಇದ್ದುದರಿಂದ ಆಳನ್ನು ಕೂಗಿ, "ಯುದ್ಧದಲ್ಲಿ ಯಾರು ಗೆದ್ದರು, ತಿಳಿದು ಬಾ" ಎಂದು ಹೇಳಿಕಳುಹಿಸಿದನು. ಅವನು ಉದಯಸಿಂಹನನ್ನು ಬಂದು ಕೇಳಲು "ಈ ದಿನ ಯುದ್ಧವು ನಡೆಯಲಿಲ್ಲ ; ನಾನು ರಾಜಾ ಮಲಯಸಿಂಹರ ಕ್ಷಮಾಪಣೆಯನ್ನು ಬೇಡಿಕೊಂಡೆನೆಂದು ಹೇಳು" ಎಂದು ಹೇಳಲು, ಆಳು ಹೊರಟುಹೋದನು.

ಮನೆಯ ಮುಂದೆ ಬಂಡಿಯು ನಿಂತ ಸದ್ದಾಯಿತು. ಅದು ಯಾರ ಬಂಡಿಯೆಂದು ಉದಯಸಿಂಹನು ಕಿಟಕಿಯಿಂದ ಇಣಿಕಿ ನೋಡಲು ಅದರಲ್ಲಿ ಕುಳಿತು ರಾಜಸಿಂಹನು ಎಲ್ಲಿಗೋ ಹೊರಟಿದ್ದನು. ಆಮೇಲೆ ಉದಯಸಿಂಹನು ತನ್ನಲ್ಲಿದ್ದ ಪದಾರ್ಥಗಳಲ್ಲಿ ತಾನು ಸಂಪಾದಿಸಿದ್ದುವುಗಳನ್ನು ಮಾತ್ರ ಗಂಟು ಕಟ್ಟಿಕೊಂಡು ತಾಯಿಯನ್ನು ನೋಡುವುದಕ್ಕೆ ಅವಳ ಕೊಠಡಿಗೆ ಹೋದನು. ಅಲ್ಲಿ ಅವಳೂ ತನ್ನಂತೆಯೇ ಗಂಟು ಕಟ್ಟುತ್ತಿದ್ದುದನ್ನು ಕಂಡು "ಅಮ್ಮಾ ! ಇದೇನು ?" ಎಂದನು. ಅದಕ್ಕೆ ಅವಳು,

"ಅಪ್ಪಾ ! ಏನೂ ಇಲ್ಲ. ನೀನು ಮಾಡಿದುದನ್ನೇ ನಾನೂ ಮಾಡುತ್ತಿದ್ದೇನೆ" ಎಂದಳು.

"ಅಮ್ಮಾ, ಈ ಮನೆಯನ್ನು ಬಿಟ್ಟು ಎಲ್ಲಿಗಾದರೂ ಹೋಗಿ ತಿರುಪವನ್ನೆತ್ತಿ, ಹೊಟ್ಟೆ ಹೊರೆಯಬೇಕೆಂದು ಯೋಚಿಸಿ ನಿನ್ನ ಅಪ್ಪಣೆಯನ್ನು ಪಡೆದು ಹೋಗೋಣವೆಂದು ಬಂದೆ."

"ಮಗೂ, ನಾನೂ ಹಾಗೆಯೇ ಮಾಡಬೇಕೆಂದು ಯೋಚಿಸಿ ನನ್ನ ಸಂಗಡ ನಿನ್ನನ್ನು ಕರೆದುಕೊಂಡು ಹೋಗಬೇಕೆಂದು ಇದ್ದೇನೆ."

"ಅಮ್ಮಾ, ನೀನು ನನ್ನಂತೆ ಜೀವಿಸಲಾಪೆಯಾ ? ನೀನು ವಯಸ್ಸು ಆದವಳು, ನೆಮ್ಮದಿಯಾಗಿ ಬಾಳಿ ಬದುಕಿದವಳು. ನೀನು ತಿರುಪವನ್ನೆತ್ತುವುದೆಂದರೇನು ? ನಾನು ಇನ್ನೂ ಸಣ್ಣವನು, ಎಲ್ಲಿಯಾದರೂ ಕೂಲಿನಾಲಿ ಮಾಡಿಕೊಂಡು ಜೀವಿಸಬಲ್ಲೆ. ನೀನು

ಇಲ್ಲಿಯೇ ಸುಖವಾಗಿರು. ನೀನು ತಿರುಪವನ್ನೆತ್ತುವುದನ್ನು ಕಂಡರೆ ನನ್ನ ದೇಹವು ನಿಲ್ಲಲಾರದು."

"ಅಯ್ಯೋ ಕಂದಾ ! ನೀನು ಕೂಲಿಮಾಡಿ ಜೀವಿಸಬೇಕಾಗಿ ಬಂದೀತೇ ? ಮಗೂ ! ಹೇಗೆ ತಾನೇ ಈ ಸಂಕಟವನ್ನು ನುಂಗಲೊ ? ನನ್ನ ಈ ಹಾಳು ಜೀವವೂ ಇನ್ನೂ ಹೋಗಲಿಲ್ಲವಲ್ಲ" ಎಂದು ಬಹಳವಾಗಿ ಹಂಬಲಿಸಿದಳು.

"ಇದೇನು ಅಮ್ಮಾ ! ನೀನು ನನಗೆ ನೆನ್ನೆ ರಾತ್ರಿ ಧೈರ್ಯಗೆಡಬಾರದು ಎಂದು ಹೇಳಿ ನೀನೇ ಹೀಗೆ ಧೈರ್ಯಗೆಟ್ಟರೆ, ನಾನು ಒಂದು ನಿಮಿಷ ಕೂಡ ಬದುಕುವುದಕ್ಕೆ ಆಗುವುದಿಲ್ಲ. ಇಂದಿನಿಂದ ನಮ್ಮ ಹಿಂದಣ ಸಂಬಂಧವೂ ಸಂಪತ್ತೂ ನಮ್ಮ ಭಾಗಕ್ಕೆ ತೊಲಗಿಹೋದುವು. ಅವರ ಹೆಸರನ್ನು ಕೂಡ ಉಚ್ಚರಿಸದೆ ಬಿಡಬೇಕೆಂದು ನಿಶ್ಚಯಿಸಿದ್ದೇನೆ. ಅವರ ಮಗನೆಂದರೆ ನನಗೆ ಸಮಾನರಲ್ಲಿ ತಲೆಯೆತ್ತುವುದಕ್ಕೆ ನಾಚಿಕೆಯಾಗುತ್ತದೆ."

"ನೀನು ಹೇಳುವುದು ನಿಜ. ನನಗೂ ಅದೇ ಇಷ್ಟ ; ನಿನ್ನ ಇಷ್ಟವಿದ್ದಂತೆ ನಡೆ. ದೇವರು ನಿನ್ನನ್ನು ಕಾಪಿಡಲಿ."

"ಅಮ್ಮಾ, ನೀನು ಪರಿಶುದ್ಧಳು ; ನಾನು ನಿಷ್ಕಳಂಕ ; ದೇವರು ನಮ್ಮನ್ನು ಎಂದಿಗೂ ಕೈಬಿಡನು. ಸದ್ಗುಣಿಯೂ ಸತ್ಯಸಂಧೆಯೂ ಆದ ನಿನ್ನ ಆಶೀರ್ವಾದ ಬಲದಿಂದ ಪರಮಾತ್ಮನ ಅನುಗ್ರಹಕ್ಕೆ ನಾನು ಪಾತ್ರನಾಗದೆ ಇರೆನು. ರಾಜಸಿಂಹರು ಈಗತಾನೇ ಎಲ್ಲಿಗೋ ಹೋದರು ; ಅವರು ಮನೆಗೆ ಬರುವುದರೊಳಗಾಗಿ ನಾವಿಬ್ಬರೂ ಈ ಮನೆಯನ್ನು ಬಿಟ್ಟು ಹೊರಡೋಣ" ಎಂದು ಉದಯಸಿಂಹನು ಹೇಳಲು, ಲಲಿತಾಂಗಿಯು "ಹಾಗೆಯೇ ಆಗಲಿ" ಎಂದು ಒಪ್ಪಿಕೊಂಡಳು.

ಉದಯಸಿಂಹನು ತಟ್ಟನೆ ಹೊರಗೆ ಹೋಗಿ ಒಂದು ಬಂಡಿಯನ್ನು ತಂದು ಮನೆಯ ಪಾರ್ಶ್ವದಲ್ಲಿ ನಿಲ್ಲಿಸಿ ಒಳಕ್ಕೆ ಹೋಗುತ್ತಿದ್ದಾಗ ಮಲಯಸಿಂಹನ ಸೇವಕನಾದ ಭದ್ರಕನು ಬಂದು "ಬುದ್ಧಿ, ಇದನ್ನು ರಾಜರು ತಮಗೆ ಕೊಡಹೇಳಿ ಕೊಟ್ಟರು" ಎಂದು ಒಂದು ಕಾಗದವನ್ನು ಕೊಟ್ಟನು. ಉದಯಸಿಂಹನು ಅದನ್ನು ಅಲ್ಲಿಯೇ ಓದಿನೋಡಿ ಬದಲು ಹೇಳಬೇಕೆಂದು ತಲೆಯೆತ್ತಿ ನೋಡಿದಾಗ ಭದ್ರಕನು ಹೊರಟುಹೋಗಿದ್ದನು. ಅವನು ಕಣ್ಣಿನಲ್ಲಿ ನೀರನ್ನು ತಂದುಕೊಂಡು ಆ ಕಾಗದವನ್ನು ತಾಯಿಗೆ ಕೊಡಲು ಅವಳು ಅದನ್ನು ಬಿಚ್ಚಿ ಈ ರೀತಿ ಓದಿದಳು.

"ಚಿರಂಜೀವಿ ಉದಯಸಿಂಹರಿಗೆ ಮಾಡುವ ಆಶೀರ್ವಾದಗಳು. ನೀವು ಮಾಡಿಕೊಂಡಿರುವ ಯೋಚನೆ ನನಗೆ ಗೊತ್ತಾಯಿತು. ಇನ್ನೂ ಚಿಕ್ಕ ವಯಸ್ಸಾದುದರಿಂದ ಕಷ್ಟ ಬೀಳುವ ಸಾಮರ್ಥ್ಯ ನಿಮಗೆ ಇದೆ. ನಿಮ್ಮ ತಾಯಿಯವರ ಸಮಾಚಾರ ಬೇರೆ. ಅವರಿಗೆ ನೀವು ಎಷ್ಟು ಅನುಕೂಲ ಮಾಡಿಕೊಟ್ಟರೂ ಸಾಲದು. ಅವರಿಗೆ ಇಂತಹ ಕಷ್ಟ ಬರಬಾರದು ; ದೈವಯತ್ನಕ್ಕೆ ಯಾರೇನು ಮಾಡಲಾದೀತು ?

"ತಪ್ಪು ಮಾಡದವರಿಗೆ ಶಿಕ್ಷೆಯನ್ನು ಕೊಡುವುದು ಭಗವದಭಿಪ್ರಾಯವಲ್ಲ. ನೀವು ಈಗ ಬರಿಗಯ್ಯಲ್ಲಿ ಮನೆಯನ್ನು ಬಿಟ್ಟು ಹೊರಟುಹೋಗುತ್ತಿದ್ದೀರಿ; ನಾನು ಸುಗುಣೆಯಾದ ಸುಂದರಿಯೊಬ್ಬಳನ್ನು ವರಿಸಿದ್ದೆನು. ಆಗ ಅವಳಿಗಾಗಿ ಐನೂರು ವರಹಗಳನ್ನು ಕಷ್ಟಪಟ್ಟು ಅರ್ಜನೆಮಾಡಿ ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಹಾಕಿ ಮಲಯಪಟ್ಟಣದಲ್ಲಿ ನಮ್ಮಪ್ಪನಿದ್ದ ಮನೆಯ ಮುಂದಣ ಆವರಣದ ದೊಡ್ಡ ಮಾವಿನ ಮರದ ಕೆಳಗೆ ಹೂತಿಟ್ಟಿದ್ದೆನು. ಈಗ ಕೆಲವು ದಿನಗಳ ಕೆಳಗೆ ಕಾರ್ಯಾಂತರವಾಗಿ ನಾನು ಆ ಪಟ್ಟಣಕ್ಕೆ ಹೋಗಿದ್ದಾಗ ಆ ಹಣ ಅಲ್ಲಿದೆಯೋ ಇಲ್ಲವೋ ಎಂದು ನೋಡಿದೆನು. ಅದು ಅಲ್ಲಿ ನಾನಿಟ್ಟಿದ್ದ ಹಾಗೆಯೇ ಇದೆ. ಆಗ ನಾನು ಮದುವೆ ಮಾಡಿಕೊಳ್ಳಬೇಕೆಂದು ಇದ್ದ ಯುವತಿಯ ಜೀವನಕ್ಕಾಗಿ ಇಟ್ಟಿದ್ದ ಹಣವು ಈಗ ಕಷ್ಟ ಕಾಲದಲ್ಲಿ ಆ ಕಾರ್ಯಕ್ಕೆ ಉಪಯೋಗವಾಗಲಿ ಎಂದು ಈ ಕಾಗದವನ್ನು ಬರೆದಿದ್ದೇನೆ. ನಿಮ್ಮ ತಾಯಿಗೆ ಆ ಮನೆಯೂ ಆ ಮರವೂ ಗೊತ್ತಿದೆ.

"ಅವಳ ಅನುಕೂಲಕ್ಕಾಗಿ ಎಷ್ಟು ಲಕ್ಷ ವರಹಗಳನ್ನು ಬೇಕಾದರೂ ಕೊಡಬಲ್ಲ ನಾನು, ಹಾಗೆ ಮಾಡದೆ ಬಡತನದಲ್ಲಿ ಗಳಿಸಿರುವುದನ್ನು ಮಾತ್ರ ಏತಕ್ಕೆ ಕೊಡುತ್ತೇನೆ ಎಂಬುದನ್ನು ಬುದ್ಧಿವಂತರಾದ ನೀವಿಬ್ಬರೂ ತಿಳಿದುಕೊಳ್ಳದೆ ಇರಲಾರಿರಿ."

ಹೀಗೆಂದು ಬರೆದಿದ್ದ ಲೇಖನವನ್ನು ತಾಯಿಯು ಓದಿದಾಗ ಮಗನು ಮಾತನಾಡದೆ ಅವಳ ಮುಖವನ್ನೇ ನೋಡುತ್ತಿದ್ದನು. ಅವಳು ಅದನ್ನು ಓದಿ ಮುಗಿಸಿದ ಮೇಲೆ ಸ್ವಲ್ಪ ಕಾಲ ಹಾಗೆಯೇ ಕಣ್ಣುಮುಚ್ಚಿಕೊಂಡಿದ್ದು "ಅಪ್ಪಾ ಮಗೂ, ಆ ಹಣವನ್ನು ನಾನು ತೆಗೆದುಕೊಳ್ಳುತ್ತೇನೆ. ಸ್ತ್ರೀಧನವನ್ನು ಕೊಡುವುದಕ್ಕೆ ಅವನಿಗೆ ಬಾಧ್ಯತೆಯಿದೆ. ಯಾವುದಾದರೂ ಮಠಕ್ಕೆ ಹೋಗಿ ಅದನ್ನು ವಿನಿಯೋಗಿಸುತ್ತೇನೆ" ಎಂದು ಹೇಳಿ ಆ ಕಾಗದವನ್ನು ತನ್ನಲ್ಲಿಯೇ ಇಟ್ಟುಕೊಂಡು, ಮಗನ ಕಯ್ಯನ್ನು ಹಿಡಿದುಕೊಂಡು "ಇನ್ನು ಹೋಗೋಣ ಬಾ" ಎಂದು ಹೇಳಿ ಧೈರ್ಯಮಾಡಿಕೊಂಡು ಮನೆಯನ್ನು ಬಿಟ್ಟು ಹೊರಟಳು.

# ೬೦
# ಆತ್ಮಹತ್ಯೆ

ಮಲಯಸಿಂಹನು ಮಾರಿಯ ತೋಪಿನಿಂದ ಹೊರಟು ಮನೋಮೋಹನನನ್ನು ಅವನ ಮನೆಯಲ್ಲಿ ಬಿಟ್ಟು ಜಯವೀರನನ್ನು ತನ್ನ ಮನೆಗೆ ಕರೆದುಕೊಂಡು ಹೋದನು. ಬಂಡಿಯಲ್ಲಿ ಜಯವೀರನು ರಾಜನನ್ನು ಕುರಿತು "ಸ್ವಾಮೀ, ನಾನು ತಮ್ಮ ಸಂಗಡ ಬಂದುದರಿಂದ ನಿಮಗೆ ಜಯವಾಯಿತು" ಎಂದು ಪರಿಹಾಸದಿಂದ ಹೇಳಲು, ರಾಜನು "ಅದಕ್ಕಾಗಿಯೇ ನಿನ್ನನ್ನು ಜತೆಯಲ್ಲಿ ಕರೆದುಕೊಂಡು ಹೋದುದು" ಎಂದನು.

"ಈಗ ನಡೆದ ಸಂಗತಿಯು ತುಂಬ ಅದ್ಭುತವಾದುದು."

"ಅಹುದು."

"ಉದಯಸಿಂಹನು ಧೈರ್ಯಶಾಲಿಯೆಂದಿದ್ದನು."

"ಅವನು ಧೈರ್ಯಶಾಲಿಯೇ ಅಹುದು. ನಿಮ್ಮ ಸಾನಿಧ್ಯಪ್ರಭಾವದಿಂದ ಅವನಿಗೆ ನನ್ನ ವಿಷಯದಲ್ಲಿ ಕರುಣೆಯುಂಟಾಯಿತು."

"ಅವನು ನಮ್ಮ ಸೈನ್ಯದಲ್ಲಿದ್ದು ಜತೆಯವರೊಡನೆ ಯುದ್ಧಮಾಡುವುದಾಗಿ ರಂಗಸ್ಥಳಕ್ಕೆ ಬಂದು ಈ ರೀತಿ ಹಗೆಯೊಡನೆ ಕ್ಷಮೆಯನ್ನು ಬೇಡಿದ ಪಕ್ಷದಲ್ಲಿ ಅವನನ್ನು ಎಲ್ಲರೂ ಹೇಡಿಯೆಂದು ಧಿಕ್ಕರಿಸುತ್ತಲಿದ್ದರು."

"ಜಯವೀರರೇ, ಅವನ ವಿಷಯದಲ್ಲಿ ನೀವು ಹಾಗೆ ಹೇಳುವುದು ಸರಿಯಲ್ಲ. ಅವನು ಧೈರ್ಯಶಾಲಿಯೆಂದು ನೀವೇ ಹೇಳಿದಿರಿ. ನಿನ್ನೆಯ ದಿನ ಧೈರ್ಯಶಾಲಿಯಾಗಿದ್ದವನು ಇಂದು ಹೇಡಿಯಾದನೇ ? ಅವನು ಈ ದಿನ ಮಾಡಿದ ಕೆಲಸವನ್ನು ಎಂತಹ ಶೂರಾಗ್ರೇಸರೂ ಮಾಡಲರಿಯನು. ಅದು ಇರಲಿ. ನೀವು ಇಂದು ಇಲ್ಲಿಯೇ ನಿಂತು ಊಟಮಾಡಿಕೊಂಡು ಏಕೆ ಹೋಗಬಾರದು ?"

"ನಾನು ಹತ್ತು ಗಂಟೆಗೆ ಒಂದು ಕಡೆ ಹೋಗಬೇಕಾಗಿದೆ ; ಅದರಿಂದ ಇಲ್ಲಿ ಊಟಕ್ಕೆ ನಿಲ್ಲುವುದಕ್ಕೆ ಆಗುವುದಿಲ್ಲ ; ಕ್ಷಮಿಸಬೇಕು."

"ಊಟಕ್ಕೆ ತಾನೇ ನೀವು ಅಲ್ಲಿ ಹೋಗುವುದು ?" ಎಂದು ಕೇಳಲು, ಜಯವೀರನು ಸುಮ್ಮನಿದ್ದನು.

"ಎಲ್ಲಿಯಾದರೂ ಒಂದು ಕಡೆ ಊಟ ಮಾಡಬೇಕೋ ಇಲ್ಲವೋ ?" ಎಂದು ರಾಜನು ಪುನಃ ಕೇಳಲು, ಅವನು ""ಹಸಿವಿಲ್ಲದಿದ್ದರೋ ?" ಎಂದನು.

"ದುಃಖಕಾಲದಲ್ಲಿಯೂ ಪ್ರಣಯಕಾಲದಲ್ಲಿಯೂ ಸಾಮಾನ್ಯವಾಗಿ ಹಸಿವು ನೀರಡಿಕೆಗಳು ತೋರುವುದಿಲ್ಲ. ನೀವು ಸಂತೋಷವಾಗಿರುವುದನ್ನು ನೋಡಿದರೆ ಇನಿಯಳ ದರ್ಶನಕ್ಕಾಗಿ ಎಲ್ಲಿಗೋ ಹೋಗುವಂತೆ ತೋರುತ್ತದೆ."

"ಅದೇನೋ ಸುಳ್ಳಲ್ಲ."

"ನನ್ನಲ್ಲಿ ವಿಶ್ವಾಸವಿದ್ದರೆ ನಿಮ್ಮ ಪ್ರೀತಿಪಾತ್ರಳಾದ ಆ ಭಾಗ್ಯವತಿ ಯಾರೆಂದು ತಿಳಿಯಬಹುದೋ ?"

"ಆ ನನ್ನ ಪ್ರಣಯದ ವಿಷಯವನ್ನು ಈ ದಿನ ಬೆಳಿಗ್ಗೆ ತಿಳಿಸಿದೆ" ಎಂದು ಜಯವೀರನು ಹೇಳಲು, ಆ ವಿಷಯವನ್ನು ತನ್ನೊಂದಿಗೆ ಹೇಳಲು, ಇವನಿಗೆ ಇಷ್ಟವಿಲ್ಲವೆಂದು ತಿಳಿದು ರಾಜನು,

"ಹಾಗಾದರೆ ಹೋಗಿ ಬನ್ನಿರಿ. ಅಲ್ಲಿ ನಿಮಗೆ ಏನಾದರೂ ಕಷ್ಟ ಬಂದರೆ ನಿಮ್ಮ ಸ್ನೇಹಿತನಾದ ನನ್ನನ್ನು ಮಾತ್ರ ಮರೆಯಬೇಡಿರಿ. ನನ್ನ ಬಳಿಗೆ ಯಾವಾಗ ನೀವು ಬಂದರೂ ನನಗೆ ದೇವರು ಅನುಗ್ರಹಿಸಿರುವ ಅಸಾಧಾರಣ ಪ್ರಜ್ಞಾಬಲದಿಂದ ಬೇಕಾದ ಅನುಕೂಲಗಳನ್ನು ಕಲ್ಪಿಸಿಕೊಡುತ್ತೇನೆ" ಎಂದನು.

"ಸ್ವಾಮೀ, ನನಗೆ ಸಹಾಯಮಾಡುತ್ತೇನೆಂದು ಹೇಳುವವರು ತಾನೇ ಯಾರಿದ್ದಾರೆ ? ಹಾಗೇನಾದರೂ ಸಹಾಯಬೇಕಾದರೆ ಕಷ್ಟ ಬಂದಾಗ ಮಕ್ಕಳು ತಾಯಿ ತಂದೆಗಳ ಬಳಿಗೆ ಓಡಿಬರುವಂತೆ ನಾನು ತಮ್ಮ ಬಳಿಗೆ ಅಗತ್ಯವಾಗಿ ಬರುತ್ತೇನೆ."

"ಈ ಮಾತು ನಿಜವೋ ?"

"ನಿಜ"

"ಹಾಗಾದರೆ ಇನ್ನು ನಿಮ್ಮನ್ನು ನಿಲ್ಲಿಸಿಕೊಳ್ಳುವುದಿಲ್ಲ. ಹೊರಡಿ" ಎಂದು ರಾಜನು ಜಯವೀರನನ್ನು ಕಳುಹಿಸಿಕೊಟ್ಟಾಗ ಭದ್ರಕನು ಓಡಿಬಂದು,

"ಬುದ್ಧೀ, ಅಮ್ಮನವರು ಮನೆಯನ್ನು ಬಿಟ್ಟು ಹೊರಡುವಂತಿದೆ" ಎಂದನು.

"ಮಗನೋ ?"

"ಅವರೂ ಹೋಗುವ ಹಾಗಿದೆ ಎಂದು ಸೂಕ್ಷ್ಮ ಬುದ್ಧಿ ಹೇಳಿದನು."

"ಹಾಗಾದರೆ ನಾನು ಒಂದು ಕಾಗದವನ್ನು ಬರೆದುಕೊಡುತ್ತೇನೆ ; ಅವರು ಮನೆಯನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ ಅದನ್ನು ಮಗನ ಕೈಯಲ್ಲಿ ಕೊಡು" ಎಂದು ಹೇಳಿ ಪೂರ್ವಾಧ್ಯಾಯದಲ್ಲಿ ಓದಿದ ಆ ಕಾಗದವನ್ನು ಬರೆದುಕೊಟ್ಟು "ನಾನು ಬಂದಿರುವ ವರ್ತಮಾನವನ್ನು ಮೊದಲು ಕೋಮಲೆಗೆ ತಿಳಿಸಿ ಅನಂತರ ಈ ಲೇಖನವನ್ನು ಕೊಡಲು ಹೋಗು" ಎಂದು ಭದ್ರಕನನ್ನು ಕಳುಹಿಸಿದನು.

ರಾಜನು ಬಂದ ಸುದ್ದಿಯನ್ನು ಭದ್ರಕನು ತನಗೆ ತಿಳಿಸುವುದಕ್ಕೆ ಮೊದಲೇ ಬಂಡಿಯು ಬಂದ ಸದ್ದನ್ನು ಕೇಳಿ ಕೋಮಲೆಯು ಅತಿ ಹರ್ಷಚಿತ್ತಳಾಗಿ ರಾಜನನ್ನು ನೋಡಬೇಕೆಂದು ಅವನ ಕೊಠಡಿಯ ಹತ್ತಿರಕ್ಕೆ ಹೋಗಿ, ಒಳಗೆ ಹೋದರೆ ಏನನ್ನುವನೋ ಎಂದು ಹೆದರಿ, ಪಕ್ಕದ ಕೊಠಡಿಯಲ್ಲಿ ನಿಂತಿದ್ದಳು. ತಾನು ಬಂದ ಸುದ್ದಿಯನ್ನು ರಾಜನು ತಿಳಿಸಿದ ಕೂಡಲೇ ಅವಳು ಬಾಗಿಲನ್ನು ತೆರೆದು ತನ್ನ ಪ್ರೇಮಪೂರ್ವಕವಾದ ಧವಳಕಟಾಕ್ಷವನ್ನು ಅವನ ಮೇಲೆ ಬೀರಿದಳು. ಅದನ್ನು ಕಂಡು ರಾಜನು "ಓಹೋ ! ಲೋಕದಲ್ಲಿ ಒಬ್ಬಳೇ ಲಲಿತಾಂಗಿಯಿದ್ದಳೆಂದು ಇದ್ದೆ ; ಈಗ ಇಬ್ಬರು

ಲಲಿತಾಂಗಿಯರಿರುತ್ತಾರೆಂದು ತೋರುತ್ತದೆ. ಹಾಗಿದ್ದರೆ ನಾನೂ ಈಗಲೂ ದೇವರ ದಯೆಯಿಂದ ಸುಖವಾಗಿರಬಹುದು' ಎಂದು ಯೋಚಿಸುತ್ತ ಆ ಚಂದ್ರಮುಖಿಯ ಅಶ್ರುಪೂರ್ಣವಾದ ಮುಖವನ್ನು ನೋಡುತ್ತಿದ್ದನು, ಆಗ, ಅವನಿಗೆ ಉಂಟಾದ ಆನಂದವು ಹೊರಹೊಮ್ಮಲಿಲ್ಲ. ಬಹುಕಾಲ ಕಷ್ಟವನ್ನನುಭವಿಸಿದ ಹೃದಯಕ್ಕೆ ಉಂಟಾದ ಸಂತೋಷವು, ಬಹುಕಾಲ ಬಿಸಿಲಿನಲ್ಲಿ ಬೆಂದ, ನೆಲದ ಮೇಲೆ ಬಿದ್ದ ಮಳೆಯಂತೆ, ಲೀನವಾಗಿ ಹೋಗುವುದಲ್ಲವೆ ?

ರಾಜನು ಈ ರೀತಿ ಆನಂದಭರಿತನಾಗಿದ್ದಾಗ ಆಳು ಬಂದು ಕೊಠಡಿಯ ಬಾಗಿಲು ತೆರೆದು "ಜೀಯಾ, ರಾಜಸಿಂಹರು ಬಂದಿದ್ದಾರೆ," ಎನ್ನಲು ಕೋಮಲೆಯು ಖಿನ್ನಳಾಗಿ,

"ಸ್ವಾಮೀ, ಇನ್ನೂ ಇವನ ಅವಾಂತರ ಮುಗಿಯಲಿಲ್ಲವೇ ?" ಎಂದು ಕೇಳಲು ರಾಜನು,

"ನನಗೆ ಇವನ ಮಗನದೀಗ ತುಂಬ ಭಯವಾಗಿದ್ದಿತು ; ಇವನು ನನಗೆ ಲಕ್ಷ್ಯವೇ ಇಲ್ಲ" ಎಂದನು.

"ಸ್ವಾಮೀ, ನಿಮ್ಮ ವಿಷಯವಾಗಿ ನಾನು ಎಷ್ಟು ಯೋಚನೆಯನ್ನು ಮಾಡುತ್ತಿದ್ದನೋ ದೇವರೇ ಬಲ್ಲ. ಒಂದು ಗಂಡ ತಪ್ಪಿತೆಂದು ಸಂತೋಷವಾಗಿರುವಾಗ ಮತ್ತೊಂದು ಬಂದೊದಗಿತಲ್ಲ" ಎಂದು ಪೇಚಾಡಿದಳು.

"ಕೋಮಲೆ, ಈ ವಿಷಯವಾಗಿ ನೀನು ಚಿಂತಿಸಬೇಡ" ಎಂದು ರಾಜನು ಅವಳನ್ನು ಅವಳ ಕೊಠಡಿಗೆ ಕಳುಹಿಸಿ ಆಳನ್ನು ಕೂಗಿ, "ಎಲಾ, ರಾಜಸಿಂಹರನ್ನು ಕೂಗು" ಎಂದನು.

ರಾಜಸಿಂಹನು ಈಗ ತನ್ನ ಬಳಿಗೆ ಬಂದ ಸಂಗತಿಯನ್ನು ರಾಜನು ತನ್ನ ಊಹಾಶಕ್ತಿಯಿಂದ ತಿಳಿದನು. ಅವನಂತೆ ನಮಗೆ ಅಸಾಧಾರಣ ಶಕ್ತಿಯಿಲ್ಲವಾಗಿ ಆ ಕಾರಣವನ್ನು ಪಾಠಕರ ಅವಗಾಹನೆಗಾಗಿ ಸಂಕ್ಷೇಪವಾಗಿ ತಿಳಿಸುತ್ತೇವೆ. ಲಲಿತಾಂಗಿಯು ತನ್ನ ಒಡವೆ ವಸ್ತುಗಳನ್ನು ಮಾತ್ರ ಗಂಟು ಕಟ್ಟುತ್ತಿದ್ದಾಗ ರಾಜಸಿಂಹನು ಕನ್ನಡಿಯ ಬಾಗಿಲ ಹಿಂದೆ ನಿಂತು ಕುಟಿಲದೃಷ್ಟಿಯಿಂದ ಅದನ್ನೆಲ್ಲಾ ನೋಡುತ್ತಲಿದ್ದು, ಮಗನು ಮಾರಿಯ ತೋಪಿನಿಂದ ಬಂದ ಮೇಲೆ ಯುದ್ಧದ ಸಮಾಚಾರವನ್ನು ಆಳಿಂದ ತಿಳಿದು ತಕ್ಷಣವೇ ತನ್ನ ಬಳಿಯಲ್ಲಿದ್ದ ಕತ್ತಿಗಳಲ್ಲಿ ಹರಿತವಾಗಿದ್ದ ಎರಡನ್ನು ಆರಿಸಿ ಬಂಡಿಯಲ್ಲಿಟ್ಟುಕೊಂಡು ರಾಜಾ ಮಲಯಸಿಂಹನ ಮನೆಗೆ ಹೋಗಿ ಅವನನ್ನು ಕೆಣಕಿ ಯುದ್ಧಕ್ಕೆ ಎಳೆದು, ಅವನನ್ನು ಕೊಲ್ಲುವುದೋ ತಾವು ಸಾಯುವುದೋ ಏನಾದರೂ ಒಂದು ಆಗಲಿ ಎಂದು ಹೊರಟನು.

ರಾಜಸಿಂಹನು ಒಳಕ್ಕೆ ಬಂದಾಗ ಮಲಯಸಿಂಹನು ಪದ್ಧತಿಯಂತೆ ನಗೆಮೊಗದೊಡನೆ,

"ತಾವು ಬಿಜಯಮಾಡಿಸಿದ್ದೀರೆಂದು ಆಳು ಹೇಳಿದನು. ತಾವು ಯಾವಾಗಲೂ

ನನ್ನ ಮನೆಗೆ ಬಿಜಯಮಾಡಿಸಿಲ್ಲವಾದುದರಿಂದ ನಾನು ಅವನ ಮಾತನ್ನು ನಂಬಲಿಲ್ಲ" ಎಂದನು.

"ಅವನು ಹೇಳಿದುದು ನಿಜ. ಬಂದಿರುವವನು ನಾನೇ."

"ನನ್ನನ್ನು ಧನ್ಯನನ್ನಾಗಿ ಮಾಡಿದ ತಮ್ಮ ಆಗಮನಕ್ಕೆ ಕಾರಣವನ್ನು ದಯೆಯಿಟ್ಟು ತಿಳಿಸೋಣವಾಗಲಿ."

"ನನ್ನ ಮಗನಿಗೂ ನಿಮಗೂ ಯುದ್ಧ ನಡೆಯುವುದಾಗಿ ಏರ್ಪಾಡಾಗಿರಲಿಲ್ಲವೇ ?"

"ಇದ್ದಿತು."

"ಆ ಯುದ್ಧದಲ್ಲಿ ನಿಮ್ಮನ್ನು ಕೊಲ್ಲುವುದಕ್ಕೆ ಅವನಿಗೆ ಸಾಕಾದಷ್ಟು ಕಾರಣಗಳು ಇದ್ದುವು."

"ಇದ್ದಿರಬಹುದು. ಆದರೂ ಅವನು ಯುದ್ಧವನ್ನೇ ಮಾಡಲಿಲ್ಲ. ನನ್ನನ್ನು ಕೊಲ್ಲಲೂ ಇಲ್ಲ."

"ನೀವು ಅವನಲ್ಲಿ ಜೀವದಾನವನ್ನು ಬೇಡಿಕೊಂಡಿರೋ ಹೇಗೋ ?" ಎಂದು ರಾಜಸಿಂಹನು ಕೇಳಲು, ಮಲಯಸಿಂಹನು ಕೈಹೊಯ್ದು ನಕ್ಕು,

"ಅವನೇ ನನ್ನ ಕ್ಷಮೆಯನ್ನು ಬೇಡಿದನು."

"ಅವನು ಹಾಗೆ ಮಾಡುವ ಕಾರಣವೇನು ?"

"ಬಲವಾದ ತಪ್ಪುಮಾಡಿದವನು ತನ್ನ ಸಮೀಪದಲ್ಲಿಯೇ ಇದ್ದಾನೆಂತಲೂ ನಾನು ಮಾಡಿದುದು ತಪ್ಪಲ್ಲವೆಂತಲೂ ತಿಳಿದು ಅವನು ನನ್ನ ಕ್ಷಮೆಯನ್ನು ಬೇಡಿದನು."

"ಅದು ಯಾರು ?"

"ಅವನನ್ನು ಹೆತ್ತವನು."

"ಇರಬಹುದು. ತಪ್ಪು ಮಾಡಿದವರು ತಮ್ಮ ತಪ್ಪುಗಳನ್ನು ಎಂದಾದರೂ ಒಪ್ಪಿಕೊಂಡಾರೇ ? ನೀವು ಕಾಣಿರಾ ?"

"ಅದನ್ನು ನಾನು ಬಲ್ಲೆ."

"ಅವನು ಶುದ್ಧ ಹೇಡಿ. ಆದುದರಿಂದ ಹಾಗೆ ಮಾಡಿದನು."

"ಉದಯಸಿಂಹನು ಹೇಡಿಯಲ್ಲ."

"ಮತ್ತೇನು ? ಕಯ್ಯಲ್ಲಿ ಕತ್ತಿಯನ್ನು ಹಿರಿದು ಇಟ್ಟುಕೊಂಡು ಇದಿರಿಗಿದ್ದ ಶತ್ರುವನ್ನು ಕಡಿದಿಕ್ಕದೆ ಹಿಮ್ಮೆಟ್ಟುವವನು ಹೇಡಿಯಲ್ಲವೇ ?"

"ಈ ನಿಮ್ಮ ಸಂಸಾರ ವಿಚಾರವನ್ನು ಹೇಳುವುದಕ್ಕೆ ತಾವು ಇಲ್ಲಿಗೆ ಬಿಜಯ ಮಾಡೋಣವಾಯಿತೋ ?"

"ನಾನು ಅದಕ್ಕಾಗಿ ಇಲ್ಲಿಗೆ ಬರಲಿಲ್ಲ. ನಿಮ್ಮನ್ನು ನೋಡಿದಾರಭ್ಯ ನನಗೆ ನಿಮ್ಮಲ್ಲಿ

ಮಹತ್ತಾದ ಹಗೆತನವುಂಟಾಗಿದೆ. ನಿಮ್ಮ ಸಂಗಡ ಯುದ್ಧ ಮಾಡಿ ನಿಮ್ಮನ್ನು ಕೊಂದು ಹಗೆ ತೀರಿಸಿಕೊಳ್ಳಬೇಕೆಂದು ಬಂದೆ."

"ಹಾಗೋ ? ಅಗತ್ಯ ಆಗಬಹುದು ; ಈಗಲೇ ಹೊರಡೋಣವೋ ?" ಎಂದು ಮಲಯಸಿಂಹನು ಕೇಳಲು, ರಾಜಸಿಂಹನು,

"ನಮ್ಮಿಬ್ಬರಲ್ಲಿ ಯಾರಾದರೂ ಒಬ್ಬರು ಸತ್ತು ನೆಲದ ಮೇಲೆ ಬೀಳುವವರೆಗೂ ಯುದ್ಧ ಮಾಡಬೇಕು" ಎಂದು ಕೋಪದಿಂದ ಹಲ್ಲುಗಳನ್ನು ಕಟಕಟನೆ ಕಡಿಯುತ್ತ ಹೇಳಿದನು.

ಅದಕ್ಕೆ ರಾಜನು ಸ್ವಲ್ಪವೂ ಸಿಟ್ಟುಗೊಳ್ಳದೆ ನಗುತ್ತ "ಹುಂ" ಎಂದನು.

"ಈ ಜಗಳಕ್ಕೆ ಸಾಕ್ಷಿಗಳೇ ಬೇಡ."

"ನಾವಿಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲೆವು, ಆದುದರಿಂದ ಸಾಕ್ಷಿಗಳು ಅವಶ್ಯಕವಿಲ್ಲ."

"ಅದು ಹೇಗೆ ? ನಮನಮಗೆ ಪರಿಚಯವೇ ಇಲ್ಲವಲ್ಲ."

"ಹಾಗೋ ! ಕೇಳೋಣಾಗಲಿ. ತಾವು ಚಕ್ರವರ್ತಿಯ ಸೈನ್ಯದಲ್ಲಿ ದೊಡ್ಡ ಪದವಿಯನ್ನಲಂಕರಿಸಿ ಯುದ್ಧದ ಹಿಂದಣ ದಿನ ಇದಿರಾಳಿಯ ಪಕ್ಷವನ್ನು ಹಿಡಿದು ರಾಜದ್ರೋಹ ಮಾಡಿದ ವಿಷಯಲಂಪಟರು. ತಾವು ಕಳಿಂಗ ದೇಶದಲ್ಲಿ ಹುಟ್ಟಿ ಬೆಳೆದು ಅಮರದೇಶದ ರಾಜನ ಬಳಿ ಸೇರಿ ಸ್ವದೇಶಕ್ಕೆ ದ್ರೋಹಮಾಡಿದ ವಿಷಯಲಂಪಟರು. ತಾವು ಕ್ಷಿತೀಂದ್ರನಲ್ಲಿ ಸೇರಿ ವಿಶ್ವಾಸಘಾತುಕರಾಗಿ ಅವನನ್ನು ಕೊಂದು ಅವನ ಹೆಂಡತಿಯನ್ನೂ ಮಗಳನ್ನೂ ಬಂದಿಗಳನ್ನಾಗಿ ಮಾರಿದ ವಿಷಯಲಂಪಟರು."

ಈ ರೀತಿ ಕಟಕಿಯಾಗಿ ಮಾತಾಡಿದ ರಾಜಾ ಮಲಯಸಿಂಹನ ಮಾತುಗಳು ಕಿವಿಯಲ್ಲಿ ನಾರಾಚವನ್ನು ನಟ್ಟಂತಾಗಲು, ರಾಜಸಿಂಹನು ಮಾನಭಂಗದಿಂದಲೂ ತೀವ್ರ ಕೋಪದಿಂದಲೂ ಕಂಪಿಸುತ್ತ ಕಣ್ಣುಗಳು ಕೆಂಡವನ್ನು ಸೂಸುತ್ತಿರಲು "ಎಲೋ ಪಾಪಿ, ಸಾಯುವ ಕಾಲದಲ್ಲಿ ನನ್ನನ್ನು ಈ ರೀತಿ ಏಕೆ ಅವಮಾನಪಡಿಸುತ್ತಿದ್ದೀಯೆ. ನಿನ್ನ ನಿಜವಾದ ಹೆಸರಾವುದು ಹೇಳು. ಯುದ್ಧದಲ್ಲಿ ಆ ಹೆಸರನ್ನು ಹೇಳಿ ನಿನ್ನ ಎದೆಯಲ್ಲಿ ನನ್ನ ಕತ್ತಿಯನ್ನು ನಾಟುವೆನು" ಎಂದನು.

ಆಗ ಮಲಯಸಿಂಹನು ಆವೇಶ ಬಂದವನಂತೆ ಕಣ್ಣುಗಳಿಂದ ಬೆಂಕಿಯು ಉಗಿಯುತ್ತಿರಲು,

"ತಮಗೆ ನನ್ನ ಹೆಸರು ತಿಳಿಯಬೇಕೋ" ಎಂದು ತಟ್ಟನೆದ್ದು ಮಲಗುವ ಕೋಣೆಗೆ ಹಾರಿ ನಿಮಿಷಮಾತ್ರದಲ್ಲಿ ಉಟ್ಟಿದ್ದ ಬಟ್ಟೆಗಳನ್ನೆಲ್ಲಾ ಕಿತ್ತು ಬಿಸುಟು ನಾವಿಕರ ಉಡುಪನ್ನು ಹಾಕಿಕೊಂಡು ನಿಂತು,

"ಸ್ವಾಮೀ, ಈಗ ನಾನಾರೆಂದು ತಮಗೆ ಗೊತ್ತಾಯಿತಷ್ಟೆ ?" ಎಂದು ಕೇಳಿದನು.

ತಟ್ಟನೆದ್ದು ಏತಕ್ಕೆ ಒಳಗೆ ಹೋದನೋ ಎಂದು ಯೋಚಿಸುತ್ತಲಿದ್ದ ರಾಜಾಸಿಂಹನು ಇವನು ನಾವಿಕರ ವೇಷದಿಂದ ಬಂದುದನ್ನು ಕಂಡು ಪಿಶಾಚಗ್ರಸ್ತನಾದಂತೆ ಭಯವಿಟ್ಟು ಮೆಲ್ಲಮೆಲ್ಲಗೆ ಹಿಂದೆ ಹಿಂದೆ ಹೋಗುತ್ತಲಿದ್ದನು. ಆಗ ರಾಜನು,

"ಸ್ವಾಮೀ, ವಿಷಯಲಂಪಟರೇ, ನನ್ನ ಅನೇಕ ನಾಮಗಳಲ್ಲಿ ಒಂದನ್ನು ಹೇಳಿದರೆ ಸಾಕು, ತಾವು ನಡುಗಿಹೋಗುತ್ತೀರಿ. ಅದು ಈಗ ತಮಗೇ ಗೊತ್ತಾಗಿರಬಹುದು. ನನ್ನ ಬಾಲ್ಯದಲ್ಲಿ ತಾವು ನನ್ನನ್ನು ಕಂಡಿದ್ದೀರಿ ; ತಮ್ಮ ಈಗಣ ದುರ್ದೆಶೆಯನ್ನು ಕಂಡು ಯೌವನಸ್ಥನಾದ ನನ್ನ ಗುರುತು ತಮಗೆ ಸಿಕ್ಕದೆ ಇರಲಾರದು. ತಾವು ನನ್ನ ಪ್ರಿಯೆಯನ್ನು ಮದುವೆಯಾದಂದಿನಿಂದ ನಿತ್ಯವೂ ರಾತ್ರಿ ಕನಸಿನಲ್ಲಿ ನನ್ನನು ಕಾಣದೆ ಇದ್ದಿರಲಾರಿರಿ. ಈಗ ನಾನಾರೆಂದು ಬಲ್ಲಿರಾ ?"

ಅದನ್ನು ಕೇಳಿ ರಾಜಸಿಂಹನು ಮೆಲ್ಲಮೆಲ್ಲನೆ ಹಿಂದೆ ಸರಿದು ಹೊರಬಾಗಿಲ ಬಳಿಗೆ ಬಂದು "ಧರ್ಮದೇವ, ಧರ್ಮದೇವ," ಎಂದುಕೊಳ್ಳುತ್ತ ಅಲ್ಲಿಂದ ಒಂದೇ ಉಸಿರಿನಲ್ಲಿ ಬಂಡಿಗೆ ನೆಗೆದು ಮಾತನಾಡಲಾರದೆ 'ಮನೆಗೆ ಹೊಡೆ' ಎಂದು ಸನ್ನೆ ಮಾಡಿದನು. ಮನೆಗೆ ಹೋಗುವುದರೊಳಗಾಗಿ ಹೊರಗೆ ಬೀಸುತ್ತಲಿದ್ದ ತಂಗಾಳಿಯಿಂದ ಅವನ ಬುದ್ಧಿಯು ಸ್ವಲ್ಪ ಸ್ಥಿಮಿತಕ್ಕೆ ಬಂದಿತು. ಮನೆಯ ಬಾಗಿಲನ್ನು ಸೇರುತ್ತಲೇ ರಾಜಸಿಂಹನು ಬಂಡಿಯಿಂದ ಇಳಿದು ಮಹಡಿಯನ್ನು ಹತ್ತುತ್ತಿದ್ದಾಗ ಯಾರೋ ಮೆಟ್ಟಲನ್ನು ಇಳಿದು ಬರುವಂತೆ ಅವನಿಗೆ ತೋರಿ ತಟ್ಟನೆ ಪಕ್ಕದಲ್ಲಿದ್ದ ತೆರೆಯ ಮರೆಯಲ್ಲಿ ನಿಂತನು. ಲಲಿತಾಂಗಿಯೂ ಅವಳ ಮಗನೂ ಇಳಿಯುತ್ತಿದ್ದರು. ಮಗನು ತಾಯಿಯನ್ನು ಕುರಿತು "ಅಮ್ಮಾ, ಧೈರ್ಯವಾಗಿರು. ಇದು ನಮ್ಮ ಮನೆಯಲ್ಲ ; ಇಲ್ಲಿಂದ ನಾವು ಎಷ್ಟು ಜಾಗ್ರತೆಯಾಗಿ ಹೊರಟರೆ ಅಷ್ಟು ಒಳ್ಳೆಯದು" ಎಂದು ಹೇಳಿ ಅವಳನ್ನು ಇಳಿಸಿಕೊಂಡು ಹೋಗುತ್ತಲಿದ್ದನು.

ತನ್ನನ್ನೂ ತನ್ನ ಮನೆಯನ್ನೂ ತೊರೆದು ಹೆಂಡತಿಯೂ ಮಗನೂ ಈ ರೀತಿ ಹೋಗುತ್ತಿರುವುದನ್ನು ಕಂಡು ಆ ದುರ್ಭಾಗ್ಯನು ಗೊಳೋ ಎಂದು ಅಳುತ್ತ ತನ್ನ ಕೊಠಡಿಗೆ ತತ್ತರಿಸುತ್ತ ಹೋದನು. ಆಗ ಬಂಡಿಯು ಹೊರಟಿತು. ಆ ಕಡೆ ನೋಡಿದನು. ಹೆಂಡತಿಯಾಗಲೀ ಮಗನಾಗಲೀ ಬಂಡಿಯಿಂದ ಇಣಿಕಿ ನೋಡಲಿಲ್ಲ. ಇನ್ನೂ ಬಂಡಿಯ ಸದ್ದು ಅಡಗುವಷ್ಟರಲ್ಲಿಯೇ ರಾಜಸಿಂಹನ ಕೊಠಡಿಯಲ್ಲಿ "ಢಮಾರ್" ಎಂದು ಸದ್ದಾಯಿತು. ಆ ರಭಸಕ್ಕೆ ಕಿಟಕಿಯ ಕನ್ನಡಿಯು ಒಡೆದು ಮಂದವಾದ ಹೊಗೆಯು ಹೊರಟಿತು.

## ೬೨
## ಜಯವೀರನ ಅಂತರಂಗದ ಬಹಿರಂಗ

ಮಲಯಸಿಂಹನ ಮನೆಯಿಂದ ಹೊರಟ ಜಯವೀರನು ದೀನನಾಥನನ್ನು ನೋಡಿಕೊಂಡು ಬರೋಣವೆಂದು ಅಲ್ಲಿಗೆ ಹೋದನು. ನಾಟಕಶಾಲೆಯಲ್ಲಿ ಉದಯಸಿಂಹನು ರಾಜಾ ಮಲಯಸಿಂಹನನ್ನು ಕೊಂಕಿದನೆಂದು ಊರಲ್ಲೆಲ್ಲಾ ವರ್ತಮಾನ ಹಬ್ಬಿ, ಇಬ್ಬರಿಗೂ ತಪ್ಪದೆ ಯುದ್ಧವು ಆಗದಿರದೆಂದು ಎಲ್ಲರೂ ನಂಬಿದ್ದರು. ಎಲ್ಲರಂತೆ ವಲ್ಲಭದೇವನ ಮನೆಯವರೂ ನಂಬಿದ್ದುದರಿಂದ ವಿಮಲೆಯು ಜಯವೀರನು ಗೆಳೆಯನಾದ ಉದಯಸಿಂಹನ ಬಲೆಯಲ್ಲಿ ಸಿಕ್ಕಿ ಎಲ್ಲಿ ಯುದ್ಧದಲ್ಲಿ ಭಾಗಿಯಾಗುವನೋ ಎಂದು ಪರಿತಪಿಸುತ್ತಿದ್ದಳು. ಆಗ ಅವನು ಸುಖವಾಗಿ ನಗೆಮೊಗದೊಡನೆ ಬಂದು ಇದಿರಿಗೆ ನಿಲ್ಲಲು, ಅವನನ್ನು ಕಂಡು ಅವಳು ಸಂತೋಷದಿಂದ ಹಿಗ್ಗಿಹೋದಳು.

ಜಯವೀರನು ಮಾರಿಯ ತೋಪಿನಲ್ಲಿ ನಡೆದ ವೃತ್ತಾಂತವನ್ನೆಲ್ಲ ವಿಸ್ತಾರವಾಗಿ ವಿಮಲೆಯೊಡನೆ ಹೇಳಲು, ಅದನ್ನೆಲ್ಲಾ ಆಶ್ಚರ್ಯದಿಂದ ಕೇಳುತ್ತಿದ್ದ ಆಕೆಯು, ತಾತನ ಅನುಮತಿಯನ್ನು ಪಡೆದು, ಅವನನ್ನು ನೋಡಿ,

"ಇದುವರೆಗೂ ನಿಮ್ಮ ಗೆಳೆಯನ ಮಾತಾಯಿತು, ಇನ್ನು ನಮ್ಮ ವಿಷಯ ಸ್ವಲ್ಪ ಮಾತನಾಡೋಣ ; ತಾತನಿಗೆ ಇಲ್ಲಿಯ ಗಾಳಿ ಅನುಕೂಲವಿಲ್ಲವಂತೆ ; ಅದಕ್ಕಾಗಿ ಅವನು ಬೇರೆ ಕಡೆ ಮನೆಯನ್ನು ಮಾಡಬೇಕೆಂದಿದ್ದಾನೆ."

"ನೀನೋ ?"

"ನಾನು ಅವನನ್ನು ಬಿಟ್ಟಿರುವುದಿಲ್ಲ."

"ಹಾಗಾದರೆ ಸರಿ ; ನಿನಗೂ ಮೆಯ್ಯಿ ಸ್ವಸ್ಥವಿಲ್ಲವಾದುದರಿಂದ ತಾತನ ಜತೆಯಲ್ಲಿರುವುದು ಅನುಕೂಲವೇ ಆಯಿತು."

"ನನಗೆ ಯಾವ ರೋಗವೂ ಇಲ್ಲ. ಸದಾ ಹೊಟ್ಟೆಯಲ್ಲಿ ಸಂಕಟವಾಗುತ್ತಿರುವುದು. ಸರಿಯಾಗಿ ಹಸಿವು ಆಗದಿರುವುದು. ಈಚೆಗೆ ಆಗಾಗ ಸ್ವಲ್ಪ ತಲೆತಿರುಗುತ್ತಿರುವುದು ಅಷ್ಟೇ."

"ಇದೇನು ರೋಗ, ಇಂಥ ರೋಗವನ್ನು ನಾನು ಕಂಡೇ ಇಲ್ಲ. ಇದಕ್ಕೆ ಯಾವ ಔಷಧಿ ತೆಗೆದುಕೊಳ್ಳುತ್ತಿದ್ದೀಯೆ ?"

"ನಮ್ಮ ತಾತನು ಕುಡಿಯುವ ಪಾನಕದಲ್ಲಿ ನಿತ್ಯವೂ ಸ್ವಲ್ಪ ಸ್ವಲ್ಪ ತೆಗೆದುಕೊಳ್ಳುತ್ತಲಿದ್ದೇನೆ. ಅವನು ಅದನ್ನು ಸಂಜೀವನವೆಂದು ಹೇಳುತ್ತಿದ್ದಾನೆ" ಎಂದು ನಕ್ಕಳು. ಅವಳು ನಗುವ ರೀತಿಯಲ್ಲಿ ಅವಳಿಗೆ ಮೆಯ್ಯಿ ಸ್ವಸ್ಥವಿಲ್ಲವೆಂದು ಪರಿಷ್ಕಾರವಾಗಿ ಎಲ್ಲರಿಗು ತಿಳಿಯಬರುತ್ತಲಿದ್ದಿತು.

"ಅದು ಕಹಿ ಎಂದು ನೀನು ಯಾವಾಗಲೋ ಹೇಳಿದ್ದೆಯಲ್ಲವೆ ?"

"ಮೊತ್ತಮೊದಲು ಸ್ವಲ್ಪಸ್ವಲ್ಪ ಕಹಿಯಾಗಿದ್ದಿತು. ಈಗ ಮೂರು ನಾಲ್ಕು ದಿನಗಳಿಂದ ಕಹಿಯು ವಿಪರೀತವಾಗಿ ಅದನ್ನು ಸಹಿಸಲಿಕ್ಕೇ ಆಗದು. ಅದನ್ನು ಕುಡಿದ ಮೇಲೆ ಯಾವುದನ್ನು ತಿಂದರೂ ಕಹಿಯಾಗಿಯೇ ಇದೆ. ಈಗತಾನೇ ತಾತನ ಪಾನಕದಲ್ಲಿ ಅರ್ಧ ಬಟ್ಟಲನ್ನು ಕುಡಿದು ಬಂದೆ."

ಆ ಮಾತನ್ನು ಕೇಳಿ ದೀನನಾಥನು ದಿಗಿಲುಬಿದ್ದು ತಾನು ಮಾತನಾಡಬೇಕೆಂದು ಸೂಚಿಸಿದನು. ವಿಮಲೆಯು ನಿಘಂಟನ್ನು ತರಬೇಕೆಂದು ಹೊರಟಾಗ ತಲೆಗೆ ರಕ್ತವು ಏರಿ, "ಅಯ್ಯೋ, ಇದೇನು ಕಣ್ಣೇ ಕಾಣುವುದಿಲ್ಲ" ಎಂದು ಕೂಗಿಕೊಳ್ಳುತ್ತ ಗೋಡೆಯನ್ನು ನೆಮ್ಮಿ ನಿಂತಳು. ವಿಮಲೆಯ ಸ್ಥಿತಿಯನ್ನು ನೋಡಿ ಮುದುಕನು ಗಾಬರಿಪಟ್ಟುದನ್ನು ಕಂಡು ಜಯವೀರನು ಹೆಚ್ಚು ಗಾಬರಿಪಟ್ಟವನಾಗಿ ದಿಗ್ಗನೆದ್ದು ಅವಳನ್ನು ಹಿಡಿದುಕೊಳ್ಳಲು ಹೋದನು. ಅಷ್ಟರಲ್ಲಿಯೇ ಅವಳು "ತಾಳು, ತಾಳು, ದಿಗಿಲಪಡಬೇಡ; ಈಗ ಸ್ವಲ್ಪ ವಾಸಿ. ಯಾವುದೋ ಬಂಡಿ ಬರುವ ಸದ್ದಾಗುತ್ತದೆ" ಎಂದು ಕಿಟಕಿಯಲ್ಲಿ ಇಣಕಿನೋಡಿ "ಓಹೋ, ಭಾಮಿನಿಯೂ ಅವಳ ಮಗಳೂ ಬಂದಿರುವಂತಿದೆ ; ನಾನು ಹೋಗಿ ಅವರಿಗೆ ಮುಖ ತೋರಿಸಿ ಕೂಡಲೇ ಬರುತ್ತೇನೆ. ಅಲ್ಲಿಯವರೆಗೆ ನೀನು ಇಲ್ಲಿಯೇ ಇರು" ಎಂದು ಜಯವೀರನಿಗೆ ಹೇಳಿ ಹೊರಗೆ ಹೋದಳು.

ಅವಳತ್ತ ಹೋಗುತ್ತಲೆ ಜಯವೀರನನ್ನು ನೋಡಿ ವೃದ್ಧನು ತಾನು ಮಾತನಾಡಬೇಕೆಂದು ಸೂಚಿಸಿದನು. ಆಗ ಅವನು ನಿಘಂಟನ್ನು ತಂದು ಮುದುಕನ ಮುಂದೆ ಇರಿಸಿ ವಿಮಲೆಯು ಅರ್ಧ ಕುಡಿದು ಇಟ್ಟಿರುವ ಪಾನಕವನ್ನು ತರಿಸಬೇಕೆಂಬ ಅವನ ಅಭಿಪ್ರಾಯವನ್ನು ಅರಿತವನಾಗಿ ಆಳನ್ನು ಕೂಗಿ "ಯಜಮಾನರು ಕುಡಿಯುವ ಪಾನಕವನ್ನು ತೆಗೆದುಕೊಂಡು ಬಾ" ಎಂದು ಹೇಳಿ ಅದನ್ನು ತರಿಸಿದನು. ಆಗ ಬಟ್ಟಲಿನಲ್ಲಿ ಏನೂ ಇರಲಿಲ್ಲ. "ಇದರಲ್ಲಿದ್ದ ಪಾನಕವೇನಾಯಿತು ?" ಎಂದು ವೃದ್ಧನು ಕೇಳಲು, "ನಾನು ಕಾಣೆ ಬುದ್ಧೀ" ಎಂದು ಆಳು ಹೇಳಿದನು. ಅದನ್ನು ಕೇಳಿ ವೃದ್ಧನು ಅತಿಭೀತನಾಗಿ ಬಾಗಿಲನ್ನೇ ನೋಡುತ್ತಲಿದ್ದನು.

ವಿಮಲೆಯು ಊಹಿಸಿದ್ದಂತೆಯೆ ಭಾಮಿನಿಯೂ ಅವಳ ಮಗಳೂ ಬಂಡಿಯಲ್ಲಿ ಬಂದರು. ಇವಳು ಬಾಗಿಲ ಹತ್ತಿರಕ್ಕೆ ಹೋಗುವ ಹೊತ್ತಿಗೆ ಅವರು ಕೊಠಡಿಯಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದರು.

"ನಮ್ಮ ವಿಲಾಸಿನಿಗೆ ಮದುವೆಯು ನಿಶ್ಚಯವಾಯಿತು" ಎಂದು ಭಾಮಿನಿಯು ಹೇಳಲು, "ವರನಾರು ?" ಎಂದು ನಾಗಮಣಿಯು ಕೇಳಿದಳು.

"ರಾಜಕುಮಾರ ಅನಂತರಾಜು."

"ಓಹೋ ! ಅವನೇ ; ಹುಡುಗ ಬುದ್ಧಿಶಾಲಿ. ನೆಮ್ಮದಿ ಕುಳವಂತೆ."

"ಅವನ ಐಶ್ವರ್ಯಕ್ಕೆ ಪಾರವೇ ಇಲ್ಲವೆಂದು ನಮ್ಮ ಮನೆಯವರು ಹೇಳುತ್ತಾರೆ."

ಆಗ ವಿಲಾಸಿನಿಯು "ಅವನನ್ನು ನಮ್ಮಮ್ಮನೂ ಮೆಚ್ಚಿದ್ದಾಳೆ" ಎಂದಳು.

"ಅಮ್ಮಾ, ನೀನು ಮೆಚ್ಚಿದೆ ಮದುವೆಯಾಗುವುದುಂಟೇ ?" ಎಂದು ನಾಗಮಣಿಯು ಹೇಳಲು, ವಿಲಾಸಿನಿಯು,

"ನನಗೆ ಮದುವೆ ಮಾಡಿಕೊಳ್ಳುವುದೇ ಇಷ್ಟವಿಲ್ಲ. ಒಬ್ಬರ ಅಧೀನದಲ್ಲಿರುವುದಕ್ಕಿಂತ ಸ್ವತಂತ್ರಳಾಗಿರುವುದೇ ನನ್ನ ಅಭೀಷ್ಟ" ಎಂದಳು.

ಈ ರೀತಿ ಅವಳು ಗಂಡುಬೀರಿಯಂತೆ ಮಾತಾಡಿದುದನ್ನು ಕೇಳಿ ವಿಮಲೆಯು ಅತ್ಯಾಶ್ಚರ್ಯಪಟ್ಟಳು.

"ನನ್ನ ತಂದೆ ತಾಯಿಗಳು ಮದುವೆಯಾಗು ಎಂದು ಬಲಾತ್ಕಾರ ಮಾಡದಿದ್ದರೆ ನಿಜವಾಗಿಯೂ ನಾನು ಮದುವೆಗೆ ಒಪ್ಪುತ್ತಲೇ ಇರಲಿಲ್ಲ. ಸದ್ಯದಲ್ಲಿ ಉದಯಸಿಂಹನು ತಪ್ಪಿದನು ; ಅವನನ್ನು ಮದುವೆಯಾಗಿದ್ದರೆ ನನ್ನ ಗತಿ ಏನಾಗುತ್ತಲಿದ್ದಿತೋ ?" ಎನ್ನಲು, ಭಾಮಿನಿಯು,

"ಅದು ನಿಜ. ರಾಜಸಿಂಹನು ಆಗಲೇ ಮಗನಿಗೆ ಮದುವೆ ಮಾಡಿದ್ದರೆ ಅವಳು ಅವನ ಸೊಸೆಯಾಗಿರಬೇಕಾಗಿದ್ದಿತು" ಎಂದಳು.

ಅದಕ್ಕೆ ವಿಮಲೆಯು "ಅಪ್ಪ ಮಾಡಿದ ತಪ್ಪಿಗೆ ಮಗನೇನು ಮಾಡಾನು" ಎಂದಳು.

"ಅಪ್ಪನ ಮಾನಾಪಮಾನ ಮಗನಿಗಲ್ಲವೇ ? ಇದೂ ಅಲ್ಲದೆ ಮಗನೂ ರಾಜಾ ಮಲಯಸಿಂಹರೊಡನೆ ಯದ್ಧವನ್ನು ಮಾಡಬೇಕೆಂದು ಸಂಕಲ್ಪ ಮಾಡಿಕೊಂಡಿದ್ದವನು ಯುದ್ಧಮಾಡದೆ ಅವನ ಕ್ಷಮೆಯನ್ನು ಬೇಡಿಕೊಂಡು ಬಂದನಂತೆ. ನನಗೆ ಈ ಸುದ್ದಿಯನ್ನು ದಮನಕರು ಹೇಳಿದರು. ಇದಕ್ಕಿಂತ ಬೇರೆ ಅವಮಾನ ಉಂಟೇ ?"

ವಿಮಲೆಗೆ ಈ ಸಮಾಚಾರವೆಲ್ಲಾ ಚೆನ್ನಾಗಿ ಗೊತ್ತಿದ್ದರೂ ಅವಳು ಮಾತನಾಡದೆ ಸುಮ್ಮನಿದ್ದಳು. ಈ ಪ್ರಸ್ತಾಪದಿಂದ ಅವಳಿಗೆ ಜಯವೀರನ ನೆನಪು ಬಂದು ಹೊರಡಬೇಕೆಂದು ಯೋಚಿಸುತ್ತಿದ್ದ ಹಾಗೆಯೇ ಅವಳಿಗೆ ಬುದ್ಧಿ ಮಂಕಾಯಿತು. ಆಗ ನಾಗಮಣಿಯು ತೋಳನ್ನು ಹಿಡಿದು ಅಲ್ಲಾಡಿಸಲು ವಿಮಲೆಯು ಬೆಚ್ಚಿ, ಏನು, ಎಂದಳು. ಅದಕ್ಕೆ ನಾಗಮಣಿಯು "ಅಮ್ಮಾ, ನಿನಗೆ ಮೆಯ್ಯು ಸರಿಯಾಗಿಲ್ಲ. ನೀನು ಮಲಗಿಕೋ. ಹೋಗು" ಎಂದಳು. ವಿಮಲೆಯು ಆವೇಶ ಬಂದವಳಂತೆ ಎದ್ದು ದಡದಡನೆ ತಾತನ ಕೊಠಡಿಗೆ ಹೋಗುತ್ತಿದ್ದಾಗ ಮಧ್ಯದಲ್ಲಿ ಹಂತವನ್ನು ಎಡವಿ ಬಿದ್ದಳು. ಆ ಸದ್ದನ್ನು ಕೇಳಿ ಜಯವೀರನು ಬಾಗಿಲನ್ನು ತೆರೆದು ಅಲ್ಲಿ ವಿಮಲೆಯು ಬಿದ್ದಿರುವುದನ್ನು ಕಂಡು ತಟ್ಟನೆ ಅವಳನ್ನು ಎತ್ತಿಕೊಂಡು ಬಂದು ಅಲ್ಲಿದ್ದ ಸೋಫಾವಿನ ಮೇಲೆ ಮಲಗಿಸಿ ಬೀಸಣಿಗೆಯಿಂದ ಬೀಸುತ್ತಲಿದ್ದನು. ಸುಮಾರು ಐದು ನಿಮಿಷಗಳ ಮೇಲೆ ಅವಳು ಕಣ್ಣು ಬಿಟ್ಟು ನೋಡಿ "ನನ್ನಂತಹ ಮಂಕು ಯಾರೂ ಇಲ್ಲ" ಎಂದಳು.

ಜಯವೀರನು "ವಿಮಲೇ, ನಿನಗೇನಾದರೂ ಪೆಟ್ಟು ಆಯಿತೋ ?" ಎಂದು ಕೇಳಲು,

ಅವಳು "ಸ್ವಲ್ಪ ತಲೆ ತಿರುಗಿದಹಾಗಾಗಿ ಬಿದ್ದುಬಿಟ್ಟೆನು" ಎಂದು ವೃದ್ಧನು ತನ್ನನ್ನೇ ನೋಡುತ್ತಲಿರುವುದನ್ನು ಕಂಡು,

"ತಾತ, ಈಗ ನನಗೇನೂ ಇಲ್ಲ ; ಸ್ವಸ್ಥವಾಗಿ ಇದ್ದೇನೆ, ನೀನು ಯೋಚನೆ ಮಾಡಬೇಡ" ಎಂದಳು.

"ವಿಮಲೇ ಇಷ್ಟು ಹೊತ್ತಿಗೆ ನಿನಗೆ ಆಗಲೇ ಎರಡು ಸಲ ತಲೆ ತಿರುಗಿತು ; ಇದಕ್ಕೇನಾದರೂ ಈಗಲೇ ಚಿಕಿತ್ಸೆ ಮಾಡಿಕೊಳ್ಳಬೇಕು. ಸುಮ್ಮನೆ ಇರುವುದು ಸರಿಯಲ್ಲ. ನನಗೇಕೋ ನಿನ್ನನ್ನು ನೋಡಿದರೆ ಗಾಬರಿಯಾಗುತ್ತದೆ" ಎಂದು ಜಯವೀರನು ಹೇಳಲು,

"ಈಗ ನನಗೇನೂ ಇಲ್ಲ ; ನೀವು ಭಯಪಡಬೇಡಿ ; ವಿಲಾಸಿನಿಯ ಮದುವೆಯು ನಿಶ್ಚಯವಾಯಿತಂತೆ" ಎಂದಳು.

"ನಮ್ಮ ಮದುವೆಯಾಗುವುದು ಯಾವಾಗ ? ನಿನ್ನ ತಾತನಿಗೆ ನೀನು ಹೇಳಿದರೆ ಅದೂ ಜಾಗ್ರತೆಯಾಗಿಯೇ ಆದೀತು. ನಮ್ಮ ಮದುವೆಯಾಗುವವರೆಗೂ ನಿನ್ನ ವಿಷಯದಲ್ಲಿ ನನಗೆ ಭಯವಿದ್ದೇ ಇರುವುದು."

"ಹೀಗೆ ಹೆದರತಕ್ಕ ನಿನ್ನಂಥ ಅಂಜುಕುಳಿಗೆ ಹೇಗೆ ಸೈನ್ಯದಲ್ಲಿ ಕೆಲಸ ಸಿಕ್ಕಿತು ?" ಎಂದು ಹೇಳಿ ಹ ! ಹ ! ಹಾ ! ಎಂದು ಅಟ್ಟಹಾಸಮಾಡಿದಳು. ಒಡನೆಯೇ ಕೈಕಾಲುಗಳು ಬೆವತು ಅವಳಿಗೆ ಜ್ಞಾನ ತಪ್ಪಿತು. ಅದನ್ನು ಕಂಡು ಜಯವೀರನು ದಿಗಿಲುಬಿದ್ದು ಕೂಗಿಕೊಳ್ಳಲು, ಸಮೀಪದಲ್ಲಿದ್ದ ಆಳುಗಳೂ ದಾಸಿಯರೂ ಓಡಿ ಬಂದರು. ಈ ಗಲಭೆಯನ್ನು ನೋಡಿ ಹಿಂದೆಯೇ ವಲ್ಲಭದೇವನು ಓಡಿ ಬಂದು "ಇದು ಏನು ಅವಾಂತರ" ಎಂದನು. ವಲ್ಲಭದೇವನು ಬಂದುದನ್ನು ಕಂಡು ಜಯವೀರನು ಒಡನೆಯೇ ಅವನ ಕಣ್ಣಿಗೆ ಬೀಳದಂತೆ ತೆರೆಯ ಮರೆಯಲ್ಲಿ ನಿಂತನು.

ಮಗಳು ಪ್ರಜ್ಞೆಯಿಲ್ಲದೆ ಬಿದ್ದು ಇರುವುದನ್ನು ಕಂಡು ವಲ್ಲಭದೇವನು ಸೇವಕರನ್ನು ಕರೆದು "ಅಶ್ವಿನೀಕುಮಾರ ಪಂಡಿತರನ್ನು ಕರೆದು ತನ್ನಿರಿ" ಎಂದು ಅಪ್ಪಣೆಮಾಡಿ, ಹಾಗೆಯೇ ಅವನು ಹಿಂದೆ ತನ್ನ ಸಂಗಡ ಹೇಳಿದ್ದುದನ್ನು ನೆನಸಿಕೊಂಡು ಅವರನ್ನು ಕೂಗಿ 'ನೀವೆಲ್ಲರೂ ಇಲ್ಲಿಯೇ ಇರಿ ; ನಾನೇ ಹೋಗಿ ಕರೆದುಕೊಂಡು ಬರುತ್ತೇನೆ' ಎಂದು ಹೇಳಿ ತಾನೇ ಹೊರಟನು. ಅವನು ಅತ್ತ ಹೋದ ಒಡನೆಯೇ ರಾಜಾ ಮಲಯಸಿಂಹನು ತನಗೆ ಹೇಳಿದುದನ್ನು ಜಯವೀರನು ಜ್ಞಾಪಿಸಿಕೊಂಡು ಅವನ ಮನೆಗೆ ಓಡಿ ಹೋದನು.

ವಲ್ಲಭದೇವನು ಅತಿ ಭೀತಿಯಿಂದ ತನ್ನ ಬಳಿಗೆ ಬಂದುದನ್ನು ಕಂಡು ಅಶ್ವಿನೀಕುಮಾರನು,

"ಸ್ವಾಮೀ ವಲ್ಲಭದೇವರೇ, ಇದೇನು ಇಷ್ಟು ಗಾಬರಿ ? ಮನೆಯಲ್ಲಿ ಎಲ್ಲರೂ ಸ್ವಸ್ಥರಾಗಿದ್ದಾರೋ ಇಲ್ಲವೋ ?" ಎಂದು ಕೇಳಲು, ವಲ್ಲಭದೇವನು,

"ಸ್ವಾಮೀ, ಇಲ್ಲ; ಅದಕ್ಕಾಗಿಯೇ ತಮ್ಮನ್ನು ಹುಡುಕಿಕೊಂಡು ಬಂದೆ"

"ಅದೇ ರೋಗವೋ ?"

"ಅದೇ ಎಂದು ತೋರುತ್ತದೆ."

"ಈಗ ಮೃತ್ಯುವು ಯಾರನ್ನು ಹಿಡಿದಿದೆ ? ನಾನು ಮೊದಲೇ ಹೇಳಿದ್ದೆ. ನೀವು ಕೇಳಲಿಲ್ಲ."

ವಲ್ಲಭದೇವನು ನಿಟ್ಟುಸಿರನ್ನು ಬಿಡುತ್ತ "ವಿಮಲೆ" ಎಂದನು.

"ನಿಮ್ಮ ಮಗಳೇ ?"

"ಅಹುದು. ಆ ವಿಮಲೆಯ ವಿಷಯದಲ್ಲಿ ನೀವು ಅನುಮಾನಪಟ್ಟು ಇದ್ದಿರಿ. ಅದು ತಪ್ಪು ಎಂಬುದು ಈಗ ಗೊತ್ತಾಯಿತು."

"ನೀವು ಒಂದೊಂದು ಸಾರಿಯೂ ರೋಗವು ಪ್ರಬಲವಾಗಿ ಕೈಮಿಂಚಿ ಹೋದ ಮೇಲೆ ಇಲ್ಲಿಗೆ ಬರುತ್ತೀರಿ ; ಈಗ ಆ ಹುಡುಗಿ ಹೇಗಿದ್ದಾಳೋ ? ನೋಡೋಣ, ನಡೆಯಿರಿ" ಎಂದು ವೈದ್ಯನು ವಲ್ಲಭದೇವನ ಬಂಡಿಯಲ್ಲಿ ಕುಳಿತು ಅತಿವೇಗದಿಂದ ಅವನ ಮನೆಗೆ ಹೋದನು.

ವಲ್ಲಭದೇವನ ಮನೆಗೆ ವೈದ್ಯನು ಹೋದ ವೇಳೆಯಲ್ಲಿಯೇ ಜಯವೀರನೂ ಮಲಯಸಿಂಹನ ಮನೆಯನ್ನು ಸೇರಿದನು. ಆಗತಾನೇ ತನ್ನ ಬಳಿಗೆ ಬಂದು ಹೋಗಿದ್ದ ಜಯವೀರನು ಪುನಃ ಓಡಿಬಂದುದನ್ನು ಕಂಡು, "ಏನು ಸಮಾಚಾರ ? ಇದೇನು ಗಾಬರಿಯಿಂದ ಓಡಿಬರುತ್ತಿದ್ದೀರಿ ? ಮನೆಯಲ್ಲಿ ಎಲ್ಲರೂ ಸೌಖ್ಯವಾಗಿದ್ದಾರೋ, ಇಲ್ಲವೋ ?" ಎಂದು ಕೇಳಿದನು.

"ತಮ್ಮ ಆಶೀರ್ವಾದಬಲದಿಂದ ನನ್ನ ಮನೆಯಲ್ಲಿ ಎಲ್ಲರೂ ಸುಖವಾಗಿದ್ದಾರೆ."

"ಮತ್ತೇಕೆ ಇಷ್ಟು ಗಾಬರಿ ?"

"ಮೃತ್ಯು ಪ್ರವೇಶಮಾಡಿದ ಮನೆಯಿಂದ ಓಡಿಬಂದೆ."

"ರಾಜಸಿಂಹನ ಮನೆಯಿಂದಲೋ ?"

"ಅಲ್ಲಿ ಯಾರು ಸತ್ತರು ?"

"ರಾಜಸಿಂಹನು ಈಗ ತಾನೇ ಆತ್ಮಹತ್ಯೆ ಮಾಡಿಕೊಂಡನು."

"ಎಂಥ ಘೋರ ಕೃತ್ಯ !"

"ರಾಧಾಬಾಯಿಗಾಗಲಿ ಉದಯಸಿಂಹನಿಗಾಗಲಿ ಘೋರವಲ್ಲ. ಮಾನಗೆಟ್ಟ ಗಂಡನೂ ತಂದೆಯೂ ಬದುಕಿರುವುದಕ್ಕಿಂತ ಸತ್ತದ್ದು ಮೇಲು."

"ಅಯ್ಯೋ ಪಾಪ, ಮಹಾಪವಿತ್ರಳಾದ ರಾಧಾಬಾಯಿಗೆ ಹೀಗೆ ಕಷ್ಟವು ಬರಬಹುದೇ ?"

"ಉದಯಸಿಂಹನ ವಿಷಯದಲ್ಲಿಯೂ ಹಾಗೆಯೇ ಕನಿಕರವಿರಲಿ. ಆ ತಾಯಿಗೆ ತಕ್ಕ ಮಗನು ಅವನು ; ಅದು ಹಾಗಿರಲಿ ; ನೀವು ಬಂದ ಸಮಾಚಾರವನ್ನು ಹೇಳಿ."

"ನಿಮ್ಮ ಸಹಾಯವನ್ನು ಬೇಡುವುದಕ್ಕಾಗಿ ಅತ್ಯಾತುರದಿಂದ ಓಡಿಬಂದೆ."

"ಅದೇನು ಹೇಳಿ."

"ದೈವಗತಿಯನ್ನು ತಪ್ಪಿಸಬೇಕೆಂಬ ಹುಚ್ಚು ಯೋಚನೆಯಿಂದ ಬಂದೆ. ಅವಳು ಸತ್ತರೆ ನಾನು ಹೇಗೆ ಬದುಕಿರಲಿ ?"

"ಸಮಾಚಾರವೇನು, ಮೊದಲು ಹೇಳಬಾರದೆ ?"

"ಒಂದಾನೊಂದು ರಾತ್ರಿ ನಾನು ಒಬ್ಬ ಶ್ರೀಮಂತನ ಮನೆಯ ತೋಟದಲ್ಲಿದ್ದೆನು. ನಾನಲ್ಲಿರುವುದನ್ನು ಅರಿಯದೆ ಆ ಮನೆಯ ಯಜಮಾನನೂ ವೈದ್ಯನೂ ಮಾತನಾಡುತ್ತಲಿದ್ದರು. ಅಂದು ಆ ಮನೆಯಲ್ಲಿ ಯಾರೋ ಸತ್ತಿದ್ದುದರಿಂದ ಯಜಮಾನನು ವೈದ್ಯನಿಗೆ ತನ್ನ ದುಃಖವನ್ನು ತಿಳಿಸುತ್ತಿದ್ದನು. ವೈದ್ಯನು ಇದು ಸ್ವಭಾವವಾದ ಮರಣವಲ್ಲ ; ಹಿಂದೆ ನಡೆದ ಸಾವಿನಂತೆಯೇ ವಿಷಪ್ರಯೋಗದಿಂದಾದುದು ಎಂದನು. ಆ ಮನೆಯಲ್ಲಿ ಒಂದು, ಎರಡು, ಮೂರು ಮರಣಗಳಾದವು. ಈಗ ನಾಲ್ಕನೆಯದು ಆಗುವಂತಿದೆ."

"ಜಯವೀರರೇ, ಊರೆಲ್ಲ ಬಲ್ಲ ಸುದ್ದಿಯನ್ನು ನೀವು ನನ್ನಲ್ಲಿ ಗುಟ್ಟಾಗಿ ಹೇಳುತ್ತೀರಲ್ಲ. ಆ ಮನೆಯ ಯಜಮಾನನನ್ನೂ ಆ ವೈದ್ಯನನ್ನೂ ನಾನು ಕಾಣೆನೆ ? ಇವುಗಳೆಲ್ಲವೂ ಆ ಮನೆಯ ಯಜಮಾನನ ದುರಾಚಾರದಿಂದ ಉಂಟಾದವು. ಇಂತಹ ಸಂದರ್ಭದಲ್ಲಿ ನಾವೇನು ಮಾಡಲಾದೀತು ? ದೇವರು ಬಿಟ್ಟಂತೆ ಆಗಲಿ ಎಂದು ಸುಮ್ಮನೆ ಇರಬೇಕು."

"ಈಗ ಇನ್ನೊಂದು ಮರಣವಾಗುವುದರಲ್ಲಿದೆ."

"ಸಾಯುವವರು ಸಾಯಲಿ, ನಮಗೇನು ?"

"ಅಯ್ಯೋ, ನಾವು ಸುಮ್ಮನಿದ್ದರೆ ಕೆಲಸವು ಕೆಟ್ಟುಹೋಗುತ್ತದೆ."

"ಹಾಗಾದರೆ ನ್ಯಾಯಾಧಿಪತಿ ವಲ್ಲಭದೇವನಿಗೆ ತಿಳಿಸಲೋ ?"

"ನಿಮಗೆಲ್ಲವೂ ಗೊತ್ತಿರುವಂತಿದೆ."

"ನನಗೂ ಎಲ್ಲಾ ಸಮಾಚಾರವೂ ತಿಳಿಯುತ್ತದೆಂದು ಹೇಳಲಿಲ್ಲವೆ ? ಆ ಮನೆ ಕೆಟ್ಟ ಮನೆ ; ಅದು ಎಲ್ಲಿಯಾದರೂ ಹಾಳಾಗಲಿ. ಮೊದಲು ಶಾಂತವೀರ ಅನಂತರ ಅವನ ಹೆಂಡತಿ ; ನೆನ್ನೆ ಹರಿದಾಸ ; ಇಂದು ದೀನನಾಥನೋ ಅಥವಾ ವಿಮಲೆಯೋ ?"

"ಸ್ವಾಮೀ, ನಿಮಗೆ ಇಷ್ಟುಮಟ್ಟಿಗೆ ತಿಳಿದೂ ಸುಮ್ಮನಿದ್ದೀರಾ ?"

"ಅವರು ಹೇಗೆ ಹಾಳಾದರೆ ನಮಗೇನು ?"

"ಅಯ್ಯೋ ವಿಮಲೆಯು ಸತ್ತ ಮೇಲೆ ನನ್ನ ಪ್ರಾಣವು ನಿಲ್ಲದು. ನನ್ನ ಪ್ರಾಣ ಕಾಂತೆಯನ್ನು ನೀವು ಹೇಗಾದರೂ ಬದುಕಿಸಬೇಕು" ಎಂದು ಜಯವೀರನು ಅಂಗಲಾಚಿಕೊಳ್ಳಲು ಬಲವಾಗಿ ತಗುಲಿದ ಪೆಟ್ಟಿನಿಂದ ಸಿಟ್ಟೆದ್ದು ಗರ್ಜಿಸುವ ಸಿಂಹದಂತೆ ಮಲಯಸಿಂಹನು ಗರ್ಜಿಸುತ್ತ

"ಏನೆಂದಿರಿ ? ನೀವು ಆ ಚಂಡಾಲನ ಮಗಳನ್ನು ಪ್ರೀತಿಸುತ್ತಿದ್ದೀರಾ ? ಅಯ್ಯೋ ಪಾಪ, ನಿಮಗೆ ಇನ್ನೂ ಬಾಲ್ಯ ಬುದ್ಧಿಯಿಲ್ಲ" ಎಂದನು.

ತನ್ನ ಸಂಗಡ ಈ ರೀತಿ ಎಂದೂ ಮಾತನಾಡದೆ ಇದ್ದ ಮಲಯಸಿಂಹನು ಹೀಗೆ ಹೇಳಿದುದನ್ನು ಕಂಡು, ಎಂಥ ಭಯಂಕರವಾದ ರಣಾಂಗದಲ್ಲಿಯೂ ಎದೆಗೆಡದಿದ್ದ ಜಯವೀರನು ಬೆಚ್ಚಿ ಬೆದರಿ, ಮೆಲ್ಲಮೆಲ್ಲನೆ ಹಿಂಜರಿದನು. ಅದನ್ನು ಕಂಡು ಮಲಯಸಿಂಹನು ಅಂತಸ್ತೇಜಸ್ಸಿನ ಪ್ರಕಾಶದಿಂದ ಕೋರೈಸಿದಂತೆ ಕಣ್ಣು ಮುಚ್ಚಿಕೊಂಡು ಹಾಗೆಯೇ ಯೋಚಿಸಿ, ಸಮಾಧಾನವನ್ನು ತಾಳಿ,

"ಸ್ವಾಮೀ ಜಯವೀರರೇ, ನಾನು ನಿಮ್ಮನ್ನು ಮಗನಂತೆ ತಿಳಿದುಕೊಂಡಿದ್ದರೂ ಈ ವಿಷಯವನ್ನು ನೀವು ಇದುವರೆಗೂ ನನಗೆ ತಿಳಿಸದೆ ಇದ್ದುದು ಕೇವಲ ಅವಿವೇಕ. ಮಂದಮತಿಗಳಿಗೆ ಹೇಗೆ ಶಿಕ್ಷೆಯಾಗುತ್ತದೆಯೋ ನೋಡಿ. ಬೀದಿಯಲ್ಲಿ ಹೋಗುತ್ತಿದ್ದ ಮಾರಿಯನ್ನು ಸುಮ್ಮನೆ ನೋಡುತ್ತಲಿದ್ದ ನನ್ನ ಮನೆಗೇ ಈಗ ಅದು ಬಂದಂತಾಯಿತು. ಚಿಂತೆಯಿಲ್ಲ ; ವಿಮಲೆಯು ಇನ್ನೂ ಸಾಯದೇ ಇದ್ದರೆ ದೈವ ಕೃಪೆಯಿಂದ ಅವಳು ಸಾಯದಂತೆ ನೋಡಿಕೊಳ್ಳುತ್ತೇನೆ. ನೆಮ್ಮದಿಯಾಗಿ ಇರಿ" ಎಂದನು.

ಅದನ್ನು ಕೇಳಿ ಜಯವೀರನು "ಸ್ವಾಮೀ ರಾಜರೇ, ನಿಮ್ಮ ತಾಳ್ಮೆಯನ್ನೂ ಧೈರ್ಯವನ್ನೂ ನೋಡಿದರೆ ನನಗೆ ಹೇಗೋ ಗಾಬರಿಯಾಗುತ್ತದೆ. ನೀವು ಮೃತ್ಯುವಿನ ಸಂಗಡ ಹೋರಾಡಬಲ್ಲಿರೋ ? ನೀವೇನು ಅತಿಮಾನುಷರೋ" ಎಂದು ಜಯವೀರನು ಗಡಗಡನೆ ನಡುಗುತ್ತ ನಿಂತನು.

"ವಿಮಲೆಯು ಇನ್ನೂ ಬದುಕಿದ್ದಾಳೆಯೋ ಇಲ್ಲವೋ ?"

"ಹುಂ, ಬದುಕಿದ್ದಾಳೆ."

"ಹಾಗಾದರೆ ; ಇನ್ನು ದಿಗಿಲುಪಡಬೇಡಿ. ನಾನು ಮೃತ್ಯುವನ್ನು ಜಯಿಸಿ ಅವಳನ್ನು ಬದುಕಿಸಿಕೊಡುತ್ತೇನೆ. ಸ್ವಲ್ಪಕಾಲ ಏಕಾಂತವಾಗಿದ್ದುಕೊಂಡು ತಕ್ಕ ಯೋಚನೆ ಮಾಡಬೇಕಾಗಿದೆ ನೀವು ಮನೆಗೆ ಹೋಗಿ ಬನ್ನಿ" ಎಂದು ಧೈರ್ಯವನ್ನು ಹೇಳಿ ಜಯವೀರನನ್ನು ಕಳುಹಿಸಿಕೊಟ್ಟನು.

ಅತ್ತ ಅಶ್ವಿನೀಕುಮಾರನು ಮನೆಗೆ ಬಂದಾಗ ವಿಮಲೆಗೆ ಇನ್ನೂ ಮೂರ್ಛೆ ತಿಳಿದಿರಲಿಲ್ಲ. ಅವಳನ್ನು ಪರೀಕ್ಷಿಸುತ್ತಿದ್ದಾಗ ವಲ್ಲಭದೇವನು ಅವನ ಮುಖವನ್ನೇ ನೋಡುತ್ತಲಿದ್ದನು. ದೀನನಾಥನ ಕಣ್ಣಿನಲ್ಲಿ ಧಾರೆಧಾರೆಯಾಗಿ ನೀರು ಸುರಿಯುತ್ತಲಿದ್ದಿತು. ಪಂಡಿತನು ರೋಗಿಯನ್ನು ಪರೀಕ್ಷಿಸಿ ಇನ್ನೂ ಜೀವವಿದೆ ಎಂದು ಹೇಳುತ್ತಲೆ, ವಲ್ಲಭದೇವನು ಆತುರದಿಂದ,

"ಸ್ವಾಮೀ, ಅವಳು ಬದುಕುತ್ತಾಳೋ ಇಲ್ಲವೋ ಹೇಳಿ" ಎಂದು ಕೇಳಿದನು.

"ಅವಳಿಗೆ ಇನ್ನೂ ಜೀವ ಹೋಗಿಲ್ಲ, ಜೀವವಿರುವವರೆಗೂ ಚಿಕಿತ್ಸೆ ಮಾಡಿತೀರಬೇಕು" ಎಂದು ಹೇಳಿ ಕೊಠಡಿಯಲ್ಲಿ ಬೇರೆ ಜನಗಳು ಯಾರಿರುವರೆಂದು

ಸುತ್ತಲೂ ತಿರುಗಿ ನೋಡಿದನು. ಆಗ ದೀನನಾಥನು ಅಭಿಪ್ರಾಯಗರ್ಭಿತವಾದ ದೃಷ್ಟಿಯನ್ನು ಸುಳಿಸಲು, ಅದರ ಭಾವವನ್ನು ಅರಿತು ವೈದ್ಯನು ವಲ್ಲಭದೇವನನ್ನು ನೋಡಿ, "ಸ್ವಾಮೀ, ಇವಳ ದಾದಿಯನ್ನು ಕರೆದು ತನ್ನಿ" ಎಂದು ಅವನನ್ನು ಕಳುಹಿಸಿಬಿಟ್ಟು ಅವನು ಅತ್ತ ಹೋಗುತ್ತಲೆ ದೀನನಾಥನ ಬಳಿಗೆ ಹೋಗಿ,

"ನನ್ನೊಡನೆ ನೀವು ಏನೋ ಹೇಳಬೇಕೆಂದಿದ್ದೀರಲ್ಲವೆ ?" ಎಂದು ಕೇಳಲು, ಅವನು ಅಹುದೆಂದು ಸೂಚಿಸಿದನು.

"ಬಹಿರಂಗವಾಗಿಯೋ ?"

"ಅಲ್ಲ."

"ಗುಟ್ಟಾಗಿಯೋ ?"

"ಹೂಂ."

"ಹಾಗಾದರೆ ಎಲ್ಲರನ್ನೂ ಹೊರಗೆ ಕಳುಹಿಸಿಬಿಟ್ಟು ನಾನೊಬ್ಬನೇ ಇಲ್ಲಿ ಇರುತ್ತೇನೆ."

ವಲ್ಲಭದೇವನು ದಾದಿಯನ್ನು ಕರೆದುಕೊಂಡು ಬಂದನು. ಅವನ ಹಿಂದೆ ಅವನ ಹೆಂಡತಿಯೂ ಬಂದು ವಿಮಲೆಗೆ "ಏನಾಯಿತು ? ನಿನಗೆ ಮೆಯ್ಯು ಸ್ವಸ್ಥವಿಲ್ಲ ; ಹೋಗಿ ಮಲಗಿಕೋ ಎಂದು ಈಗತಾನೇ ಹೇಳಿಕಳುಹಿಸಿದೆನಲ್ಲಾ! ಇಷ್ಟು ಅವಾಂತರವಾಗುವುದೆಂದು ತಿಳಿದಿರಲಿಲ್ಲ" ಎಂದು ಕಂಬನಿಯನ್ನು ಸುರಿಸುತ್ತ ಅವಳ ಕಯ್ಯನ್ನು ತನ್ನ ಕಯ್ಯಲ್ಲಿ ಇಟ್ಟುಕೊಂಡಳು. ಪಂಡಿತನು ವೃದ್ಧನ ಮುಖವನ್ನೇ ನೋಡುತ್ತಲಿದ್ದನು. ನಾಗಮಣಿಯು ಹಾಗೆ ಹೇಳಿದುದನ್ನು ಕೇಳಿ ತುಟಿಗಳು ಅಲುಗುತ್ತಿರಲು, ಮುಖವು ಬೆವತು, ವೃದ್ಧನು ಕಣ್ಣುಗಳನ್ನು ಕೆಂಡದಂತೆ ಮಾಡಿಕೊಂಡು ಸೊಸೆಯನ್ನು ದುರದುರನೆ ನೋಡಿದನು.

ಅದನ್ನು ನೋಡಿ ಪಂಡಿತನು "ಹಾಗೋ ?" ಎಂದುಕೊಂಡನು.

ವಿಮಲೆಯನ್ನು ನೋಡುತ್ತಲಿದ್ದ ನಾಗಮಣಿಯು ದಾಸಿಯನ್ನು ಕೂಗಿ "ಇವಳನ್ನು ಹಾಸಿಗೆಯ ಮೇಲೆ ಮಲಗಿಸೋಣ ಬಾ" ಎಂದಳು. ಅವರೆಲ್ಲರೂ ಅಲ್ಲಿಂದ ಹೊರಗೆ ಹೋಗುವುದೇ ಬೇಕಾಗಿದ್ದುದರಿಂದ ಪಂಡಿತನು "ಹಾಗೆಯೇ ಮಾಡಿ" ಎಂದು ಹೇಳಿ ಔಷಧಿಯ ಚೀಟನ್ನು ಬರೆದು ವಲ್ಲಭದೇವನ ಕಯ್ಯಲ್ಲಿ ಕೊಟ್ಟು "ನೀವೇ ಹೋಗಿ ಈ ಔಷಧಿಯನ್ನು ಮಾಡಿಸಿಕೊಂಡು ಬನ್ನಿರಿ. ಇನ್ನಾರು ತಂದರೂ ನನಗೆ ನಂಬುಗೆಯಿಲ್ಲ" ಎಂದನು.

ವಲ್ಲಭದೇವನು ಔಷಧಿಯನ್ನು ತರುವುದಕ್ಕೆ ಹೋದ ಮೇಲೆ "ನಾನು ಹೇಳುವವರೆಗೆ ಯಾರೂ ಯಾವುದನ್ನೂ ರೋಗಿಗೆ ಕೊಡದ ಹಾಗೆ ಹಾಸಿಗೆಯ ಪಕ್ಕದಲ್ಲಿ ಇದ್ದು ನೋಡಿಕೋ" ಎಂದು ದಾಸಿಗೆ ಕಟ್ಟುಮಾಡಿ, ಪಂಡಿತನು ದೀನನಾಥನ ಕೊಟಡಿಗೆ ಪುನಃ ಬಂದನು. ಅಲ್ಲಿ ಯಾರೂ ಇರಲಿಲ್ಲವಾದುದರಿಂದ ಬಾಗಿಲನ್ನು ಮುಚ್ಚಿಕೊಂಡು ದೀನನಾಥನನ್ನು ಕುರಿತು,

"ವಿಮಲೆಯ ಸಮಾಚಾರ ನಿಮಗೇನಾದರೂ ತಿಳಿಯುವುದೋ ?" ಎಂದು ಕೇಳಿದನು.

ಅದಕ್ಕೆ ವೃದ್ಧನು 'ಹೂಂ' ಎಂದು ಸೂಚಿಸಿದನು.

"ಹರಿದಾಸನಿಗೆ ಇಕ್ಕಿದಂತೆ ಇವಳಿಗೂ ವಿಷ ಹಾಕಿದ್ದಾರೋ ?"

"ಹೂಂ."

"ಹಾಗಾದರೆ ಅವನಂತೆ ಇವಳೂ ಸಾಯುತ್ತಾಳೋ ?"

"ಇಲ್ಲ."

"ಇವಳು ಬದುಕಬಹುದೋ ?"

"ಹೂಂ."

"ಅದು ಹೇಗೆ ?" ಎಂದು ಪಂಡಿತನು ಕೇಳಲು ದೀನನಾಥನು ತನ್ನ ಪಾನಕವಿದ್ದ ಪಾತ್ರವನ್ನು ನೋಡಿದನು.

"ಓಹೋ, ಈಗ ನನಗೆ ಗೊತ್ತಾಯಿತು. ಆ ಪಾನಕವನ್ನು ಅವಳಿಗೂ ಕುಡಿಸಿ ಅಭ್ಯಾಸ—" ಎಂದು ಹೇಳಿ ಪಂಡಿತನು ಮುಗಿಸುವುದರೊಳಗಾಗಿಯೇ ವೃದ್ಧನು 'ಹೂಂ, ಹೂಂ' ಎಂದನು.

"ಈ ಎಚ್ಚರಿಕೆ ಇಲ್ಲದಿದ್ದರೆ ಅವಳು ಇಷ್ಟು ಹೊತ್ತಿಗೆ ಸತ್ತೇಹೋಗುತ್ತಿದ್ದಳು. ಇನ್ನು ಅವಳಿಗೆ ಯಾವ ಅಪಾಯವೂ ಇಲ್ಲದಂತೆ ನಾನು ನೋಡಿಕೊಳ್ಳುತ್ತೇನೆ" ಎಂದು ಪಂಡಿತನು ಹೇಳಲು, ವೃದ್ಧನಿಗೆ ಪರಮ ಸಂತೋಷವಾಯಿತು. ಅಷ್ಟುಹೊತ್ತಿಗೆ ವಲ್ಲಭದೇವನು ಔಷಧಿಯನ್ನು ತಂದನು.

ಔಷಧಿಯನ್ನು ಕುಡಿಸಲು ಪಂಡಿತನೂ ವಲ್ಲಭದೇವನೂ ಅವಳ ಕೊಠಡಿಗೆ ಹೋದಾಗ, ಯಾವನೋ ಒಬ್ಬ ಸನ್ಯಾಸಿಯು ಪಕ್ಕದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅದು ಶಿಥಿಲವಾಗಿ, ವಾಸಕ್ಕೆ ಯೋಗ್ಯವಲ್ಲವೆಂದು ಬಹಳ ಜನ ಕೆಲಸಗಾರರನ್ನು ಬಿಟ್ಟು ಅವಶ್ಯಕವಾದ ಕಾರ್ಯಗಳನ್ನು ಅತಿ ಜಾಗ್ರತೆಯಾಗಿ ಮಾಡಿಸುತ್ತಲಿದ್ದನು.

## ೬೩
# ಮದುವೆಯ ಏರ್ಪಾಡು

ವಿಲಾಸಿನಿಗೂ ಅನಂತರಾಜುವಿಗೂ ಮದುವೆ ಎಂದು ಊರೆಲ್ಲ ಕೂಗುತ್ತಲಿದ್ದರೂ ಅವಳಿಗೇನೋ ಮದುವೆಯಾಗುವುದು ಇಷ್ಟವಿರಲಿಲ್ಲ. 'ನನ್ನನ್ನು ಕೇಳದೇ ತಂದೆಯು ಹೀಗೆ ಏರ್ಪಾಡು ಮಾಡಿದನಲ್ಲ' ಎಂದು ಅವಳು ಖಿನ್ನಳಾಗಿದ್ದಳು. ಮದುವೆಯ ಏರ್ಪಾಡುಗಳೆಲ್ಲವೂ ಕೊನೆಗಾಣುತ್ತ ಬರುತ್ತಿರುವುದನ್ನು ಕಂಡು ಇನ್ನು ಸುಮ್ಮನಿದ್ದರೆ ಆಭಾಸವುಂಟಾಗುವುದೆಂದು ಯೋಚಿಸಿ ವಿಲಾಸಿನಿಯು ತಂದೆಯ ಸಂಗಡ ಎರಡು ವಿಷಯಗಳನ್ನು ಹೇಳಬೇಕೆಂದು ನಿಶ್ಚಯಿಸಿ "ಅಪ್ಪಾಜೀ, ನಿಮ್ಮೊಡನೆ ಒಂದೆರಡು ಮಾತನಾಡತಕ್ಕುದಿದೆ. ತಾವು ಒಳಗೆ ಬಿಜಯ ಮಾಡಿಸಬೇಕು" ಎಂದು ಹೇಳಿಕಳುಹಿಸಿದಳು.

'ತನ್ನ ಕೊಠಡಿಗೆ ಬಂದು ಇವಳು ಮಾತನಾಡದೆ ತನ್ನನ್ನೇ ಬರಹೇಳಿದಳಲ್ಲ, ಇದೇನು ಚೋದ್ಯ' ಎಂದು ದುರ್ಮತಿಯು ಆಶ್ಚರ್ಯಪಟ್ಟು, 'ಚಿಂತೆಯಿಲ್ಲ ; ಏನು ಹೇಳುತ್ತಾಳೆಯೋ ನೋಡೋಣ'ವೆಂದು ಅವಳ ಬಳಿಗೆ ಹೋದನು. ಆ ವೇಳೆಗೆ ತನ್ನ ಶೃಂಗಾರವನ್ನು ಮುಗಿಸಿಕೊಂಡು ವಿಲಾಸಿನಿಯು ಕುಳಿತಿದ್ದಳು.

"ಅಮ್ಮಾ ವಿಲಾಸಿನೀ, ನಿನಗೇನು ಬೇಕು ? ಇಲ್ಲಿಗೇಕೆ ನನ್ನನ್ನು ಬರಹೇಳಿದೆ ?"

"ಅಪ್ಪಾಜೀ ! ನೀವು ಕೇಳಿದ ಎರಡು ಪ್ರಶ್ನೆಗಳಿಗೂ ಉತ್ತರವನ್ನು ಕೊಡುತ್ತೇನೆ. ಮೊದಲು ಎರಡನೆಯ ಪ್ರಶ್ನೆಗೆ ಬದಲು ಹೇಳಿ ತರುವಾಯ ಮೊದಲನೆಯದಕ್ಕೆ ಉತ್ತರ ಕೊಡುತ್ತೇನೆ. ನಿಮ್ಮ ಕೊಠಡಿಯಲ್ಲಿ ನೀವು ಯಾವಾಗಲೂ ಹಣದ ಪೆಟ್ಟಿಗೆ, ಲೆಕ್ಕದ ಪುಸ್ತಕ, ಹುಂಡಿ ಕಟ್ಟು, ಇವುಗಳ ಮಧ್ಯೆ ಇರುವುದರಿಂದ ಹಣದ ಸಂಗತಿಯೊಂದಲ್ಲದೆ ನಿಮಗೆ ಮತ್ತಾವುದೂ ಬೇಕಾಗಿರುವುದಿಲ್ಲ. ಹಣವೇ ಮುಖ್ಯವೆಂದು ತಿಳಿದಿರುವ ಮನಸ್ಸು ಹಣದಂತೆಯೇ ಕಲ್ಲು ಎಂದು ಕೇಳಿಲ್ಲವೇ ? ನಿಮಗೆ ಹಣದಲ್ಲಿರುವ ಪ್ರೇಮವು ಹೆಂಡತಿಯಲ್ಲಿಯೂ ಇಲ್ಲ ; ಮಗಳಲ್ಲಿಯೂ ಇಲ್ಲ. ಅದರಿಂದಲೇ ತಾವು ಇಲ್ಲಿಗೆ ಬಂದು ಮಾತನಾಡಬೇಕೆಂದು ಕೇಳಿಕೊಂಡೆನು. ತಮ್ಮ ಮೊದಲನೆಯ ಪ್ರಶ್ನೆಗೆ ಉತ್ತರವನ್ನು ಮೂರೇ ಮಾತಿನಲ್ಲಿ ಹೇಳಿ ಮುಗಿಸುತ್ತೇನೆ. ಅದು ಏನು ಎನ್ನುವಿರಾ ? ನಾನು ಅನಂತರಾಜುವನ್ನು ಮದುವೆಯಾಗಲೊಲ್ಲೆನು."

ವಿಲಾಸಿನಿಯು ಹೀಗೆಂದುದನ್ನು ಕೇಳಿ, ದುರ್ಮತಿಯು ಬೆಚ್ಚಿ ಬೆರಗಾಗಿ ಹೋದನು.

"ನಾನು ಹೇಳಿದುದರಲ್ಲಿ ಏನು ಆಶ್ಚರ್ಯ ? ನೀವಾಗಿಯೇ ನನ್ನೊಡನೆ ಈ ವಿಷಯವನ್ನು ಪ್ರಸ್ತಾಪಮಾಡುವಿರೆಂದು ಇದುವರೆಗೂ ಕಾದಿದ್ದೆನು. ನೀವು ಯಾವುದನ್ನೂ ಹೇಳದಿದ್ದುದರಿಂದ ನಾನಾಗಿಯೇ ಪ್ರಸ್ತಾಪಮಾಡಬೇಕಾಯಿತು."

"ಅದೇನು ಹಾಗೆ ಹೇಳುತ್ತೀಯೆ ?"

"ನಾನು ಸ್ವತಂತ್ರಳಾಗಿರಬೇಕೆಂದು ಇದ್ದೇನೆ ; ನನಗೆ ಮದುವೆಮಾಡಿಕೊಳ್ಳುವುದೇ ಇಷ್ಟವಿಲ್ಲ."

"ಅಯ್ಯೋ ದುರ್ಭಾಗ್ಯಳೇ !"

"ನಾನು ದುರ್ಭಾಗ್ಯಳೇ ? ನನಗೆ ಏನು ಕಡಿಮೆ ? ರೂಪವತಿಯೆಂದು ಲೋಕವೇ ಹೇಳುತ್ತದೆ ; ಮಾತಿನಲ್ಲಿ ಜಾಣೆಯೆಂದು ಪ್ರಾಜ್ಞರೂ ಒಪ್ಪಿದ್ದಾರೆ ; ಸಂಗೀತದಲ್ಲಿ ಶಾರದೆಯ ಅಪರಾವತಾರವೆಂದು ಶಾಸ್ತ್ರಪಾರಂಗತರು ಹೊಗಳುತ್ತಾರೆ. ನಿಮ್ಮ ಹೊಟ್ಟೆಯಲ್ಲಿ ಹುಟ್ಟಿರುವುದರಿಂದ ಐಶ್ವರ್ಯದಿಂದ ವೈಶ್ರವಣನೂ ಶ್ರವಣನಾದನೆಂದು ಜನರೆಲ್ಲ ಕೀರ್ತಿಸುತ್ತಾರೆ. ಹೀಗಿರುವಲ್ಲಿ ನಾನೆಂತು ದುರ್ಭಾಗ್ಯಳಾದೇನು" ಎಂದು ವಿಲಾಸಿನಿಯು ನಸುನಗುತ್ತ ಹೇಳಲು, ದುರ್ಮತಿಯು ಕೋಪಾಂಧನಾಗಿ ಘೂರ್ಮಿಸಿ ಕಾಡುಮೃಗದಂತೆ ಅವಳ ಮೇಲೆ ಬೀಳಲು ಯತ್ನಿಸಿ, ಹಾಗೆ ಮಾಡಿದರೆ ಕೆಲಸವು ಕೆಟ್ಟುಹೋಗುವುದೆಂದು ತಿಳಿದು, ಉಕ್ಕಿ ಬಂದ ಕೋಪವನ್ನು ಹಾಗೆಯೇ ಅಡಗಿಸಿಕೊಂಡು,

"ಅಮ್ಮಾ ವಿಲಾಸಿನೀ, ಒಂದು ವಿನಾ ನೀನು ಹೇಳಿದುದೆಲ್ಲವೂ ಸರಿಯೇ. ಆ ಒಂದು ಯಾವುದೆಂದು ನಾನು ಈಗ ಹೇಳುವುದಿಲ್ಲ. ಮುಂದೆ ನಿನಗೇ ಗೊತ್ತಾಗಬಹುದು. ಮದುವೆಯಾಗದೆ ಇರುವುದಕ್ಕೆ ನೀನು ನಿನ್ನ ಕಾರಣವನ್ನು ಹೇಳಿದೆ. ಮದುವೆಯಾಗಬೇಕೆಂಬುದಕ್ಕೆ ನನ್ನ ಕಾರಣವನ್ನು ನಾನು ಹೇಳುತ್ತೇನೆ ಕೇಳು. ಸಂತತಿಯು ವೃದ್ಧಿಯಾಗಬೇಕೆಂದು ಬಯಸಿ ಕೆಲವರು ಮಕ್ಕಳು ಹುಟ್ಟಿದರೆ ಸಂತೋಷಪಟ್ಟು ಅವುಗಳ ಹೊಟ್ಟೆಯಲ್ಲಿ ಮಕ್ಕಳಾಗಬೇಕೆಂದು ಮದುವೆಮಾಡುತ್ತಾರೆ. ಅಂಥವರೆಲ್ಲರೂ ಹುಚ್ಚರೆಂದು ನಾನು ಭಾವಿಸಿದ್ದೇನೆ. ಸಂಸಾರದಲ್ಲಿ ಧನದಿಂದುಂಟಾಗುವ ರುಚಿಯೂ ಸುಖವೂ ಮತ್ತಾವುದರಿಂದಲೂ ಆಗುವುದಿಲ್ಲ. ಇದೀಗ ನನ್ನ ಅಭಿಪ್ರಾಯ."

"ಅಪ್ಪಾಜೀ, ಈ ಆಕಾಶಪುರಾಣವನ್ನು ಯಾರು ಕೇಳಿದರು ? ನಾನು ಹೇಳಿದ ಹಾಗೆಯೇ ನೀವು ನಿಮ್ಮ ಕಾರಣವನ್ನು ಒಂದೇ ಮಾತಿನಲ್ಲಿ ಹೇಳಿಬಿಡಬಾರದೇ ?"

"ಹಾಗಾದರೆ ಹೇಳುತ್ತೇನೆ ಕೇಳು. ನಿನ್ನನ್ನು ಅನಂತರಾಜುವಿಗೆ ಮದುವೆಮಾಡಿಕೊಡಬೇಕೆಂದು ಯೋಚಿಸಿದುದು ನನ್ನ ಪ್ರಯೋಜನಕ್ಕಾಗಿಯೇ. ಈಚೆಗೆ ನನಗೆ ಅನೇಕ ನಷ್ಟಗಳು ಆಗಿಹೋಗಿವೆ. ರಾಜಕುಮಾರ ಅನಂತರಾಜುವು ಬಲು ಹಣಗಾರ. ನಿನ್ನನ್ನು ಅವನಿಗೆ ಕೊಟ್ಟು ಮದುವೆ ಮಾಡಿದರೆ, ಅವನು ತನ್ನ ಹಣವನ್ನೆಲ್ಲಾ ನನ್ನ ಹತ್ತಿರ ಇಡುವುದಾಗಿ ಹೇಳಿದ್ದಾನೆ. ಅವನು ಹಾಗೆ ಮಾಡಲಿ ಮಾಡದೆ ಇರಲಿ, ಅವನ ಹಣ ನನ್ನಲ್ಲಿದೆ ಎಂದು ಜನರಿಗೆ ತಿಳಿದರೆ ಸಾಕು ; ನನಗೆ ಬೇಕಾದಷ್ಟು ಹಣ ಸಿಕ್ಕುತ್ತದೆ.

ನೀನು ಈ ಮದುವೆಗೆ ಒಪ್ಪಿದ್ದರೆ ಸರಿ ; ಒಪ್ಪದಿದ್ದರೆ ಮೂರು ಕಾಸಿಗೂ ಬೇಡದವಳಾಗುತ್ತೀಯೆ, ನೋಡಿಕೋ."

"ಅಪ್ಪಾಜೀ, ಇದಕ್ಕಾಗಿ ನೀವು ಯೋಚನೆ ಮಾಡುವ ಕೆಲಸವಿಲ್ಲ. ವಿದ್ಯೆಯೂ ಬುದ್ಧಿಯೂ ಇರುವವರೆಗೆ ನನಗೆ ದಾರಿದ್ರ್ಯದ ಭಯವಿಲ್ಲ. ನನ್ನ ತಾಯಿಯ ವಿಷಯವಾಗಿಯೂ ನೀವು ಯೋಚಿಸಬೇಕಾದುದಿಲ್ಲ. ಅವಳು ಗಂಡನ ಮೇಲೂ ಮಗಳ ಮೇಲೂ ಪ್ರೀತಿಯಿಟ್ಟು ಅವರ ಯೋಗಕ್ಷೇಮಗಳನ್ನು ಪರಾಂಬರಿಸುತ್ತಿರುವುದು ಪ್ರಯೋಜನಕರವಾದ ಕೆಲಸವಲ್ಲವೆಂದು, ತನ್ನ ಯೋಗಕ್ಷೇಮವನ್ನೇ ನೋಡಿಕೊಂಡು ತಕ್ಕಮಟ್ಟಿಗೆ ಆಸ್ತಿಯನ್ನು ಕೂಡಿಸಿಕೊಂಡಿದ್ದಾಳೆ."

"ನಿನ್ನ ಅಭಿಪ್ರಾಯವನ್ನು ನೋಡಿದರೆ ನಾನು ಹಾಳಾಗಿಹೋಗುವುದೇ ನಿನಗೆ ಬೇಕಾದುದೆಂದು ತೋರುತ್ತದೆ."

"ನೀವು ಹಾಳಾಗಿಹೋಗುವುದೇ ! ಹಾಗೆಂದರೇನು ?"

"ರಾಜಕುಮಾರನು ನಿನ್ನನ್ನು ಮದುವೆಯಾದ ಕೂಡಲೇ ಇಪ್ಪತ್ತು ಲಕ್ಷ ವರಹಗಳನ್ನು ನನ್ನಲ್ಲಿ ಇಡುವೆನೆಂದು ಹೇಳಿದ್ದಾನೆ. ಈಗ ನಾನು ಯೋಚಿಸಿರುವ ವ್ಯಾಪಾರದಲ್ಲಿ ಅದನ್ನು ಉಪಯೋಗಿಸಿಕೊಂಡರೆ, ವರ್ಷವೊಂದಕ್ಕೆ ಹತ್ತು ಪಡಿ ಲಾಭ ಬಂದು ಆ ಹಣದಲ್ಲಿ ಒಂದು ಕಾಸೂ ವೆಚ್ಚವಾಗದೆ ನನ್ನ ಸ್ಥಿತಿಯೂ ನೆಟ್ಟಗಾಗುತ್ತದೆ."

"ಈ ಹಣಕ್ಕಾಗಿ ನನ್ನನ್ನು ನೀವು ಅಡವಿಡುತ್ತೀರೋ ?"

"ಅಮ್ಮಾ, ನನ್ನಲ್ಲಿ ಹಣವು ಹೆಚ್ಚಿದಷ್ಟೂ ನಿನಗೆ ಬೆಲೆಯು ಹೆಚ್ಚಾಗಿ ದೊರೆಯುತ್ತದೆ. ಅದು ನಿನಗೆ ಸಂತೋಷವಲ್ಲವೇ ?" ಎಂದು ಕೇಳಲು, ವಿಲಾಸಿನಿಯು ಸ್ವಲ್ಪ ತೃಪ್ತಿಗೊಂಡವಳಾಗಿ,

""ಅಪ್ಪಾಜೀ, ನಿಮ್ಮ ಸ್ಥಿತಿಯನ್ನು ನೋಡಿ ನಾನು ಈ ಮದುವೆಗೆ ಒಪ್ಪಬೇಕಾಗಿದೆ. ಮದುವೆಯಾದ ಮೇಲೆ ನನ್ನ ಇಷ್ಟ ಬಂದಂತೆ ಇರುವುದಕ್ಕೆ ನಿಮ್ಮ ಅಡ್ಡಿ ಯಾವುದೂ ಇಲ್ಲವಷ್ಟೆ ?"

"ಮದುವೆಯಾದ ಮೇಲೆ ನಿನ್ನ ಇಷ್ಟ ಬಂದಂತೆ ನೀನು ಇರಬಹುದು. ನಾನು ನಿನ್ನ ಗೋಜಿಗೆ ಬರುವುದಿಲ್ಲ."

"ಹಾಗಾದರೆ ಸರಿ. ಇನ್ನು ನೀವು ಮದುವೆಗೆ ಬೇಕಾದುದನ್ನು ಅಣಿ ಮಾಡಿಕೊಳ್ಳಬಹುದು" ಎಂದು ಹೇಳಿ ವಿಲಾಸಿನಿಯು ತನ್ನ ತಾಯಿಯ ಜತೆಯಲ್ಲಿ ನಾಗಮಣಿಯನ್ನು ನೋಡುವುದಕ್ಕೆ ಹೋದಳು.

ಈ ಮಾತುಕತೆಗಳು ನಡೆದ ಮೂರನೆಯದಿನ ದುರ್ಮತಿಯ ಮನೆಯು ಶೃಂಗಾರವಾಗಿದ್ದಿತು. ತನ್ನ ಐಶ್ವರ್ಯಕ್ಕೆ ಮಿತಿಯೇ ಇಲ್ಲವೆಂದು ಜನರು ತಿಳಿಯಬೇಕೆಂದು ದುರ್ಮತಿಯು ತುಂಬ ಹಣವನ್ನು ವೆಚ್ಚಮಾಡಿದ್ದನು. ರಾತ್ರಿ ಒಂಬತ್ತು ಗಂಟೆಗೆ ಲಗ್ನವು ಗೊತ್ತಾಗಿದ್ದಿತು. ದುರ್ಮತಿಯು ಧನಾಗಾರಪತಿಯಾಗಿದ್ದುದರಿಂದ ಅವನ ದಾಕ್ಷಿಣ್ಯಕ್ಕಾಗಿ

ಅನೇಕ ಜನರು ಬಂದಿದ್ದರು. ಸಕಾಲಕ್ಕೆ ರಾಜಾ ಮಲಯಸಿಂಹನೂ ಅಲ್ಲಿಗೆ ಬಂದನು. ರಾಜನು ಬಂದ ಕಡೆಯಲ್ಲಿಯೂ ಹೋದ ಕಡೆಯಲ್ಲಿಯೂ ಜನರು ವಿಶೇಷವಾಗಿ ಸಂಭ್ರಮಪಡುತ್ತಿದ್ದರು. ಅನೇಕರು ಅವನ ಹಿಂದೆ ಮುಂದೆ ಗುಂಪು ಕೂಡಿ ಅವನ ಸಂಗಡ ಮಾತನಾಡುವುದಕ್ಕೆ ಸಮಯವನ್ನು ನೋಡುತ್ತಿದ್ದರು. ಅವನು ಅಲ್ಲಿಗೆ ಬಂದ ಉತ್ತರ ಕ್ಷಣದಲ್ಲಿಯೇ ನಾಗಮಣಿಯೂ ಬಂದಳು. ದುರ್ಮತಿಯೂ ಭಾಮಿನಿಯೂ ಅವರಿಬ್ಬರನ್ನು ಇದಿರುಗೊಂಡು ಒಳಗೆ ಕರೆದುಕೊಂಡು ಹೋದರು. ಅಲ್ಲಿ ನೆರೆದಿದ್ದವರೆಲ್ಲರೂ ಗುಂಪುಗುಂಪಾಗಿ ಮಾತನಾಡುತ್ತಲಿದ್ದರು.

ದುರ್ಮತಿಯು ನಾಗಮಣಿಯನ್ನು ನೋಡಿ "ಅಮ್ಮಾ, ನಿಮ್ಮ ಯಜಮಾನರು ಏಕೆ ಬರಲಿಲ್ಲ ?" ಎಂದು ಕೇಳಲು "ಅವರು ಕದರ್ಥಕನೆಂಬ ಕಳ್ಳನನ್ನು ಕೊಂದ ಮೊಕದ್ದಮೆಯನ್ನು ವಿಚಾರಣೆಮಾಡುತ್ತ ಇದ್ದರು. ಬರುವುದಕ್ಕೆ ಆಗಲಿಲ್ಲ" ಎಂದಳು.

ಅದನ್ನು ಕೇಳಿ ರಾಜನು "ಸ್ವಾಮೀ ದುರ್ಮತಿಗಳೇ, ಅವರು ಬಾರದೇ ಇರುವುದಕ್ಕೆ ನಾನೇ ಕಾರಣ. ನನ್ನ ಮನೆಗೆ ನುಗ್ಗಿದ ಕಳ್ಳನು ತುಂಬ ಹಣವನ್ನು ದೋಚಿಕೊಂಡು ಬರುತ್ತಾನೆಂದು ಜತೆಯಲ್ಲಿ ಬಂದಿದ್ದವನು ಬೀದಿಯಲ್ಲಿ ಕಾದಿದ್ದು, ಅವನು ಮನೆಯಿಂದ ಹೊರಗೆ ಇಳಿಯ ಬಿದ್ದಾಗ ಅವನನ್ನು ತಿವಿದು ಕೊಂದನು. ಆ ಸತ್ತವನ ಹರಕು ಅಂಗಿಯು ಒಂದು ಈಚೆಗೆ ನನ್ನ ಮನೆಯ ಬಳಿ ಸಿಕ್ಕಿತು ; ಅದರಲ್ಲಿ ತನ್ನನ್ನು ಕೊಂದವನ ಹೆಸರು ಇಂತಹುದೆಂದು ಸತ್ತವನು ನಿಮ್ಮ ಹೆಸರಿಗೆ ಬರೆದಿದ್ದ ಒಂದು ಚೀಟಿಯೂ ಸಿಕ್ಕಿತೆಂದು ಪೋಲೀಸಿನವರು ಹೇಳುತ್ತಿದ್ದರು" ಎಂದನು.

ಇದನ್ನೆಲ್ಲಾ ಕೇಳುತ್ತಿದ್ದ ಅನಂತರಾಜುವು ಅಲ್ಲಿಂದ ಮೆಲ್ಲನೆ ಎದ್ದು ಹಿಂದ ಹಿಂದಕ್ಕೆ ಸರಿಯತೊಡಗಿದನು.

"ಅವನ ಜತೆಯಲ್ಲಿ ಬಂದಿದ್ದವನೂ ಕಳ್ಳನಂತೆ ಅದು ನಿಜವೋ ?" ಎಂದು ದುರ್ಮತಿಯು ಕೇಳಲು ರಾಜನು,

"ಹಾಗೆಂದು ಹೇಳಿಕೊಳ್ಳುತ್ತಾರೆ. ಸತ್ತ ಕಳ್ಳನು ತಮ್ಮ ಹೆಸರಿಗೆ ಒಂದು ಲೇಖನವನ್ನು ಬರೆದಿದ್ದನು. ಅದನ್ನು ನಾನು ನ್ಯಾಯಾಧಿಪತಿಯ ಬಳಿಗೆ ಕಳುಹಿಸಿಕೊಟ್ಟೆನು."

"ಏನೆಂದಿರಿ ? ನನಗೆ ಬರೆದಿದ್ದಾನೆ ಎಂದಿರಾ ?"

"ಅಹುದು."

"ಅದರಲ್ಲಿ ಏನು ಬರೆದಿದ್ದನು ?"

"ನಾನು ಒಡೆದು ನೋಡಲಿಲ್ಲ."

ಹೀಗೆ ಹೇಳುತ್ತಿದ್ದಾಗ ಹಿಂದೆ ಹಿಂದೆ ಸರಿದುಹೋಗುತ್ತಲಿದ್ದ ಅನಂತರಾಜುವು ರಾಜನ ಮುಖವನ್ನು ನೋಡುತ್ತ ತನ್ನ ಕಾಲಿಗೆ ಮತ್ತಷ್ಟು ಜಾಗ್ರತೆಯಾಗಿ ಬುದ್ಧಿ ಹೇಳಲಾರಂಭಿಸಿದನು.

ಆಗ ಪುರೋಹಿತನು ಬಂದು "ವಧೂವರರನ್ನು ಕರೆದುಕೊಂಡು ಬನ್ನಿರಿ, ಹಸೆಯ

ಮೇಲೆ ಕುಳ್ಳಿರಿಸಿ” ಎಂದು ದುರ್ಮತಿಗೆ ಹೇಳಲು, ಅವನು ವಿಲಾಸಿನಿಯನ್ನು ಕರೆದುತಂದು ಮಣೆಯ ಮೇಲೆ ಕುಳ್ಳಿರಿಸಿ ರಾಜಕುಮಾರ ಅನಂತರಾಜುವನ್ನು ಹುಡುಕಿಕೊಂಡು ಹೋದವನು ಮನೆಯಲ್ಲೆಲ್ಲಾ ಹುಡುಕಿ ಎಲ್ಲಿಯೂ ಕಾಣದೆ ಹೊರಗೆ ಹೋಗಿದ್ದಾನೆಯೋ ನೋಡೋಣವೆಂದು ಬೀದಿಯ ಬಾಗಿಲಿನಿಂದ ಬಂದನು. ಆಗ ಅಲ್ಲಿ ಹತ್ತು ಹನ್ನೆರಡು ಜನ ಪೋಲೀಸಿನವರು ನಿಂತಿದ್ದರು. ಕುಟಿಲಹೃದಯರಾದ ಪಾಪಿಗಳಿಗೆ ಮನಸ್ಸು ಎಂದಾದರೂ ನೆಮ್ಮದಿಯಾಗಿರುವುದುಂಟೇ ! ಅವರನ್ನು ನೋಡಿ ಇವರು ತನ್ನನ್ನು ಹಿಡಿಯಲಿಕ್ಕೆ ಬಂದಿರುವರೋ ಏನೋ ಎಂದು ದುರ್ಮತಿಯು ಬೆದರಿದವನಾಗಿ ತಟ್ಟನೆ ಒಳಕ್ಕೆ ಬಂದನು. ಗಂಡನ ಅವಸ್ಥೆಯನ್ನು ಕಂಡು ಸಂಪಗೆಯ ವನದ ಮನೆಯಲ್ಲಿ ನಡೆದ ಸಂಗತಿಯನ್ನು ಜ್ಞಾಪಿಸಿಕೊಂಡು ಭಾಮಿನಿಯು ತನಗೇನು ಅಪಾಯ ತಟ್ಟುವುದೋ ಎಂದು ದಿಗಿಲುಬಿದ್ದು ಕಿಟ್ಟನೆ ಕಿರುಚಿಕೊಂಡು ಮೂರ್ಛೆ ಹೋಗಿಬಿದ್ದಳು.

ಇದನ್ನೆಲ್ಲಾ ಕುಳಿತ ಕಡೆಯಿಂದಲೇ ನೋಡುತ್ತಲಿದ್ದ ರಾಜಾ ಮಲಯಸಿಂಹನು ಎದ್ದು ಬಂದು ಪೋಲೀಸ್ ಅಧಿಕಾರಿಯ ಸಮೀಪಕ್ಕೆ ಹೋಗಿ “ನಿಮಗೇನು ಬೇಕು ?” ಎಂದು ಕೇಳಿದನು. ಅದಕ್ಕೆ ಆ ಅಧಿಕಾರಿಯು “ಅನಂತರಾಜು ಎಂಬುವರಾರಾದರೂ ಇರುವರೋ ?” ಎಂದು ಕೇಳಲು ಅಲ್ಲಿದ್ದವರೆಲ್ಲರೂ ಬೆಕ್ಕಸಗೊಂಡು “ಏತಕ್ಕೆ ? ಅವರೇನು ಮಾಡಿದರು ?” ಎಂದು ಒಮ್ಮೆಯೇ ಪ್ರಶ್ನೆಮಾಡಿದರು.

“ಅವನು ಕಳ್ಳ ; ಕದರ್ಥಕನೆಂಬುವನ ಜತೆಯಲ್ಲಿ ಬಂಧಿಶಾಲೆಯಿಂದ ತಪ್ಪಿಸಿಕೊಂಡು ಬಂದವನು. ಅವರಿಬ್ಬರೂ ರಾಜಾ ಮಲಯಸಿಂಹನ ಮನೆಯಲ್ಲಿ ಕಳ್ಳತನ ಮಾಡಲು ಹೋದಾಗ ಆ ಕದರ್ಥಕನನ್ನು ಅವನು ಕೊಂದುಹಾಕಿದನು.”

ಹೀಗೆಂದು ಹೇಳಿದ ಪೋಲೀಸು ಅಧಿಕಾರಿಯ ಮಾತನ್ನು ಕೇಳಿದೊಡನೆಯೇ ಭೂತಾವಿಷ್ಟವಾದ ಮನೆಯಿಂದ ಹೇಗೆ ಜನರು ಓಡಿಹೋಗುತ್ತಾರೋ ಹಾಗೆಯೇ ಎಲ್ಲರೂ ಆ ಮನೆಯಿಂದ ಓಡಿಹೋದರು. ಕೊನೆಗೆ ದುರ್ಮತಿ ಅವನ ಹೆಂಡತಿ, ಮಗಳು, ಅವಳ ಗೆಳತಿ ಅಮೃತವಲ್ಲಿ, ಇವರ ಹೊರತು ಮನೆಯಲ್ಲಿ ಬೇರೆ ಯಾರೂ ನಿಲ್ಲಲಿಲ್ಲ. ದುರ್ಮತಿಯು ತನ್ನ ಕೊಠಡಿಗೆ ಹೋಗಿ ಪೋಲೀಸು ಅಧಿಕಾರಿಗೆ ಬೇಕಾದ ವರ್ತಮಾನವನ್ನು ಹವಣಿಸುತ್ತಿದ್ದನು. ಭಾಮಿನಿಯು ನಡುಮನೆಯ ಸೋಫಾವಿನ ಮೇಲೆ ಬಿದ್ದಿದ್ದಳು. ಅವಳಿಗೆ ಇನ್ನೂ ಸರಿಯಾಗಿ ಜ್ಞಾನ ಬಂದಿರಲಿಲ್ಲ. ಅಮೃತವಲ್ಲಿಯೊಡನೆ ವಿಲಾಸಿನಿಯು ತನ್ನ ಕೊಠಡಿಯನ್ನು ಹೊಕ್ಕು ಬಾಗಿಲ ಒಳಗಿನಿಂದ ಬೀಗ ಹಾಕಿಕೊಂಡಳು.

“ವಿಲಾಸಿನೀ, ಇದು ಏನು ಅನ್ಯಾಯ ? ಅವನು ಕಳ್ಳನೆಂದು ಯಾರು ಬಲ್ಲರು ? ಅವನನ್ನು ಒಬ್ಬ ರಾಜಕುಮಾರನೆಂದು ನಾನು ತಿಳಿದುಕೊಂಡಿದ್ದೆನು” ಎಂದು ಅಮೃತವಲ್ಲಿಯು ಹೇಳಲು ವಿಲಾಸಿನಿಯು,

“ಅಮೃತವಲ್ಲೀ, ನೋಡಿದೆಯಾ ? ನನ್ನ ಅದೃಷ್ಟಕ್ಕೆ ಏನು ಹೇಳಲಿ ! ಮೊದಲು

ನನಗೆ ಉದಯಸಿಂಹನು ಗಂಟುಬೀಳುವುದರಲ್ಲಿದ್ದನು ; ದೈವವಶದಿಂದ ಅದು ತಪ್ಪಿತು. ಈಗ ಈ ರಾಜುವಿನ ಕೈಗೆ ಸಿಕ್ಕಿಹೋಗುವುದರಲ್ಲಿದ್ದೆ. ಭಲಾ, ಭಲಾ ! ನನಗೆ ಏರ್ಪಾಡಾಗಿದ್ದ ಇಬ್ಬರು ಗಂಡಂದಿರೂ ಸರಿಯೆ."

"ವಿಲಾಸಿನೀ, ಹಾಗೆನ್ನಬೇಡವೇ. ಇವನಿಗೂ ಅವನಿಗೂ ತುಂಬಾ ತಾರತಮ್ಯವಿದೆ"

"ಸಾಕು ಬಿಡೇ, ಅಮೃತವಲ್ಲೀ ! ಗಂಡಸರು ಯಾವಾಗಲೂ ದುಷ್ಟರು, ತಿರಸ್ಕಾರಯೋಗ್ಯರು."

"ಎಲ್ಲಾ ಗಂಡಸರೂ ಹಾಗೆ ಎಂದು ಹೇಳಲಾಗದು. ಅದು ಹೋಗಲಮ್ಮಾ ವಿಲಾಸಿನೀ, ಈಗ ಮುಂದೇನು ಯೋಚನೆ ಮಾಡಿದ್ದೀಯೆ ?"

"ನನಗೆ ಮದುವೆಯಾದ ಕೂಡಲೇ ಮಾಡಬೇಕೆಂದಿದ್ದುದನ್ನು ಈಗಲೇ ಮಾಡುವುದು."

"ನಿನಗೇನು ? ಇನ್ನು ಮದುವೆಯ ಭಯವಿಲ್ಲವಲ್ಲಾ ; ಆದರೂ ಹೊರಡಬೇಕೋ ?"

"ಅಯ್ಯೋ, ನನ್ನ ಸಂಕಟ ನೀನೇನು ಬಲ್ಲೆ ? ನಮ್ಮಪ್ಪನಿಗೆ ಹಣವೆಂದರೆ ಪ್ರಾಣ ; ನನ್ನ ತಾಯಿಗೆ ದಮನಕನಲ್ಲಿ ಮೋಹ ; ಅಪ್ಪನು ಹಣಗಾರನನ್ನು ಮದುವೆಯಾಗೆಂದು ಪೀಡಿಸುತ್ತಾನೆ. ಅಮ್ಮನೋ ದಮನಕನನ್ನೇ ಮದುವೆಯಾಗೆಂದು ಪ್ರಾಣ ಹಿಂಡುತ್ತಾಳೆ. ಸದ್ಯಕ್ಕೇನೋ ಮದುವೆಯ ಭಯವಿಲ್ಲ. ಆದರೂ ನಾನು ಇಲ್ಲಿರುವವರೆಗೂ ಅದು ತಪ್ಪುವುದಿಲ್ಲ. ಈ ಸಂದರ್ಭವು ನಮ್ಮ ಪ್ರಯಾಣಕ್ಕೆ ಬಹು ಅನುಕೂಲ; ತಾನಾಗಿ ಒದಗಿದ ಸಮಯವನ್ನು ಪ್ರಾಜ್ಞರು ಎಂದೂ ಬಿಡರು. ಟಪ್ಪಾಲು ಬಂಡಿಗೆ ಹೇಳಿದ್ದೆಯಲ್ಲಾ ಈ ರಾತ್ರಿ ಸಿಕ್ಕುತ್ತದೆಯೋ ಇಲ್ಲವೋ ?"

"ಟಪ್ಪಾಲು ಬಂಡಿಗೇನು ? ಪ್ರತಿನಿತ್ಯವೂ ಸಿಕ್ಕುತ್ತದೆ."

"ರಹದಾರಿಯೋ ?"

"ಅದೂ ಸಿದ್ಧವಾಗಿದೆ."

"ಅದರಲ್ಲಿ ಇಬ್ಬರ ಹೆಸರನ್ನು ಬರೆಸಿದ್ದೀಯೋ ?"

"ನಮ್ಮಿಬ್ಬರ ಹೆಸರನ್ನೇ ?"

"ಹೂಂ."

"ನಾನು ರಾಜಾ ಮಲಯಸಿಂಹನ ಬಳಿಗೆ ಹೋಗಿ ಇಂದ್ರಪ್ರಸ್ಥದ ಪ್ರಸಿದ್ಧ ಸಂಗೀತ ವಿದ್ವಾಂಸನೊಬ್ಬನಿಗೆ ಒಂದು ಪರಿಚಯದ ಪತ್ರ ಬರೆದುಕೊಡಬೇಕೆಂದು ಕೇಳಿದನು. ಅವನು ನನ್ನ ಕೋರಿಕೆಯಂತೆ ಪತ್ರವನ್ನು ಬರೆದುಕೊಡಲು, ಗಂಡಸರ ಜತೆಯಿಲ್ಲದೆ ಒಬ್ಬಳೇ ಏಕಾಏಕಿಯಾಗಿ ಪ್ರಯಾಣ ಹೊರಡುವುದು ಸರಿಯಲ್ಲವೆಂದು ನಾನು ಹೇಳಲು ಅವನು ಅದರ ಭಾವವನ್ನು ಗ್ರಹಿಸಿ, ನನಗೆ ಗಂಡಸಿನ ರಹದಾರಿಯನ್ನು ತರಿಸಿಕೊಟ್ಟನು."

"ಹಾಗಾದರೆ ನಾನೇ ಅಮೃತರಾಜು ; ನೀನು ನನ್ನ ತಂಗಿ ಅಮೃತವಲ್ಲಿ. ನನಗೆ ಬಹುಕಾಲದಿಂದ ಗಂಡುವೇಷ ಹಾಕಿಕೊಳ್ಳಲಾಸೆಯು ಇದ್ದಿತು ; ಅದಕ್ಕಾಗಿ ಅನೇಕ ಉಡುಪುಗಳನ್ನು ಮಾಡಿಸಿ ಇಟ್ಟಿದ್ದೇನೆ. ಈಗ ನನ್ನ ಆ ಆಸೆಯು ಪೂರ್ತಿಯಾಗುವುದಕ್ಕೆ ಕಾಲವೊದಗಿತು. ನೀನು ಗಂಟು ಮೂಟೆಗಳನ್ನು ಕಟ್ಟುವುದರೊಳಗಾಗಿ ನಾನು ಅಮೃತರಾಜುವಾಗಿ ಬರುತ್ತೇನೆ" ಎಂದು ಹೇಳಿ ವಿಲಾಸಿನಿಯು ತಲೆಯ ಕೂದಲನ್ನು ಗಂಡಸಿನಂತೆ ಕತ್ತರಿಸಿಕೊಂಡು ಪುರುಷ ವೇಷವನ್ನು ಅಳವಡಿಸಿಕೊಂಡಳು.

ಸಖಿಯರಿಬ್ಬರೂ ಈ ರೀತಿ ತಮ್ಮ ಏರ್ಪಾಡುಗಳನ್ನು ಮಾಡಿಕೊಂಡು ರಾತ್ರಿ ಸುಮಾರು ಹನ್ನೆರಡು ಗಂಟೆಯ ಸಮಯದಲ್ಲಿ ಪಯಣ ಮಾಡಿದರು. ಹೊರಡುವುದಕ್ಕೆ ಮುಂಚೆ ಅಮೃತವಲ್ಲಿ "ನಮ್ಮಲ್ಲಿ ಎಷ್ಟು ಹಣವಿದೆ ?" ಎಂದು ಕೇಳಲು, ವಿಲಾಸಿನಿಯು "ಇಪ್ಪತ್ತುಮೂರು ಸಾವಿರ ವರಹಗಳ ನಾಣ್ಯವೂ, ಇಪ್ಪತ್ತೆರಡು ಸಾವಿರ ವರಹಗಳ ಬೆಲೆ ಬಾಳತಕ್ಕ ಒಡವೆಗಳೂ ಇವೆ" ಎಂದಳು.

"ಶಹಬಾಸ್ ! ಎಲೆ ವಿಲಾಸಿನೀ ! ನಲವತ್ತೈದು ಸಾವಿರ ವರಹಗಳಿದ್ದರೆ ಎರಡು ಮೂರು ವರ್ಷಗಳವರೆಗೆ ನೆಮ್ಮದಿಯಾಗಿ ನಾವಿಬ್ಬರೂ ಜೀವನ ಮಾಡಿಕೊಳ್ಳಬಹುದು. ಆ ವೇಳೆಗೆ ನಾವು ಎಲ್ಲಿಯಾದರೂ ನಮ್ಮ ಜೀವನಕ್ಕೆ ಅನುಕೂಲಮಾಡಿಕೊಳ್ಳಬಹುದು" ಎಂದು ಹೇಳಿ ಮೊದಲು ಅಮೃತವಲ್ಲಿಯು ಹೊರಟಳು. ಬಳಿಕ ವಿಲಾಸಿನಿಯು ಎಂದಿನಂತೆ ತನ್ನ ಕೊಠಡಿಗೆ ಬೀಗವನ್ನು ಹಾಕಿಕೊಂಡು ಅವಳ ಹಿಂದೆ ತಾನೂ ಸದ್ದಿಲ್ಲದೆ ಹೊರಟಳು.

ಇಬ್ಬರೂ ಬೀದಿಯಲ್ಲಿ ಸೇರಿದಾಗ ಅಮೃತವಲ್ಲಿಯು ವಿಲಾಸಿನಿಯನ್ನು ಕುರಿತು "ಸಖೀ ! ಈ ನಡುರಾತ್ರಿಯಲ್ಲಿ ನಾವಿಬ್ಬರೂ ಹೀಗೆ ಹೋಗುತ್ತಿರುವುದನ್ನು ಯಾರಾದರೂ ಕಂಡರೆ ನೀನು ನನ್ನನ್ನು ಕದ್ದುಕೊಂಡು ಹೋಗುತ್ತಿದ್ದೀಯೆ ಎಂದು ಅವರು ನಿಜವಾಗಿಯೂ ತಿಳಿದುಕೊಳ್ಳುತ್ತಾರೆ" ಎಂದಳು.

"ಅದು ನಿಜ ; ಹಾಗೆ ಯಾರಾದರೂ ಕೇಳಿದರೆ ನಾನು ನಿನ್ನನ್ನು ಮದುವೆಯಾಗುತ್ತೇನೆಂದೂ ಹೇಳುತ್ತೇನೆ."

ಈ ರೀತಿ ಅವರಿಬ್ಬರೂ ಸರಸಾಲಾಪಗಳನ್ನು ಮಾಡಿಕೊಂಡು ಕೈಯಲ್ಲಿ ಗಂಟುಗಳನ್ನು ಹಿಡಿದುಕೊಂಡು ಹೋಗುತ್ತಲಿದ್ದರು. ಇವರ ಪುಣ್ಯದಿಂದ ಬೀದಿಯಲ್ಲಿ ಜನರ ಸುಳಿವೇ ಇರಲಿಲ್ಲ.

"ಅಮ್ಮಾ ಅಮೃತವಲ್ಲೀ ! ಈಗ ನಾವು ಎಲ್ಲಿಗೆ ಹೋಗೋಣ ?"

"ಟಪ್ಪಾಲು ಬಂಡಿಯ ಆಫೀಸಿಗೆ ಹೋದರೆ ಅಲ್ಲಿ ನಮ್ಮನ್ನು ಯಾರಾದರೂ ನೋಡುತ್ತಾರೆ. ಆ ಆಫೀಸಿನ ಸಮೀಪದಲ್ಲಿ ಒಬ್ಬಂಟಿಗಳಾಗಿ ಇದ್ದುಕೊಂಡಿರುವ ಅಡುಗೂಲಜ್ಜಿಯ ಮನೆಗೆ ಹೋಗಿ ಅವಳ ಮೂಲಕ ಬಂಡಿಯನ್ನು ತರಿಸಿಕೊಂಡು ಹೊರಡುವ ಏರ್ಪಾಡು ಮಾಡಿದ್ದೇನೆ"

"ಅವಳಿಗೇನಾದರೂ ಹಣ ಕೊಡುವುದಾಗಿ ಹೇಳಿದ್ದೀಯೋ ?"

"ಹತ್ತು ವರಹಗಳನ್ನು ಕೊಡುವುದಾಗಿ ಮಾತನಾಡಿದ್ದೇನೆ."

"ಅದು ಸರಿ ; ನಡೆ, ಅಲ್ಲಿಗೆ ಹೋಗೋಣ."

ಇಬ್ಬರೂ ಅಡುಗೂಲಜ್ಜಿಯ ಮನೆಗೆ ಹೋಗಿ ಅವಳ ಮೂಲಕ ಬಂಡಿಯನ್ನು ತರಿಸಿಕೊಂಡು ಅದಕ್ಕಾಗಿ ಒಪ್ಪಿದ ಹಣವನ್ನು ಅವಳಿಗೆ ಸಲ್ಲಿಸಿ ಬಂಡಿಯಲ್ಲಿ ಕುಳಿತುಕೊಂಡರು. ಬಂಡಿಯವನು, "ಎಲ್ಲಿಗೆ ಹೊಡೆಯಲಿ ?" ಎಂದು ಕೇಳಲು, ಪುರುಷ ವೇಷದ ವಿಲಾಸಿನಿಯು, "ಉತ್ತರದ ಬಾಗಿಲ ಕಡೆಗೆ ಬಿಡು" ಎಂದು ಅಪ್ಪಣೆ ಮಾಡಿದಳು.

ಅಮೃತವಲ್ಲಿಯು ನಾವು ಎಂದು ಮಾತೆತ್ತಲು, ಅಷ್ಟರಲ್ಲಿ ವಿಲಾಸಿನಿಯು "ಹುಷ್, ಸುಮ್ಮನಿರು" ಎಂದು ತನ್ನ ಬಾಯ ಮೇಲೆ ಬೆರಳಿಟ್ಟುಕೊಂಡು ಸನ್ನೆ ಮಾಡಿದಳು. ಬಂಡಿಯು ಸ್ವಲ್ಪ ದೂರ ಹೋದ ಮೇಲೆ ವಿಲಾಸಿನಿಯು ಅಮೃತವಲ್ಲಿಯನ್ನು ನೋಡಿ, "ಗೆಳತೀ, ನಮ್ಮಿಂದ ಹತ್ತು ವರಹಗಳನ್ನು ತೆಗೆದುಕೊಂಡು ನಮಗೆ ಒತ್ತಾಸೆ ಮಾಡಿಕೊಟ್ಟ ಮುದುಕಿಯು ಇಪ್ಪತ್ತು ವರಹಗಳನ್ನು ಕೊಟ್ಟರೆ ನಾವು ಹಿಡಿದ ದಾರಿಯನ್ನು ಇನ್ನಾರಿಗಾದರೂ ಹೇಳದೇ ಇರುವಳೇ ? ನಮ್ಮ ದಾರಿಯನ್ನು ಅವಳು ಅರಿಯದಿರಬೇಕೆಂದು ನಾನು ಹಾಗೆ ಹೇಳಿದನು. ಇನ್ನು ಸ್ವಲ್ಪ ದೂರ ಮುಂದಕ್ಕೆ ಹೋದ ಮೇಲೆ ಬಂಡಿಯನ್ನು ಸರಿಯಾದ ಹಾದಿಯಲ್ಲಿ ಬಿಟ್ಟುಕೊಂಡು ಹೋಗೋಣ" ಎಂದಳು.

## ೬೪
## ನ್ಯಾಯದ ಮಾರ್ಗ

ತರಳೆಯರು ಇಂದ್ರಪ್ರಸ್ಥಕ್ಕೆ ಪ್ರಯಾಣ ಹೊರಟ ಸಮಾಚಾರವನ್ನು ಸದ್ಯಕ್ಕೆ ನಿಲ್ಲಿಸಿ, ಮದುವೆಯಾಗುವುದರಲ್ಲಿ ಇದ್ದು ಪ್ರಾಣ ಉಳಿದರೆ ಸಾಕೆಂದು ಓಡಿಹೋದ ಅನಂತರಾಜುವು ಏನು ಆದನೆಂದು ನೋಡೋಣ. ಅವನು ವಿಶೇಷ ಬುದ್ಧಿವಂತನಾಗಿಯೂ ಜಾಗರೂಕನಾಗಿಯೂ ಇದ್ದುದರಿಂದ ಮಲಯಸಿಂಹನು ಕರ್ಪೂರಕನ ಸಮಾಚಾರವನ್ನು ಎತ್ತಿದ ಒಡನೆಯೇ ಮೆಲ್ಲಮೆಲ್ಲಗೆ ಹಿಂದಕ್ಕೆ ಸರಿದು ನಗಗಳಿಟ್ಟಿದ್ದ ಕೊಠಡಿಗೆ ಹೋಗಿ ಭಾರಿ ಬೆಲೆಯುಳ್ಳ ಹರಳುಂಗುರ ಮುಂತಾದ ಸಣ್ಣ ನಗಗಳನ್ನು ತೆಗೆದುಕೊಂಡು ಕಿಟಕಿಯಿಂದ ಹೊರಗೆ ಇಳಿಯ ಬಿದ್ದು "ಇನ್ನು ಮೇಲೆ ನನ್ನನ್ನು ಹಿಡಿಯುವವರಾರು ?" ಎಂದುಕೊಂಡು ಹೊರಟನು.

ದುರ್ಮತಿಯ ಮನೆಯಿಂದ ಹೊರಟಾಗ ಅವನಿಗೆ ಇಂತಹ ಕಡೆಯೇ ಹೋಗಬೇಕೆಂಬ ಯೋಚನೆಯು ಯಾವುದೂ ಇರಲಿಲ್ಲ. ಸದ್ಯಕ್ಕೆ ಈ ಮನೆಯನ್ನು ಬಿಟ್ಟು

ಎಲ್ಲಿಯಾದರೂ ಹೋದರೆ ಸಾಕೆಂದಿದ್ದನು. ಕುಟಿಲಮಾರ್ಗದಲ್ಲಿ ಹೋಗಬೇಕೆಂಬ ಯೋಚನೆಯಿಲ್ಲದಿದ್ದರೂ ಅವನ ಕಾಲುಗಳು ತಾವಾಗಿಯೇ ಆ ಮಾರ್ಗದಲ್ಲಿ ಎಳೆದುಕೊಂಡು ಹೋದವು. ಈ ರೀತಿಯಾಗಿ ಸುಮಾರು ಒಂದು ಗಂಟೆಯ ಕಾಲ ನಡೆದು ಅವನು ಊರ ಎಲ್ಲೆಯನ್ನು ದಾಟಿ ಕಾಡನ್ನು ಹೊಕ್ಕು ಇಂದ್ರಪ್ರಸ್ಥದ ಹಾದಿಯನ್ನು ಹಿಡಿದನು. ಆ ಹಾದಿಯಲ್ಲಿ ಇದಿರಿಗೆ ಒಂದು ಕುದುರೆಯ ಬಂಡಿಯು ಮೆಲ್ಲಗೆ ಬರುತ್ತಲಿದ್ದಿತು. ಅದನ್ನು ಕಂಡು, 'ಇವನು ಕೇಳುವಷ್ಟು ಬಾಡಿಗೆಯನ್ನು ಕೊಟ್ಟರೆ ನನ್ನನ್ನು ಬೆಳಗಾಗುವುದರಲ್ಲಿ ಎಲ್ಲಿಯಾದರೂ ದೂರದಲ್ಲಿ ಬಿಡುವನು' ಎಂದುಕೊಂಡು ಅನಂತರಾಜುವು ಬಂಡಿಯವನನ್ನು ನೋಡಿ "ಅಪ್ಪಾ, ನಿನ್ನ ಕುದುರೆಯು ದಣಿದುಹೋಗದೆ ಇದ್ದರೆ ಬಂಡಿಯನ್ನು ಬಾಡಿಗೆಗೆ ಹೊಡೆಯುತ್ತೀಯಾ ?" ಎಂದು ಕೇಳಿದನು.

ಅದಕ್ಕೆ ಅವನು "ಸ್ವಾಮೀ, ಇಂದು ನನಗೆ ಬಾಡಿಗೆಯೇ ಸಿಕ್ಕಲಿಲ್ಲ ; ತಾವು ಎಲ್ಲಿಗೆ ಬಿಜಯಮಾಡಬೇಕು ?" ಎಂದನು.

"ಕುದುರೆಯು ವೇಗವಾಗಿ ಹೋಗುತ್ತದೆಯೋ ?"

"ಬೇಕಾದರೆ ನೋಡಿ, ಬುದ್ಧೀ ; ವಾಯುವೇಗದಲ್ಲಿ ಹೋಗುತ್ತದೆ. ತಾವು ಎಲ್ಲಿಗೆ ಹೋಗಬೇಕು ?"

"ಇಂದ್ರಪ್ರಸ್ಥದ ಮಾರ್ಗದಲ್ಲಿ ನಮ್ಮವರು ಕೆಲವರು ಹೋಗುತ್ತಿದ್ದಾರೆ, ಅವರನ್ನು ನಾನು ಸಂಧಿಸಬೇಕು."

"ಅವರು ಹೊರಟು ಎಷ್ಟು ಹೊತ್ತಾಯಿತು ?"

"ಸುಮಾರು ಒಂದು ಗಂಟೆಯಾಗಿರಬಹುದು."

"ಇಷ್ಟೇ ತಾನೇ ? ಹಾಗಾದರೆ ಅವರನ್ನು ಹಿಡಿಯಬಹುದು. ಏನು ಬಾಡಿಗೆ ಕೊಡುತ್ತೀರಿ ?"

"ನೀನು ಕೇಳಿದುದನ್ನು ಕೊಡುತ್ತೇನೆ."

"ಸ್ವಾಮೀ, ಅಲ್ಲಿ ನಿಮ್ಮನ್ನು ಬಿಟ್ಟು ಹಿಂದಿರುಗಿ ಬರುವಾಗ ನನಗೆ ಬಾಡಿಗೆಯು ಸಿಕ್ಕಲಾರದು ; ತಾವು ಎರಡು ವರಹಗಳನ್ನು ಕೊಡುವುದಾದರೆ ಬರುತ್ತೇನೆ."

"ಹಾಗೆಯೇ ಆಗಲಿ, ತಿರುಗಿಸು" ಎಂದು ಅನಂತರಾಜುವು ಬಂಡಿಯಲ್ಲಿ ಕುಳಿತುಕೊಂಡನು. ಕೇಳಿದ ಬಾಡಿಗೆಯು ಸಿಕ್ಕಿತೆಂದು ಸಂತೋಷದಿಂದ ಬಂಡಿಯವನು ವೇಗವಾಗಿ ಹೊಡೆಯುತ್ತಲಿದ್ದರೂ ತನ್ನನ್ನು ಯಾರು ಅಟ್ಟಿಸಿಕೊಂಡು ಬಂದರೋ ಎಂಬ ಭಯದಿಂದ ಅನಂತರಾಜುವು "ಇನ್ನೂ ವೇಗವಾಗಿ ಓಡಿಸು" ಎಂದು ಅಬ್ಬರಿಸುತ್ತಲಿದ್ದನು. ಸುಮಾರು ಒಂದು ಗಂಟೆಯೊಳಗಾಗಿಯೇ ಬಂಡಿಯು ಮುಂದಣ ಮಜಲನ್ನು ಮುಟ್ಟಿತು. ಅಲ್ಲಿ ಇಳಿದು ಅವನು ಸತ್ರದಲ್ಲಿ ತನ್ನವನು ಇದಾರೆಯೋ ಎಂದು ನೋಡಿದಂತೆ ಮಾಡಿ ಬಂಡಿಯವನನ್ನು ಕುರಿತು, "ಅಪ್ಪಾ, ನಮ್ಮವರು ಇಲ್ಲಿಲ್ಲ. ಇನ್ನೂ ಮುಂದೆ ಹೋಗಿರುವಂತೆ ಕಾಣುತ್ತದೆ. ಇಲ್ಲಿಗೆ ನಾಲ್ಕು ಮೈಲಿಗಳ ದೂರದಲ್ಲಿ ಇನ್ನೊಂದು ಸತ್ರವಿದೆ ;

ನೀನು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಬಿಟ್ಟರೆ ಮೇಲೆ ಏನಾದರೂ ಕೊಡುತ್ತೇನೆ" ಎಂದನು. ಅದಕ್ಕೆ ಒಪ್ಪಿ ಬಂಡಿಯವನು ಅನಂತರಾಜುವನ್ನು ಮುಂದಣ ಸತ್ರದಲ್ಲಿ ಬಿಟ್ಟು ಬಾಡಿಗೆಯನ್ನು ತೆಗೆದುಕೊಂಡು "ಈ ದಿನ ನಾನು ನರಿಯ ಮುಖವನ್ನು ನೋಡಿದ್ದೆನು" ಎಂದುಕೊಂಡು ಸಂತೋಷದಿಂದ ಹಾಡುತ್ತ ಹಿಂತಿರುಗಿದನು.

ಬಂಡಿಯು ಹಿಂತಿರುಗಿ ಕಣ್ಣಿಗೆ ಕಾಣದಷ್ಟು ದೂರ ಹೋಗುವವರೆಗೂ ಸತ್ರದ ಬಾಗಿಲಲ್ಲೇ ನಿಂತಿದ್ದು, ಅನಂತರಾಜುವು ಮುಂದಕ್ಕೆ ಹೊರಟನು. 'ಇವನನ್ನು ಇಲ್ಲಿಯೇ ಇಳಿಸಿದೆನೆಂದು ಬಂಡಿಯವನು ತಿಳಿದುಕೊಂಡಿದ್ದರೆ ಸಾಕು ; ನಾನು ಇನ್ನೂ ಮುಂದೆ ಕೆಲವು ಮೈಲಿಗಳು ನಡೆದು ಜನ ಸಂದಣಿಯಿಲ್ಲದ ಯಾವುದಾದರೂ ಒಂದು ಸತ್ರದಲ್ಲಿ ಈ ರಾತ್ರಿ ಮುದುರಿಕೊಂಡಿದ್ದು, ನಾಳೆ ಬೆಳಿಗ್ಗೆ ಕೋಳಿ ಕೂಗುವ ಸಮಯಕ್ಕೆ ಎದ್ದು, ಒಂದು ಬಂಡಿಯನ್ನೋ ಕುದುರೆಯನ್ನೋ ಬಾಡಿಗೆಗೆ ಮಾಡಿಕೊಂಡು ಅಮರರಾಜ್ಯದ ಎಲ್ಲೆಯನ್ನು ಕೂಡಿದಷ್ಟು ಜಾಗ್ರತೆಯಾಗಿ ಬಿಟ್ಟುಹೋಗುತ್ತೇನೆ' ಎಂದು ನಿಶ್ಚಯ ಮಾಡಿಕೊಂಡಿದ್ದನು. ಹಾಗೆಯೇ ಅವನು ಇನ್ನೂ ಆರು ಮೈಲಿಗಳನ್ನು ನಡೆದು ಅಲ್ಲಿದ್ದ ಸತ್ರಕ್ಕೆ ರಾತ್ರಿ ಸುಮಾರು ಒಂದು ಗಂಟೆಯ ವೇಳೆಗೆ ಹೋಗಿ ಯಜಮಾನನ್ನು ಎಬ್ಬಿಸಿ, "ಅಯ್ಯಾ, ನಾನು ಇಲ್ಲಿಗೆ ಸಮೀಪದ ಊರಿನಲ್ಲಿ ಸ್ನೇಹಿತರ ಮನೆಗೆ ಭೋಜನಕ್ಕೆ ಬಂದಿದ್ದು ಊಟವಾದ ಮೇಲೆ ಹಾಗೆಯೇ ಸ್ವಲ್ಪ ದೂರ ಕಾಲಾಡಿಕೊಂಡು ಬರೋಣವೆಂದು ಹೊರಟು ದಾರಿ ತಪ್ಪಿ ಇಲ್ಲಿಗೆ ಬಂದೆನು. ಇಲ್ಲಿ ಮಲಗುವುದಕ್ಕೆ ಅನುಕೂಲ ಮಾಡಿಕೊಟ್ಟು ಮುಂಜಾನೆ ಅಷ್ಟು ಹೊತ್ತಿಗೇ ಒಂದು ಬಂಡಿಯನ್ನೋ ಕುದುರೆಯನ್ನೋ ಬಾಡಿಗೆಗೆ ಮಾಡಿಕೊಟ್ಟರೆ ನೀವು ಕೇಳಿದ ಹಣವನ್ನು ಕೊಡುತ್ತೇನೆ" ಎಂದನು.

ಅನಂತರಾಜುವಿನ ಉಡುಪನ್ನು ಅವನ ಕೈಯಲ್ಲಿದ್ದ ವಜ್ರದುಂಗುರವನ್ನೂ ನೋಡಿ ಸತ್ರದ ಯಜಮಾನನು ಅವನು ಹೇಳಿದುದನ್ನು ನಂಬಿದವನಾಗಿ "ಸ್ವಾಮೀ, ತಾವು ಚಿಂತಿಸಿ ಕೆಲಸವಿಲ್ಲ ; ತಮಗೆ ಬೇಕಾದ ಅನುಕೂಲಗಳನ್ನೆಲ್ಲ ಮಾಡಿಕೊಡುತ್ತೇನೆ" ಎಂದನು.

"ಅಯ್ಯಾ, ನಮ್ಮ ಸ್ನೇಹಿತರು ಕೆಲವರು ಇದೇ ಹಾದಿಯಲ್ಲಿ ಬರುತ್ತಾರೆ. ನಾನು ಅವರನ್ನು ಕಂಡು ಅವರ ಸಂಗಡ ಕೆಲವು ಮಾತುಗಳನ್ನಾಡಬೇಕಾಗಿದೆ ; ಅದಕ್ಕಾಗಿ ಬೀದಿಯ ಬಾಗಿಲ ಹತ್ತಿರವಿರುವ ಕೋಣೆಯನ್ನು ನನಗೆ ಬಿಡುವು ಮಾಡಿಕೊಡಿ."

"ಸ್ವಾಮೀ, ಈ ಸತ್ರದ ಬೀದಿಯ ಬಾಗಿಲ ಬಳಿ ಒಂದೇ ಕೋಣೆಯಿದೆ; ಅದರಲ್ಲಿ ಯಾರೋ ಇಬ್ಬರು ಇಳಿದುಕೊಂಡಿದ್ದಾರೆ. ಅದರ ಮಗ್ಗುಲ ಕೋಣೆಯಲ್ಲಿ ಬೀದಿಯ ಕಡೆಗೆ ಒಂದು ಕಿಟಕಿಯಿದೆ. ಬೇಕಾದರೆ ಅದನ್ನು ಸಿದ್ಧಪಡಿಸಿಕೊಡುತ್ತೇನೆ."

"ಬೇರೆ ಕೋಣೆಯಿಲ್ಲದಿದ್ದರೆ ಮಾಡುವುದೇನು ? ಅದನ್ನೇ ಅಣಿಮಾಡಿಕೊಡಿ" ಎಂದು ಹೇಳಲು, ಯಜಮಾನನು ಆ ಕ್ಷಣವೇ ಕೊಠಡಿಯನ್ನು ಬಿಡುವು ಮಾಡಿಕೊಟ್ಟನು.

ಅನಂತರಾಜುವು ಅದರಲ್ಲಿ ಹಾಕಿದ್ದ ಮಂಚದ ಮೇಲೆ ಕುಳಿತು ಬೆಳಗಾಗುವುದಕ್ಕೆ ಮುಂಚೆಯೇ ಎದ್ದು ಹೊರಡಬೇಕೆಂದು ಯೋಚಿಸಿಕೊಂಡು ಮಲಗಿದನು. ಇಪ್ಪತ್ತು ವಯಸ್ಸಿನ ತರುಣರಿಗೆ ಎಷ್ಟೇ ಭಯ ಸಂಕಟಗಳಿದ್ದರೂ ಮಲಗಿದ ಕೂಡಲೇ ಚೆನ್ನಾಗಿ ನಿದ್ದೆ ಬಾರದೆ ಇರದು. ಸರ್ಕಾರದವರು ಎಲ್ಲಿ ಬಂದು ತನ್ನನ್ನು ಹಿಡಿಯುವರೋ ಎಂದು ಅನಂತರಾಜುವಿಗೆ ಭಯವಿದ್ದರೂ ಮಲಗಿ ಒಡನೆಯೇ ಅವನು ಗೊರಕೆ ಹಾಕತೊಡಗಿದನು.

'ಬೆಳಗಾಗುವುದಕ್ಕೆ ಮುಂಚೆ ಎದ್ದು ಸತ್ರದ ಬಾಡಿಗೆಯನ್ನು ಕೊಟ್ಟು ಬಂಡಿಯಾಗಲಿ ಕುದುರೆಯಾಗಲಿ ಸಿಕ್ಕದಿದ್ದರೆ ಹತ್ತಿರದ ಕಾಡಿನಲ್ಲಿ ಮರ ಕಡಿಯುವ ವೇಷವನ್ನು ಹಾಕಿಕೊಂಡು ನನ್ನ ಮೈಯ ಬಣ್ಣವು ಕಾಣದಿರುವಂತೆ ಕದರ್ಥಕನು ತೋರಿಸಿಕೊಟ್ಟಿದ್ದ ಮರದ ಹಾಲನ್ನು ಮೈಯ್ಯಿಗೆ ಬಳಿದುಕೊಂಡು, ಹಗಲೆಲ್ಲಾ ಪೊದರುಗಳಲ್ಲಿ ಮಲಗಿ, ರಾತ್ರೆ ಪ್ರಯಾಣ ಮಾಡುತ್ತ ಅಮರದೇಶವನ್ನು ಬಿಟ್ಟು ಬೇರೆ ದೇಶಕ್ಕೆ ಹೋಗಿ ನನ್ನಲ್ಲಿರುವ ನಗಗಳನ್ನು ಮಾರಿ ಅದರಿಂದ ಬಂದ ಹಣವನ್ನು ಕೈಯಲ್ಲಿರುವ ಹಣವನ್ನೂ ಬಡ್ಡಿಗೆ ಹಾಕಿಕೊಂಡು ನೆಮ್ಮದಿಯಾಗಿರುತ್ತೇನೆ' ಎಂದು ಅವನು ಮಲಗುವುದಕ್ಕೆ ಮುಂಚೆ ಯೋಚಿಸಿಕೊಂಡನು. ಚೆನ್ನಾಗಿ ಬೆಳಕು ಹರಿದರೂ ಅವನಿಗೆ ಎಚ್ಚರವಾಗಲಿಲ್ಲ. ಸುಮಾರು ಎಂಟು ಗಂಟೆಯ ಸಮಯದಲ್ಲಿ ಅವನು ಎದ್ದು ಬೀದಿಯ ಕಿಟಕಿಗೆ ಹಾಕಿದ್ದ ತೆರೆಯನ್ನು ಎತ್ತಿ ನೋಡಲು ಹೊರಗಡೆ ಒಬ್ಬ ಪೊಲೀಸಿನವನು ನಿಂತಿದ್ದನು. ಪೊಲೀಸಿನವರು ಮನೆಯ ಮುಂದೆ ನಿಂತಿದ್ದರೆ ಎಂಥವರಿಗೂ ಭಯವುಂಟಾಗುತ್ತದೆ. ಹೀಗಿರುವಲ್ಲಿ ಅನಂತರಾಜುವಿಗೆ ಭಯವಾಗುವುದು ಏನು ಆಶ್ಚರ್ಯ ? ಅವನನ್ನು ನೋಡಿದ ಒಡನೆಯೇ ಭಯಪಟ್ಟವನಾಗಿ ಅನಂತರ 'ಅವನೂ ನನ್ನಂತೆ ಒಬ್ಬ ಪ್ರಯಾಣಿಕನಾಗಿ ಇದ್ದರೂ ಇರಬಹುದು' ಎಂದು ಸಮಾಧಾನ ಮಾಡಿಕೊಂಡು, 'ಬಟ್ಟೆಗಳನ್ನು ಹಾಕಿಕೊಂಡು ಇವನು ಹೋಗುವವರೆಗೂ ಇಲ್ಲಿಯೇ ಇದ್ದು ಆಮೇಲೆ ಹೊರಡುತ್ತೇನೆ' ಎಂದು ಯೋಚಿಸಿ, ಸ್ವಲ್ಪ ಹೊತ್ತಿನವರೆಗೆ ಸುಮ್ಮನಿದ್ದು ಮರಳಿ ಕಿಟಕಿಯ ತೆರೆಯನ್ನು ಎತ್ತಿ ನೋಡಿದನು. ಆ ವೇಳೆಗೆ ಬೀದಿಯಲ್ಲಿ ನಾಲ್ಕು ಜನ ಪೊಲೀಸಿನವರು ನಿಂತು ಇದ್ದರು.

ಅವರನ್ನು ನೋಡಿ ಅವನಿಗೆ ಅನುಮಾನ ತಟ್ಟಿ 'ಇವರೆಲ್ಲರೂ ಪ್ರಯಾಣಿಕರು ಬೇರೆ ಅಲ್ಲ. ನನಗಾಗಿಯೇ ಇವರು ಇಲ್ಲಿ ಇದಾರೆ ; ಇವರ ಕೈಗೆ ನಾನು ಸಿಕ್ಕಿದರೆ ನನಗೆ ನಿಜವಾಗಿಯೂ ಶೂಲಾರೋಹಣವಾಗುವುದು' ಎಂದು ಕ್ಷಣಮಾತ್ರ ದಿಗಿಲು ಬಿದ್ದು, ತರುವಾಯ ಮುಂದೆ ಮಾಡತಕ್ಕ ಉಪಾಯವನ್ನು ನಿಶ್ಚಯಿಸಿಕೊಂಡವನಾಗಿ, ಆ ಕೊಠಡಿಯ ಸುತ್ತಲೂ ನೋಡಲು, ಅಲ್ಲಿ ಒಂದು ಮೇಜಿನ ಮೇಲೆ ಕಾಗದ, ಕಡ್ಡಿ, ಮಸಿಯ ಕುಡಿಕೆಗಳು ಇರುವುದನ್ನು ಕಂಡು, ಸತ್ರದ ಯಜಮಾನನಿಗೆ—

"ಅಯ್ಯಾ, ಬಾಡಿಗೆ ಕೊಡಲು ನನ್ನಲ್ಲಿ ಹಣವಿಲ್ಲ ; ಅದಕ್ಕೆ ಬದಲಾಗಿ ಒಂದು ಚಿನ್ನದ ಉರುಟನ್ನು ಇದರ ಜತೆಯಲ್ಲಿ ಇಟ್ಟಿದ್ದೇನೆ. ಇಷ್ಟು ದೊಡ್ಡವನಾಗಿ ನಗದ ಹಣ

ಕಯ್ಯಲ್ಲಿಲ್ಲವೆಂದು ಹೇಳುವುದಕ್ಕೆ ನಾಚಿಕೊಂಡು ಅಷ್ಟು ಹೊತ್ತಿಗೇ ಎದ್ದು ಹೊರಟುಹೋದೆನು" ಎಂದು ಒಂದು ಚೀಟಿಯನ್ನು ಬರೆದು, ಜತೆಯಲ್ಲಿ ಮೇಜಿನ ಮೇಲೆ ತಟ್ಟನೆ ಕಣ್ಣಿಗೆ ಬೀಳುವಂತೆ ಒಂದು ಉರುಟನ್ನೂ ಇಟ್ಟು ಕೊಠಡಿಯ ಬಾಗಿಲನ್ನು ಸದ್ದಿಲ್ಲದೆ ತೆರೆದು ಅಲ್ಲಿದ್ದ ಹೊಗೆಗೂಡಿನಲ್ಲಿ ಹತ್ತಿ ಮಧ್ಯದಲ್ಲಿ ನಿಂತಿದ್ದನು.

ಇತ್ತ ಅನಂತರಾಜುವು ದುರ್ಮತಿಯ ಮನೆಯಲ್ಲಿ ಸಿಕ್ಕದೆ ತಪ್ಪಿಸಿಕೊಂಡು ಓಡಿಹೋದನೆಂದು ಸರಕಾರದವರು ಅವನ ಊರು, ಹೆಸರು, ಕುರುಹುಗಳನ್ನು ಕಾಣಿಸಿ ಎಲ್ಲಾ ಕಡೆಗಳಿಗೂ ತಂತಿಯ ವರ್ತಮಾನವನ್ನು ಕೊಟ್ಟರು. ಆಗ ಎಲ್ಲಾ ದಿಕ್ಕುಗಳಿಂದಲೂ ಪೊಲೀಸಿನವರು ಅವನನ್ನು ಹಿಡಿಯಬೇಕೆಂದು ಹುಡುಕುವುದಕ್ಕೆ ಪ್ರಾರಂಭಿಸಿದರು. ರಾತ್ರಿಯೇ ಮಿಕ್ಕ ಸತ್ರಗಳಲ್ಲೆಲ್ಲ ಹುಡುಕಿ ಕಾಣದೆ ಪೊಲೀಸಿನವರು ಬೆಳಗಾಗುವ ವೇಳೆಗೆ ಈ ಸತ್ರಕ್ಕೆ ಬಂದರು. ಯಾರೋ ಒಬ್ಬನು ಅರ್ಧ ರಾತ್ರಿಯ ಸಮಯದಲ್ಲಿ ಬಂದು ಇಳಿದನೆಂದು ಆ ಯಜಮಾನನಿಂದ ತಿಳಿದು, ಅವನೇ ಕಳ್ಳನಾಗಿರಬೇಕೆಂದು ಯೋಚಿಸಿ ಬೆಳಗಾಗುತ್ತಲೇ ಒಳಗೆ ನುಗ್ಗಿ ಕಳ್ಳನನ್ನು ಹಿಡಿಯಬೇಕೆಂದು ನಿಶ್ಚಯಿಸಿ ಪೊಲೀಸಿನವರು ಸತ್ರದ ಸುತ್ತಲೂ ನಿಂತು ಪಹರೆ ಕೊಡುತ್ತಲಿದ್ದರು.

ಅವನು ಬಲು ಹೊತ್ತು ಹೊರಗೆ ಬಾರದೆ ಇದ್ದುದರಿಂದ ಅವರು ಒಳಹೊಕ್ಕು ಅನಂತರಾಜು ಮಲಗಿದ್ದ ಕೊಠಡಿಯ ಬಾಗಿಲು ತೆರೆದಿರುವುದನ್ನು ಕಂಡು ಇವನು ತಮಗೆ ತಿಳಿಯದಂತೆ ಎಲ್ಲಿಯೋ ಪಲಾಯನ ಮಾಡಿರಬೇಕೆಂದು ಯೋಚಿಸಿ ಅಲ್ಲಿ ಮೇಜಿನ ಮೇಲಿದ್ದ ಉರುಟನ್ನೂ ಲೇಖನವನ್ನೂ ನೋಡಿ ಇದೇನೆಂದು ಚೀಟಿಯನ್ನು ಬಿಚ್ಚಿ ಓದಿನೋಡಿ "ಸರಿ, ಸರಿ; ನಾವು ಯೋಚಿಸಿದ್ದ ಹಾಗೆಯೇ ಅವನು ಪರಾರಿಯಾದನು. ಆದರೂ ಸಾಧ್ಯವಾದಮಟ್ಟಿಗೂ ಎಲ್ಲಾ ಕಡೆಯಲ್ಲಿಯೂ ಚೆನ್ನಾಗಿ ನೋಡದೆ ಬಿಡಬಾರದು" ಎಂದು. ಅವರಲ್ಲಿ ಒಬ್ಬನು ಅತ್ತಿತ್ತ ನೋಡಿ ಹೊಗೆ ಗೂಡನ್ನು ಕಂಡು ಒಣಗಿದ ಹುಲ್ಲುಕಡ್ಡಿಗಳನ್ನು ತರಿಸಿ ಅದರ ಬಾಯಿಗೆ ತುರುಕಿ ಬೆಂಕಿಯನ್ನು ಹೊತ್ತಿಸಿ "ಆ ಕೊಲೆಗಡುಕನು ಇವರಲ್ಲಿ ಅವಿತುಕೊಂಡಿದ್ದರೆ ತಾನೇ ಕೆಳಗೆಬೀಳುತ್ತಾನೆ" ಎಂದನು. ಯಾರೂ ಕೆಳಗೆ ಬೀಳದೆ ಇದ್ದುದನ್ನು ಕಂಡು "ಅವನು ಇಲ್ಲಿಲ್ಲ, ಎಲ್ಲಿಯೋ ಹೊರಟುಹೋಗಿರಬೇಕು ; ಬೇರೆ ಕಡೆ ಹುಡುಕೋಣ, ನಡೆಯಿರಿ" ಎಂದುಕೊಂಡು ಪೋಲೀಸಿನವರು ಹೊರಡುವುದರಲ್ಲಿದ್ದಾಗ, ಮತ್ತೊಬ್ಬನು "ಆ ಗೂಡಿನಲ್ಲಿ ಒಂದು ಸಲ ಇಣಿಕಿನೋಡಿ ಬರುತ್ತೇನೆ" ಎಂದು ನೋಡಿದನು. ಅದರಲ್ಲಿ ಯಾರೂ ಇರಲಿಲ್ಲ.

ಪೊಲೀಸಿನವರು ಈ ರೀತಿ ಮಾಡಬಹುದೆಂದು ಮೊದಲೇ ಊಹಿಸಿ, ಅನಂತರಾಜುವು ಹೊಗೆಗೂಡಿನ ಮೇಲೆ ಹತ್ತಿ ಅಲ್ಲಿಂದ ಪಕ್ಕದ ಕೊಠಡಿಯ ಹೊಗೆಗೂಡಿನೊಳಗೆ ಇಳಿದು ಅದರ ಮಧ್ಯದಲ್ಲಿ ನಿಂತಿದ್ದನು. ಕಳ್ಳನು ಸಿಕ್ಕಲಿಲ್ಲವೆಂದು ಪೊಲೀಸಿನವರು ಹೊರಡುವ ವೇಳೆಗೆ ಸರಿಯಾಗಿ ಅವನು ಕಾಲುಜಾರಿ ಆ ಕೋಣೆಯೊಳಗೆ ದೊಪ್ಪನೆ ಬಿದ್ದನು. ಆ ಕೋಣೆಯಲ್ಲಿ ಮಲಗಿದ್ದ ಇಬ್ಬರು ಹೆಂಗಸರಲ್ಲಿ ಒಬ್ಬಳು ಬೆಚ್ಚಿ ಬೆದರಿ

ಕಿಟ್ಟೆಂದು ಕಿರಿಚಿಕೊಳ್ಳಲು, ಅನಂತರಾಜುವು "ಅಮ್ಮಾ, ರಗಳೆ ಹಚ್ಚಬೇಡಿ, ನಿಮ್ಮ ಧರ್ಮಕ್ಕೆ ಸುಮ್ಮನಿರಿ. ನಾನು ನಿಮ್ಮ ಗೋಜಿಗೆ ಬರುವವನಲ್ಲ ; ನನ್ನನ್ನು ಕಾಪಿಡಿ" ಎಂದು ಬೇಡಿಕೊಂಡನು.

ಮತ್ತೊಬ್ಬಳು ಅವನನ್ನು ಗುರ್ತಿಸಿ, "ಇವನೇ ಕದರ್ಥಕನನ್ನು ಕೊಂದ ಅನಂತರಾಜು" ಎಂದು ಮತ್ತಷ್ಟು ಗಟ್ಟಿಯಾಗಿ ಕಿರಿಚಿಕೊಳ್ಳಲು, ಆ ಧ್ವನಿಯಿಂದ ಅವನು ಅವರಿಬ್ಬರೂ ವಿಲಾಸಿನೀ ಅಮೃತವಲ್ಲಿಯರೆಂದು ತಿಳಿದು "ವಿಲಾಸಿನೀ, ನೀನು ನನ್ನನ್ನು ಮದುವೆಯಾಗುವುದರಲ್ಲಿದ್ದೆ. ರವೆಯಷ್ಟರಲ್ಲಿ ತಪ್ಪಿಹೋಯಿತು. ಈಗ ಕೂಗದೆ ಬಾಯಿ ಮುಚ್ಚಿಕೊಂಡಿದ್ದೆಯಾ ಸರಿ ; ಇಲ್ಲದಿದ್ದರೆ ನೀನು ಇಲ್ಲಿಗೆ ಗಂಡುಡಿಗೆಯಲ್ಲಿ ಬಂದಿರುವ ಸಂಗತಿಯನ್ನು ಎಲ್ಲರಿಗೂ ಹೇಳಿ ಮಾನ ತೆಗೆಯುತ್ತೇನೆ, ಜೋಪಾನ" ಎಂದನು.

ಇನ್ನು ಕೂಗಿಕೊಂಡರೆ ಇವನೆಲ್ಲಿ ರಚ್ಚೆಮಾಡಿ ತಾನು ಗಂಡುವೇಷ ಹಾಕಿಕೊಂಡು ಬಂದಿರುವ ಸಂಗತಿಯು ಈ ಜನರಿಗೆಲ್ಲಾ ತಿಳಿದುಹೋಗಿ ಆಭಾಸವಾಗುವುದೋ ಎಂದು ಶಂಕಿತಳಾಗಿ "ಇನ್ನು ಕೈಮೀರಿಹೋಯಿತು. ನಾನೇನು ಮಾಡಲಿ ? ಹೊರಗಡೆ ಪೊಲೀಸಿನವರು ನಿಂತಿದ್ದಾರೆ. ಸಾಧ್ಯವಾದರೆ ನೀನು ಬಂದ ಕಡೆಯಿಂದಲೇ ಹೊರಟುಹೋಗು" ಎಂದಳು. ಅಷ್ಟು ಹೊತ್ತಿಗೆ ಪೊಲೀಸಿನವರು ಕದದ ಸಂದಿನಲ್ಲಿ ಇಣಿಕಿನೋಡಿ "ಕಳ್ಳನು ಕೊಠಡಿಯ ಒಳಗಿದ್ದಾನೆ" ಎಂದು ಕೂಗಿಕೊಂಡು ಬಲವಾಗಿ ಬಾಗಿಲನ್ನು ಒದೆದು, ಒಡೆದು, ಒಳಗೆ ನುಗ್ಗಿ ಅನಂತರಾಜುವನ್ನು ಹಿಡಿದು ಬಂಧಿಸಿ, ಕಯ್ಯಿಗೆ ಕೋಳವನ್ನು ತೊಡಿಸಿ ಅಮರಪುರವನ್ನು ಕುರಿತು ಪ್ರಯಾಣ ಮಾಡಿದರು. ಪೊಲೀಸಿನವರು ಅನಂತರಾಜುವನ್ನು ಅಮರಪುರಕ್ಕೆ ಕರೆದುಕೊಂಡು ಹೋದ ಮೇಲೆ ವಿಲಾಸಿನಿಯೂ ಅಮೃತವಲ್ಲಿಯೂ ತಮ್ಮ ಹಾದಿಯನ್ನು ಹಿಡಿದುಕೊಂಡು ಮುಂದಕ್ಕೆ ಪ್ರಯಾಣ ಬೆಳಸಿದರು.

ಅತ್ತ ಅಮರಪುರದಲ್ಲಿ ಮೂರ್ಛಿತಳಾಗಿ ಬಿದ್ದಿದ್ದ ಭಾಮಿನಿಯು ಎದ್ದು ತನಗಾದ ಅವಮಾನವನ್ನು ಸಹಿಸಲಾರದೆ ಏನು ಮಾಡುವುದಕ್ಕೂ ತೋರದೆ ಗುಪ್ತವಾಗಿ ದಮನಕನನ್ನು ನೋಡುವುದಕ್ಕೆ ಹೋದಳು. 'ಚತುರೆಯಾದ ಮಗಳು ಮನೆಯಲ್ಲಿಯೇ ಇದ್ದರೆ ನಾನು ಮಾಡುತ್ತಿರುವ ಅಕಾರ್ಯಗಳು ಹೊರಬೀಳುವುವು. ದೇವರ ದಯದಿಂದ ಅವಳು ಬೇಗ ಮದುವೆಯಾಗಿ ಗಂಡನ ಮನೆಗೆ ಹೋದರೆ ನಾನು ನಿರಾತಂಕವಾಗಿ ಇರಬಹುದು' ಎಂದು ಯೋಚಿಸಿ, ಈ ಸ್ವೈರಿಣಿಯು ತನ್ನ ಮಗಳನ್ನು ಮದುವೆಯಾಗೆಂದು ಪ್ರೋತ್ಸಾಹಪಡಿಸಿ ಇನ್ನೇನು ಮದುವೆಯಾಗುವುದು. ಮಗಳು ಹೊರಟುಹೋಗುವಳು ಎಂದು ಸಂತೋಷದಿಂದಿದ್ದಳು. ಮದುವೆ ತಪ್ಪಿಹೋದುದರಿಂದ ದಮನಕನನ್ನು ನೋಡಿ ಅವನ ಆಲೋಚನೆಯನ್ನು ಕೇಳಬೇಕೆಂದು, ಅದಕ್ಕಾಗಿಯೇ ಅವನನ್ನು ಹುಡುಕಿಕೊಂಡು ಹೋಗಿ ಸಂಕೇತಸ್ಥಾನದಲ್ಲಿ ರಾತ್ರಿ ಹನ್ನೆರಡು ಗಂಟೆಯವರೆಗೆ ಕಾದಿದ್ದರೂ ಅವನು ಬಾರದೆ

ಹೋದುದರಿಂದ ಖಿನ್ನಳಾಗಿ, ಭಾಮಿನಿಯು ಅಲ್ಲಿಂದ ಹಿಂತಿರುಗಿ ಮನೆಗೆ ಬಂದು ವಿಲಾಸಿನಿಯ ಕೊಠಡಿಯ ಬಾಗಿಲಲ್ಲಿ ನಿಂತು ಒಳಗೆ ಸದ್ದಿಲ್ಲದೆ ಇರುವುದನ್ನು ಕಂಡು 'ಅಯ್ಯೋ, ಪಾಪ! ಅವಮಾನವನ್ನು ಸಹಿಸಲಾರದೆ ನಿದ್ದೆ ಮಾಡುತ್ತಿದ್ದಾಳೆ. ಯೌವನವೇ ಸುಖಕ್ಕೆ ತೌರುಮನೆ' ಎಂದುಕೊಂಡು ತನ್ನ ಶಯ್ಯಾಗೃಹವನ್ನು ಸೇರಿ ಹಾಸಿಗೆಯ ಮೇಲೆ ಬಿದ್ದುಕೊಂಡು ಕಣ್ಣಿಗೆ ಇನ್ನೂ ನಿದ್ದೆ ಹತ್ತದಿರಲು ಈ ರೀತಿ ಆಲೋಚಿಸಿದಳು.

'ವಿಲಾಸಿನಿಯೇನೋ ಕೆಟ್ಟಳು ; ನಾವೂ ಕೆಟ್ಟೆವು. ಒಟ್ಟು ನಮ್ಮ ಮನೆಗೇ ಅವಮಾನವಾಯಿತು. ಇನ್ನು ಜನಗಳಿಗೆ ಹೇಗೆ ಮುಖವನ್ನು ತೋರಿಸುವುದಕ್ಕೆ ಆದೀತು ? ಆ ಹಾಳು ಅನಂತರಾಜುವು ಏನೇನೋ ಸುಳ್ಳು ಸುದ್ದಿಗಳನ್ನು ಹೇಳಿ ನನ್ನನ್ನೂ ನನ್ನ ಗಂಡನನ್ನೂ ಮರುಳುಮಾಡಿ ನಮಗೆ ಇಲ್ಲದ ಅವಮಾನವನ್ನು ಉಂಟುಮಾಡಿದ. ಒಂದು ವೇಳೆ ಅವನು ನಿಜವಾಗಿ ಪಾತಕಿಯಾಗಿದ್ದರೂ ವಲ್ಲಭದೇವನು ಏಕೆ ಹೀಗೆ ಮಾಡಿದ? ನನ್ನ ಗಂಡನಿಗೂ ತನಗೂ ಇರುವ ದ್ವೇಷಕ್ಕಾಗಿ ಏನಾದರೂ ಹೀಗೆ ಮಾಡಿದನೋ ? ತನಗೂ ನನಗೂ ಇದ್ದ ಹಳೆಯ ಸ್ನೇಹವನ್ನು ಬಹುಶಃ ಅವನು ಮರೆತಿರಲಾರ. ಅವನು ಅನಂತರಾಜು ಓಡಿಹೋಗುವುದಕ್ಕೆ ಅವಕಾಶ ಕೊಟ್ಟರೆ ಈ ಅವಮಾನವು ಇಷ್ಟಕ್ಕೆ ನಿಲ್ಲುವುದು ; ಇಲ್ಲದಿದ್ದರೆ ಮುಂದೆ ಇನ್ನೇನು ಅವಾಂತರಗಳಾಗುವುವೋ ? ಆದುದರಿಂದ ನಾನೇ ನಾಳೆ ಹೋಗಿ ವಲ್ಲಭದೇವನನ್ನು ಕಂಡು ಅನಂತರಾಜು ತಪ್ಪಿಸಿಕೊಂಡು ಹೋಗುವುದಕ್ಕೆ ಅವಕಾಶವುಂಟು ಮಾಡಿಕೊಂಡು ಬರುತ್ತೇನೆ' ಎಂದು ಮನದಲ್ಲಿ ಯೋಚಿಸಿಕೊಂಡು, ಮಾರನೆಯ ದಿನ ಬೆಳಿಗ್ಗೆ ಎದ್ದು ಯಾರಿಗೂ ಹೇಳದೆ ಅವಳು ವಲ್ಲಭದೇವನನ್ನು ನೋಡಬೇಕೆಂದು ಅವನ ಮನೆಗೆ ಹೋದಳು. ಆ ಮನೆಯ ಹತ್ತಿರ ಜನರು ಗುಂಪು ಗುಂಪಾಗಿ ನಿಂತು, ಕೆಲವರು "ಇವನ ಮನೆಯಲ್ಲಿ ಎಷ್ಟು ಸಾವಪ್ಪಾ! ದಿನ ಬೆಳಗಾದರೆ ಯಾರಾದರೂ ಒಬ್ಬರು ಸಾಯುತ್ತಲೇ ಇದ್ದಾರೆ ; ಈ ಹೊತ್ತು ಯಾರ ಸರದಿ ? ಇವನ ಮನೆಯಲ್ಲಿ ಈ ರೀತಿ ಸಾವಾಗುವುದಕ್ಕೆ ಕಾರಣವೇನು ? ಬೇರೆ ಮನೆಯಲ್ಲಿ ಹೀಗೆ ಜನಗಳು ಸಾಯುತ್ತಿದ್ದರೆ ಸರ್ಕಾರದವರು ವಿಚಾರಣೆ ಮಾಡದೆ ಸುಮ್ಮನಿರುತ್ತಿದ್ದರೇ ?" ಎಂದು ಅವರವರಿಗೆ ತೋಚಿದಂತೆ ಆಡಿಕೊಳ್ಳುತ್ತಲಿದ್ದರು. ಈ ಮಾತುಗಳು ಭಾಮಿನಿಯ ಕಿವಿಗೆ ಬೀಳಲು ಅವಳ ಮೈಯು ಕಂಪಿಸಿತು. ಹಿಂತಿರುಗಿ ಮನೆಗೆ ಹೊರಟು ಹೋಗಬೇಕೆಂದಿದ್ದಳು. ಅಷ್ಟರಲ್ಲಿಯೇ ಹಾಗೆ ಹೋದರೆ ತನ್ನ ಕಾರ್ಯವು ಕೆಟ್ಟುಹೋಗುವುದೆಂದು ತಿಳಿದವಳಾಗಿ ಆವರಣದ ಹೆಬ್ಬಾಗಿಲ ಬಳಿಗೆ ಹೋಗಿ ಬಾಗಿಲು ಮುಚ್ಚಿದ್ದುದರಿಂದ "ಬಾಗಿಲು, ಬಾಗಿಲು" ಎಂದು ಎರಡು ಕೈಯಿಂದಲೂ ಕದವನ್ನು ಗುದ್ದಿದಳು.

ಒಳಗಿನಿಂದ ಒಬ್ಬ ಆಳು ಬಂದು "ಯಾರದು ?" ಎಂದು ಕೇಳಿದನು.

"ಎಲಾ, ನೀನು ನನ್ನನ್ನು ಕಾಣೆಯಾ ? 'ಯಾರು' ಎಂದು ಕೇಳುತ್ತೀಯೆ. ಸುಮ್ಮನೆ ಬಾಗಿಲು ತೆಗೆಯೋ" ಎಂದು ಗದ್ದರಿಸಿದಳು.

"ಅಮ್ಮಣ್ಣಿ ನೀವಾರೋ ನನಗೆ ತಿಳಿಯದು."

"ಏನೋ, ನಿನಗೆ ಬುದ್ಧಿ ಸರಿಯಾಗಿದೆಯೋ ಇಲ್ಲವೋ ?"

"ನೀವೆಲ್ಲಿಂದ ಬಿಜಯಮಾಡಿದರವ್ವಾ ?"

"ಎಲಾ, ಧೂರ್ತ ! ನೀನು ಈಗ ನನಗೆ ತೋರಿಸಿದ ಅವಮರ್ಯಾದೆಯನ್ನು ಕುರಿತು ನಿನ್ನ ಯಜಮಾನರಿಗೆ ಹೇಳುತ್ತೇನೆ."

"ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರವ್ವಾ. ನನಗೆ ಯಜಮಾನರೇ ಈ ರೀತಿ ಆಜ್ಞೆ ಮಾಡಿದ್ದಾರೆ. ನಿಮ್ಮ ನಾಮಧೇಯವೇನು ?"

"ಭಾಮಿನೀ."

"ನಿಮಗೆ ಇಲ್ಲಿ ಏನು ಕೆಲಸ ?"

"ನಾನು ನಿಮ್ಮ ಯಜಮಾನರನ್ನು ನೋಡಬೇಕು ?"

"ಅವರನ್ನು ನೊಡಿಯೇ ತೀರಬೇಕೋ ?"

"ಹುಂ."

"ಹಾಗಾದರೆ ತಾವು ಬಂದಿರುವ ಸಮಾಚಾರವನ್ನು ಯಜಮಾನರಿಗೆ ತಿಳಿಸಿ ಅವರ ಅಪ್ಪಣೆಯನ್ನು ಪಡೆದು ಬರುತ್ತೇನೆ" ಎಂದು ಹೇಳಿ ಕಿಂಕರನು ಮನೆಯ ಒಳಗೆ ಹೋಗಿ ಮರಳಿ ಅಲ್ಲಿಂದ ಬಂದು ಹೆಬ್ಬಾಗಿಲನ್ನು ತೆರೆದು ಅವಳನ್ನು ಒಳಗೆ ಕರೆದುಕೊಂಡು ಹೋದನು.

ಅವಳು ಒಳಗೆ ಹೋಗುವುದರೊಳಗಾಗಿ ಕೈಯಾಳು ಬಂದು "ತಾಯಿ, ಇತ್ತಿತ್ತ ಬಿಜಯಮಾಡಿಸಬೇಕು" ಎಂದು ಅವಳನ್ನು ವಲ್ಲಭದೇವನ ಕೊಠಡಿಯಲ್ಲಿ ಬಿಟ್ಟು ಬಾಗಿಲನ್ನು ಮುಚ್ಚಿಕೊಂಡು ಹೊರಗೆ ಹೋದನು.

ಹಿಂದೆ ಒಂದು ಸಲ ವಲ್ಲಭದೇವನೂ ಭಾಮಿನಿಯೂ ಹೀಗೆಯೇ ಅವನ ಕಚೇರಿಯಲ್ಲಿ ಸೇರಿದ್ದಾಗ ಇನ್ನು ಮುಂದೆ ಘೋರತರವಾದ ಸಂಕಟಗಳು ಪ್ರಾಪ್ತವಾಗುವುವು ಎಂದು ಅವನು ಹೇಳಿದ್ದುದು ಅವಳಿಗೆ ಈಗ ನೆನಪಿಗೆ ಬಂದು, ಅವನಿಗುಂಟಾದ ದುಃಖವನ್ನು ಕಣ್ಣಾರೆ ನೊಡಿ ತನ್ನ ದುಃಖವೂ ಗುರುತರವಾದುದೆಂದು ಅರಿತಳು. ಅವಳು ವಲ್ಲಭದೇವನ ಕೊಠಡಿಯನ್ನು ಹೊಕ್ಕಾಗ ಅವನು ಮಹಾದುಃಖದಿಂದ ಬಾಗಿದ್ದ ತಲೆಯನ್ನೆತ್ತಿ,

"ನನ್ನ ಆಳುಗಳ ಚರ್ಯೆಯು ನಿನಗೆ ಆಶ್ಚರ್ಯವಾಗಿ ಕಾಣಬಹುದು ; ಅದಕ್ಕಾಗಿ ಕ್ಷಮಿಸು. ತಮ್ಮ ಮೇಲೆ ಎಲ್ಲಿ ಅನುಮಾನವುಂಟಾಗುವುದೋ ಎಂದು ಅವರು ಮನೆಗೆ ಬರುವ ಎಲ್ಲರನ್ನೂ ಅನುಮಾನದಿಂದ ಕಾಣುತ್ತಾರೆ."

"ನೀವೂ ದುಃಖಸಮುದ್ರದಲ್ಲಿ ಮುಳುಗಿದ್ದೀರಾ ?"

"ಅಹುದು."

"ಹಾಗಾದರೆ ನನ್ನ ಸಂಕಟದಲ್ಲಿ ಬಹುಶಃ ತಮಗೆ ಕರುಣೆಯುಂಟಾಗದಿರದು."

"ಅದಕ್ಕೆ ಅಡ್ಡಿಯೇನು ?"

"ನಾನು ಇಲ್ಲಿಗೆ ಬಂದ ಕಾರ್ಯವು ತಮಗೆ ಗೊತ್ತಿರಬಹುದು."

"ಬಹುಶಃ ನಿನ್ನ ಮನೆಯಲ್ಲಿ ನಡೆದ ಸಂಗತಿಯ ವಿಷಯವಾಗಿ ಮಾತಾಡಲಿಕ್ಕೆ ಬಂದಿರುವಂತೆ ಕಾಣುತ್ತದೆ."

"ನಮ್ಮಿಬ್ಬರಿಗೂ ಎಂಥ ಕಷ್ಟ ಬಂದಿತಪ್ಪ!"

"ನನಗೆ ಬಂದ ಕಷ್ಟಕ್ಕೂ ನಿನ್ನ ಕಷ್ಟಕ್ಕೂ ತುಂಬ ತಾರತಮ್ಯವಿದೆ. ನಿನ್ನ ಮಗಳಿಗೆ ಈ ಹೊತ್ತು ಮದುವೆಯಾಗದಿದ್ದರೆ ನಾಳೆಯಾದರೂ ಆದೀತು ; ಸತ್ತವರು ಎಂದಾದರೂ ಬದುಕಿ ಬಂದಾರೇ ?"

"ಆ ವಂಚಕ ಅನಂತರಾಜುವಿನ ವಿಷಯದಲ್ಲಿ ಏನು ಮಾಡಬೇಕೆಂದಿದ್ದೀರಿ ?"

"ಅವನು ವಂಚಕನೇ ! ಪಾಪಿ, ಚಂಡಾಲ."

"ಅವನನ್ನು ಹಿಡಿದು ವಿಚಾರಣೆ ಮಾಡಿದರೆ ನಮಗೆ ಬಹಳ ಅವಮಾನವಾಗುತ್ತದೆ. ಆದುದರಿಂದ ಅವನು ಹೇಗಾದರೂ ಹೋಗಲಿ, ಬಿಟ್ಟುಬಿಡಿ."

"ಭಾಮಿನೀ, ಮೊದಲೇ ಹಾಗೆ ಮಾಡಬೇಕಾಗಿದ್ದಿತು. ನೆನ್ನೆಯೇ ಎಲ್ಲಾ ಕಡೆಗಳಿಗೂ ತಂತಿ ವರ್ತಮಾನ ಕೊಟ್ಟುಬಿಟ್ಟೆ. ನೀನು ಹೇಳುವಂತೆ ಈಗ ಏನು ಮಾಡುವುದಕ್ಕೂ ಆಗುವುದಿಲ್ಲ; ಕೈ ಮಿಂಚಿಹೋಯಿತು."

"ಒಂದು ವೇಳೆ ಅವನನ್ನು ಹಿಡಿದರೂ, ಎಷ್ಟೋ ಜನ ಸೆರೆಯಿಂದ ತಪ್ಪಿಸಿಕೊಂಡು ಹೋಗುವಂತೆ ಅವನೂ ಏಕೆ ಓಡಿಹೋಗಬಾರದು ?"

ಆ ಮಾತನ್ನು ಕೇಳಿ ವಲ್ಲಭದೇವನು ತಲೆಯನ್ನು ಅಲುಗಿಸುತ್ತ "ಅದು ಹೇಗೆ ಆದೀತು ?" ಎಂದನು.

"ಅದೂ ಆಗದಿದ್ದರೆ ಕೊನೆಯ ಪಕ್ಷ ನನ್ನ ಮಗಳ ಮದುವೆ ನಡೆಯುವವರೆಗಾದರೂ ಅವನನ್ನು ಎಲ್ಲಿಯಾದರೂ ದೂರದಲ್ಲಿಟ್ಟಿರಿ; ಬೇಕಾದರೆ ಆಮೇಲೆ ಅವನ ವಿಚಾರಣೆ ನಡೆಯಲಿ."

"ಅದೂ ಆಗಲಾರದು."

"ನಾನು ಹೇಳಿದರೂ ?"

"ನೀನು ಹೇಳಿದರೂ ಇಲ್ಲ, ಯಾರು ಹೇಳಿದರೂ ಇಲ್ಲ"

ಎಂದು ವಲ್ಲಭದೇವನು ಹೇಳಲು, ಭಾಮಿನಿಯು "ಹಾಗೋ ? ಹಾಗಾದರೆ ಸರಿ" ಎಂದಳು.

ಅದನ್ನು ನೋಡಿ ವಲ್ಲಭದೇವನು "ನಿನ್ನ ಮನೆಯಲ್ಲಿ ನಡೆದುದಕ್ಕೆಲ್ಲಾ ನೀನು ಹೀಗೆಯೇ ಮಾಡಿದೆಯೋ ಎಂದು ನನ್ನನ್ನು ನೀನು ಕೇಳುತ್ತೀಯೋ ? ಆ ವಿಷಯವನ್ನು

ಹೇಳುತ್ತೇನೆ, ಕೇಳು. ಇಲ್ಲಿ ನಡೆದ ಕೃತ್ಯಗಳಿಗೆ ಅಪರಾಧಿಯು ಇಂಥವರೆಂದು ಗೊತ್ತಾಗಿಲ್ಲ. ಸಿಕ್ಕಿದವರನ್ನು ಶಿಕ್ಷಿಸಿದರೆ ಇಲ್ಲದ ಪಾಪವು ತಲೆಗೆ ಕಟ್ಟುವುದು. ಇಗೋ, ನಿನ್ನ ಮುಂದೆ ಪ್ರಮಾಣವಾಗಿ ಹೇಳುತ್ತೇನೆ, ಕೇಳು. ಅಪರಾಧಿಯು ಇಂಥವರೆಂದು ಗೊತ್ತಾದ ಕೂಡಲೇ ಅವರನ್ನು ಶಿಕ್ಷೆಗೆ ಗುರಿಮಾಡದೆ ಇರೆನು. ನನ್ನ ಮನೆಯವರ ವಿಷಯದಲ್ಲಿಯೇ ನಾನು ಹೀಗೆ ಇರುವಾಗ ಆ ಚಂಡಾಲನ ವಿಷಯದಲ್ಲಿ ಹೇಗಿರಬೇಕು ? ನೀನೇ ಹೇಳು."

"ಆ ಚಂಡಾಲನಾರು ?"

"ನನಗೇನು ಗೊತ್ತು ?"

"ಅವನು ಯಾರಾದರೂ ಆಗಲಿ; ನನಗಾಗಿ ಅವನ ವಿಚಾರಣೆಯನ್ನು ತಡಮಾಡಬೇಕು" ಎಂದು ಹೇಳಿ ಭಾಮಿನಿಯು ಒಯ್ಯಾರದಿಂದಲೂ ಕಡೆಗಣ್ಣ ಬೆಡಗಿಂದಲೂ ವಲ್ಲಭದೇವನ ಮನಸ್ಸನ್ನು ಅಪಹರಿಸತೊಡಗಿದಳು. ಅದನ್ನು ಕಂಡು ವಲ್ಲಭದೇವನು,

"ಹಿಂದೆಯೇನೋ ನಾನು ನಿನ್ನ ಹಾವಭಾವಗಳಿಗೆ ಮರುಳಾಗಿ ಹೋಗಿ ಸಲ್ಲದ ಕೆಲಸಗಳನ್ನೆಲ್ಲಾ—ಮಾಡಿದ್ದೇನೆ. ನಿನ್ನ ತಳುಕುಗಳಿಂದ ಈಗ ನನ್ನ ಮನಸ್ಸು ಕರಗಿಹೋಗುವುದೆಂದು ತಿಳಿಯಬೇಡ. ಅವನು ಸಿಕ್ಕದಿದ್ದರೆ ಕಾಣೆ ; ಸಿಕ್ಕಿದರೆ"—ಎಂದು ವಲ್ಲಭದೇವನು ಹೇಳುತ್ತಿದ್ದ ಹಾಗೆಯೇ ಒಬ್ಬ ಆಳು ಒಳಕ್ಕೆ ಬಂದು ತಂತಿಯ ಕಾಗದವನ್ನು ಕೈಯಲ್ಲಿ ಕೊಟ್ಟನು.

ವಲ್ಲಭದೇವನು ಅದನ್ನು ಒಡೆದು ಓದಿ ನೋಡಿಕೊಂಡು ಭಾಮಿನಿಯನ್ನು ಕುರಿತು "ಇಗೋ ನೋಡಿದೆಯಾ ? ಅವನು ಸಿಕ್ಕಿದನೆಂದು ಸುದ್ದಿ ಬಂದಿದೆ" ಎಂದು ಹೇಳುತ್ತಲೇ ಅವಳು ಹತಾಶಳಾಗಿ ಯಾವ ಮಾತನ್ನೂ ಆಡದೆ ಮನೆಗೆ ಹೊರಟಳು. ಅವಳು ಅತ್ತ ಹೋಗುತ್ತಲೇ ವಲ್ಲಭದೇವನು "ಈ ಸಲದ ವಿಚಾರಣೆಯೇ ವಿಚಾರಣೆ. ಹಿಂದೆ ಮೂರು ದರೋಡೆಗಳು, ಒಂದು ಕಳ್ಳಪತ್ರ, ನಾಲ್ಕು ಕಳವುಗಳು ಮಾತ್ರ ವಿಚಾರಣೆಗಾಗಿ ಇದ್ದುವು ; ಕೊಲೆಯೊಂದು ಇರಲಿಲ್ಲ. ಈಗ ಅದೂ ದೊರಕಿತು. ಖ್ಯಾತಿ ಸಂಪಾದಿಸಬೇಕಾಗಿದ್ದರೆ ಇದೀಗ ಒಳ್ಳೆಯ ಸಮಯ" ಎಂದು ಯೋಚಿಸಿಕೊಂಡು ತುಂಬ ಸಂತೋಷವುಳ್ಳವನಾಗಿದ್ದನು.

X೧೨೩

# ೬೫
# ಭಯದರ್ಶನ

ವಿಮಲೆಗೆ ಪ್ರಾಣಭಯವಿಲ್ಲವೆಂದು ಅಶ್ವಿನೀಕುಮಾರನು ಹೇಳಿದ್ದನು. ಆದರೂ ಅವಳಿಗೆ ಇನ್ನೂ ಗುಣವಾಗಿರಲಿಲ್ಲ. ಅವಳು ಆಯಾಸದಿಂದ ತಗ್ಗಿ ಹಾಸಿಗೆಯನ್ನು ಬಿಟ್ಟು ಏಳುತ್ತಲೇ ಇರಲಿಲ್ಲ. ನಾಗಮಣಿಯು ಅಡಿಗಡಿಗೆ ಅವಳ ಕೊಠಡಿಗೆ ಬಂದು ಹತ್ತಿರ ಕುಳಿತು ಮಾತುಗಳನ್ನಾಡುತ್ತ ಹೋಗುತ್ತಿದ್ದಳು. ವಿಲಾಸಿನಿಗೆ ಅವಮಾನವಾಯಿತೆಂದೂ, ಅವಳು ಅಪ್ಪನ ಮನೆಯನ್ನು ಬಿಟ್ಟು ಓಡಿಹೋದಳೆಂದೂ ವಿಮಲೆಗೆ ನಾಗಮಣಿಯು ಹೇಳಿದ್ದಳು. ನಿಶ್ಶಕ್ತಿಯಿಂದ ಅವೆಲ್ಲವೂ ಅವಳ ಮನಸ್ಸಿಗೆ ತಿಳಿದಂತೆಯೂ ತಿಳಿಯದಂತೆಯೂ ಇದ್ದುವು.

ವಿಮಲೆಗೆ ಮೈಯು ಸರಿಯಾಗಿ ಇಲ್ಲದೆ ಹೋದುದರಿಂದ ದೀನನಾಥನು ಪ್ರತಿ ನಿತ್ಯವೂ ಉದಯದಿಂದ ಸಾಯಂಕಾಲದವರೆಗೂ ಮೊಮ್ಮಗಳ ಹಾಸಿಗೆಯ ಪಕ್ಕದಲ್ಲಿ ತನ್ನ ಕುರ್ಚಿಯನ್ನು ಎಳೆಸಿಕೊಂಡು ರಾತ್ರಿ ಅವಳು ಮಲಗುವವರೆಗೂ ಅಲ್ಲಿಯೇ ಇದ್ದು, ಬಳಿಕ ಕೊಠಡಿಗೆ ಬೀಗ ಹಾಕಿಸಿ ಬೀಗದ ಕೈಯ್ಯನ್ನು ವಲ್ಲಭದೇವನ ಕೈಯಲ್ಲಿ ಕೊಡಿಸಿ ತನ್ನ ಕೊಠಡಿಗೆ ಹೋಗಿ ಮಲಗುತ್ತಿದ್ದನು. ವಿಮಲೆಯ ದಾಸಿಯು ಕೊಠಡಿಯ ಬಾಗಿಲಲ್ಲಿಯೇ ಮಲಗುತ್ತಿದ್ದಳು. ಈ ಏರ್ಪಾಟಿನಿಂದ ರಾತ್ರಿಯ ವೇಳೆಯಲ್ಲಿ ವಿಮಲೆಯ ಕೊಠಡಿಗೆ ನಾಗಮಣಿಯ ಕೊಠಡಿಯಿಂದಲ್ಲದೆ ಯಾರೂ ಹೋಗುವುದಕ್ಕೆ ಆಗುತ್ತಿರಲಿಲ್ಲ.

ಜಯವೀರನು ಪ್ರತಿ ದಿನವೂ ದೀನನಾಥನ ಮೂಲಕ ವಿಮಲೆಯ ದೇಹಸ್ಥಿತಿಯನ್ನು ವಿಚಾರಿಸಿಕೊಂಡು ಬರುತ್ತಲಿದ್ದನು. ರೋಗವು ದಿನೇ ದಿನೇ ಸ್ವಲ್ಪವಾಗಿ ಗುಣಮುಖಕ್ಕೆ ಬರುತ್ತ ಇದ್ದುದರಿಂದಲೂ, ಮಲಯಸಿಂಹನ ಸಹಾಯವನ್ನು ಬೇಡಿದಾಗ ಅವನು ಇದುವರೆಗೆ ಸಾಯದೆ ಇದ್ದರೆ ಅವಳ ಪ್ರಾಣಕ್ಕೆ ಭಯವಿಲ್ಲವೆಂದು ಹೇಳಿದ್ದುದರಿಂದಲೂ, ಅವನು ಧೈರ್ಯವಾಗಿದ್ದನು.

ವಿಮಲೆಗೆ ಪ್ರತಿ ನಿತ್ಯವೂ ಅರ್ಧ ರಾತ್ರಿಯ ವೇಳೆಯಲ್ಲಿ ಮಲತಾಯಿಯು ಹಾಸಿಗೆಯ ಹತ್ತಿರ ನಿಂತು ದ್ವೇಷಾಸೂಯೆಗಳಿಂದ ತನ್ನನ್ನು ನೋಡುತ್ತಿರುವಂತೆಯೂ, ಅದರಿಂದ ತನಗಾದ ಭೀತಿಯನ್ನು ಜಯವೀರನು ನಿವರ್ತಿಸುತ್ತಿರುವಂತೆಯೂ ತೋರುತ್ತಿದ್ದಿತು. ಅವಳಿಗೆ ಪ್ರತಿ ರಾತ್ರಿಯೂ ಜ್ವರ ಬಂದು ಸರಿಯಾಗಿ ನಿದ್ದೆ ಬಾರದೆ ಇದ್ದುದರಿಂದ ಅವಳು ಇದೆಲ್ಲಾ ಸ್ವಪ್ನಾವಸ್ಥೆಯೆಂದು ತಿಳಿದುಕೊಂಡಿದ್ದಳು.

ಹೀಗಿರುವಲ್ಲಿ ಒಂದಾನೊಂದು ರಾತ್ರಿ ವಿಮಲೆಯ ಕೊಠಡಿಯಲ್ಲಿ ಒಂದು ಅದ್ಭುತವಾದ ಕೆಲಸವು ನಡೆಯಿತು. ಅಂದು ಅವಳಿಗೆ ಜ್ವರವು ಬರಲಿಲ್ಲ. ದಾಸಿಯು ಕೊಠಡಿಗೆ ಬೀಗ ಹಾಕಿ ಬೀಗದ ಕೈಯನ್ನು ವಲ್ಲಭದೇವನಿಗೆ ಕೊಟ್ಟು ಎಂದಿನಂತೆ ಬಾಗಿಲಲ್ಲಿ ಮಲಗಿಕೊಂಡಳು. ಸುಮಾರು ಹನ್ನೊಂದು ಗಂಟೆಯ ಮೇಲೆ, ವಿಮಲೆಗೆ ತಾನು ಮಲಗಿದ್ದ ಕೊಠಡಿಯ

ಪಕ್ಕದಲ್ಲಿ ಓದಿ ಬರೆಯುತ್ತಲಿದ್ದ ಸಣ್ಣ ಕೊಠಡಿಯ ಬಾಗಿಲನ್ನು ಯಾರೋ ಸದ್ದಿಲ್ಲದೆ ತೆರೆದಂತೆ ತೋರಿತು. ಮತ್ತೆ ಯಾವಾಗಲಾದರೂ ಹೀಗೆ ಸದ್ದು ಆಗಿದ್ದರೆ ಅವಳು ಬೆದರಿ ಕಿರಿಚಿಕೊಳ್ಳುತ್ತಲಿದ್ದಳು. ಅಗಣ ಸ್ಥಿತಿಯಲ್ಲಿ ಅವಳು ಇದೇನೋ ಕನಸು ಇರಬಹುದು ಎಂದುಕೊಂಡು, ಆ ಕೊಠಡಿಯ ಬಾಗಿಲನ್ನೇ ನೋಡುತ್ತಿದ್ದಳು. ಒಳಗಿನಿಂದ ಒಂದು ವ್ಯಕ್ತಿಯು ಹೊರಟಿತು. ಬಹುಶಃ ತಾನು ನಿತ್ಯವೂ ಸ್ವಪ್ನದಲ್ಲಿ ಕಾಣುತ್ತಿದ್ದ ಜಯವೀರನಿರಬಹುದೆಂದುಕೊಂಡು ವಿಮಲೆಯು ಸುಮ್ಮನಿದ್ದಳು. ದೀಪವು ಸಣ್ಣಾಗಿದ್ದುದರಿಂದಲೂ ಮುಖವು ಸರಿಯಾಗಿ ಕಾಣದೆ ಇದ್ದುದರಿಂದಲೂ, ಅವಳಿಗೆ ಬಂದವನು ಇಂಥವನೆಂಬ ನೆಪ್ಪಾಗಲಿಲ್ಲ. ಕ್ರಮೇಣ ಆ ವ್ಯಕ್ತಿಯು ತನ್ನ ಹಾಸಿಗೆಯ ಮಗ್ಗುಲಿಗೆ ಬಂದು ಕೆಲವು ಹೊತ್ತು ನಿಂತು ನೋಡುತ್ತಿದ್ದಿತು. ಅವಳಿಗೆ ಅದರ ಮುಖವು ಸ್ವಲ್ಪ ಮಂಕಾಗಿ ಕಾಣಿಸಿತು. ಆಗವಳು "ಇವನು ಜಯವೀರನಲ್ಲ ; ನನಗೆ ನಿದ್ರೆಯೋ ಭ್ರಮೆಯೋ ? ಹೇಗಾದರೂ ಆಗಲಿ, ಔಷಧಿಯನ್ನು ಕುಡಿದು ಮಲಗುತ್ತೇನೆ' ಎಂದುಕೊಂಡು ಬಟ್ಟಲಿಗೆ ಕೈಚಾಚಿದಳು, ತಟ್ಟನೆ ಆ ವ್ಯಕ್ತಿಯು ಹತ್ತಿರ ಬಂದು "ತಾಳು, ತಾಳು" ಎಂದು ಕೈಯ್ಯಲ್ಲಾಡಿಸಿತು.

'ಇದೇನಿದು ! ನಿತ್ಯವೂ ಕಾಣುತ್ತಿದ್ದ ವ್ಯಕ್ತಿಗಳು ಈ ರೀತಿ ಮಾಡುತ್ತಿರಲಿಲ್ಲ. ನನಗೆ ಪ್ರಜ್ಞೆಯು ಸರಿಯಾಗಿದೆಯೋ, ಇಲ್ಲವೋ' ಎಂದುಕೊಂಡು ತನ್ನ ನಾಡಿಯನ್ನು ಹಿಡಿದು ನೋಡಿ ಇದಿರಿಗೆ ನಿಂತಿದ್ದ ವ್ಯಕ್ತಿಯನ್ನು ಚೆನ್ನಾಗಿ ದೃಷ್ಟಿಸಿದಳು. ಅದು ಅತಿ ಸೌಮ್ಯದಿಂದ "ನಿನ್ನ ಜೀವವನ್ನು ಉಳಿಸುವುದಕ್ಕಾಗಿ ನಾನು ಇಲ್ಲಿಗೆ ಬಂದಿರುತ್ತೇನೆ ; ನೀನು ಹೆದರಬೇಡ" ಎಂದು ಸೂಚಿಸಿ, ಬಟ್ಟಲ ಔಷಧಿಯಲ್ಲಿ ಒಂದು ತೊಟ್ಟನ್ನು ತನ್ನ ಬಾಯಿಗೆ ಬಿಟ್ಟುಕೊಂಡು "ಈಗ ಇದನ್ನು ನೀನು ಕುಡಿ" ಎಂದು ಹೇಳಿತು. ಆಗ ವಿಮಲೆಗೆ ಆ ವ್ಯಕ್ತಿಯು ರಾಜಾ ಮಲಯಸಿಂಹನಿರಬಹುದೆಂದು ತೋರಿ "ಇವನು ಇಲ್ಲಿಗೆ ಹೇಗೆ ಬಂದ, ಇಷ್ಟು ಹೊತ್ತಿನಲ್ಲಿ ಏಕೆ ಬಂದ?'ಎಂದು ಆಶ್ಚರ್ಯವೂ ಭಯವೂ ಒಮ್ಮೆಯೇ ಉಂಟಾಯಿತು. ಅದನ್ನು ಕಂಡು ರಾಜನು "ಅಮ್ಮಾ, ವಿಮಲೆ ! ಭಯಪಡಬೇಡ. ನಾನು ನಿನ್ನ ತಂದೆಯಂತೆ" ಎಂದನು.

ಆ ಮಾತುಗಳನ್ನು ಕೇಳಿ ಯಾವ ಮಾತನ್ನಾಡಲೂ ತೋರದೆ ವಿಮಲೆಯು "ಹಾಗಿದ್ದರೆ ನೀವು ಈ ವೇಳೆಯಲ್ಲಿ ಇಲ್ಲಿಗೆ ಏಕೆ ಬಂದಿರಿ ?' ಎಂದು ಕೇಳುವಳೋ ಎಂಬಂತೆ ರಾಜನನ್ನು ನೋಡುತ್ತಿರಲು, ಅವಳ ಇಂಗಿತವನ್ನರಿತು ಮಲಯಸಿಂಹನು "ಅಮ್ಮಾ ವಿಮಲೆ, ಯಾವ ವೇಳೆಯಲ್ಲಿ ಯಾರು ಬಂದು ನಿನ್ನ ಔಷಧಿಗೆ ವಿಷವನ್ನು ಬೆರೆಸುತ್ತಾರೆಯೋ ಎಂಬ ದಿಗಿಲಿನಿಂದ ನಾನು ಜಯವೀರನಿಗಾಗಿ ನಾಲ್ಕು ರಾತ್ರಿಗಳಿಂದಲೂ ನಿದ್ದೆಯಿಲ್ಲದೆ ನಿನ್ನನ್ನು ಎಚ್ಚರಿಕೆಯಿಂದ ನೋಡಿಕೊಂಡಿದ್ದೇನೆ, ತಿಳಿಯಿತೇ ?" ಎಂದನು. ಜಯವೀರನ ಹೆಸರನ್ನು ಕೇಳುತ್ತಲೆ ಅವಳು ಸ್ವಲ್ಪ ಲಜ್ಜೆಪಟ್ಟು ನಿರಾತಂಕಳಾದಳು.

"ಹಾಗಾದರೆ ಜಯವೀರನು ನಿಮಗೆ ಎಲ್ಲಾ ಸಮಾಚಾರವನ್ನೂ ಹೇಳಿರಬಹುದು."

"ನೀನು ಅವನ ಪ್ರಾಣಪ್ರಿಯೆಯಂತೆ ; ನಿನ್ನನ್ನು ಬದುಕಿಸಿಕೊಡಬೇಕೆಂದು ಅವನು ಕೇಳಿಕೊಂಡನು. ಹಾಗೆಯೇ ಆಗಲಿ, ಅವಳು ಸಾಯದಂತೆ ನಾನು ನೋಡಿಕೊಳ್ಳುತ್ತೇನೆಂದು ಅವನಿಗೆ ಮಾತುಕೊಟ್ಟು, ನಿನ್ನನ್ನು ನೋಡಿಕೊಳ್ಳುತ್ತಿದ್ದೇನೆ."

"ನೀವೇನು ವೈದ್ಯರೋ ?"

"ಈ ಸಮಯದಲ್ಲಿ ನನಗಿಂತ ಉತ್ತಮವಾದ ವೈದ್ಯನು ಎಲ್ಲಿಯೂ ಸಿಕ್ಕನು."

"ನನ್ನನ್ನು ಕಾಯುತ್ತಿದ್ದೆನೆಂದು ಹೇಳಿದಿರಲ್ಲ, ನೀವು ಎಲ್ಲಿದ್ದುಕೊಂಡು ಕಾಯುತ್ತಲಿದ್ದಿರಿ ?" ಎಂದು ವಿಮಲೆಯು ಕೇಳಲು, ರಾಜನು ಆ ಸಣ್ಣ ಕೊಠಡಿಯನ್ನು ತೋರಿಸಿ "ನಿನ್ನನ್ನು ನೋಡಿಕೊಳ್ಳಬೇಕೆಂದೇ ಪಕ್ಕದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿಂದ ಈ ಕೊಠಡಿಗೆ ಒಂದು ಬಾಗಿಲನ್ನು ಇಡಿಸಿ ನಿತ್ಯವೂ ರಾತ್ರಿ ಬಂದು ಕಾಯುತ್ತಲಿದ್ದೇನೆ" ಎಂದನು. ಅದನ್ನು ಕೇಳಿ ವಿಮಲೆಯು ಸ್ವಭಾವವಾಗಿ ಕೋಪಗೊಂಡು "ನೀವು ಹೀಗೆ ಮಾಡಿದುದು ಸರಿಯಲ್ಲ ; ನನಗೆ ಸಹಾಯ ಮಾಡಬೇಕೆಂದು ಮಾಡಿದ ನಿಮ್ಮ ಕೆಲಸದಿಂದ ನನ್ನ ನಿಷ್ಕಳಂಕವಾದ ಹೆಸರಿಗೆ ಕುಂದುಂಟಾದೀತು" ಎಂದಳು. ಆ ಮಾತನ್ನು ಕೇಳಿ ಮಲಯಸಿಂಹನು "ಅಮ್ಮಾ ವಿಮಲೆ, ಜಯವೀರನನ್ನು ನನ್ನ ಮಗನಂತೆ ಭಾವಿಸಿದ್ದೇನೆ. ಅವನ ಪ್ರಾಣಪದಕವೆನಿಸಿದ ನಿನ್ನನ್ನು ನನ್ನ ಮಗಳೆಂದೇ ಭಾವಿಸಿ ನಿನ್ನ ಜೀವವುಳಿಯಲಿಕ್ಕೆ ಬೇಕಾದ ಕಾರ್ಯಗಳನ್ನು ಮಾಡಿದ್ದೇನೆ ; ಇದರಲ್ಲಿ ತಪ್ಪೇನು ? ಇಲ್ಲಿಗೆ ಬರತಕ್ಕವರಾರು ? ಏನು ಮಾಡುತ್ತಾರೆ ? ನಿನಗೆ ಕೊಡುವ ಔಷಧಿಯೂ ಅನುಪಾನವೂ ತಕ್ಕುದೇ ಅಲ್ಲವೇ ಎಂಬುದನ್ನು ಮೊದಲು ಪರೀಕ್ಷೆ ಮಾಡಿ, ವಿಷ ಬೆರೆಸಿದ್ದರೆ ಅದನ್ನು ಚೆಲ್ಲಿ ಸರಿಯಾದುದನ್ನು ನಿಲ್ಲಿಸಿ, ನಿನ್ನನ್ನು ಕೊಲ್ಲುವುದಕ್ಕೆ ಮಾಡುತ್ತಿದ್ದ ಒಂದೊಂದು ಪ್ರಯತ್ನವನ್ನೂ ಭಂಗಪಡಿಸುತ್ತಿದ್ದೆ" ಎಂದನು.

"ಆದರೂ ಈ ವೇಳೆಯಲ್ಲಿ ಹೆಂಗಸರಿರುವ ಕೊಠಡಿಗೆ ಗಂಡಸು ಬರುವುದು ಸರಿಯೇ ?"

"ನಾನು ಹಾಗೆ ಬಾರದೆ ಇದ್ದರೆ ವಿಷ ಬೆರೆತ ಮದ್ದನ್ನು ಕುಡಿದು ಆಗಲೇ ನೀನು ಸತ್ತುಹೋಗುತ್ತಲಿದ್ದೆ ; ಜಯವೀರನೂ ನಷ್ಟವಾಗಿ ಹೋಗುತ್ತಿದ್ದನು."

"ವಿಷ, ಸಾವು ಎಂದು ಎರಡು ಮೂರು ತಡವೆ ಹೇಳಿದಿರಿ. ಹಾಗೆಂದರೇನು ?"

"ಅಮ್ಮಾ, ಮೆಲ್ಲಗೆ ಮಾತಾಡು ; ವಿಷ, ಸಾವು, ಎಂದು ನಾನು ಹೇಳಿದುದು ನಿಜ; ಅದು ಮುಂದೆ ನಿನಗೆ ಗೊತ್ತಾಗುತ್ತದೆ" ಎಂದು ಹೇಳಿ ಬಟ್ಟಲಲ್ಲಿದ್ದ ಔಷಧಿಗೆ ತಾನು ತಂದಿದ್ದ ಧೃತಿಯಲ್ಲಿ ಒಂದೆರಡು ತೊಟ್ಟುಗಳನ್ನು ಬಿಟ್ಟು ಈಗ ಇದನ್ನು ಕುಡಿ, ಎಂದನು. ಬಟ್ಟಲನ್ನು ತೆಗೆದುಕೊಳ್ಳಬೇಕೆಂದು ಚಾಚಿದ ಕೈಯನ್ನು ಅವಳು ತಟ್ಟನೆ ಹಿಂದಕ್ಕೆ ಎಳೆದುಕೊಂಡಳು. ಅವಳಿಗೆ ನಂಬುಗೆಯುಂಟುಮಾಡಬೇಕೆಂದು ಆ ಔಷಧಿಯಲ್ಲಿ ರಾಜನು ಸ್ವಲ್ಪವನ್ನು ಕುಡಿದು ಮಿಕ್ಕುದನ್ನು ಅವಳಿಗೆ ಕೊಟ್ಟನು. ಆಮೇಲೆ

ಅವಳು ಧೈರ್ಯವಾಗಿ ಕುಡಿದು, "ಇದು ನಾನು ನಿತ್ಯವೂ ಕುಡಿಯುವ ಔಷಧಿ" ಎಂದಳು.

"ಅಮ್ಮಾ, ಇದರಿಂದಲೇ ನೀನು ಬದುಕಿದ್ದೀಯೆ. ನಿನಗಾಗಿ ನಾನು ಈ ನಾಲ್ಕು ದಿನಗಳಿಂದ ಎಷ್ಟು ಪಾಡುಪಟ್ಟೆನೋ ? ರಾತ್ರಿಯೆಲ್ಲಾ ಕಣ್ಣು ಮುಚ್ಚದೆ ಕಾದಿದ್ದು ನಿನ್ನ ಬಟ್ಟಲಿಗೆ ವಿಷ ಸುರಿಯುತ್ತಿರುವುದನ್ನು ಕಂಡು, ನಾನು ಬಂದು ಚೆಲ್ಲುವುದರೊಳಗಾಗಿ ಎಲ್ಲಿ ನೀನು ಕುಡಿದುಬಿಡುವೆಯೋ ಎಂದು ತಪಿಸುತ್ತಲಿದ್ದು ವಿಷ ಬೆರಸಲಿಕ್ಕೆ ಬಂದಿದ್ದವರು ಹೊರಟುಹೋಗುವವರೆಗೂ ಕಾದಿದ್ದು ಬಳಿಕ ಒಳಗೆ ಬಂದು ಚೆಲ್ಲಿ ಈ ಸಂಜೀವನವನ್ನು ಇಟ್ಟು ಹೋಗುತ್ತಲಿದ್ದೆ."

"ಆ ವಿಷವನ್ನು ಹಾಕುವರಾರು ಬಲ್ಲಿರಾ !"

"ಹೂಂ."

"ಅವರು ಈ ಮನೆಯಲ್ಲಿಯೇ ಇದ್ದಾರೆಯೋ ?"

"ಹೂಂ."

"ನೀವು ಹೇಳುವುದನ್ನು ನಂಬುವುದಕ್ಕೆ ಆಗುವುದಿಲ್ಲ. ನನಗೆ ನಮ್ಮ ಮನೆಯಲ್ಲಿಯೇ ವಿಷವೂಡುವವರಾರು ?"

"ಅಮ್ಮಾ, ಸ್ವಲ್ಪ ನಿಧಾನವಾಗಿ ಯೋಚಿಸಿ ನೋಡು. ನಿನ್ನ ತಾತ ಶಾಂತವೀರ, ನಿನ್ನ ಅಜ್ಜಿ, ಹರಿದಾಸ ಇವರೆಲ್ಲರೂ ಹೇಗೆ ಸತ್ತರು ? ಈ ವಿಷದಿಂದಲೇ ? ದೀನನಾಥರನ್ನು ಕೊಲ್ಲಬೇಕೆಂದು ವಿಷಹಾಕಿದುದು ಹರಿದಾಸನಿಗೆ ಮೃತ್ಯುವಾಯಿತು. ದೀನನಾಥರ ರೋಗಕ್ಕಾಗಿ ಅಶ್ವಿನೀಕುಮಾರನು ವಿಷ ಮಿಶ್ರಮಾಡಿ ಔಷಧಿಯನ್ನು ಕೊಡುತ್ತಿದ್ದಾನೆ. ಈ ವಿಷ ಸೇವನೆಯಿಂದ ಅವರಿಗೆ ಯಾವ ವಿಷವೂ ಕೆಂದುವುದಿಲ್ಲ."

"ಓಹೋ ! ತಾತನು ನನಗೆ ಆ ಔಷಧಿಯನ್ನು ಕೊಂಚವಾಗಿ ಕುಡಿಸಿ ಅಭ್ಯಾಸ ಮಾಡಿಸುತ್ತಲಿದ್ದುದು ಇದಕ್ಕಾಗಿಯೇ ?"

"ಅಹುದು. ಈ ಮನೆಯಲ್ಲಿ ವಿಷ ಹಾಕುವವರು ಇರುತ್ತಾರೆಂದು ನಿಮ್ಮಜ್ಜ ಬಲ್ಲರು. ಅವರ ಜಾಗರೂಕತೆಯಿಂದಲೇ ನೀನು ಇದುವರೆಗೆ ಬದುಕಿ ಇದ್ದೀಯೆ. ಈಗ ನಾಲ್ಕು ದಿನಗಳಿಂದ ಈಚೆಗೆ ಹಾಕುತ್ತಿದ್ದ ವಿಷವು ಅತಿ ಘೋರವಾದುದು ; ಅದನ್ನು ಕುಡಿದಿದ್ದರೆ ನೀನು ಬೇರೆ ಬದುಕುತ್ತಿರಲಿಲ್ಲ."

"ನನ್ನನ್ನು ಕೊಲ್ಲಬೇಕೆಂದು ಈ ರೀತಿ ವಿಷವನ್ನು ಹಾಕುವರಾರು ?"

"ಅಮ್ಮಾ ವಿಮಲೆ, ನಿತ್ಯವೂ ನಿನ್ನ ಕೊಠಡಿಗೆ ಸಮರಾತ್ರಿಯಲ್ಲಿ ಬಂದು ಹೋಗುವವರನ್ನು ನೀನು ನೋಡಿಲ್ಲವೋ ?"

"ಇಲ್ಲ."

"ಹಾಗಾದರೆ ಈ ರಾತ್ರಿ ನೋಡು. ಸಮರಾತ್ರಿಯಾಗುತ್ತ ಬಂದಿತು. ನೀನು ನಿದ್ದೆ ಬಂದವಳಂತೆ ಮಲಗಿರು. ಯಾರಾದರೂ ಬಂದಾಗ ನೀನು ಹೆದರಿ ಕೈಕಾಲುಗಳನ್ನು

ಅಲ್ಲಾಡಿಸಿ ಕಣ್ಣು ಬಿಟ್ಟು ನೋಡಿದೆಯಾದರೆ ನಿನ್ನನ್ನು ಈಟಿಯಿಂದ ಇರಿದು ಕೊಲ್ಲುವರು. ಜೋಕೆ, ಕೈ ಮಿಂಚಿಹೋದ ಮೇಲೆ ನಿನ್ನನ್ನು ಕಾಯುವುದಕ್ಕೆ ಬ್ರಹ್ಮನಿಂದಲೂ ಆಗದು. ನಾನು ಹೋಗಿಬರುತ್ತೇನೆ. ಜೋಕೆ" ಎಂದು ಹೇಳಿ ರಾಜನು ಆ ಸಣ್ಣ ಕೊಠಡಿಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡನು.

ರಾಜನು ಅತ್ತ ಹೋದ ಮೇಲೆ ವಿಮಲೆಯು ಮುಕ್ಕಾಲು ಕಣ್ಣು ಮುಚ್ಚಿಕೊಂಡು ಗಡಿಯಾರದಲ್ಲಿ ಹೊತ್ತು ನೋಡುತ್ತಲಿದ್ದಳು. ರಾಜನು ಹೇಳಿದ ಮಾತಿನಲ್ಲಿ ಅವಳಿಗೆ ಇನ್ನೂ ನಂಬುಗೆಯುಂಟಾಗದೆ 'ನನ್ನನ್ನು ಕೊಂದು ಅವರಿಗೇನು ಪ್ರಯೋಜನ ?' ಎಂದು ಯೋಚಿಸುತ್ತಿದ್ದಳು. ಗಡಿಯಾರವು ಒಂದು ಗಂಟೆಯನ್ನು ಬಡಿಯಿತು. ಆಗ ಅವಳ ಮಲತಾಯಿಯ ಕೊಠಡಿಯ ಬಾಗಿಲು ತೆರದ ಸದ್ದಾಯಿತು. ವಿಮಲೆಯು ತಟ್ಟನೆ ಕಣ್ಣು ಮುಚ್ಚಿಕೊಂಡು ಉಸಿರನ್ನು ನಿಧಾನವಾಗಿ ಬಿಡುತ್ತ ಕಿವಿಗೊಟ್ಟು ಕೇಳುತ್ತಿದ್ದಳು. ನಾಗಮಣಿಯು ತನ್ನ ಬಳಿಗೆ ಬಂದು ವಿಮಲೆ, ವಿಮಲೆ, ಎಂದು ಎರಡು ಸಾರಿ ಕೂಗಿ ತಾನು ನಿದ್ದೆ ಹೋಗುವುದನ್ನು ಕಂಡು ಸ್ವಲ್ಪ ಹೊತ್ತು ಸದ್ದುಮಾಡದೆ ನಿಂತಿದ್ದು, ಬಳಿಕ ಔಷಧದ ಬಟ್ಟಲಿಗೆ ಯಾವುದನ್ನೋ ಸುರಿಯಲು, ವಿಮಲೆಯು ಕಣ್ಣು ಬಿಟ್ಟು ನೋಡಿ ಬೆಚ್ಚಿ ಹೊರಳಲು, ನಾಗಮಣಿಯು ತನ್ನ ನಡುವಿನಲ್ಲಿ ಸಿಕ್ಕಿಸಿಕೊಂಡಿದ್ದ ಸಣ್ಣ ಕಠಾರಿಯನ್ನು ಹಿರಿದು ಕೈಯಲ್ಲಿಟ್ಟುಕೊಂಡು ಅವಳನ್ನು ಚೆನ್ನಾಗಿ ನೋಡುತ್ತಿದ್ದಳು. ಅವಳು ಇತ್ತ ತಿರುಗುವುದರೊಳಗಾಗಿಯೇ ವಿಮಲೆಯು ಅತಿ ಸಾಹಸದಿಂದ ಮರಳಿ ಕಣ್ಣು ಮುಚ್ಚಿಕೊಂಡು ಗಾಢನಿದ್ರೆ ಬಂದಿದ್ದವಳಂತೆ ಅಲ್ಲಾಡದೆ ಇದ್ದಳು, ಸಾಧಾರಣವಾಗಿ ಕಣ್ಣು ಮುಚ್ಚಿಕೊಂಡು ಸುಮ್ಮನೆ ಬಿದ್ದಿರುವುದು ಅಷ್ಟು ಕಷ್ಟವಲ್ಲ. ಇಂತಹ ಸಂದರ್ಭಗಳಲ್ಲಿ ಹಾಗೆ ಮಾಡಬೇಕಾದರೆ ಬಾಯ ಮಾತಲ್ಲ, ಬಹಳ ಸಾಹಸ ಬೇಕು.

ವಿಮಲೆಯು ಅಲ್ಲಾಡದೆ ಇರುವುದನ್ನು ಕಂಡು ಅವಳು ನಿದ್ದೆ ಹೋಗುತ್ತಿದ್ದಾಳೆಂದು ತಿಳಿದು ನಾಗಮಣಿಯು ತನ್ನ ಕೊಠಡಿಯ ಬಾಗಿಲ ಬಳಿ ಹೋಗಿ, ಪುನಃ ಹಿಂತಿರುಗಿ ನೋಡಿ, ತನ್ನ ಕೊಠಡಿಯನ್ನು ಹೊಕ್ಕು ಬಾಗಿಲನ್ನು ಮುಚ್ಚಿಕೊಂಡಳು. ಸುಮಾರು ಒಂದೆರಡು ನಿಮಿಷಗಳಲ್ಲಿ ಇಷ್ಟೆಲ್ಲಾ ನಡೆದುವು. ಇಷ್ಟು ಅಲ್ಪಕಾಲದಲ್ಲಿ ವಿಮಲೆಗೆ ಉಂಟಾದ ವೇದನೆಯನ್ನು ಬಣ್ಣಿಸಲು ಯಾರಿಂದ ತಾನೇ ಆದೀತು ?

ನಾಗಮಣಿಯು ಬಂದು ಹೋದ ಹತ್ತು ನಿಮಿಷಗಳಲ್ಲಿಯೇ ರಾಜನು ಪುನಃ ಅಲ್ಲಿಗೆ ಬಂದು ವಿಮಲೆಯನ್ನು ಕುರಿತು "ಏನಮ್ಮಾ, ನಾನು ಹೇಳಿದುದು ನಿಜವೊ ?" ಎಂದು ಕೇಳಿದನು. ಅದಕ್ಕವಳು ನಿಜವೆಂದು ಒಪ್ಪಿಕೊಂಡಳು.

"ವ್ಯಕ್ತಿಯು ಯಾರೆಂದು ಗೊತ್ತಾಯಿತೋ ?"

"ಹುಂ."

"ಇಗೋ ನೋಡು ಇದು ಕಾಲಕೂಟ" ಎಂದು ಔಷಧಿಯ ಬಟ್ಟಲನ್ನು ವಿಮಲೆಗೆ ತೋರಿಸಿ ಪುನಃ ಮೇಜಿನ ಮೇಲೆ ಇಟ್ಟನು. ಆಗ ವಿಮಲೆಯು ""ಸ್ವಾಮೀ, ಈ

ಮನೆಯಲ್ಲಿರಬೇಕೆಂದರೆ ನನಗೆ ಏಕೋ ಗಾಬರಿಯಾಗುತ್ತದೆ" ಎಂದು ಹೇಳಲು, ರಾಜನು,

"ಅಮ್ಮಾ, ಈ ಕೆಲಸಕ್ಕೆ ಕೈಯಿಕ್ಕಿದವಳು ಎಲ್ಲಿ ಹೋದರೂ ನಿನ್ನನ್ನು ಬಿಡಳು. ನೀನು ಹೋದ ಕಡೆಯಲ್ಲೆಲ್ಲಾ ನಿನ್ನ ಆಳುಗಳಿಗೆ ಲಂಚ ಹಾಕಿ ಅವರಿಂದ ನಿನ್ನನ್ನು ಕೊಲ್ಲಿಸುವಳು. ಅದಕ್ಕಾಗಿಯೇ ನಾನು ನಿನ್ನನ್ನು ಪ್ರತಿ ರಾತ್ರಿಯೂ ಕಾಯುತ್ತಲಿದ್ದುದು. ಶತ್ರುವು ಇಂಥವರೆಂದು ಗೊತ್ತಾದ ಮೇಲೆ ಅವರನ್ನು ನಾವು ಜಯಿಸಿದಂತೆಯೇ. ಅಮ್ಮಾ ವಿಮಲೆ, ನಾನು ಹೇಳಿದಂತೆ ಮಾಡು. ನಿನಗೂ ಒಳ್ಳೆಯದು, ನಿನ್ನ ತಾತ, ಜಯವೀರರಿಬ್ಬರಿಗೂ ಸಂತೋಷವಾಗುವುದು.

"ನಾನೇನು ಮಾಡಬೇಕು, ಅಪ್ಪಣೆಯಾಗಲಿ."

"ನಾನು ಕೊಡುವ ಗುಳಿಗೆಯನ್ನು ನುಂಗಬೇಕು."

"ನುಂಗಿದರೆ ಏನಾಗುತ್ತದೆ ?"

"ಅದರಿಂದ ನಿನಗೆ ಕಣ್ಣು ಕಾಣದಂತೆಯೂ, ಕಿವಿ ಕೇಳದಂತೆಯೂ, ಕತ್ತಲಲ್ಲಿರುವಂತೆಯೂ, ಉಸಿರು ನಿಂತುಹೋದಂತೆಯೂ ಆಗುವುದು. ಸತ್ತವಳಂತೆಯೇ ಇರುವೆ. ಏನಾದರೂ ಆಗಲಿ ; ಜಯವೀರನಿಗೆ ಆಪ್ತನಾದ ನಾನು ನಿನ್ನನ್ನು ತಂದೆಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತೇನೆ. ಧೈರ್ಯವಾಗಿರು. ಈಗ ಸ್ವಲ್ಪ ಕಷ್ಟವಾಗಿ ತೋರಿದರೂ ಮುಂದೆ ಇದರಿಂದ ನಿನಗೆ ಯಾವಜ್ಜೀವವೂ ತುಂಬ ಸುಖವುಂಟಾದೀತು."

"ಅಯ್ಯೋ ಎಂತಹ ಸಂಕಟ ?"

"ಹಾಗಾದರೆ ನಿನ್ನ ಮಲತಾಯಿಯು ಇಂಥವಳೆಂದು ನಿಮ್ಮಪ್ಪನಿಗೆ ತಿಳಿಸಿ ಅವಳಿಗೆ ತಕ್ಕ ಶಿಕ್ಷೆಯನ್ನು ಮಾಡಿಸುವೆಯಾ ?"

"ಹಾಗೆ ಮಾಡುವುದಕ್ಕಿಂತ ನಾನು ಸಾಯುವುದೇ ವಾಸಿ."

"ಅದಕ್ಕಾಗಿಯೇ ನಾನು ಹೇಳುವಂತೆ ಕೇಳು. ನೀನು ಈ ಗುಳಿಗೆಯನ್ನು ನುಂಗಿ ಜಯವೀರನ ಧ್ಯಾನದಲ್ಲಿಯೇ ಇದ್ದರೆ, ಮುಂದೆ ಅವನನ್ನೇ ಮದುವೆಯಾಗಿ ಸುಖವಾಗಿ ಬಾಳುವೆ" ಎಂದು ಹೇಳಿ ರಾಜನು ತನ್ನ ಚೀಲದಿಂದ ಒಂದು ಭರಣಿಯನ್ನು ತೆಗೆದು ಅದರಲ್ಲಿದ್ದ ಗುಳಿಗೆಗಳಲ್ಲಿ ಒಂದನ್ನು ಕೊಟ್ಟನು. ಅದನ್ನು ನುಂಗಿದ ಕೂಡಲೇ ಅವಳಿಗೆ ನಿದ್ದೆ ಬಂದಂತಾಗಿ ಕೊಂಚ ಹೊತ್ತಿನಲ್ಲಿಯೇ ಶ್ವಾಸೋಚ್ಛ್ವಾಸಗಳು ನಿಂತುಹೋದವು. ನಾಗಮಣಿಯು ಬಂದು ನೋಡಿದರೆ ವಿಮಲೆಯು ಆ ವಿಷದಲ್ಲಿ ಮುಕ್ಕಾಲನ್ನು ಕುಡಿದಳೆಂದು ತಿಳಿಯಲೋಸುಗ, ಬಟ್ಟಲಲ್ಲಿ ಕಾಲುಭಾಗವನ್ನು ಹಾಗೆಯೇ ನಿಲ್ಲಿಸಿ ಮಿಕ್ಕುದನ್ನು ಚೆಲ್ಲಿ, ಮಲಯಸಿಂಹನು ಸಣ್ಣ ಕೊಠಡಿಯ ಮಾರ್ಗದಿಂದ ಪಕ್ಕದ ಮನೆಗೆ ಹೊರಟು ಹೋದನು.

# ೬೬
# ವಿಮಲೆಯ ಅವಸಾನ

ವಿಮಲೆಯು ಮಲಗಿದ್ದ ಕೊಠಡಿಯಲ್ಲಿ ರಾತ್ರಿಯೆಲ್ಲಾ ಒಂದು ಸಣ್ಣ ದೀಪವು ಉರಿಯುತ್ತಲಿದ್ದಿತು. ರಾಜಾ ಮಲಯಸಿಂಹನು ಎರಡನೆಯ ಸಾರಿ ಆ ಕೊಠಡಿಗೆ ಸುಮಾರು ಮೂರು ಗಂಟೆಯ ವೇಳೆಯಲ್ಲಿ ಬಂದಿದ್ದನು. ಸುಮಾರು ಐದು ಗಂಟೆಯ ಸಮಯದಲ್ಲಿ ಎಣ್ಣೆಯು ಮುಗಿಯುತ್ತ ಬಂದುದರಿಂದ ದೀಪವು ಸ್ವಲ್ಪ ಮಂಕಾಯಿತು. ಆಗ ನಾಗಮಣಿಯು ಸದ್ದು ಮಾಡದೆ ತನ್ನ ಕೊಠಡಿಯ ಬಾಗಿಲನ್ನು ತೆಗೆದು ಸ್ವಲ್ಪ ಕಾಲ ಬಾಗಿಲಲ್ಲೇ ನಿಂತಿದ್ದು, ವಿಮಲೆಯ ಕೊಠಡಿಯಲ್ಲಿ ಯಾರೂ ಇಲ್ಲವೆಂದು ದೃಢಪಡಿಸಿಕೊಂಡು ಔಷಧಿಯಿಟ್ಟಿದ್ದ ಮೇಜಿನ ಬಳಿಗೆ ಬಂದು ಬಟ್ಟಲಲ್ಲಿ ಕಾಲುಭಾಗ ನಿಂತಿದ್ದ ದ್ರಾವಕವನ್ನು ನೋಡಿ ತಾನು ಸುರಿದಿದ್ದ ವಿಷದಲ್ಲಿ ಮುಕ್ಕಾಲು ಪಾಲು ಕುಡಿದುಬಿಟ್ಟಿದ್ದಾಳೆಂದು ಅರಿತು, ಮಿಕ್ಕುದ್ದನ್ನು ಚೆಲ್ಲಿ, ಬಟ್ಟಲನ್ನು ಒಂದು ಅರಿವೆಯಲ್ಲಿ ಒರೆಸಿ ಮರಳಿ ಮೇಜಿನ ಮೇಲೆ ಇಟ್ಟು ತನ್ನ ಪ್ರಯತ್ನ ಸಫಲವಾಯಿತೋ ಇಲ್ಲವೋ ನೋಡಬೇಕೆಂಬ ಆಸೆಯಿದ್ದರೂ ವಿಮಲೆಯಿದ್ದ ಹಾಸಿಗೆಯ ಹತ್ತಿರ ಹೋಗುವುದಕ್ಕೆ ಹೆದರಿ, ಇಷ್ಟು ಸಾಹಸ ಮಾಡಿ ಕೊನೆಗೆ ಕೆಲಸವು ಫಲಿಸಿತೋ ಇಲ್ಲವೋ, ನೋಡದಿರುವುದು ಸರಿಯಲ್ಲವೆಂದು ಯೋಚಿಸಿ, ಧೈರ್ಯವನ್ನು ತಾಳಿ, ಮಂಚದ ಬಳಿಗೆ ಹೋಗಿ ಮೇಲುಹೊದಿಕೆಯನ್ನು ತೆಗೆದು ವಿಮಲೆಯ ಎದೆಯ ಮೇಲೆ ಕೈಯಿಟ್ಟು ನೋಡಲು ಅದು ತಣ್ಣಗಿದ್ದಿತು. ಅರೆದೆರೆದಿದ್ದ ಕಣ್ಣೂ, ನೀಲವಾದ ತುಟಿಯೂ, ಹಾಸಿಗೆಯಿಂದ ಹೊರಗೆ ಚಾಚಿದ್ದ, ಬೆವೆತುಹೋದ ಕೈಯೂ ಅವಳ ಅನುಮಾನವನ್ನು ನಿವೃತ್ತಿ ಮಾಡಿದುವು.

ತಾನು ಮಾಡಿದ ಸಾಹಸವು ಫಲಕಾರಿಯಾಯಿತೆಂದು ಸಂತೋಷಪಟ್ಟು ನಾಗಮಣಿಯು ಅಲ್ಲಿಂದ ತನ್ನ ಕೊಠಡಿಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಮಲಗಿದಳು. ಅವಳು ಅತ್ತ ಹೋದ ಕೊಂಚಹೊತ್ತಿನಲ್ಲಿಯೇ ರಾಜಾಮಲಯಸಿಂಹನು ಪುನಃ ಆ ಕೊಠಡಿಗೆ ಬಂದು ನಾಗಮಣಿಯು ವಿಮಲೆಯ ಮೇಲೆ ಶಸ್ತ್ರಪ್ರಯೋಗ ಮಾಡಿಲ್ಲವೆಂದು ಧೈರ್ಯ ಮಾಡಿಕೊಂಡು, ಒರಸಿಬಿಟ್ಟಿದ್ದ ಔಷಧಿಯ ಬಟ್ಟಲಿಗೆ ಸ್ವಲ್ಪ ವಿಷವನ್ನು ಸುರಿದು ಅದನ್ನು ಹಾಗೆಯೇ ಮೇಜಿನ ಮೇಲೆ ಇರಿಸಿ ಇನ್ನು ವಿಮಲೆಗೆ ಭಯವಿಲ್ಲ ಎಂದುಕೊಂಡು ಹೊರಟುಹೋದನು.

ಅಷ್ಟು ಹೊತ್ತಿಗೆ ಅರುಣೋದಯವಾಯಿತು. ದೀಪವು ನಂದಿಹೊಯಿತು. ಕೊಠಡಿಯ ಬಾಗಿಲಲ್ಲಿ ಮಲಗಿದ್ದ ದಾಸಿಯು ಎದ್ದು ಬೀಗದ ಕೈಯನ್ನು ತಂದು ಬಾಗಿಲನ್ನು ತೆರೆದು, ವಿಮಲೆಯನ್ನು ನೋಡಿ ಅವಳು ಇನ್ನೂ ಮಲಗಿದ್ದಾಳೆಂದು ತಿಳಿದು, ದೂರದಲ್ಲಿ ಕುಳಿತು ತೂಕಡಿಸುತ್ತಿದ್ದಳು. ಬೆಳಿಗ್ಗೆ ಎಂಟು ಗಂಟೆಯಾದರೂ ವಿಮಲೆಯು ಏಳಲಿಲ್ಲ. ಇನ್ನು ವೈದ್ಯರು ಬರುವ ಹೊತ್ತಾಯಿತು. ಅವಳನ್ನು ಎಬ್ಬಿಸೋಣ ಎಂದುಕೊಂಡು ದಾಸಿಯು

ಮಂಚದ ಹತ್ತಿರ ಹೋಗಿ ಹೊರಗೆ ನೀಡಿದ್ದ ಕೈಯನ್ನು ಹಿಡಿದು ಅಲ್ಲಾಡಿಸಲು ವಿಮಲೆಯ ಶರೀರವೆಲ್ಲಾ ಒಟ್ಟಿಗೆ ಅಲ್ಲಾಡಿತು. ಮೈಯು ಕೈಯೆಲ್ಲಾ ತಣ್ಣಗಾಗಿ ಉಸಿರು ಆಡದೆ ಇರುವುದನ್ನು ಕಂಡು ಅವಳು ಗಾಬರಿಯಿಂದ "ಅಯ್ಯೋ, ಅಯ್ಯೋ, ಯಾರೂ ದಿಕ್ಕಿಲ್ಲವೇ ? ವಿಮಲೆಯಮ್ಮನವರು ಹೋಗಿಬಿಟ್ಟರಲ್ಲಾ !" ಎಂದು ಕೂಗಿಕೊಂಡಳು.

ಎಂದಿನ ವೇಳೆಯಂತೆ ಬರುತ್ತಲಿದ್ದ ಪಂಡಿತನ ಕಿವಿಗೆ ಈ ಕೂಗು ಬೀಳಲು ಅವನು ಅತ್ಯಾತುರದಿಂದ ಮಹಡಿಯ ಮೇಲಕ್ಕೆ ಬಂದು "ಏನು ಸಮಾಚಾರ ? " ಎಂದು ದಾಸಿಯನ್ನು ಕೇಳಿದನು. ಆ ವೇಳೆಗೆ ವಲ್ಲಭದೇವನೂ "ಏನದು, ಏನದು?" ಎಂದು ಕೇಳುತ್ತ ಬಂದನು. ದಾಸಿಯು ಕೂಗನ್ನು ಕೇಳಿ ಮನೆಯ ಆಳುಗಳೆಲ್ಲರೂ ಬಂದು ಸೇರಿದರು. ಅವರನ್ನು ನೋಡಿ ವಲ್ಲಭದೇವನು "ಎಲಾ ಯಜಮಾನಿಯನ್ನು ಕರೆಯಿರೋ" ಎಂದನು. ಅವನು ಹೇಳಿದುದನ್ನು ಆಳುಗಳಾರೂ ಕಿವಿಗೆ ಹಾಕಿಕೊಳ್ಳದೆ ವಿಮಲೆಯನ್ನು ನೋಡುತ್ತ ನಿಂತಿದ್ದರು.

ವೈದ್ಯನು ವಿಮಲೆಯ ಕೈಯ್ಯನ್ನು ಹಿಡಿದುನೋಡಿ ನಾಡಿಯು ನಿಂತು ಹೋಗಿ ಮೈಯು ಸೆಡೆತಿರುವುದನ್ನು ಕಂಡು "ಇವಳೂ ಸತ್ತುಹೋದಳು. ಈ ಗೋಳು ಎಂದಿಗೆ ನಿಂತೀತು?" ಎಂದನು. ಅದನ್ನು ಕೇಳಿ ಆಳುಗಳು "ಈ ಹಾಳು ಮನೆಯಲ್ಲಿದ್ದರೆ ಒಂದು ದಿನವಲ್ಲ ಒಂದು ದಿನ ನಾವೂ ಹೀಗೆಯೇ ಸಾಯಬೇಕಾದೀತು" ಎಂದು ದಿಗಿಲುಬಿದ್ದು ಬಿಟ್ಟುದು ಬಿಟ್ಟಹಾಗೆ ದಿಕ್ಕಾಪಾಲಾಗಿ ಓಡಿಹೋದರು.

ವಿಮಲೆಯ ಕೊಠಡಿಯಲ್ಲಿ ನಡೆಯುತ್ತಲಿದ್ದ ಅವಾಂತರಗಳೆಲ್ಲವೂ ನಾಗಮಣಿಗೆ ತಿಳಿದಿದ್ದರೂ ಅವಳಿಗೆ ಅಲ್ಲಿಗೆ ಬರುವುದಕ್ಕೆ ಇಷ್ಟವಿರಲಿಲ್ಲ. ಗಂಡನು ತನ್ನನ್ನು ಬರಹೇಳಿದನೆಂದು ವಿಮಲೆಯ ದಾದಿಯು ಬಂದು ತಿಳಿಸಿದ ಮೇಲೆಯೂ ಹೋಗದೆ ಉಳಿದುಕೊಂಡರೆ ಅನುಮಾನಕ್ಕೆ ಕಾರಣವಾದೀತೆಂದು ಊಹಿಸಿ, ತನ್ನ ಕೊಠಡಿಯ ಬಾಗಿಲನ್ನು ತೆರೆದು ಅಲ್ಲಿಯೇ ನಿಂತು ಕಣ್ಣೀರನ್ನು ಒರೆಸಿಕೊಳ್ಳುವಂತೆ ಮುಖವನ್ನು ಮರೆ ಮಾಡಿಕೊಂಡಳು. ಅಷ್ಟು ಹೊತ್ತಿಗೆ ಪಂಡಿತನು ಔಷಧಿಯ ಬಟ್ಟಲಲ್ಲಿದ್ದ ದ್ರಾವಕವನ್ನು ಬೆಳಕಿನಲ್ಲಿ ಹಿಡಿದು ಪರೀಕ್ಷಿಸುತ್ತಲಿದ್ದನು. ವಿಷವನ್ನು ಚೆಲ್ಲಿ ಬಟ್ಟಲನ್ನು ಬಟ್ಟೆಯಲ್ಲಿ ಒರೆಸಿಟ್ಟುದ್ದುದನ್ನು ಮರೆತುಹೋದವಳಾಗಿ ನಾಗಮಣಿಯು ಭಯಪಟ್ಟು ತನ್ನ ಎರಡು ತೋಳುಗಳನ್ನೂ ಚಾಚಿ ಬಟ್ಟಲನ್ನು ವೈದ್ಯನ ಕೈಯಿಂದ ಕಿತ್ತುಕೊಳ್ಳಲೋಸುಗ ಮುಂದೆ ಓಡಿಬಂದಳು. ವೈದ್ಯನು ಅಷ್ಟರೊಳಗೆ ಆ ವಿಷವನ್ನು ಪರೀಕ್ಷಿಸಿ ನೋಡಿ "ಇದುವರೆಗೆ ಹಾಕುತ್ತಿದ್ದ ವಿಷಕ್ಕಿಂತಲೂ ಇದು ಘೋರವಾದುದು" ಎಂದನು.

ಆ ಮಾತನ್ನು ಕೇಳಿ ನಾಗಮಣಿಯು ಬೆದರಿ ಬುದ್ಧಿ ಸ್ತಿಮಿತವಿಲ್ಲದವಳಂತೆ ಹಿಂತಿರುಗಿ ತನ್ನ ಕೋಣೆಗೆ ಹೋಗಲು ಯತ್ನಿಸಿದಳು. ಕಾಲುಗಳು ಗಡಗಡನೆ ನಡುಗಿ ಅವಳು ಅಲ್ಲಿಯೇ ನೆಲದ ಮೇಲೆ ಬಿದ್ದಳು ; ಜ್ಞಾನ ತಪ್ಪಿಹೋಯಿತು. ಅದನ್ನು ಮಿಕ್ಕವರಾರೂ ನೋಡಲಿಲ್ಲ.

ಆಗ ಪಂಡಿತನು ಅದನ್ನು ಕಂಡು ವಿಮಲೆಯ ದಾಸಿಯನ್ನು ಕುರಿತು "ನಿನ್ನ ಯಜಮಾನಿಗೆ ಮೈಯು ಸ್ವಸ್ಥವಿಲ್ಲವೆಂದು ತೋರುತ್ತದೆ ; ನೀನು ಹೋಗಿ ಅವಳನ್ನು ಉಪಚರಿಸು" ಎಂದನು.

"ಸ್ವಾಮೀ, ವಿಮಲೆಯನ್ನು ಬಿಟ್ಟುಹೋಗಲೋ ?" ಎಂದು ಅವಳು ಕೇಳಿದುದಕ್ಕೆ ಪಂಡಿತನು "ಇನ್ನು ಅವಳನ್ನು ಯಾರೂ ನೋಡಿಕೊಳ್ಳಬೇಕಾದುದಿಲ್ಲ ; ಅವಳು ಸತ್ತುಹೋಗಿದ್ದಾಳೆ" ಎಂದನು.

ಹೀಗೆ ವೈದ್ಯನು ಹೇಳುತ್ತಿದ್ದುದನ್ನು ಕೇಳಿ ಮೆಟ್ಟಲುಗಳನ್ನು ಹತ್ತಿ ಬರುತ್ತಲಿದ್ದ ಜಯವೀರನು "ಯಾರು ಸತ್ತುಹೋದರು ?" ಎನ್ನುತ್ತ ಒಂದೇ ಉಸಿರಿನಲ್ಲಿ ಕೊಠಡಿಗೆ ಓಡಿ ಬಂದನು.

ಜಯವೀರನು ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬಂದುದಕ್ಕೆ ಕಾರಣವೇನೋ ನೋಡೋಣ. ಅವನು ಪ್ರತಿನಿತ್ಯವೂ ಬೆಳಿಗ್ಗೆ ದೀನನಾಥನ ಬಳಿಗೆ ಹೋಗಿ ವಿಮಲೆಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು, ಸಾಯಂಕಾಲ ರಾಜಾ ಮಲಯಸಿಂಹನ ಬಳಿಗೆ ಹೋಗಿ ಅವನಿಂದಲೂ ತಿಳಿದುಕೊಳ್ಳುತ್ತಲಿದ್ದನು. ಎಂದಿನಂತೆ ಈ ದಿವಸವೂ ಬೆಳಿಗ್ಗೆ ದೀನನಾಥನನ್ನು ನೋಡುವುದಕ್ಕೆ ಹೋದಾಗ ಆಳುಗಳೊಬ್ಬರನ್ನೂ ಕಾಣದೆ ತಾನೇ ಆ ವೃದ್ಧನ ಕೊಠಡಿಗೆ ಹೋಗಿ ಅವನು ಕಳವಳಗೊಂಡಿರುವುದನ್ನು ಮುಖಭಾವದಿಂದರಿತವಾಗಿ "ತಮಗೆ ಮೈಯು ಸ್ವಸ್ಥವಾಗಿದೆಯೋ ?" ಎಂದು ಕೇಳಲು ಅವನು "ಹುಂ" ಎಂದನು.

"ತಮ್ಮ ಮುಖದಲ್ಲಿ ಇದೇನು ದುಃಖವು ತುಂಬಿದೆ ?" ಎಂದು ಕೇಳಲು ವೃದ್ಧನು ಕೊಠಡಿಯ ಬಾಗಿಲನ್ನು ನೋಡುತ್ತಿದ್ದನು.

"ಆಳನ್ನು ಕರೆಯಲೋ ?"

"ಹುಂ."

ಎಷ್ಟು ಕೂಗಿದರೂ ಯಾರೂ ಬಾರದೆ ಇರುವುದನ್ನು ಕಂಡು ಜಯವೀರನು "ಏತಕ್ಕೆ ಯಾರೂ ಬರುವುದಿಲ್ಲ ? ಮನೆಯಲ್ಲಿ ಎಲ್ಲರೂ ಸ್ವಸ್ಥರಾಗಿದ್ದಾರೋ ಇಲ್ಲವೋ" ಎಂದು ಕೇಳಲು ವೃದ್ಧನು ಕಣ್ಣೀರನ್ನು ಕರೆದನು.

"ಸ್ವಾಮೀ, ನನಗೇಕೋ ದಿಗಿಲಾಗುತ್ತದೆ. ವಿಮಲೆಗೆ—" ಎಂದು ಜಯವೀರನು ಹೇಳುವುದರೊಳಗಾಗಿ ದೀನನಾಥನು "ಅಹುದು, ಅಹುದು" ಎಂದನು. ಜಯವೀರನು ಬಲು ಗಾಬರಿಕೊಂಡು "ನಾನೇ ಹೋಗಿ ನೋಡಿಕೊಂಡು ಬರುತ್ತೇನೆ" ಎಂದು ಹೊರಟನು. ಆಗ ವೈದ್ಯನ ಮಾತು ಅವನ ಕಿವಿಗೆ ಬೀಳಲು ಅವನು ಒಂದೇ ಉಸಿರಿನಲ್ಲಿ ವಿಮಲೆಯ ಕೊಠಡಿಗೆ ಓಡಿ ಹೋದನು.

ತಲೆಯ ಮೇಲೆ ಕೈಯನ್ನಿಟ್ಟುಕೊಂಡು ದುಃಖಪಡುತ್ತಲಿದ್ದ ವಲ್ಲಭದೇವನು ಓಡಿ ಬಂದ ಜಯವೀರನನ್ನು ಕಂಡು "ಸ್ವಾಮೀ, ತಾವು ಯಾರು ? ದುಃಖದಲ್ಲಿ ಮುಳುಗಿರುವ

ಈ ನನ್ನ ಮನೆಗೆ ತಾವು ಬರುವುದಕ್ಕೆ ನಿಮಿತ್ತವೇನು ? ಬಂದ ಹಾದಿಯನ್ನು ಹಿಡಿದುಕೊಂಡು ಹೊರಟುಹೋಗಿ" ಎಂದನು. ವೈದ್ಯನೂ ಹಾಗೆಯೇ ಹೇಳಿ ಕೊಠಡಿಯ ಒಳಕ್ಕೆ ಬಂದಿದ್ದ ಜಯವೀರನನ್ನು ತಳ್ಳಬೇಕೆಂದು ಪ್ರಯತ್ನಪಟ್ಟನು. ಆಗ ಜಯವೀರನು ಅವರಿಬ್ಬರ ಮುಖವನ್ನು ದುರದುರನೆ ನೋಡಿ ಹುಚ್ಚು ಹಿಡಿದವನಂತೆ ಅಲ್ಲಿಂದ ಗುಡುಗುಡನೆ ಓಡಿಹೋಗಿ ನಿಮಿಷಮಾತ್ರದಲ್ಲಿ ದೀನನಾಥನನ್ನು ಕುರ್ಚಿಯ ಸಮೇತವಾಗಿ ಹೊತ್ತುಕೊಂಡು ಬಂದು ವಿಮಲೆಯ ಹಾಸಿಗೆಯ ಸಮೀಪದಲ್ಲಿ ಇಳುಹಿದನು. ವಿಮಲೆಯನ್ನು ಕಂಡ ಕೂಡಲೇ ವೃದ್ಧನ ಮುಖವು ಬಿಳ್ಚೇರಿ ಕಣ್ಣುಗಳು ಕೆಂಪಾದವು "ತಾತ, ನೀವು ನೋಡಿ" ಎಂದು ದೀನನಾಥನಿಗೆ ಜಯವೀರನು ಹೇಳಲು, ತನ್ನ ಅಪ್ಪನನ್ನು 'ತಾತ' ಎಂದು ಕರೆಯುವವನಿವನಾರು, ಎಂದು ವಲ್ಲಭದೇವನಿಗೆ ಆಶ್ಚರ್ಯವಾಯಿತು.

ಬಳಿಕ ಜಯವೀರನು ವೃದ್ಧನನ್ನು ನೋಡಿ "ಸ್ವಾಮೀ, ದೀನನಾಥರೇ ! ನಾನು ಯಾರೆಂದು ನಿಮ್ಮ ಮಕ್ಕಳು ಕೇಳುತ್ತಾರೆ ; ನಾನು ವಿಮಲೆಯ ವರನೆಂದು ತಿಳಿಸಿರಿ. ಇವಳು ನನ್ನವಳೆಂದು ಅವರಿಗೆ ಹೇಳಿರಿ. ಇವಳೇ ನನ್ನ ಸರಸ್ವವೂ ಎಂದು ತಿಳಿಸಿರಿ" ಎಂದು ಉನ್ಮತ್ತನಂತೆ ಪ್ರಲಾಪಿಸುತ್ತ ವಿಮಲೆಯ ಸಮೀಪಕ್ಕೆ ಹೋಗಿ ಅವಳ ಕೈಯನ್ನು ಹಿಡಿದುಕೊಂಡನು.

ಜಯವೀರನ ಸಂಕಟವನ್ನು ಕಂಡು ಪಂಡಿತನಿಗೆ ಮನಗರಗಿ "ಅಯ್ಯೋ, ಪಾಪ" ಎಂದನು. ಆಗ ವಲ್ಲಭದೇವನು.

"ಸ್ವಾಮೀ, ತಾವು ಯಾರೋ ಕಾಣೆ ; ಒಂದು ವೇಳೆ ನೀವು ಹೇಳುವುದು ನಿಜವಾಗಿದ್ದರೂ ಈಗ ಯಾರೇನು ಮಾಡಲಾದೀತು. ಬೇಕಾದರೆ ಇವಳ ಮುಖವನ್ನು ಮತ್ತೊಂದು ಸಾರಿ ನೋಡಿಕೊಂಡು ಹೋಗಿ ಬನ್ನಿರಿ. ಇನ್ನು ಇವಳಿಗೆ ಒಬ್ಬ ಪುರೋಹಿತನಾದರೆ ಸಾಕು."

"ಸ್ವಾಮೀ, ವಲ್ಲಭದೇವರೇ ! ತಾವು ಹಾಗೆ ಹೇಳುವುದು ತರವೇ ? ಅವಳಿಗೆ ಈಗ ಒಬ್ಬನು ಸಾಲದು, ಇಬ್ಬರು ಆಗಬೇಕು—ಪುರೋಹಿತನೊಬ್ಬ ಹಗೆತೀರಿಸುವನೊಬ್ಬ. ನೀವು ಪುರೋಹಿತನಿಗೆ ಹೇಳಿ ಕಳುಹಿಸಿ, ನಾನು ಮಿಕ್ಕ ಕೆಲಸವನ್ನು ನೋಡಿಕೊಳ್ಳುತ್ತೇನೆ."

ವಲ್ಲಭದೇವನು ಗಾಬರಿಯಿಂದ ನಡುಗಿ "ಹಗೆ ತೀರಿಸುವುದೇ ? ಹಾಗೆಂದರೇನು ?" ಎಂದನು.

"ಸ್ವಾಮೀ, ತಮಗೆ ಎರಡು ಅವಸ್ಥೆ ; ತಂದೆಯಾಗಿ ದುಃಖಪಟ್ಟುದು ಆಯಿತು. ನ್ಯಾಯಾಧಿಪತಿಯಾಗಿ ಮಿಕ್ಕ ಕೆಲಸಗಳನ್ನು ಮಾಡಿ"

ಎಂದು ಅವನು ಹೇಳಲು, ದೀನನಾಥನ ಕಣ್ಣುಗಳು ಅರಳಿದುವು. ವೈದ್ಯನು ಹತ್ತಿರಕ್ಕೆ ಬಂದನು. ಅದನ್ನು ಕಂಡು ಜಯವೀರನು ಧೈರ್ಯಗೊಂಡು,

"ಯಾರೋ ಇವಳನ್ನು ಕೊಂದಿದ್ದಾರೆ ; ಇದನ್ನು ನೀವೆಲ್ಲರೂ ಬಲ್ಲಿರಿ, ನಾನು

ಬಲ್ಲೆನು" ಅದನ್ನು ಕೇಳಿ ವಲ್ಲಭದೇವನು ತಲೆಯನ್ನು ತಗ್ಗಿಸಿಕೊಂಡನು. ವೃದ್ಧನು "ಅಹುದು, ಅಹುದು" ಎಂದು ಸೂಚಿಸಿದನು. ವೈದ್ಯನು ಇನ್ನೂ ಹತ್ತಿರಕ್ಕೆ ಬಂದನು.

"ಈಗಿನ ಕಾಲದಲ್ಲಿ ಈ ರೀತಿ ಯಾರು ಸತ್ತರೂ ವಿಚಾರಣೆಯಿಲ್ಲದೆ ಇರಕೂಡದು. ಹೀಗಿರುವಲ್ಲಿ ರೂಪವತಿಯಾಗಿಯೂ ಸುಶೀಲೆಯಾಗಿಯೂ ನ್ಯಾಯಾಧಿಪತಿಯ ಮಗಳಾಗಿಯೂ ಇರುವ ಇವಳಿಗೆ ಉಂಟಾದ ಹಠಾತ್ತಾದ ಸಾವನ್ನು ವಿಚಾರಿಸದೆ ಇರುವುದು ಸರಿಯೇ ? ಸ್ವಾಮೀ, ವಲ್ಲಭದೇವರೇ ! ಇವಳನ್ನು ಕೊಂದ ಖಳರನ್ನು ಕಂಡುಹಿಡಿದು ಅವರಿಗೆ ತಕ್ಕ ಶಿಕ್ಷೆಯನ್ನು ತಾವು ಮಾಡಬೇಕು. ಇಲ್ಲದಿದ್ದರೆ ನಾನು ಸುಮ್ಮನಿರೆನು" ಎಂದು ಹೇಳಿ ಜಯವೀರನು ವಲ್ಲಭದೇವನ ಮುಖವನ್ನು ನೋಡಲು ಅವನು ವೈದ್ಯನ ಮುಖವನ್ನೂ ಅಪ್ಪನ ಮುಖವನ್ನೂ ನೋಡಿದನು. ಅವರಿಬ್ಬರೂ ಜಯವೀರನ ಅಭಿಪ್ರಾಯವೇ ಸರಿ ಎಂದು ಸೂಚಿಸಿದರು.

ಅವರು ಮೂವರು ಏಕಾಭಿಪ್ರಾಯವುಳ್ಳವರಾಗಿದ್ದರೂ ವಲ್ಲಭದೇವನು ಜಗ್ಗದೆ ತನ್ನ ಹುಳುಕನ್ನು ಹೊರಗೆಡಹಬಾರದೆಂದು "ಮೋಸಹೋಗಬೇಡಿರಿ. ಇಲ್ಲಿ ದುಷ್ಕೃತ್ಯಗಳನ್ನು ಮಾಡುವವರಾರು ? ಇದು ನನ್ನ ದುರದೃಷ್ಟ" ಎನ್ನಲು ದೀನನಾಥನ ಕಣ್ಣುಗಳು ಕೋಪದಿಂದ ಬೆಂಕಿಯನ್ನುಗಿದುವು. ವೈದ್ಯನು ಏನನ್ನೋ ಹೇಳತೊಡಗಿದನು. ಅಷ್ಟರಲ್ಲಿಯೇ ಜಯವೀರನು,

"ಇವಳು ವಿಷಪ್ರಯೋಗದಿಂದಲೇ ಸತ್ತಿದ್ದಾಳೆ. ಈ ಮನೆಯಲ್ಲಿ ಇದು ನಾಲ್ಕನೆಯ ಸಾವು. ನಿಮಗೆ ಪಂಡಿತರು ಈ ವಿಷಯವನ್ನು ಮೊದಲೇ ಸೂಚಿಸಿ ಎಚ್ಚರಿಕೆಯಾಗಿರಬೇಕೆಂದು ಹೇಳಿದ್ದರು. ನೀವು ಅವರ ಮಾತನ್ನು ಗಣನೆಗೆ ತರಲಿಲ್ಲ ; ಅದರಿಂದ ನಿಮಗೆ ಈ ಗತಿಯುಂಟಾಯಿತು."

ಈ ತೊಂದರೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಯಾವ ದಾರಿಯನ್ನೂ ಕಾಣದೆ ವಲ್ಲಭದೇವನು "ನಿಮಗೆ ಹುಚ್ಚು" ಎಂದನು.

"ನನಗೆ ಹುಚ್ಚೇ ? ಹಾಗಾದರೆ ಪಂಡಿತರನ್ನು ಕೇಳೋಣ ಪಂಡಿತರೇ, ಶಾಂತವೀರನ ಕುಟುಂಬ ಸತ್ತ ರಾತ್ರಿ ತಾವು ಈ ಮನೆಯ ಹಿಂದಣ ತೋಟದಲ್ಲಿ ಇವರನ್ನು ಕುಳ್ಳಿರಿಸಿಕೊಂಡು ಏನೇನು ಹೇಳಿದಿರಿ ? ಅಪ್ಪಣೆಯಾಗಲಿ" ಎಂದು ಹೇಳಿ ವಿಮಲೆಯ ಮುಖವನ್ನು ನೋಡಿ "ಪ್ರಿಯೇ ! ನಿನ್ನನ್ನು ಕೊಂದ ಘಾತುಕರನ್ನು ನಿನ್ನ ತಂದೆಯು ಶಿಕ್ಷಿಸದಿದ್ದರೆ ನಾನು ಅವರಿಗೆ ತಕ್ಕ ಶಿಕ್ಷೆಯನ್ನು ಮಾಡಿಸದೆ ಇರುವೆನೇ ?" ಎಂದು ಗಳಗಳನೆ ಅಳುವುದಕ್ಕೆ ಪ್ರಾರಂಭಿಸಿದನು.

ಆಗ ವೈದ್ಯನು ವಲ್ಲಭದೇವನನ್ನು ಕುರಿತು "ಅವರು ಹೇಳುವುದು ನಿಜ; ಇನ್ನು ನೀವು ಸುಮ್ಮನಿದ್ದರೂ ನಾನು ಸುಮ್ಮನಿರಲಾರೆ" ಎಂದನು. ಇವರಿಬ್ಬರೂ ಈ ರೀತಿ ತನಗೆ

ವಿರೋಧವಾಗಿ ಮಾತನಾಡುವುದನ್ನು ಕಂಡು ವಲ್ಲಭದೇವನು "ಅಯ್ಯೋ ದೇವರೇ, ಏನು ಮಾಡಲಿ ?" ಎಂದು ಕೂಗಿಕೊಂಡನು. ಅಷ್ಟರಲ್ಲಿ ದೀನನಾಥನು ಮಾತನಾಡಬೇಕೆಂದು ಸೂಚಿಸಲು, ಜಯವೀರನು "ಹೋ ! ತಾಳಿ, ತಾಳಿ; ದೀನನಾಥರು ಏನನ್ನೋ ಹೇಳಬೇಕೆಂದಿದ್ದಾರೆ. ತಾತ, ಈ ಪಾತಕವನ್ನು ಮಾಡಿದವರು ನಿಮಗೆ ಗೊತ್ತೋ ?" ಎನ್ನಲು, ಅವನು 'ಹುಂ' ಎಂದು ಬಾಗಿಲನ್ನು ನೋಡಿದನು.

"ಯಾರನ್ನಾದರೂ ಕರೆಯಬೇಕೋ ?"

"ಉಹುಂ."

""ಯಾರಾದರೂ ಹೊರಗೆ ಹೋಗಬೇಕೋ ?"

"ಹುಂ."

"ನಾನು ಹೊರಗೆ ಹೋಗಲೋ ?"

"ಹುಂ."

"ನಾನೊಬ್ಬನೇ ಹೋಗಬೇಕೋ ?"

"ಉಹುಂ."

"ವಲ್ಲಭದೇವರೂ ಹೋಗಬೇಕೋ ?"

"ಉಹುಂ."

"ವೈದ್ಯರು ಹೋಗಬೇಕೋ ?"

"ಹುಂ."

ಆಗ ವೈದ್ಯನೂ ಜಯವೀರನೂ ಹೊರಗೆ ಹೋದರು. ಸುಮಾರು ಕಾಲು ಗಂಟೆಯೊಳಗಾಗಿ ವಲ್ಲಭದೇವನು ಹೊರಗೆ ಬಂದು "ಇನ್ನು ಮೇಲೆ ನೀವು ಬರಬಹುದು" ಎಂದು ಅವರನ್ನು ಒಳಗೆ ಕರೆದುಕೊಂಡು ಹೋಗಿ "ಸ್ವಾಮೀ, ನಮ್ಮಪ್ಪನು ಪಾತಕಿ ಇಂಥವರೆಂದು ನನಗೆ ಹೇಳಿದ್ದಾನೆ. ಅವರಿಗೆ ತಕ್ಕ ಶಿಕ್ಷೆಯನ್ನು ಮಾಡುತ್ತೇನೆಂದು ಪ್ರಮಾಣಮಾಡಿದ್ದೇನೆ. ತಾವು ಆ ವಿಷಯದಲ್ಲಿ ಧೈರ್ಯವಾಗಿರಬಹುದು. ಈ ವಿಷಯವನ್ನು ತಾವು ಯಾರಿಗೂ ಹೇಳದೆ ಇರಬೇಕೆಂದು ಬೇಡಿಕೊಳ್ಳುತ್ತೇನೆ" ಎಂದನು. ಇದನ್ನು ಕೇಳಿ ವೈದ್ಯನೂ ಜಯವೀರನೂ ವೃದ್ಧನ ಮುಖವನ್ನು ನೋಡಲು, ಅವನು ಅದು ಸರಿಯೆಂದು ಸೂಚಿಸಿದನು.

ಅನಂತರ ವಲ್ಲಭದೇವನು ವೈದ್ಯರನ್ನು ಕುರಿತು "ಸ್ವಾಮೀ ಪಂಡಿತರೇ, ವಿಮಲೆಯು ದೇವರಲ್ಲಿ ಭಕ್ತಿಯುಳ್ಳವಳು ; ಆದುದರಿಂದ ಯಾವನಾದರೂ ಒಬ್ಬ ಯೋಗ್ಯನಾದ ಪುರೋಹಿತನನ್ನು ಕರೆದರೆ ಅವಳ ಅಪರಕಾರ್ಯಗಳನ್ನು ಸರಿಯಾಗಿ ಮಾಡಿಸುವನು" ಎಂದು ಹೇಳಲು, ಅವನು "ಆಗಲಿ" ಎಂದು ಹೇಳಿ ಅಲ್ಲಿಂದ ಹೊರಟನು. ಅಲ್ಲಿ ತಾನು ಮಾಡಬೇಕಾದುದು ಏನೂ ಇಲ್ಲದಿದ್ದುದರಿಂದ ಜಯವೀರನೂ ಅವನ ಹಿಂದೆ ಹೋದನು.

ವಲ್ಲಭದೇವನ ಮನೆಯಿಂದ ಪಂಡಿತನು ಹೊರಟಾಗ ಪಕ್ಕದ ಮನೆಯ ಬಾಗಿಲಲ್ಲಿ ವೈದಿಕನೊಬ್ಬನು ನಿಂತಿದ್ದನು. ವೈದ್ಯನು ಅವನನ್ನು ಕಂಡು "ಸ್ವಾಮೀ, ಯೋಗ್ಯರಾದ ಪುರೋಹಿತರಾರಾದರೂ ತಮಗೆ ಗೊತ್ತುಂಟೋ ? ಗೊತ್ತಿದ್ದರೆ ವಲ್ಲಭದೇವರ ಮಗಳ ಉತ್ತರಕ್ರಿಯೆಗೆ ಅವರನ್ನು ಕರೆಸಿಕೊಟ್ಟು ಸಹಾಯಮಾಡಬೇಕು" ಎಂದನು. ಅದಕ್ಕೆ ಅವನು "ಆ ಹುಡುಗಿಯು ಸತ್ತುಹೋದಳಂತೆ, ಅಯ್ಯೋ ಪಾಪ ! ನಮ್ಮ ದೇಶದಲ್ಲಿ ಪ್ರಾಯಶಃ ವೈದಿಕರೆಲ್ಲರೂ ಪೌರೋಹಿತ್ಯವನ್ನು ಮಾಡಿಸಬಲ್ಲರು, ನಾನೂ ಬಲ್ಲೆನು ; ಬೇಕಾದರೆ ನಾನೇ ಎಲ್ಲವನ್ನೂ ಮಾಡಿಸುತ್ತೇನೆ" ಎಂದನು. ಅದಕ್ಕೆ ಒಪ್ಪಿ ಪಂಡಿತನು ಅವನನ್ನು ಸಂಗಡ ಕರೆದುಕೊಂಡು ಹೋಗಿ ಆ ಮನೆಯಲ್ಲಿ ಬಿಟ್ಟು ಮುಂದೆ ನಡೆಯಬೇಕಾದುದಕ್ಕೆ ತಕ್ಕ ಏರ್ಪಾಟನ್ನು ಮಾಡಬೇಕೆಂದು ಹೇಳಿ ಹೊರಟುಹೋದನು. ಪುರೋಹಿತನೂ ದೀನನಾಥನೂ ವಿಮಲೆಯ ಕೊಠಡಿಯಲ್ಲಿ ಇದ್ದರು.

## ೬೭
## ಜಯವೀರನ ಪ್ರಲಾಪ

ವಿಮಲೆಯನ್ನು ಸ್ಮಶಾನಕ್ಕೆ ಸಾಗಿಸಿಕೊಂಡು ಹೋದರು. ಶವದ ಹಿಂದೆ ವಲ್ಲಭದೇವನಿಗೆ ಆಪ್ತರಾದ ಕೆಲವರೂ, ದಮನಕ, ಚಿತ್ರಸೇನ, ಭದ್ರಸಿಂಹರೂ ಹೋದರು. ಜಯವೀರನೂ ಅಲ್ಲಿಗೆ ಹೋಗಬಹುದೆಂದು ಊಹಿಸಿ, ರಾಜಾ ಮಲಯಸಿಂಹನು ಬಂಡಿಯನ್ನು ಕಟ್ಟಿಸಿಕೊಂಡು ಅತಿ ವೇಗದಿಂದ ಓಡಿಸಿಕೊಂಡು ಬಂದು, ಸ್ಮಶಾನದಲ್ಲಿ ಗುಂಪುಗುಂಪಾಗಿ ನಿಂತಿದ್ದವರೊಳಗೆ ಜಯವೀರನನ್ನು ಕಾಣದೆ, ದಮನಕ ಚಿತ್ರಸೇನರಿದ್ದೆಡೆಗೆ ಹೋಗಿ ಅವರನ್ನು ವಿಚಾರಿಸಲು "ನಾವು ಅವನನ್ನು ನೋಡಲಿಲ್ಲ"ವೆಂದು ಅವರು ಹೇಳಿದರು. ರಾಜನು ಗಾಬರಿಬಿದ್ದು ಅವನು ಬಾರದಿದ್ದರೆ ಏನು ಅಚಾತುರ್ಯವು ನಡೆಯುವುದೋ ಎಂದು ಪೇಚಾಡಿ, ಸುತ್ತಮುತ್ತ ನೋಡಿ ಅವನ ಮನೆಗಾದರೂ ಹೋಗಿ ನೋಡುತ್ತೇನೆಂದು ಯೋಚಿಸುತ್ತಿದ್ದಾಗ ದೂರದಲ್ಲಿ ಜಯವೀರನು ಬರುತಿದ್ದುದನ್ನು ಕಂಡು ಧೈರ್ಯಗೊಂಡನು.

ಅಲ್ಲಿಗೆ ಬಂದಿದ್ದವರಲ್ಲಿ ಕೆಲವರು ವೈರಾಗ್ಯವನ್ನು ಬೋಧಿಸುತ್ತಲೂ, ಕೆಲವರು ತಮ್ಮ ದುಃಖಗಳನ್ನು ವಿವರಿಸುತ್ತಲೂ, ಕೆಲವರು ವಲ್ಲಭದೇವನ ಮನೆಯಲ್ಲಿ ಸಾಲು ಸಾಲಾಗಿ ಆದ ಸಾವನ್ನು ಕುರಿತು ಹೇಳುತ್ತಲೂ, ಕೆಲವರು ವಿಮಲೆಯ ರೂಪಲಾವಣ್ಯ ಗುಣಗಳನ್ನು ವರ್ಣಿಸುತ್ತಲೂ ಇದ್ದರು. ರಾಜನು ಅದನ್ನೆಲ್ಲಾ ಕೇಳುತ್ತಲಿದ್ದರೂ ಅವನ ದೃಷ್ಟಿಯು ಜಯವೀರನನ್ನು ಬಿಟ್ಟು ಅತ್ತಿತ್ತ ಕದಲಲಿಲ್ಲ. ಅಲ್ಲಿ ಮಾಡಬೇಕಾದುದೆಲ್ಲಾ ಮುಗಿದ ಬಳಿಕ ಎಲ್ಲರೂ ಅವರವರ ಮನೆಗೆ ಹೊರಟರು. ಜಯವೀರನು ಮಾತ್ರ ಅಲ್ಲಿಯೇ

ನಿಂತನು. ಎಲ್ಲರಂತೆಯೇ ರಾಜನೂ ಮನೆಗೆ ಹೊರಟು ಸ್ವಲ್ಪ ದೂರ ಹೋದ ಮೇಲೆ ಬಂಡಿಯನ್ನು ಬೇರೆ ಮಾರ್ಗದಲ್ಲಿ ಬಿಡಿಸಿಕೊಂಡು ಹಿಂದಿರುಗಿ ಸ್ಮಶಾನಕ್ಕೆ ಬಂದು ಸೇರಿ, ದೂರದಲ್ಲಿ ಒಂದು ಮರದ ಮರೆಯಲ್ಲಿ ನಿಂತು ಜಯವೀರನು ಏನು ಮಾಡುತ್ತಾನೆಂದು ನೋಡುತ್ತಲಿದ್ದನು.

ಅಲ್ಲಿ ಒಬ್ಬರೂ ಇಲ್ಲವೆಂದು ತಿಳಿದು ಜಯವೀರನು ವಿಮಲೆಯನ್ನು ಹೂಳಿದ ಸ್ಥಳದಲ್ಲಿ ಕುಳಿತುಕೊಂಡು, "ವಿಮಲೆ, ನಿನ್ನನ್ನು ನೋಡಿ ನಾನು ಇದುವರೆಗೂ ಜೀವ ಹಿಡಿದಿದ್ದೆನಲ್ಲ ; ಇಂಥ ರೂಪವೂ, ಶೀಲವೂ, ಗುಣವೂ ಒಂದು ಹಿಡಿ ಮಣ್ಣಾಗಿ ಹೋಯಿತೇ ! ನಾನೆಂಥ ಮಂದಭಾಗ್ಯ ! 'ವೀರಸಿಂಹನಿಗೂ ನನಗೂ ಏರ್ಪಾಡಾಗಿದ್ದ ಮದುವೆಯು ತಪ್ಪಿಹೋಯಿತು. ಇನ್ನು ನಾನು ನಿನ್ನವಳೇ' ಎಂದು ಹೇಳುತ್ತಿದ್ದೆಯಲ್ಲಾ ! ನಿನ್ನನ್ನು ಮದುವೆಯಾಗಿ ಸುಖಪಡಬೇಕೆಂದಿದ್ದೆನಲ್ಲಾ ! ಅಯ್ಯೋ ! ನನ್ನ ಆಸೆಯೆಲ್ಲಾ ಭಗ್ನವಾಗಿಹೋಯಿತಲ್ಲಾ ! ವಿಮಲೇ ಎಂದು ಕರೆಯುತ್ತಿದ್ದ ಈ ನನ್ನ ಬಾಯಿಗೆ ಮಣ್ಣು ಹಾಕಿದೆಯೆಲ್ಲಾ ! ಹಾ ದೈವವೇ ! ನೀನು ಹೀಗೆ ನಿರ್ಘೃಣನಾದೆಯಾ ? ಅಯ್ಯೋ ವಿಮಲೆ ! ನೀನು ಹೋದ ಮೇಲೆ ನಾನೆಂತು ಬದುಕಲಿ ? ನೀನು ಹೋದ ಲೋಕಕ್ಕೆ ನಾನು ಬರುತ್ತೇನೆ ಅಲ್ಲಿಯೂ ಹೀಗೆಯೇ ಮೋಸಮಾಡುವಿಯೋ ? ಏನಾದರೂ ಆಗಲಿ, ನಿನ್ನನ್ನು ಅಗಲಿ ನಿಮಿಷ ನಿಮಿಷವೂ ಸಂಕಟಪಟ್ಟುಕೊಂಡು ಬದುಕಿ ಇರುವುದಕ್ಕಿಂತ ಆ ನಿನ್ನ ಲೋಕಕ್ಕೆ ಬಂದು ನಿನ್ನನ್ನು ಅನವರತವೂ ನೋಡಿಕೊಂಡಾದರೂ ಸಂತೋಷಪಡುತ್ತೇನೆ" ಎಂದು ಅವಳ ಶೀಲಾದಿ ಗುಣಗಳನ್ನು ನೆನೆನೆನೆದು ಕಲ್ಮರಗಳು ಕರಗಿ ನೀರಾಗುವಂತೆ ಹಂಬಲಿಸುತ್ತಿದ್ದನು.

ರಾಜನು ಅವನಿಗೆ ತಿಳಿಯದ ಹಾಗೆ ಹಿಂದೆ ಹೋಗಿ ಅವನ ದುಃಖವು ಸ್ವಲ್ಪ ಶಮನವಾದ ಮೇಲೆ ಅವನ ಭುಜನ ಮೇಲೆ ಕೈಯಿಟ್ಟು "ಜಯವೀರ, ನಾನು ನಿನ್ನನ್ನೇ ಹುಡುಕಿಕೊಂಡು ಇಲ್ಲಿಗೆ ಬಂದೆ ; ಇಲ್ಲಿ ಯಾರೂ ಇಲ್ಲ. ಎಲ್ಲರೂ ಹೊರಟು ಹೋದರು. ನಾವೂ ಮನೆಗೆ ಹೋಗೋಣ ಬಾ," ಎಂದನು.

"ನೀವು ನಡೆಯಿರಿ. ನಾನೀಗಲೇ ಬರಲಾರೆ."

ರಾಜನು ಬದಲು ಮಾತಾಡದೆ ಅಲ್ಲಿಂದ ಹೊರಟು ಸ್ವಲ್ಪ ದೂರದಲ್ಲಿದ್ದ ಪೊದರಿನ ಮರೆಯಲ್ಲಿ ನಿಂತಿದ್ದನು. ಅವನು ಹೊರಟುಹೋದನೆಂದು ಭಾವಿಸಿ ಜಯವೀರನು ಎದ್ದು ತನ್ನ ಮನೆಗೆ ಅತ್ಯಾತುರದಿಂದ ಹೊರಟನು. ಜಯವೀರನಿಗೆ ತಿಳಿಯದಂತೆ ಅವನ ಹಿಂದೆಯೇ ರಾಜನೂ ಹೊರಟು, ಅವನು ಮನೆಯನ್ನು ಸೇರಿದ ಎರಡು ನಿಮಿಷಗಳೊಳಗಾಗಿ ತಾನೂ ಅಲ್ಲಿಗೆ ಹೋಗಿ, ರತ್ನಾಂಬೆಯನ್ನು ಕಂಡು "ಜಯವೀರನೆಲ್ಲಿ" ಎಂದು ಕೇಳಿದನು. "ಅಣ್ಣನು ಆಗತಾನೇ ಮನೆಗೆ ಬಂದು ಒಳಗಿದ್ದಾನೆ. ಇನ್ನೇನು ಬರುತ್ತಾನೆ, ಕುಳ್ಳಿರೋಣವಾಗಲಿ" ಎಂದು ಹೇಳಲು ರಾಜನು "ಅಮ್ಮಾ, ನಾನು ಈಗಲೇ ಜಯವೀರನನ್ನು ನೋಡಬೇಕಾಗಿದೆ" ಎಂದು ಹೇಳಿ ಮಹಡಿಯನ್ನು ಹತ್ತಿ ನೋಡಲು ಅವನ ಕಿರುಮನೆಯ

ಬಾಗಿಲನ್ನು ಮುಚ್ಚಿ ಒಳಗೆ ತಾಳು ಹಾರೆದ್ದಿತು. ಆಗ ರಾಜನು ತುಂಬ ಕಳವಳಗೊಂಡು "ಈಗ ಏನು ಮಾಡಲಿ ? ಕೂಗಿದರೂ ಕಷ್ಟ, ಸಾವಕಾಶಮಾಡಿದರೂ ಕಷ್ಟ. ಏನು ಅವಿವೇಕವಾಗುವುದೋ ?' ಎಂದು ಬೀಗದಕ್ಕೈ ಸಂದಿನಲ್ಲಿ ಇಣಿಕಿ ನೋಡಿದನು. ಒಳಗೆ ನಡೆಯುವುದು ಯಾವುದೂ ಕಾಣದೆ ಇರಲೋಸುಗ ಕನ್ನಡಿಯ ಕದಕ್ಕೆ ಹಸರು ಬಣ್ಣದ ತೆರೆಯು ಬಿಟ್ಟಿದ್ದಿತು. ಅದರಿಂದ ಒಳಗೆ ಜಯವೀರನು ಏನು ಮಾಡುತ್ತಿದ್ದನೋ ಗೊತ್ತಾಗಲಿಲ್ಲ. ಏನಾದರೂ ಆಗಲಿ, ಸಾವಕಾಶ ಮಾಡಿದರೆ ಕಾರ್ಯ ಕೆಟ್ಟೀತೆಂದುಕೊಂಡು ರಾಜನು ತಟ್ಟನೆ ಬಾಗಿಲ ಕನ್ನಡಿಯನ್ನು ಒಡೆದು ಕೈತೂರಿಸಿ ತಾಳನ್ನು ತೆಗೆದು ಕೊಟಡಿಗೆ ಹೋದನು. ಆಗ ಜಯವೀರನು ಮೇಜಿನ ಮುಂದೆ ಕುಳಿತು ಏನನ್ನೋ ಬರೆಯುತ್ತಲಿದ್ದನು. ರಾಜನು ಒಳಗೆ ಬಂದುದನ್ನು ಕಂಡು ಅವನು ಒಂದೇಪೆಟ್ಟಿಗೆ ಓಡಿ ಬಂದು ಮೇಜಿನ ಸಮೀಪಕ್ಕೆ ಬಾರದಂತೆ ಇದಿರಿಗೆ ಹೋಗಿ ನಿಂತುಕೊಂಡನು.

ಅದನ್ನು ಕಂಡು ರಾಜನು "ಜಯವೀರರೇ ! ಮನ್ನಿಸಿ. ಕನ್ನಡಿಯು ನನ್ನ ಅಚಾತುರ್ಯದಿಂದ ಒಡೆದುಹೋಗಲಿಲ್ಲ; ನಿಮ್ಮ ಆಳುಗಳು ನೆಲವನ್ನು ಚೆನ್ನಾಗಿ ಉಜ್ಜಿ ಇದ್ದುದರಿಂದ ನಾನು ಬರುವಾಗ ಜಾರಿಬಿದ್ದೆನು. ಅದರಿಂದ ಕನ್ನಡಿಯು ಒಡೆದುಹೋಯಿತು. ಕನ್ನಡಿಯು ಹೋದ ಮೇಲೆ ಬಾಗಿಲನ್ನು ತೆಗೆದುಕೊಂಡು ಬರುವುದು ಕಷ್ಟವಾಗಿರಲಿಲ್ಲ."

"ಸ್ವಾಮೀ, ನಿಮಗೇನಾದರೂ ಪೆಟ್ಟಾಯಿತೋ ?"

"ಇಲ್ಲ, ಇಲ್ಲ ; ನೀವು ಏನು ಮಾಡುತ್ತಲಿದ್ದಿರಿ ? ಯಾವುದನ್ನೋ ಬರೆಯುತ್ತಲಿದ್ದಂತೆ ಇದೆ."

"ನಾನು ಸೈನ್ಯದಲ್ಲಿದ್ದರೂ ಬರವಣಿಗೆಯ ಹಂಬಲನ್ನು ಬಿಟ್ಟಿಲ್ಲ ; ಕೊಂಚ ಇಟ್ಟುಕೊಂಡಿದ್ದೇನೆ."

"ಸರಿ, ಸರಿ," ಎಂದು ರಾಜನು ಹಾಗೆಯೇ ಸ್ವಲ್ಪ ಮುಂದೆ ಹೋಗಿ, ""ನೀವು ಬರೆಯುತ್ತಲಿದ್ದಿರಾ ?" ಎಂದು ಪುನಃ ಕೇಳಲು ಜಯವೀರನು,

"ಅಹುದು ಎಂದು ಆಗಲೇ ಹೇಳಲಿಲ್ಲವೇ ?"

ಅದನ್ನು ಕೇಳಿ ರಾಜನು ಸುತ್ತುಮುತ್ತಲೂ ನೋಡಿದಂತೆ ಮಾಡಿ ಮೇಜಿನ ಮೇಲೆ ಇಟ್ಟಿದ್ದ ಪಿಸ್ತೂಲನ್ನು ಕಂಡು,

"ಓಹೋ ! ಇದೇನು, ಪಿಸ್ತೂಲನ್ನು ಸಿದ್ಧಮಾಡಿ ಇಟ್ಟುಕೊಂಡಿದ್ದೀರಿ ?"

"ನಾನು ಪ್ರಯಾಣೋನ್ಮುಖವಾಗಿ ಇರುವುದರಿಂದ ಅವುಗಳನ್ನು ಈಚೆಗೆ ತೆಗೆದು ಇಟ್ಟೆನು."

"ಜಯವೀರರೇ !"

"ಸ್ವಾಮೀ."

"ಆತುರಪಟ್ಟು ಯಾವ ಕೆಲಸವನ್ನೂ ಮಾಡಬೇಡಿ. 'ಆತುರಗಾರರಿಗೆ ಬುದ್ಧಿಮಟ್ಟು' ಎಂದು ಕೇಳಿಲ್ಲವೇ ?"

"ಪ್ರಯಾಣ ಮಾಡುವುದರಲ್ಲಿ ಆತುರವೇನು ?"

"ಜಯವೀರರೇ ! ನಮ್ಮ ವೇಷವನ್ನು ಬಿಟ್ಟು ಸಹಜವಾಗಿ ಮಾತನಾಡೋಣ. ನಾನು ಈ ವೇಳೆಯಲ್ಲಿ ಈ ಕೊಠಡಿಯ ಬಾಗಿಲ ಕನ್ನಡಿಯನ್ನು ಒಡೆದು ಒಳಕ್ಕೆ ಬರಬೇಕಾಗಿದ್ದರೆ ಸುಮ್ಮನೆ ಬರುತ್ತೇನೆಯೇ ? ನೀವು ಹೇಳುವ ಮಾತು ನಿಜವಲ್ಲ. ಆತ್ಮಹತ್ಯ ಮಾಡಿಕೊಳ್ಳುವುದಕ್ಕಾಗಿ ಈ ಪಿಸ್ತೂಲನ್ನು ಹೊರಗೆ ತೆಗೆದು ಇಟ್ಟುಕೊಂಡಿದ್ದೀರಿ. ಈಗ ನೀವು ಬರೆಯುತ್ತಲಿದ್ದ ಲೇಖನವು ಅದನ್ನು ಸ್ಥಿರಪಡಿಸುತ್ತದೆ" ಎಂದು ಹೇಳುತ್ತ ರಾಜನು ತಟ್ಟನೆ ಮೇಜಿನ ಬಳಿಗೆ ಹೋಗಿ ಮುಕ್ಕಾಲು ಪಾಲು ಬರೆದಿಟ್ಟಿದ್ದ ಕಾಗದವನ್ನು ತೆಗೆದುಕೊಂಡನು. ಅದನ್ನು ಕಂಡು ಜಯವೀರನು ದಡಬಡನೆ ಓಡಿ ಬಂದು ಆ ಕಾಗದವನ್ನು ಅವನ ಕೈಯಿಂದ ಕಿತ್ತುಕೊಳ್ಳುವುದಕ್ಕೆ ನೋಡಿದನು. ರಾಜನು ದೂರದಿಂದಲೇ ತನ್ನ ದೃಢವಾದ ಹಸ್ತದಿಂದ ಅವನ ತೋಳನ್ನು ಹಿಡಿದುಕೊಂಡನು.

"ಇಗೋ ನೋಡಿ, ಈ ಲೇಖನವು ನಿಮ್ಮ ಇಂಗಿತವನ್ನು ವ್ಯಕ್ತಪಡಿಸುತ್ತದೆ."

"ನನ್ನ ದೇಹವನ್ನು ಕಳೆದುಕೊಳ್ಳುವುದಕ್ಕೆ ಯಾರ ಅಡ್ಡಿ ಏನು ? ನನ್ನ ಮನೋರಥಗಳೆಲ್ಲವೂ ನಿಷ್ಫಲವಾದುವು ನಾನು ಇನ್ನು ಬದುಕಿದ್ದರೂ ಸತ್ತಂತೆಯೇ. ಆದುದರಿಂದ ತಾವು ನನ್ನ ಗೋಜಿಗೆ ಬಾರದೆ ಸುಮ್ಮನೆ ಇದ್ದರೆ ನನ್ನ ವಿಷಯದಲ್ಲಿ ಬಹಳ ಉಪಕಾರ ಮಾಡಿದಂತಾಗುವುದು. ನನ್ನ ಕಷ್ಟವನ್ನೂ ಸಂಕಟವನ್ನೂ ಕಂಡು ಹೇಗೆ ತಾನೆ ನನ್ನನ್ನು ತಡೆಯುವುದಕ್ಕೆ ನಿಮಗೆ ಮನಸ್ಸು ಬಂದೀತು ?"

"ಅಪ್ಪಾ ! ಅದಕ್ಕಾಗಿಯೇ ನಾನು ಈಗ ಇಲ್ಲಿಗೆ ಬಂದೆನು."

"ನನಗೆ ಅನುಕೂಲ ಮಾಡಿಕೊಡುತ್ತೇನೆಂದು ಇಲ್ಲದ ಆಸೆಯನ್ನು ತೋರಿಸಿ ತಾವು ಧೈರ್ಯ ಹೇಳುತ್ತಿದ್ದುದರಿಂದ ವಿಮಲೆಯು ಸಾಯುವ ವೇಳೆಯಲ್ಲಿ ಸಹಾ ಅವಳ ಪಕ್ಕದಲ್ಲಿ ನಾನು ಇದ್ದು ಒಂದು ಮಾತನ್ನು ಕೂಡ ಆಡುವುದಕ್ಕಿಲ್ಲದಂತೆ ಆಯಿತು. ಇದೂ ಅಲ್ಲದೆ ಸರ್ವಜ್ಞರೆಂದು ಹೇಳಿಕೊಳ್ಳುವ ತಾವು ಅವಳಿಗೆ ಹಾಕಿದ್ದ ವಿಷವನ್ನು ಪರಿಹರಿಸಲಾರದೆ ಹೋದಿರಿ. ಹೀಗೆ ಸುಳ್ಳುಹೇಳಿ ಮೋಸ ಮಾಡುವ ನೀವು ನನ್ನ ಇದಿರಿಗೆ ಬಂದು ಹೇಗೆ ತಾನೇ ಮುಖ ತೋರಿಸುತ್ತೀರಿ ? ವೇಷವನ್ನು ಬಿಟ್ಟು ಸಹಜವಾಗಿ ಮಾತನಾಡೋಣ ಎಂದಲ್ಲವೇ ನೀವು ಹೇಳಿದಿರಿ ? ಹಾಗೆಯೇ ಆಗಲಿ. ಜ್ಞಾನಶಕ್ತಿಬಲೈಶ್ವರ್ಯಗಳಲ್ಲಿ ಅಸಮಾನರಂತೆ ನೀವು ಮಾಡಿದ ನಟನೆಗೆ ಮರುಳಾಗಿ ನಿಮ್ಮನ್ನು ನನ್ನ ತಂದೆಯಂತೆ ಭಾವಿಸಿದ್ದುದಕ್ಕೆ ಈಗ ಸಾರ್ಥಕವಾಯಿತು. ಸತ್ತವರನ್ನು ಬದುಕಿಸುವೆಂಬುವರು ಮೂಢರಲ್ಲವೇ ? ಅವರ ಮಾತನ್ನು ನಂಬುವವನು ಎಂಥಾ ಹೆಡ್ಡನಾಗಿರಬೇಕು. ನಿಮ್ಮ ನಟನೆಗೆ ಬೆರಗಾಗದೆ ಇದ್ದಿದ್ದರೆ ನಿಮ್ಮ ಯೋಗ್ಯತೆಯು ಇಷ್ಟೇ ಸರಿ ಎಂದು ಆಗಲೇ ತಿಳಿದು ಅವಳನ್ನು ಬದುಕಿಸಿಕೊಳ್ಳುವುದಕ್ಕೆ ಆಗದೆ ಇದ್ದರೂ ಮನಸ್ತೃಪ್ತಿಯಾಗುವಂತೆ ನೋಡಿ ಅವಳೊಡನೆ ಮಾತನಾಡುತ್ತಲಿದ್ದೆನು. ಅದೂ

ತಪ್ಪಿಹೋಯಿತು. ನಿಮ್ಮ ಸಹವಾಸ ಇಷ್ಟಕ್ಕೆ ಸಾಕು. ಇಗೋ ! ನಿಮ್ಮ ಇದಿರಿಗೇ ನಾನು ಪ್ರಾಣವನ್ನು ಬಿಡುತ್ತೇನೆ. ಹೇಗೆ ತಪ್ಪಿಸುತ್ತೀರಿ, ನೋಡೋಣ" ಎಂದು ಮೇಜಿನ ಮೇಲೆ ಇಟ್ಟಿದ್ದ ಪಿಸ್ತೂಲನ್ನು ತೆಗೆದುಕೊಳ್ಳುವುದಕ್ಕೆ ಕೈಯನ್ನು ನೀಡಿದನು.

"ನಾನು ತಪ್ಪಿಸಬಲ್ಲೆ" " ಎಂದು ರಾಜನು ಅವನನ್ನು ತಡೆದನು.

"ಇಷ್ಟು ಸ್ವಾತಂತ್ರ್ಯವನ್ನು ವಹಿಸುವುದಕ್ಕೆ ನೀವು ಯಾರು ?"

"ನಾನು ಯಾರೇ ? ಧನಕೋಟಿಯ ಹೊಟ್ಟೆಯಲ್ಲಿ ಹುಟ್ಟಿದ ನೀನು ಈ ರೀತಿ ಸಾಯಕೂಡದೆಂದು ಹೇಳಬಲ್ಲವನು ಈ ಲೋಕದಲ್ಲಿ ನಾನಲ್ಲದೆ ಬೇರೆ ಒಬ್ಬನಿರುವನೇ ?"

"ನಮ್ಮಪ್ಪನ ಹೆಸರನ್ನು ಏಕೆ ಎತ್ತುತ್ತೀರಿ ?"

"ಹಿಂದೆ ನಿನ್ನ ತಂದೆಯವರೂ ಹೀಗೆಯೇ ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದಾಗ ನಾನು ಅದನ್ನು ತಪ್ಪಿಸಿದೆನು ; ನಿನ್ನ ತಂಗಿಗೆ ಹಣದ ಚೀಲವನ್ನು ಕೊಟ್ಟವನು ನಾನೇ; ಮುಳುಗಿಹೋದ ಜಯಲಕ್ಷ್ಮಿಗೆ ಬದಲಾಗಿ ಬೇರೆ ಜಯಲಕ್ಷ್ಮಿಯನ್ನು ಒದಗಿಸಿಕೊಟ್ಟವನೂ ನಾನೇ ; ನಾನು, ಧರ್ಮದೇವ, ತಿಳಿಯಿತೋ ?" ಎಂದನು.

ಅವನು ಈ ರೀತಿ ಹೇಳಲು ಜಯವೀರನು ಬಳಲಿದವನಂತೆ ಆಶ್ಚರ್ಯದಿಂದ ಎರಡು ಮೂರು ಅಡಿಗಳು ಹಿಮ್ಮೆಟ್ಟಿ ನಿಂತನು. ಆಗ ಅವನಿಗಿದ್ದ ಸಂಕಟವೂ ದುಃಖವೂ ತೊಲಗಿಹೋಗಿ ತಟ್ಟನೆ ಬಾಗಿಲ ಬಳಿಗೆ ಬಂದು ನಿಂತು "ರತ್ನಾಂಬೆ, ರತ್ನಾಂಬೆ" ಎಂದು ತಂಗಿಯನ್ನು ಕರೆದನು. ಆಗ ರಾಜನು ಅಲ್ಲಿಂದ ಹೊರಗೆ ಹೊರಟನು. ಅವನು ಹೊರಗೆ ಹೋಗದಂತೆ ಜಯವೀರನು ಬಾಗಿಲಿಗೆ ಅಡ್ಡಲಾಗಿ ನಿಂತನು. ರತ್ನಾಂಬೆಯೂ ಮನೋಮೋಹನನೂ ಬಿದ್ದು ಬೀಳಾಗಿ ಓಡಿ ಬಂದರು. ಜಯವೀರನು ಅವರಿಬ್ಬರ ಕೈಗಳನ್ನೂ ಹಿಡಿದುಕೊಂಡು "ಅಡ್ಡಬೀಳಿರಿ. ಅಡ್ಡಬೀಳಿರಿ. ಇವರೇ ನಮ್ಮ ದೇವರು; ನಮ್ಮ ತಂದೆಗೆ ಪ್ರಾಣದಾನವನ್ನು ಮಾಡಿದವರು ಇವರೇ" ಎಂದು ಹೇಳುವುದರೊಳಗಾಗಿ ರಾಜನು ತನ್ನ ಹೆಸರನ್ನು ಹೇಳಬೇಡವೆಂದು ತಡೆದನು.

ಆಗ ಅವರೆಲ್ಲರೂ ಬಿದ್ದು ಬಿದ್ದು ನಮಸ್ಕಾರ ಮಾಡಿದರು. ಅವರ ಕೃತಜ್ಞತೆಯನ್ನು ನೋಡಿ ಉಂಟಾದ ಸಂತೋಷದಿಂದ ಅವನ ಕಲ್ಲು ಹೃದಯವೂ ಮೆತ್ತಾಯಿತು.

"ರಾಜರೇ, ತಾವು ಇಷ್ಟು ದಿವಸಗಳೂ ನಮ್ಮ ಜತೆಯಲ್ಲಿಯೇ ಇದ್ದು ನಮ್ಮ ಉಪಕಾರಕನನ್ನು ಕಾಣದೆ ನಾವು ಪೇಚಾಡುತ್ತಲಿದ್ದುದನ್ನು ನೋಡುತ್ತಲಿದ್ದರೂ ಈ ಸಮಾಚಾರವನ್ನು ಇದುವರೆಗೂ ಬಾಯಿಬಿಡದೆ ಇರಬಹುದೇ ?" ಎಂದು ಆ ದಂಪತಿಗಳು ಕೇಳಲು ರಾಜನು.

"ಇದೆಲ್ಲವೂ ನನ್ನ ಹೃದಯದಲ್ಲಿಯೇ ಗುಪ್ತವಾಗಿ ನನ್ನೊಂದಿಗೆ ಲಯವಾಗಬೇಕೆಂದಿದ್ದನು. ಜಯವೀರನು ಬಲಾತ್ಕಾರದಿಂದ ಇಂದು ಪ್ರಕಟಪಡಿಸಿದನು" ಎಂದು ಹೇಳಿ ಮನೋಮೋಹನನ ಬಳಿಗೆ ಬಂದು "ನೀವು ನಿಮ್ಮ ಮೈದುನನನ್ನು ಜಾಗರೂಕತೆಯಿಂದ ನೋಡಿಕೊಳ್ಳಬೇಕು" ಎಂದು ಕಿವಿಯಲ್ಲಿ ಹೇಳಿದನು.

"ಅದು ಏಕೆ" ಎಂದು ಅವರು ಕೇಳಿದುದಕ್ಕೆ ರಾಜನು "ಈಗ ನಾನು ಏಕೆಂಬುದನ್ನು ಹೇಳುವುದಿಲ್ಲ" ಎಂದನು. ರತ್ನಾಂಬೆಯು ತಟ್ಟನೆ ಕೆಳಗೆ ಹೋಗಿ ಹಳೆಯದಾದ ಆ ಪಟ್ಟೆಯ ಚೀಲವನ್ನು ತಂದು "ಇಗೋ ! ನಮ್ಮ ದೇವರು" ಎಂದಳು.

"ಅಮ್ಮಾ, ಅದು ದೇವರಲ್ಲ; ದೇವರ ಪ್ರಸಾದ. ಸತ್ಪುರುಷನಾದ ನಿಮ್ಮಪ್ಪನಿಗೆ ಬಂದಿದ್ದ ವಿಪತ್ತನ್ನು ದೇವರು ನನ್ನ ಮೂಲಕ ಪರಿಹರಿಸಿ ಪಾಲಿಸಿದನಲ್ಲಾ ಎಂದು ನನಗೆ ಬಹಳ ಸಂತೋಷ. ಇನ್ನು ಆ ಚೀಲವನ್ನು ಇಲ್ಲಿ ತಾ."

"ಅದನ್ನು ಕೊಡುವುದಿಲ್ಲ. ನೀವು ಇಲ್ಲಿಂದ ಯಾವಾಗ ಹೊರಡುತ್ತೀರೋ ? ನಿಮ್ಮ ಜ್ಞಾಪಕಾರ್ಥವಾಗಿ ಅದು ನಮ್ಮಲ್ಲಿರಬೇಕು."

"ಅಮ್ಮಾ, ನೀನು ಹೇಳುವುದು ನಿಜ ; ನಾನು ಇನ್ನೊಂದು ವಾರದೊಳಗಾಗಿ ಇಲ್ಲಿಂದ ಹೊರಡಬೇಕೆಂದಿದ್ದೇನೆ" ಎಂದು ಗಟ್ಟಿಯಾಗಿ ಹೇಳಿ, ಜಯವೀರನ ಮುಖವನ್ನು ನೋಡಿ ಆ ಮಾತಿಗೆ ಅವನು ಕಿವಿಗೊಡದೆ ಇದ್ದುದನ್ನು ಕಂಡು "ಅಮ್ಮಾ, ನಾನು ಜಯವೀರನ ಸಂಗಡ ಕೆಲವು ಮಾತನ್ನಾಡಬೇಕಾಗಿದೆ. ಅದಕ್ಕೆ ನೀನೂ ನಿಮ್ಮ ಯಜಮಾನರೂ ಸ್ವಲ್ಪ ಅವಕಾಶಕೊಡಬೇಕು" ಎಂದನು.

ಅವರಿಬ್ಬರೂ ಕೆಳಕ್ಕೆ ಹೋದರು. ಬಳಿಕ ರಾಜನು ಜಯವೀರನನ್ನು ಕುರಿತು "ಮಗೂ, ನಿನ್ನ ದುಃಖವು ಇನ್ನೂ ತೊಲಗಲಿಲ್ಲವೋ ? ವೀರನಾದ ನೀನೂ ಹೀಗೆ ದುಃಖಪಡುವುದೇ ?" ಎಂದನು.

"ಸ್ವಾಮಿ, ಇನ್ನು ಮೇಲೆ ನಾನು ಪ್ರಾಣತ್ಯಾಗ ಮಾಡುವೆನೆಂಬ ಭಯವನ್ನು ಬಿಟ್ಟುಬಿಡಿ."

"ಹಾಗಾದರೆ ಯಾವ ಆಯುಧವನ್ನೂ ನೀನು ಮುಟ್ಟುವುದಿಲ್ಲವಷ್ಟೆ ?"

"ಇಲ್ಲ. ಇದಕ್ಕಿಂತ ಬೇರೆ ಒಂದು ಉಪಾಯ ಸಿಕ್ಕಿದೆ. ನಾನು ಸುಮ್ಮನಿದ್ದರೂ ಅದೇ ನನ್ನ ಕೋರಿಕೆಯಂತೆ ನೆರವೇರಿಸುತ್ತದೆ."

"ಅದಾವುದು ?"

"ನನ್ನ ದುಃಖ"

"ಜಯವೀರ, ದೇವರು ಮಾಡುವುದೆಲ್ಲಾ ಒಳ್ಳೆಯದಕ್ಕೆ ಎಂದು ನೀನು ನಂಬಿದ್ದರೆ, ಅದರಿಂದ ನಿನಗೆ ಮುಂದೆ ಒಳ್ಳೆಯದಾಗುವುದು. ಒಂದಾನೊಂದು ಕಾಲದಲ್ಲಿ ನಿನ್ನಂತೆಯೇ ನಾನೂ ಪ್ರಾಣತ್ಯಾಗ ಮಾಡಿಕೊಳ್ಳಬೇಕೆಂದಿದ್ದೆನು. ನಿನ್ನ ತಂದೆಯೂ ಹಾಗೆಯೇ ಯೋಚಿಸಿದ್ದರು. ಆಗ ಯಾರಾದರೂ ಬಂದು 'ನೀವು ಪ್ರಾಣಬಿಡುವುದು ಸರಿಯಲ್ಲ ಮುಂದೆ ಯಾವಾಗಲಾದರೂ ಸುಖಪಟ್ಟೀರಿ' ಎಂದು ಹೇಳಿದ್ದರೆ ನಂಬುತ್ತಿದ್ದೆವೇ ? ನಿಮ್ಮ ತಂದೆಯು ಬದುಕಿ ಸುಖಪಡಲಿಲ್ಲವೇ ? ನಾನೂ—"

"ನಮ್ಮಪ್ಪನಿಗೆ ಐಶ್ವರ್ಯವು ಹೋಗಿದ್ದಿತು ; ನಿಮಗೆ ಸ್ವಾತಂತ್ರ್ಯವು ತಪ್ಪಿದ್ದಿತು ; ನೀವು ನನ್ನಂತೆ ಪ್ರಾಣಪ್ರಿಯೆಯನ್ನು ಕಳೆದುಕೊಳ್ಳಲಿಲ್ಲ."

"ನಿನ್ನನ್ನು ನನ್ನ ಮಗನಂತೆ ಭಾವಿಸಿರುವಾಗ ನಿನಗೆ ದುಃಖವುಂಟಾದರೆ ನನಗೆ ದುಃಖವಿಲ್ಲವೇ ? ಈಗ ನಾನು ದುಃಖಪಡದೆ ಇರುವುದರಿಂದ ನಿನಗೆ ಮುಂದೆ ಶುಭವುಂಟಾದೀತೆಂದು ಏಕೆ ತಿಳಿಯಲೊಲ್ಲೆ ?"

"ಸ್ವಾಮೀ ರಾಜರೇ, ಏನು ಹೇಳಿದಿರಿ ? ಜೋಕೆ. ಆದರೆ ನಿಮಗೆ ಪ್ರೇಮವೆಂಬುದೇ ತಿಳಿಯದು, ತಿಳಿದಿದ್ದರೆ ನೀವು ಹೀಗೆ ಹೇಳುತ್ತಿದ್ದಿರಾ ?"

"ಮಗೂ ! ಧೈರ್ಯವಾಗಿರು. ನಿನಗೆ ಅನುಕೂಲವಾಗುತ್ತದೆ ಎಂದು ನಾನು ನಿನಗೆ ಸುಮ್ಮನೆ ಹೇಳುತ್ತೇನೆಯೆ ? ಅದಕ್ಕೆ ತಕ್ಕ ಕಾರಣವಿದ್ದೇ ಇರುವುದು."

"ವಿಮಲೆಯು ಸತ್ತು ಮಣ್ಣಾಗಿ ಹೋಗಿದ್ದರೂ ಅವಳ ಹಂಬಲನ್ನು ತೊರೆಯಬೇಡವೆಂದು ಹೇಳುತ್ತೀರೋ ?"

"ಅಪ್ಪಾ, ನಿನ್ನ ದುಃಖವನ್ನು ಪರಿಹರಿಸುವುದಕ್ಕೆ ನನ್ನಲ್ಲಿ ಒಂದು ಉಪಾಯವುಂಟು."

"ರಾಜರೇ, ಆಸೆಯು ಹೆಚ್ಚಿದಷ್ಟೂ ದುಃಖವು ಹೆಚ್ಚುವುದೆಂದು ನೀವು ಅರಿಯಿರಾ ?"

"ಅಪ್ಪಾ, ನನ್ನ ಈ ಉಪಾಯದಲ್ಲಿ ನನಗೆ ಪೂರ್ಣವಾದ ನಂಬುಗೆಯಿದೆ. ಅದರಿಂದಲೇ ನಾನು ನಿನಗೆ ಈ ರೀತಿ ಹೇಳುವುದು. ನನ್ನ ಮಾತಿನ ಗುಣವನ್ನು ಪರೀಕ್ಷಿಸಿ ನೋಡುವುದಕ್ಕೆ ಮೊದಲೇ ನೀನು ತಿರಸ್ಕರಿಸಿದರೆ ನಾನೇನು ಮಾಡಲಿ ? ಒಂದು ಕೆಲಸ ಮಾಡು. ನೀನು ನನಗೆ ಒಂದು ತಿಂಗಳ ಅವಧಿಯನ್ನು ಕೊಟ್ಟರೆ ನಿನಗೆ ಅದರ ಗುಣವನ್ನು ತೋರಿಸುವೆನು. ಇಂದು ಪುಷ್ಯ ಶುದ್ಧ ಪಂಚಮಿ. ಮಾಘ ಶುಕ್ಲಪಂಚಮಿಯ ದಿನ ನಾನು ನಿನ್ನ ಆಶಾಪೂರ್ತಿಯನ್ನು ಮಾಡಿಕೊಡದಿದ್ದರೆ ಸುಖವಾಗಿಯೂ ಜಾಗ್ರತೆಯಾಗಿಯೂ ಪ್ರಾಣ ಹೋಗುವಂತೆ ನಾನೇ ನಿನಗೆ ಕಯ್ಯಾರೆ ಒಂದು ಔಷಧಿಯನ್ನು ಕೊಡುತ್ತೇನೆ."

"ಇದು ನಿಶ್ಚಯವೋ ?"

"ನಿಶ್ಚಯ."

"ಆದರೆ ಅಲ್ಲಿಯವರೆಗೆ ನೀನು ಜೀವ ಬಿಡುವ ಪ್ರಯತ್ನವನ್ನು ಮಾಡುವುದಿಲ್ಲವೆಂದು ನನಗೆ ಪ್ರಮಾಣ ಮಾಡಿಕೊಡು" ಎಂದು ರಾಜನು ಕೇಳಲು, ಜಯವೀರನು ಅದೇ ರೀತಿ ಪ್ರಮಾಣ ಮಾಡಿಕೊಟ್ಟನು.

"ಅಲ್ಲಿಯವರೆಗೆ ನೀನು ಜತೆಯಲ್ಲಿಯೇ ಇದ್ದುಕೊಂಡು ಕೋಮಲೆಯಿಲ್ಲದ ನನ್ನ ಕೊರತೆಯನ್ನು ನೀಗಿಸಬೇಕು."

"ಅವಳೆಲ್ಲಿ ?"

"ನಿನ್ನೆ ರಾತ್ರಿ ಇಲ್ಲಿಂದ ಪ್ರಯಾಣ ಮಾಡಿದಳು."

"ನಿಮ್ಮನ್ನು ಬಿಟ್ಟು ಹೊರಟುಹೋದಳೋ ?"

"ಇಲ್ಲ ; ನಾನು ಬರುವುದನ್ನು ನಿರೀಕ್ಷಿಸಿಕೊಂಡಿದ್ದಾಳೆ."

"ಸರಿ ; ಹಾಗಾದರೆ ನಿಮ್ಮ ಜತೆಯಲ್ಲಿಯೇ ಇರುತ್ತೇನೆ."

## ೭೮
# ಪಾಪಫಲಾನುಭವ

ಜಯವೀರನನ್ನು ಸಮಾಧಾನಪಡಿಸಿದ ಬಳಿಕ ರಾಜಾ ಮಲಯಸಿಂಹನು ದುರ್ಮತಿಯನ್ನು ನೋಡಬೇಕೆಂದು ಹೋದನು. ಆಗ ಅವನು "ರಾಜರೇ, ನನ್ನನ್ನು ವಿಚಾರಿಸುವುದಕ್ಕೆ ಬಂದಿರೋ ? ನಿಮ್ಮ ಬಂಡಿಯನ್ನು ನೋಡುತ್ತಲೇ ರಾಜಸಿಂಹನ ವಿಷಯವಾಗಿ ನಾನು ಮಾಡಿದ ಯೋಚನೆಯಿಂದ ನನಗೆ ಈಗ ಈ ರೀತಿಯಾಯಿತೆಂದು ಬೋಧೆಯಾಯಿತು. 'ಇಟ್ಟವರಿಗೆ ಇಟ್ಟ ಫಲ' ಎಂಬ ಮಾತು ಸುಳ್ಳಲ್ಲ. ಆದರೆ ನನ್ನಾಣೆಗೂ ನಾನು ಅವನಿಗೆ ಕೆಡುಕನ್ನು ಮಾಡಬೇಕೆಂದು ಮಾಡಿದವನಲ್ಲ ; ಅದು ನಿಮಗೇ ಗೊತ್ತು. ಅವನೂ ನನ್ನಂತೆ ಬಡವನಾಗಿದ್ದು ಬಲ್ಲಿದನಾದನು ; ಸ್ವಲ್ಪ ಜಂಭಗಾರ. ಅಂತು ಇಂತು ಈ ವರ್ಷ ನನ್ನ ಜತೆಯವರಿಗೆಲ್ಲಾ ಗ್ರಹಚಾರ ಮೂಡಿತು. ವಲ್ಲಭದೇವನ ಮಗಳು ಸತ್ತಳು ; ರಾಜಸಿಂಹನು ಅಪಮಾನಪಟ್ಟು ಪ್ರಾಣ ಬಿಟ್ಟನು ; ಆ ಚಂಡಾಳ ಭದ್ರದತ್ತನಿಂದ ನನಗೂ ಇಲ್ಲದ ಅಪಹಾಸ್ಯವಾಯಿತು. ಅಲ್ಲದೆ—"

"ಅಲ್ಲದೆ ಇನ್ನೇನು ?"

"ಅಯ್ಯೋ, ನಿನಗೆ ತಿಳಿಯದೋ ?"

"ಇನ್ನೇನು ಆಯಿತು ?"

"ನನ್ನ ಮಗಳು—"

"ವಿಲಾಸಿನಿಯೇ ?"

"ಅಹುದು."

"ಅವಳೇನಾದಳು ?"

"ಅವಳು ಮನೆಯನ್ನು ಬಿಟ್ಟು ಓಡಿಹೋದಳು. ಸಂಸಾರಗಂಧವಿಲ್ಲದ ನೀವೇ ಪುಣ್ಯವಂತರು."

"ದರಿದ್ರನಿಗೆ ಮಕ್ಕಳೇ ಧನ ; ಮಕ್ಕಳು ಹೋದರೆ ಅವನ ಐಶ್ವರ್ಯವೇ ಹೋಯಿತು. ಶ್ರೀಮಂತರ ವಿಚಾರವೇ ಬೇರೆ ! ಹಣವೊಂದಿದ್ದರೆ ಯಾವ ಕಷ್ಟನಷ್ಟಗಳೂ ಅವರಿಗೆ ಲಕ್ಷ್ಯವಿರವು. ನೀವು ಶ್ರೀಮಂತರಲ್ಲಿ ಅಗ್ರೇಸರರು."

ಈ ರೀತಿ ರಾಜನು ಹೇಳಿದುದನ್ನು ಕೇಳಿ ದುರ್ಮತಿಯು "ಇವನು ನಿಜವಾಗಿ ಹೇಳುತ್ತಾನೆಯೋ, ಬೇಕೆಂದು ಹೇಳುತ್ತಾನೆಯೋ ?" ಎಂದು ಕಡೆಗಣ್ಣಿನಿಂದ ನೋಡುತ್ತಿದ್ದನು. ಅದನ್ನರಿತು ರಾಜನು ಮುಖದಲ್ಲಿ ಸ್ವಲ್ಪವೂ ಸಂಶಯಕ್ಕೆ ಆಸ್ಪದ ಕೊಡದೆ ಇದ್ದುದರಿಂದ, ಅವನು ಹೇಳುವುದು ನಿಜವೆಂದೇ ತಿಳಿದು ದುರ್ಮತಿಯು "ನೀವು ಹೇಳುವುದು ಸರಿ ; ಹಣವೊಂದಿದ್ದರೆ ಮಿಕ್ಕ ದುಃಖಗಳೆಲ್ಲವೂ ಲೆಕ್ಕವಿಲ್ಲ" ಎಂದನು.

ದುರ್ಮತಿಗೆ ಮಗಳು ಹೊರಟುಹೋದುದಕ್ಕೆ ನಿಜವಾಗಿಯೂ ದುಃಖವಿರಲಿಲ್ಲ.

ಅವನಿಗೆ ಹಣವೇ ಸಂಸಾರ ; ಹೆಂಡತಿ ಮಕ್ಕಳೆಂಬ ಈ ಸಂಸಾರವು ಅದಕ್ಕೆ ಉಪಕಾರಣವಾಗಿದ್ದಿತು. ರಾಜನು ಅದನ್ನು ಚೆನ್ನಾಗಿ ಬಲ್ಲವನಾದುದರಿಂದ ಆ ರೀತಿಯಾಗಿ ದುರ್ಮತಿಗೆ ಹೇಳಿದನು.

"ಸ್ವಾಮೀ, ದುರ್ಮತಿಗಳೇ, ಪರ್ವತಗಳಲ್ಲಿ ಮೇರುಪರ್ವತವು ಹೇಗೋ ಹಾಗೆ ಧನಾಗಾರಪತಿಗಳಲ್ಲಿ ನೀವು ; ಅದು ಹೇಗೆ ಅಚಲವೋ ಹಾಗೆಯೇ ನಿಮ್ಮ ಸಂಪತ್ತೂ."

"ರಾಜರೇ, ನೀವು ಹೇಳುವುದು ಸರಿ. ನೀವು ಬಂದಾಗ ಈ ಸಣ್ಣ ಕಾಗದಗಳಿಗೆ ಕೈಬರೆಹ ಹಾಕುತ್ತಲಿದ್ದೆ ; ನಿಮ್ಮಪ್ಪಣೆಯಾದರೆ ಕೆಲಸವನ್ನು ಪೂರೈಸುತ್ತೇನೆ."

"ಆಗಬಹುದು" ಎಂದು ರಾಜನು ಹೇಳಲು, ದುರ್ಮತಿಯು ಆ ಕಾಗದಗಳಿಗೆ ರುಜುಮಾಡಿ "ರಾಜರೇ, ನಾನು ಮಹಾಮೇರುವಾದರೆ, ನೀವು ಕುಬೇರರಾಗಿರಬೇಕು. ಇಂತಹ ಹತ್ತುಹತ್ತು ಲಕ್ಷ ವರಹಗಳ ಹುಂಡಿಗಳು ನಿಮ್ಮಲ್ಲಿ ಎಷ್ಟು ಇವೆ ಹೇಳಿ" ಎಂದು ತಾನು ರುಜುಮಾಡಿದ ಐದು ಕಾಗದಗಳನ್ನು ಅವನ ಮುಂದೆ ಬಿಸುಟನು. ಒಂದೊಂದು ಕಾಗದದಲ್ಲಿಯೂ,

"ಅಮರಪುರದ ಸರ್ಕಾರದ ಧನಾಗಾರಪತಿಗಳ ಸಮಕ್ಷಮಕ್ಕೆ :— ಈ ಹುಂಡಿಯನ್ನು ಕಂಡ ಒಡನೆಯೇ ಇದನ್ನು ತರುವವನ ಕೈಯಲ್ಲಿ ಹತ್ತು ಲಕ್ಷ ವರಹಗಳನ್ನು ಕೊಟ್ಟು ನನ್ನ ಲೆಕ್ಕಕ್ಕೆ ವೆಚ್ಚ ಹಾಕಿ.

ಧನಾಗಾರಪತಿ ದುರ್ಮತಿ."

ಎಂದು ಬರೆದಿದ್ದಿತು.

ರಾಜನು ಅವುಗಳನ್ನು ಓದಿ ನೋಡಿ "ಒಂದು, ಎರಡು, ಮೂರು, ನಾಲ್ಕು, ಐದು ; ಐವತ್ತು ಲಕ್ಷ ವರಹಗಳ ಹುಂಡಿ ! ಅಬ್ಬಬ್ಬ ! ಕುಬೇರನೂ ಏಕಕಾಲದಲ್ಲಿ ಇಷ್ಟು ಹಣವನ್ನು ಒದಗಿಸಿಕೊಡಲಾರ. ಇದು ಆಶ್ಚರ್ಯಕರವಾದ ಸಂಗತಿ ; ಇದನ್ನು ಪರೀಕ್ಷಿಸಿ ನೋಡಬೇಕು" ಎಂದನು.

"ಹಾಗೋ, ನಿಮ್ಮ ಇದಿರಿಗೆ ಈ ಕಾಗದಗಳನ್ನು ಕೋಶಾಗಾರಕ್ಕೆ ಕಳುಹಿಸಿ ಹಣವನ್ನು ತರಿಸಲೇ ?"

"ಬೇಡ, ಬೇಡ. ನಾನೇ ಹೋದರೆ ನನಗೆ ನಂಬುಗೆ ಹೆಚ್ಚು. ಅಲ್ಲದೆ ಈ ಹಣವು ಇಷ್ಟೂ ನನಗೇ ಬೇಕು. ಹಣವು ಸಂದುದಕ್ಕೆ ರಸೀದನ್ನು ಬರೆದು ತಂದಿದ್ದೇನೆ. ಇಗೋ ತೆಗೆದುಕೊಳ್ಳಿ" ಎಂದು ರಾಜನು ಅಷ್ಟು ಹಣಕ್ಕೂ ತಾನು ತಂದಿದ್ದ ರಸೀದನ್ನು ಕೊಟ್ಟು ಆ ಐದು ಹುಂಡಿಗಳನ್ನೂ ಜೇಬಿನಲ್ಲಿ ಹಾಕಿಕೊಂಡನು.

ದುರ್ಮತಿಗೆ ಸಿಡಿಲು ಬಡಿದಂತಾಯಿತು. ಮೆಯ್ಯು ಬೆವತು ಮಾತನಾಡಲು ತೋಚದೆ ಹೋಯಿತು. ಅವನು ಸ್ವಲ್ಪ ಕಾಲ ಸುಮ್ಮನಿದ್ದು "ಈ ಹುಂಡಿಗಳನ್ನು ಧರ್ಮಕಾರ್ಯಕ್ಕಾಗಿ ಈ ದಿವಸ ಕೊಡುತ್ತೇನೆಂದು ಹೇಳಿದ್ದೆನು. ಇವು ನಿಮಗೇ ಬೇಕೋ ?" ಎಂದನು.

"ನಿಮ್ಮ ಕೈಬರೆಹದ ಯೋಗ್ಯತೆಯನ್ನು ಪರೀಕ್ಷಿಸಿ ನೋಡೋಣ ಎಂದು ಇವುಗಳನ್ನು ನಾನು ತೆಗೆದಿಟ್ಟುಕೊಂಡೆನು. ನನಗೆ ಅವೇ ಆಗಬೇಕೆಂದಿಲ್ಲ. ಬೇರೆ ಕೊಟ್ಟರೂ ಸರಿಯೆ" ಎಂದು ಜೇಬಿನಿಂದ ಆ ಹುಂಡಿಗಳನ್ನು ತೆಗೆದು ನೀಡಿದನು.

ಆಗ ದುರ್ಮತಿಯು ಹುಸಿನಗೆ ನಕ್ಕು "ರಾಜರೇ, ಕ್ಷಮಿಸಿ, ಇವುಗಳಲ್ಲಿ ಯಾರ ಹೆಸರೂ ಇಲ್ಲದಿದ್ದರೂ ಒಬ್ಬರಿಗಾಗಿ ಬರೆದ ಹುಂಡಿಯನ್ನು ಮತ್ತೊಬ್ಬರಿಗೆ ಕೊಡುವುದು ಮೋಸವೆಂದು ಇದ್ದೆನು. ಒಂದು ಬರಹ ಮತ್ತೊಂದರಂತಿಲ್ಲವೆ ? ಬೇರೆ ಇನ್ನೈದು ಹುಂಡಿಗಳನ್ನು ಬರೆದರಾಯಿತು" ಎಂದನು.

"ಅದು ಸರಿ" ಎಂದು ರಾಜನು ಆ ಹುಂಡಿಗಳನ್ನು ಪುನಃ ಜೇಬಿನಲ್ಲಿಟ್ಟುಕೊಂಡನು. ಆಗ ದುರ್ಮತಿಯು "ನಿಮ್ಮ ಹಣದಲ್ಲಿ ಇನ್ನೂ ಲಕ್ಷೂ ಚಿಲ್ಲರೆ ವರಹಗಳು ನನ್ನಲ್ಲಿ ಉಳಿದಿವೆ" ಎನ್ನಲು, ರಾಜನು "ಮಿಕ್ಕಿರುವುದು ಅಷ್ಟಾಗಬಹುದು. ಅದನ್ನು ನೀವೇ ಇಟ್ಟುಕೊಳ್ಳಿರಿ" ಎಂದನು.

"ರಾಜರೇ, ಅದನ್ನು ನಾನೇ ಇಟ್ಟುಕೊಳ್ಳಲೇ ? ನಿಜವಾಗಿ ಹೇಳು ತ್ತೀರೋ ?"

"ನಾನು ಧನಾಗಾರಪತಿಗಳ ಸಂಗಡ ಎಂದಾದರೂ ಹಾಸ್ಯಮಾಡೇನೇ ?" ಎಂದು ಹೇಳಿ ರಾಜನು ಎದ್ದು ಹೊರಟನು. ಆ ವೇಳೆಗೆ ಸರಿಯಾಗಿ ಸೇವಕನು ಬಂದು "ಭಾಸ್ಕರನು ಬಿಜಯಮಾಡಿಸಿದರು" ಎಂದು ಕೂಗಿದನು. ಆಗ ರಾಜನು "ನಾನು ಸಕಾಲಕ್ಕೆ ಬಂದೆ, ಇಲ್ಲದಿದ್ದರೆ ಇವನು ಇಷ್ಟು ಹಣವನ್ನೂ ಹೊತ್ತುಕೊಂಡು ಹೋಗುತ್ತಲಿದ್ದನು" ಎಂದನು.

ಭಾಸ್ಕರನು ಬಂದನೆಂದು ಹೇಳಿದ ಕೂಡಲೇ ದುರ್ಮತಿಯ ಮುಖವು ಬಿಳ್ಚಿರಿ ಮೆಯ್ಯೆಲ್ಲ ಬೆವರಿತು. ಅಷ್ಟರಲ್ಲಿ ಅವನು ಒಳಗೆ ಬಂದನು. ರಾಜನು ಅವನನ್ನು ಕಂಡು ಗಂಭೀರದಿಂದ ನಮಸ್ಕರಿಸಿ ನಗುನಗುತ್ತ ಹೊರಟುಹೋದನು.

ಭಾಸ್ಕರನು ಬರುತ್ತಲೇ ದುರ್ಮತಿಯು ಎದ್ದು ಅತಿವಿನಯದಿಂದ ಅವನನ್ನು ಆಸನದಲ್ಲಿ ಕುಳ್ಳಿರಿಸಿ "ತಾವು ಹಣಕ್ಕಾಗಿ ಬಂದಿರೋ ?" ಎಂದನು.

"ಸ್ವಾಮೀ, ಅಹುದು. ನೀವು ಹೇಳಿದಂತೆ ರಸೀದನ್ನು ಸಿದ್ಧಮಾಡಿಕೊಂಡು ಬಂದಿದ್ದೇನೆ."

"ಈಗತಾನೇ ಐವತ್ತು ಲಕ್ಷ ವರಹಗಳನ್ನು ರಾಜಾ ಮಲಯಸಿಂಹನಿಗೆ ಸಲ್ಲಿಸ ಹೇಳಿ ಕೋಶಾಗಾರಕ್ಕೆ ಹುಂಡಿಯನ್ನು ಬರೆದುಕೊಟ್ಟೆನು."

"ಅದು ಏಕೆ ?"

"ಈ ರಾಜನು ತಾನು ಕೇಳಿದಷ್ಟು ಹಣವನ್ನು ಕೊಡುವಂತೆ ನಂದಕುಮಾರನಿಂದ ಈ ಊರಿನಲ್ಲಿ ನಾಲ್ಕೈದು ಧನಾಗಾರಪತಿಗಳಿಗೆ ಹುಂಡಿಗಳನ್ನು ಬರೆಸಿಕೊಂಡು ಬಂದಿದ್ದನು. ಅವರನ್ನೆಲ್ಲ ಬಿಟ್ಟು ನನ್ನಲ್ಲಿಗೇ ಬಂದನು."

"ಐವತ್ತು ಲಕ್ಷ ?"

"ಇಗೋ ಅವನ ರಸೀದನ್ನು ನೋಡಿ" ಎಂದು ದುರ್ಮತಿಯು ಅದನ್ನು ನೀಡಲು, ಭಾಸ್ಕರನು ಓದಿ ನೋಡಿ,

"ಅವನು ಬಲು ಹಣಗಾರನಾಗಿರಬೇಕು. ಧರ್ಮಕಾರ್ಯಗಳಿಗೆ ತುಂಬ ಸಹಾಯ ಮಾಡಬಹುದಲ್ಲವೇ ?"

"ಅವನು ಬಹು ಧಾರಾಳಿ. ನನ್ನಲ್ಲಿ ಉಳಿದಿದ್ದ ಅವನ ಒಂದು ಲಕ್ಷವೂ ಚಿಲ್ಲರೆ ವರಹಗಳನ್ನು ನನಗೇ ಬಿಟ್ಟುಹೋದನು."

"ಓಹೋ ! ಹಾಗಾದರೆ ಅವನ ಬಳಿಗೆ ನಾಳೆಯೇ ಹೋಗುತ್ತೇನೆ. ನನ್ನ ಹಣಕ್ಕೆ ಏನು ಹೇಳುತ್ತೀರಿ ?"

"ಒಂದೇ ದಿನ ಕೋಶಾಗಾರಕ್ಕೆ ಒಂದು ಕೋಟಿ ವರಹಗಳ ಹುಂಡಿ ಕೊಡುವುದು ಸರಿಯಲ್ಲ ; ತಾವು ನಾಳೆಯ ದಿನ ಬರೋಣವಾಗಲಿ ; ಹಣವನ್ನು ಸಿದ್ಧಪಡಿಸಿರುತ್ತೇನೆ."

ಈ ಹಣದ ಲೆಕ್ಕಾಚಾರಗಳನ್ನು ಶೋಧನೆ ಮಾಡುವ ಮುಖ್ಯಾಮಾತ್ಯನು ನಾಳೆಯ ದಿನ ಮಧ್ಯಾಹ್ನ ಎರಡು ಗಂಟೆಗೆ ಬರುವೆನೆಂದು ಬರೆದಿದ್ದಾನೆ. ಈ ಹಣವನ್ನು ನಿಮ್ಮಲ್ಲಿ ಬಡ್ಡಿಗೆ ಹಾಕಿದ್ದೆನೆಂದು ಅವನೊಡನೆ ಹೇಳಲು ಇಷ್ಟವಿಲ್ಲ. ಆದುದರಿಂದ ಹಣವನ್ನು ನೀವು ನಾಳೆ ಬೆಳಿಗ್ಗೆ ಹನ್ನೊಂದು ಗಂಟೆಯ ವೇಳೆಗೆ ಸಿದ್ಧಪಡಿಸಿರಬೇಕು."

"ಹಾಗೆಯೇ ಆಗಲಿ, ಹನ್ನೊಂದು ಗಂಟೆಗೆ ಯಾರನ್ನಾದರೂ ಕಳುಹಿಸಿ; ಅವರ ಕೈಯಲ್ಲಿ ಹಣವನ್ನು ಕಳುಹಿಸಿಕೊಡುತ್ತೇನೆ."

"ಅವರಿವರನ್ನು ಕಳುಹಿಸುವುದಿಲ್ಲ ; ನಾನೇ ಬರುತ್ತೇನೆ."

"ಮತ್ತೂ ಒಳ್ಳೆಯದಾಯಿತು. ನನಗೆ ಪುನಃ ನಿಮ್ಮ ದರ್ಶನಲಾಭವಾಗುತ್ತದೆ."

"ಎಲ್ಲಿಯಾದರೂ ಮರೆತೀರಿ."

"ಅಯ್ಯೋ, ಮರೆಯುವುದುಂಟೇ ? ನಾನೆಲ್ಲಾ ಸರಿಮಾಡುತ್ತೇನೆ ; ನಿಮಗೆ ಆ ಹಣದ ಯೋಚನೆಯೇ ಬೇಡ" ಎಂದು ದುರ್ಮತಿಯು ಹೇಳಲು ಭಾಸ್ಕರನು ಹೊರಟುಹೋದನು. ಅವನು ಅತ್ತ ಹೋದ ಕೂಡಲೇ ದುರ್ಮತಿಯು 'ನಾಳೆ ನಾನೆಲ್ಲಿಯೋ, ನೀನೆಲ್ಲಿಯೋ, ಇನ್ನು ನಿನಗೇಕೆ ಆ ಹಣದ ಯೋಚನೆ' ಎಂದುಕೊಂಡು ರಾಜನು ಕೊಟ್ಟ ರಸೀದನ್ನೂ ತನ್ನಲ್ಲಿದ್ದ ಹಣವನ್ನೂ ಬೆಲೆಯುಳ್ಳ ಇತರ ಪದಾರ್ಥಗಳನ್ನೂ ಗಂಟುಕಟ್ಟಿಕೊಂಡು ಪ್ರಯಾಣಕ್ಕೆ ಅಣಿಯಾಗಿ, ಹೊರಡುವುದಕ್ಕೆ ಮುಂಚೆ ಒಂದು ಲೇಖನವನ್ನು ಬರೆದು ಹೆಂಡತಿಯ ಮೇಜಿನ ಮೇಲೆ ಇಟ್ಟನು.

ದುರ್ಮತಿಯನ್ನು ಇತ್ತ ಬಿಟ್ಟು ಇನ್ನೊಂದು ಕಡೆ ಏನು ನಡೆಯುತ್ತಲಿದೆ ಎಂಬುದನ್ನು

ನೋಡೋಣ. ಬಡವರ ಬೀದಿಯಲ್ಲಿ ಒಂದು ಸಣ್ಣ ಮಹಡಿಯ ಮನೆಯನ್ನು ಅಜ್ಞಾತನಾಮನಾದ ಯಾವನೋ ಒಬ್ಬನು ಬಾಡಿಗೆಗೆ ತೆಗೆದುಕೊಂಡು ಪ್ರತಿ ದಿನವೂ ರಾತ್ರಿ ಸುಮಾರು ಎಂಟು ಗಂಟೆಗೆ ಬಂದು ಒಂಬತ್ತು ಗಂಟೆಯವರೆಗೆ ಅಲ್ಲಿ ಇದ್ದು ಹೋಗುತ್ತಲಿದ್ದನು. ಅವನು ಅಲ್ಲಿಗೆ ಬಂದ ಮೇಲೆ ಮುಸುಕನ್ನು ಹಾಕಿಕೊಂಡು ಒಬ್ಬ ಹೆಂಗಸು ಬಂಡಿಯಲ್ಲಿ ಕುಳಿತು ಪ್ರತಿ ದಿನವೂ ಆ ಮನೆಗೆ ಬಂದು ಅವನು ಹೊರಡುವುದಕ್ಕೆ ಸ್ವಲ್ಪ ಮುಂದಾಗಿ ಹೊರಟುಹೋಗುತ್ತಲಿದ್ದಳು. ರಾಜಾ ಮಲಯಸಿಂಹನು ದುರ್ಮತಿಯ ಬಳಿ ಐವತ್ತು ಲಕ್ಷ ವರಹಗಳಿಗೆ ಹುಂಡಿಯನ್ನು ತೆಗೆದುಕೊಂಡು ಹೋದ ಮಾರನೆಯ ದಿನ ಸಾಯಂಕಾಲ ಪದ್ಧತಿಯಂತೆ ಅಜ್ಞಾತನಾಮನೂ ಆ ಹೆಂಗಸೂ ಆ ಮನೆಯ ಮಹಡಿಗೆ ಬಂದು ಸೇರಿದರು.

"ಪ್ರಿಯನೇ !"

"ಪ್ರಿಯೇ !"

"ಒಂದು ಸಮಾಚಾರ ; ಅದನ್ನು ನಿನ್ನೊಂದಿಗೆ ಹೇಳಲು ನಾಚಿಕೆಯಾಗುತ್ತದೆ."

"ನನ್ನೊಂದಿಗೆ ಹೇಳುವುದಕ್ಕೆ ನಾಚಿಕೆಯೇ ?"

"ನನ್ನ ಗಂಡನು ಈ ದೇಶವನ್ನು ಬಿಟ್ಟು ಎಲ್ಲಿಗೋ ಓಡಿಹೋದನು."

"ಎಲ್ಲಿಗೆ ಹೋದ ?"

"ತಿಳಿಯದು."

"ಯಾವಾಗ ಬರುತ್ತಾನೆ ?"

"ಅವನು ಇಲ್ಲಿಗೆ ಬರುವುದಿಲ್ಲವಂತೆ ; ಇಗೋ, ಈ ಕಾಗದವನ್ನು ಓದಿ ನೋಡು"

ಎಂದು ತನ್ನ ಗಂಡನು ಬರೆದಿದ್ದ ಕಾಗದವನ್ನು ಅವನ ಕೈಯಲ್ಲಿ ಕೊಟ್ಟಳು. ಅದರಲ್ಲಿ ಈ ರೀತಿ ಬರೆದಿದ್ದಿತು :—

"ಬಹುಪತಿವ್ರತಾಶಿರೋಮಣಿ, ನೀನು ಈ ಕಾಗದವನ್ನು ಓದುವಾಗ ನಿನ್ನ ಗಂಡನು ದೇಶಾಂತರಗತನಾದನೆಂದು ತಿಳಿ. ನನಗೆ ಈಚೆಗೆ ಅನೇಕ ನಷ್ಟಗಳು ಪ್ರಾಪ್ತವಾದುವು. ಅವನ್ನೆಲ್ಲ ನೀನು ಚೆನ್ನಾಗಿ ಬಲ್ಲೆ. ಖಜಾನೆಯಲ್ಲಿ ಇದ್ದ ನನ್ನ ಹಣವೆಲ್ಲಾ ಬರಿದಾಗಿಹೋಯಿತು. ನಾನು ಕೊಡತಕ್ಕ ಹಣಗಳಿಗೆ ಮರಾತು ಹೆಚ್ಚಾಯಿತು. ಅದರಿಂದ ಯಾರಿಗೂ ತಿಳಿಯದಂತೆ ನಾನು ಊರನ್ನು ಬಿಡಬೇಕಾಗಿ ಬಂದಿತು. ನೀನು ಕೈಹಿಡಿದ ಹೆಂಡತಿಯಾಗಿದ್ದರೂ ನನಗೇ ಮೋಸಮಾಡಿ ಹಣವನ್ನು ಬಚ್ಚಿಟ್ಟುಕೊಂಡಿದ್ದೀಯೆ. ನೀನು ಸಲ್ಲದ ಕಾರ್ಯಗಳನ್ನು ಮಾಡುತ್ತಿದ್ದರೂ ನನಗೆ ಲಾಭವಾಗುತ್ತಿದ್ದುದರಿಂದ ಏನನ್ನೂ ತಿಳಿಯದವನಂತೆ ಸುಮ್ಮನಿದ್ದೆನು. ಈಚೆಗೆ ಇನ್ನೂ ವಿಶೇಷವಾಗಿ ನಷ್ಟವುಂಟಾಯಿತು. ಸದ್ಯಕ್ಕೆ ಕೈಯಲ್ಲಿರುವ ಹಣವಾದರೂ ಭದ್ರವಾಗಿರಲೆಂದು ಊರನ್ನು ಬಿಟ್ಟುಹೋಗುತ್ತೇನೆ. ನಾನು ಇನ್ನು ಹಿಂತಿರುಗಿ ಬರುವುದಿಲ್ಲ."

ಮಹಡಿಯಲ್ಲಿ ಸೇರಿದ್ದ ಪುರುಷನೂ ಸ್ತ್ರೀಯೂ ಯಾರೆಂದು ನಮ್ಮ ಪಾಠಕರಿಗೆ ತಿಳಿಸಬೇಕಾದುದೇ ಇಲ್ಲ. ದಮನಕನು ಆ ಲೇಖನವನ್ನು ಓದುತ್ತಿದ್ದಾಗ ಭಾಮಿನಿಯು ಅವನ ಮುಖವನ್ನೇ ನೋಡುತ್ತಲಿದ್ದಳು. ಅವನು ಓದಿನೋಡಿ ಯಾವ ಮಾತನ್ನೂ ಆಡದೆ, ಅದನ್ನು ಮರಳಿ ಅವಳ ಕೈಯಲ್ಲಿ ಕೊಟ್ಟನು. ತನ್ನ ಮನಸ್ಸಿಗೆ ಹಿತವಾಗುವಂತೆ ಅವನು ಯಾವ ಮಾತನ್ನೂ ಆಡದೆ ಸುಮ್ಮನೆ ಕಾಗದವನ್ನು ಕೊಡಲು, ಭಾಮಿನಿಯು ಖಿನ್ನಳಾಗಿ "ಇದರ ಮೇಲೆ ಏನು ಯೋಚನೆ ?" ಎಂದು ಕೇಳಿದಳು.

"ದುರ್ಮತಿಯು ಮೋಸ ಮಾಡಿ ಓಡಿಹೋದ."

"ಅಷ್ಟೆಯೋ ?"

"ಇನ್ನೇನು ?"

"ಅವನು ಹಿಂತಿರುಗಿ ಬರುವುದಿಲ್ಲವೆಂದು ಬರೆದಿದ್ದಾನೆ ; ಇನ್ನು ನನಗೆ ಯಾವ ನಿರ್ಬಂಧವೂ ಇಲ್ಲ."

"ಅದಕ್ಕಾಗಿ ; ಏನು ಮಾಡಬೇಕೆಂದಿದ್ದೀಯೆ ?"

"ನಾನು ನಿನ್ನನ್ನು ಕೇಳುವುದೂ ಅದೇ."

"ಹಾಗಾದರೆ ಒಂದು ಕೆಲಸ ಮಾಡು."

"ಅದು ಸರಿ ; ಹಾಗೆ ಹೇಳು."

"ಈಗಿನ ಸಂದರ್ಭದಲ್ಲಿ ನೀನು ಕೆಲವು ಕಾಲ ಈ ಊರನ್ನು ಬಿಟ್ಟು ಬೇರೆ ಹೋಗಿ ವಾಸಮಾಡಿಕೊಂಡಿರುವುದು ಒಳ್ಳೆಯದು. ನಿನ್ನಲ್ಲಿ ಬೇಕಾದಷ್ಟು ಹಣವಿದೆ. ನಿನ್ನೆ ತಾನೇ ನಮ್ಮ ಲೆಖ್ಖಗಳನ್ನು ನೋಡಿದೆ. ನಿನ್ನ ಪಾಲಿಗೆ ಹನ್ನೆರಡು ಲಕ್ಷ ವರಹಗಳು ಬಂದಿವೆ ; ಇದರ ಬಡ್ಡಿ ಬೇರೆ ನಲವತ್ತು ಸಾವಿರ ವರಹಗಳು ಇವೆ. ಈ ಹಣವನ್ನು ಇಟ್ಟುಕೊಂಡು ನೆಮ್ಮದಿಯಾಗಿ ಜೀವನ ಮಾಡಬಹುದು."

"ನೀನು ಈ ರೀತಿ ಹೇಳುತ್ತೀಯೆಂದು ತಿಳಿದಿರಲಿಲ್ಲ."

"ನಮ್ಮ ಸಂಬಂಧವು ಇಲ್ಲಿಗೆ ಸಾಕು ; ಇದುವರೆಗೆ ಇದ್ದಂತೆ ಮುಂದೆ ಇರಲಾಗದು" ಎಂದು ದಮನಕನು ಹೇಳುತ್ತಲೇ, ಭಾಮಿನಿಯು ಅವನು ಕೊಟ್ಟ ಹಣವನ್ನು ತೆಗೆದುಕೊಂಡು ಅತೃಪ್ತಳಾಗಿ ಅಲ್ಲಿಂದ ಹೊರಟು "ದಮನಕನು ಕಳಿಂಗ ; ಇದುವರೆಗೆ ನನಗೆ ಸಮಾನರು ಯಾರೂ ಇಲ್ಲವೆಂದು ಹೇಳುತ್ತಿದ್ದು ಈಗ ಉಪಾಯವಾಗಿ ನನ್ನನ್ನು ಕೈ ಬಿಟ್ಟನು" ಎಂದು ಬಯ್ದುಕೊಂಡಳು.

ಅವಳು ಅತ್ತ ಹೋದ ಮೇಲೆ ಇತ್ತ ದಮನಕನು 'ಇವಳು ಎಂತಹ ಹೆಂಗಸು ! ಈ ಊರನ್ನು ಬಿಟ್ಟು ಹೊರಗೆ ಹೊರಟಾಳೇ ? ಹೇಗಿದ್ದರೂ ಇಲ್ಲಿಯೇ ದುರ್ವ್ಯಾಪಾರದಿಂದ ಕಾಲವನ್ನು ಕಳೆಯುವಳು. ನನ್ನ ಭಾಗಕ್ಕೂ ಸುಮಾರು ಹನ್ನೆರಡುವರೆ ಲಕ್ಷ ವರಹಗಳು ಬಂದಿವೆ. ವಿಮಲೆಯು ಬದುಕಿದ್ದರೆ ಅವಳನ್ನು ಮದುವೆಯಾಗಿ ಆನಂದದಿಂದ ಇರಬಹುದಾಗಿದ್ದಿತು. ಅಂಥ ಐಶ್ವರ್ಯವಿರುವ ಬೇರೆ

ಹುಡುಗಿಯನ್ನು ಇನ್ನೆಲ್ಲಿಯಾದರೂ ನೋಡಬೇಕು' ಎಂದು ಯೋಚಿಸಿಕೊಂಡು ಹೊರಟನು.

ಮಹಡಿಯ ಮೇಲೆ ಇವರಿಬ್ಬರೂ ಅಷ್ಟು ಹಣವನ್ನು ಹಂಚಿಕೆ ಮಾಡಿಕೊಂಡು ಅತೃಪ್ತರಾಗಿರುತ್ತಿದ್ದಾಗ, ಆ ಮನೆಯ ಕೆಳಗಡೆಯಲ್ಲಿ ಬಾಡಿಗೆಗೆ ಇದ್ದ ನಮ್ಮ ಪರಿಚಯಸ್ಥರಿಬ್ಬರೂ ತಮ್ಮಲ್ಲಿದ್ದ ಅಲ್ಪ ಹಣವನ್ನು ಭಾಗಮಾಡಿಕೊಂಡು "ನಮಗೆ ಬೇಕಾದುದಕ್ಕಿಂತ ಹೆಚ್ಚು ಸಿಕ್ಕಿತು" ಎಂದು ತೃಪ್ತಿಪಡುತ್ತಲಿದ್ದರು.

"ಅಮ್ಮಾ, ನಮಗೆ ಬೇಕಾದಷ್ಟು ಹಣ ಇದೆಯೇ ನೋಡೋಣ" ಎಂದು ಮಗನು ಕೇಳಲು, ತಾಯಿ,

"ಅಪ್ಪಾ, ನಿನ್ನಲ್ಲಿ ಎಷ್ಟು ಇದೆ ?" ಎಂದಳು.

"ನಿನ್ನ ಜೀವನಕ್ಕೆ ಆ ಹಣವು ಸಾಲದೇ ?"

"ಅದನ್ನು ನಾವು ತೆಗೆದುಕೊಳ್ಳೋಣವೋ ?"

"ಅದನ್ನು ನೀನು ತೆಗೆದುಕೊಳ್ಳುವುದಾಗಿ ಆಗಲೇ ಒಪ್ಪಿದ್ದೆ. ಅದು ಅನ್ಯಾಯದ ಹಣವಲ್ಲ. ಕಷ್ಟಪಟ್ಟು ನಿನಗಾಗಿ ಇಟ್ಟಿದ್ದುದು ಎಂದು ಅವನು ಬರೆದಿರಲಿಲ್ಲವೇ ?"

"ಮಗು, ನೀನು ಹೇಳುವುದು ನಿಜ. ಹಾಗೆಯೇ ಆಗಲಿ;"

"ಅಮ್ಮಾ ನನ್ನ ಯೋಚನೆಯನ್ನು ಕೇಳು, ಮಲಯಪಟ್ಟಣದಲ್ಲಿ ರಾಜಾ ಮಲಯಸಿಂಹನು ಕೊಟ್ಟ ಮನೆಯಲ್ಲಿ ನೀನಿದ್ದುಕೊಂಡಿರು. ನಾನು ಎರಡು ವರ್ಷಗಳ ಕಾಲ ಸೈನ್ಯದಲ್ಲಿ ಸೇರಿ ಸಾಹಸ ಕಾರ್ಯಗಳನ್ನು ಮಾಡಿ ದೊಡ್ಡ ಅಧಿಕಾರವನ್ನು ಸಂಪಾದಿಸಿಕೊಳ್ಳುವೆನು. ಆಮೇಲೆ ನಮ್ಮ ಜೀವನಕ್ಕೆ ಯಾವ ತೊಂದರೆಯೂ ಇರುವುದಿಲ್ಲ. ನೆನ್ನೆಯ ದಿನ ಸೈನ್ಯದಲ್ಲಿ ಸೇರುವುದಾಗಿ ಒಪ್ಪಿಕೊಂಡು ನಾನು ಪತ್ರ ಬರೆದು ಕೊಟ್ಟೆನು. ಸರ್ಕಾರದವರು ನನ್ನ ವೆಚ್ಚಕ್ಕಾಗಿ ಮೂರು ಸಾವಿರ ವರಹಗಳನ್ನು ಮಲಯ ಪಟ್ಟಣದಲ್ಲಿ ಮುಂಗಡವಾಗಿ ಕೊಡುತ್ತಾರೆ. ನನಗೆ ಅದರಲ್ಲಿ ಅರ್ಧ ಸಾಕು. ಮಿಕ್ಕುದನ್ನು ನೀನು ಬಳಸಿಕೋ."

"ಮಗೂ, ಇಲ್ಲಿಂದ ಹೊರಟು ಮಲಯಪಟ್ಟಣವನ್ನು ಸೇರುವವರೆಗೂ ದಾರಿಗೆ ವೆಚ್ಚಕ್ಕೆ ಏನಾದರೂ ಬೇಕಲ್ಲ ?"

"ಅಮ್ಮಾ, ಇಗೋ ನೋಡು ; ಮುನ್ನೂರು ವರಹಗಳು."

"ಇದು ಎಲ್ಲಿಯದು ?"

"ಇದು ನನ್ನ ಗಡಿಯಾರದ ರತ್ನಖಚಿತವಾದ ಭಂಗಾರದ ಸರಪಣಿಯನ್ನು ಮಾರಿದ ಹಣ. ನಮಗೆ ಬೇಕಾದುದಕ್ಕಿಂತ ಹೆಚ್ಚಾಗಿಯೇ ಇದೆ."

"ಇದೆಲ್ಲಾ ಸರಿ ; ನೀನು ಯುದ್ಧಕ್ಕೆ ಹೋಗುತ್ತೀಯೆ. ದೇವರು ಏನು ಮಾಡುತ್ತಾನೋ ? ಇನ್ನು ಎರಡು ವರ್ಷಗಳವರೆಗೆ ನಾನು ಬದುಕಿರುತ್ತೇನೆಯೋ ಇಲ್ಲವೋ ? ಪ್ರಾಯಶಃ ಇರಲಾರೆ."

"ಅಮ್ಮಾ, ನಿನಗಾಗಿಯೇ ನಾನು ಬದುಕಿರುವೆನು ; ಇಲ್ಲದಿದ್ದರೆ ರಾಜಸಿಂಹನು ಸತ್ತಾಗಲೇ ಸಾಯುತ್ತಲಿದ್ದೆನು. ಯುದ್ಧಕ್ಕೆ ಹೋದವರೆಲ್ಲರೂ ಸಾಯುತ್ತಾರೆಂದು ತಿಳಿಯಬೇಡ. ಜಯವೀರನು ಎಷ್ಟೋ ಯುದ್ಧಗಳನ್ನು ಮಾಡಿ ಜಯಶೀಲನಾಗಿ ಬಂದಿಲ್ಲವೇ ? ಚಿತ್ರಸೇನನು ಸಿದ್ಧಿಯವರೊಂದಿಗೆ ಕಾದಿ ಜಯವನ್ನು ಪಡೆದು ಊರಿಗೆ ಸುಖವಾಗಿ ಬರಲಿಲ್ಲವೆ ? ನಮ್ಮನ್ನು ಕಾಡಿಸುತ್ತಿದ್ದ ಶನಿಯ ಕಾಟವು ನಮ್ಮ ಈ ಕಷ್ಟದೊಂದಿಗೆ ಮುಗಿಯುವುದು. ನೀನು ನನಗಾಗಿ ದುಃಖಪಡಬೇಡ."

"ಅಪ್ಪಾ, ನೀನು ಸುಖವಾಗಿರುವುದೇ ನನ್ನ ಸುಖವು ; ನಿನ್ನ ಸಂತೋಷವೇ ನನ್ನ ಸಂತೋಷವು. ನಿನಗೆ ಒಳ್ಳೆಯದಾಗಲೆಂದು ನಾನು ಸದಾ ದೇವರನ್ನು ಪ್ರಾರ್ಥನೆ ಮಾಡಿಕೊಂಡು ಈ ಜೀವವನ್ನು ಹಿಡಿದಿರುತ್ತೇನೆ ; ನೀನು ಧೈರ್ಯವಾಗಿ ಹೋಗಿ ಬಾ" ಎಂದಳು.

"ಇನ್ನು ನೀನು ಮಲಯಪಟ್ಟಣಕ್ಕೆ ಪ್ರಯಾಣ ಬೆಳೆಸು."

"ನೀನೋ ?"

"ನಾನು ಇನ್ನೂ ಕೆಲವು ದಿನಗಳು ಇಲ್ಲಿಯೇ ಇರಬೇಕಾಗಿದೆ. ಇದಲ್ಲದೆ ನಮ್ಮ ಅಗಲುವಿಕೆಗೆ ಸ್ವಲ್ಪಸ್ವಲ್ಪವಾಗಿ ಅಭ್ಯಾಸ ಮಾಡಿಕೊಳ್ಳಬೇಕು."

"ಅದು ಸರಿ" ಎಂದು ಲಲಿತಾಂಗಿಯು ಸಿದ್ಧವಾಗಿ ನಿಂತಿದ್ದ ಬಂಡಿಯಲ್ಲಿ ಕುಳಿತಳು. ಅತಿ ಪ್ರೀತಿಯಿಂದ ಸಾಕುತ್ತಲಿದ್ದ ಮಗನನ್ನು ಬಿಟ್ಟು ಹೋಗುವ ತಾಯಿಯ ದುಃಖವನ್ನು ಬಣ್ಣಿಸಲಾದೀತೇ ? ತನ್ನ ದುಃಖವು ಮಗನಿಗೆ ತಿಳಿದರೆ ಎಲ್ಲಿ ಅವನ ದುಃಖವು ಹೆಚ್ಚುವುದೋ ಎಂದು ಲಲಿತಾಂಗಿಯು ಅಷ್ಟು ದುಃಖವನ್ನೂ ನುಂಗಿ ಸುಮುಖವನ್ನು ತಾಳಿ ಮಗನನ್ನು ಹರಸಿ ಹೊರಟಳು.

ಇದೆಲ್ಲವನ್ನೂ ಮರೆಯಲ್ಲಿ ನಿಂತು ನೋಡುತ್ತಿದ್ದವನೊಬ್ಬನು "ಅಯ್ಯೋ ! ಪಾಪಲೇಶವನ್ನೂ ಅರಿಯದೆ ಇರುವ ಇವರ ಸುಖಕ್ಕೆ ನಾನು ಕಂಟಕನಾದೆನೇ ? ಇವರಿಗೆ ಹೇಗೆ ತಾನೇ ಮರಳಿ ಸುಖವನ್ನು ಉಂಟುಮಾಡಲಾದೀತು ? ದೇವರು ಅವರನ್ನು ಕಾಯಲಿ ; ಅವರ ಕೃಪೆಯೊಂದಿದ್ದರೆ ಮಿಕ್ಕುದನ್ನು ನೋಡೋಣ' ಎಂದುಕೊಳ್ಳುತ್ತ ಹೊರಟನು.

# ೬೯
# ಅನಂತರಾಜುವಿನ ವಿಚಾರಣೆ

ಪೊಲೀಸಿನವರು ಅನಂತರಾಜುವನ್ನು ಸೆರೆಹಿಡಿದು ಅಮರಪುರದ ಬಂದಿಶಾಲೆಯಲ್ಲಿ ಇಟ್ಟಿದ್ದರು. ಅಲ್ಲಿಯ ಕೋಣೆಗಳೆಲ್ಲವೂ ಬೋನಿನಂತೆ ಇದ್ದುದರಿಂದಲೂ ಅದರಲ್ಲಿ ಚೋರಾಗ್ರೇಸರರೆಲ್ಲರೂ ಸೇರುತ್ತಲಿದ್ದುದರಿಂದಲೂ ಬಂದಿಯವರೆಲ್ಲರೂ ಅದಕ್ಕೆ "ಸಿಂಹದ ಬೋನು" ಎಂದು ನಾಮಕರಣ ಮಾಡಿದ್ದರು. ಇಂಥ ಒಂದು ಬೋನಿನಲ್ಲಿ ಅನಂತರಾಜುವು ತನ್ನ ಒಳ್ಳೆಯ ಉಡುಪಿನ ಮೇಲೆ ಕುಳಿತ ಧೂಳನ್ನು ವಸ್ತ್ರದಿಂದ ಕೊಡವಿಕೊಳ್ಳುತ್ತ ಸುತ್ತುತ್ತಿದ್ದಾಗ, ಬೇರೆ ಬೋನುಗಳಲ್ಲಿದ್ದವರು ಅವನನ್ನು ನೋಡಿ "ಇವನು ಯಾವನೋ ರಾಜಕುಮಾರನಂತೆ ; ಇವನ ಉಡುಪನ್ನು ನೋಡಿದರೆ ಇರಬಹುದು ಎಂದು ತೋರುತ್ತದೆ. ಇಂಥವರು ಜತೆಗೆ ಬಂದರೆ ನಮ್ಮ ಗೌರವವು ಹೆಚ್ಚುವುದು" ಎಂದು ಮಾತನಾಡಿಕೊಳ್ಳುತ್ತಿದ್ದರು.

ಭದ್ರದತ್ತನು ತನಗೆ ಈ ಅವಸ್ಥೆಯು ಉಂಟಾಯಿತಲ್ಲ ಎಂದು ವ್ಯಸನಪಡದೆ, "ಧನಿಕನಾದ ನನ್ನ ತಂದೆಯು ಹಿಂದೆ ನನ್ನನ್ನು ಬಂದಿಶಾಲೆಯಿಂದ ಬಿಡಿಸಿ, ನೆಪಮಾತ್ರಕ್ಕೆ ನನಗೆ ಬೇರೆಯೊಬ್ಬ ತಂದೆಯನ್ನು ಏರ್ಪಾಡುಮಾಡಿ, ದ್ರವ್ಯ ಸಹಾಯಮಾಡಿ, ದೊಡ್ಡವರ ಸಹವಾಸವನ್ನೂ ಉಂಟುಮಾಡಿದನು. ಈ ವೇಳೆಯಲ್ಲಿ ನನ್ನನ್ನು ಕೈಬಿಡುವುದಿಲ್ಲ" ಎಂದು ತಿಳಿದು ಧೈರ್ಯದಿಂದ ನೆಮ್ಮದಿಯಾಗಿರುತ್ತ "ಇನ್ನೇನು ನನ್ನನ್ನು ಬಿಟ್ಟುಬಿಟ್ಟಾರು. ನನ್ನ ತಂದೆ ಬಂದಾನು" ಎಂಬ ನಿರೀಕ್ಷಣೆಯಲ್ಲಿ ಕಾಲವನ್ನು ನೂಕುತ್ತಿದ್ದನು.

ಹೀಗಿರುವಲ್ಲಿ ಒಂದಾನೊಂದು ದಿನ ಇವನನ್ನು ನೋಡಬೇಕೆಂದು ಭದ್ರಕನು ಅಲ್ಲಿಗೆ ಹೋದನು. ಅವನನ್ನು ನೋಡಿ ಭದ್ರದತ್ತನು ಬೆದರಿ ಮಾತು ಹೊರಡದೆ "ನೀ......ನು.......ಇಲ್ಲಿ.......ಗೆ........ಏಕೆ........ಬಂ.........ದೆ" ಎಂದನು.

"ನಾನು ಯಾರು ಬಲ್ಲೆಯೋ ?" ಎನ್ನಲು, ಭದ್ರದತ್ತನು

"ಮೆಲ್ಲಗೆ ಮಾತನಾಡು; ನೀನು ಇಲ್ಲಿಗೆ ಏಕೆ ಬಂದೆ, ಮೊದಲು ಹೇಳು."

"ನೀನು ಇಲ್ಲಿ ಇದ್ದೀಯೆ ಎಂದು ತಿಳಿದು, ನಿನ್ನನ್ನು ನೋಡಿಕೊಂಡು ಹೋಗೋಣವೆಂದು ಬಂದೆ."

"ನನ್ನ ಸಂಗಡ ನೀನು ಪ್ರತ್ಯೇಕವಾಗಿ ಮಾತನಾಡಬೇಕಲ್ಲವೇ ?"

"ಅಹುದು."

"ಅದು ಸರಿ."

ಭದ್ರದತ್ತನೊಡನೆ ಪ್ರತ್ಯೇಕವಾಗಿ ಮಾತನಾಡಬೇಕೆಂದು ಭದ್ರಕನು ಬಂದಿಶಾಲೆಯ ಯಜಮಾನನಿಂದ ಬರೆಸಿಕೊಂಡು ಬಂದಿದ್ದ ಚೀಟನ್ನು ಬಾಗಿಲ ಸಿಪಾಯಿಗೆ ತೋರಿಸಲು,

ಅವನು ಅವರಿಬ್ಬರನ್ನು ಒಂದು ಕೋಣೆಗೆ ಕರೆದುಕೊಂಡು ಹೋಗಿ ಬಿಟ್ಟು ಬಾಗಿಲು ಮುಚ್ಚಿಕೊಂಡು ಹೊರಗೆ ನಿಂತಿದ್ದನು. ಭದ್ರಕನ ಜತೆಯಲ್ಲಿ ಹೋಗುತ್ತಿದ್ದಾಗ 'ಇವನು ನನ್ನ ಸಂಗಡ ಏಕಾಂತವಾಗಿ ಮಾತನಾಡಬೇಕೆಂದು ಇಲ್ಲಿಗೆ ಬಂದಿರುವುದನ್ನು ನೋಡಿದರೆ ನನ್ನ ಅಜ್ಞಾತ ಪಿತೃವು ನನ್ನ ವಿಷಯದಲ್ಲಿ ಉದಾಸೀನನಾಗಿಲ್ಲ ಎಂದು ತೋರುತ್ತದೆ' ಎಂದು ಭದ್ರದತ್ತನು ಯೋಚಿಸುತ್ತಿದ್ದನು.

"ಭದ್ರದತ್ತ! ನೀನೇಕೆ ಹೀಗಾದೆಯೋ ?"

"ನೀನು ಇಲ್ಲಿಗೆ ಏಕೆ ಬಂದೆ ?"

"ನಿನ್ನ ಪಾಪಕಾರ್ಯಗಳು ದಿನೇದಿನೇ ಹೆಚ್ಚುತ್ತ ಬಂದುದರಿಂದ ನೀನು ಈ ಗತಿಗೆ ಬಂದೆ. ಹೇಗಾದರೂ ಈ ಸಾರಿ ಬೇರೆ ನೀನು ತಪ್ಪಿಸಿಕೊಳ್ಳಲಾರೆ. ನಿನ್ನ ಕಾಲವು ಸಮೀಪಿಸುತ್ತ ಬಂದಿತು. ನಾನು ನಿನ್ನನ್ನು ಸಾಕಿದೆನು. ಆದುದರಿಂದ ಕಡೆಯ ಸಾರಿ ನಿನ್ನನ್ನು ನೋಡಿಕೊಂಡು ಹೋಗೋಣವೆಂದು ಬಂದೆ."

"ಇದನ್ನು ಹೇಳುವುದಕ್ಕಾಗಿಯೇ ಇಲ್ಲಿಗೆ ಬಂದೆಯೋ ? ಇದೆಲ್ಲ ನಿನಗಿಂತ ಚೆನ್ನಾಗಿ ನನಗೇ ತಿಳಿಯುವುದು. ನನಗೆ ತಿಳಿಯದೆ ಇರುವ ಸಮಾಚಾರಗಳು ಏನಾದರೂ ಇದ್ದರೆ ಹೇಳು. ನಿನ್ನನ್ನು ಇಲ್ಲಿಗೆ ಯಾರು ಕಳುಹಿಸಿದರು ?"

"ಯಾರೂ ಇಲ್ಲ."

"ನಾನಿಲ್ಲಿರುವುದು ನಿನಗೆ ಹೇಗೆ ತಿಳಿಯಿತು ?"

"ನಿನ್ನ ಹೆಸರು ಲೋಕಪ್ರಸಿದ್ಧವಾಗಿದೆ. ಅದನ್ನು ಯಾರು ಕಾಣರು ?"

"ನನ್ನ ತಂದೆ ನಿನ್ನನ್ನು ಕಳುಹಿಸಿದನೋ ?"

"ನಾನಾರು ?"

"ನೀನು ನನ್ನ ಸಾಕು ತಂದೆ. ಹಿಂದೆ ಒಂದು ಸಾರಿ ಹೀಗೆಯೇ ನಾನು ಬಂದಿಶಾಲೆಯಲ್ಲಿದ್ದಾಗ ತಪ್ಪಿಸಿಕೊಂಡು ಹೋಗುವುದಕ್ಕೆ ಸಹಾಯ ಮಾಡಿದವನು ನೀನೇಯೋ ? ನನಗೆ ಮೆಚ್ಚಿಕೆ ಸಾವಿರಗಟ್ಟಲೆಯಲ್ಲಿ ಹಣ ಕೊಡುತ್ತಿದ್ದವನೂ, ದೊಡ್ಡಮನುಷ್ಯರ ಸಹವಾಸವನ್ನು ಮಾಡಿಕೊಟ್ಟವನೂ ನೀನೇಯೋ ? ಅಲ್ಲ, ಅಲ್ಲ, ನೀನಲ್ಲ. ರಾಜಾ ಮಲಯಸಿಂಹನೇ ನನ್ನ ತಂದೆಯೆಂದು ತೋರುತ್ತದೆ."

"ಆ ದೊಡ್ಡಮನುಷ್ಯರು ನಿನ್ನಂತಹ ನೀಚನಿಗೆ ಹೇಗೆ ತಂದೆಯಾದಾರು ? ಇಲ್ಲದಸಲ್ಲದ ಮಾತುಗಳನ್ನು ಅಡಿ ಆ ಬೆಂಕಿಯೊಡನೆ ಸರಸವಾಡಬೇಡ. ಅವರು ನಿನ್ನ ತಂದೆಯಲ್ಲ" ಎಂದು ಭದ್ರಕನು ಹೇಳಲು, ತಾನು ಇದುವರೆಗೆ ಮಾಡಿಕೊಂಡಿದ್ದ ಅಭಿಪ್ರಾಯವು ತಪ್ಪೋ ಏನೋ ಎಂದು ಭದ್ರದತ್ತನಿಗೆ ಅನುಮಾನ ತಟ್ಟಿ,

"ಹಾಗಾದರೆ ನನ್ನ ತಂದೆ ಯಾರು ?" ಎಂದು ಕೇಳಿದನು.

"ಹಾಗಾದರೆ ನಿನ್ನ ಕಥೆಯನ್ನು ಹೇಳುತ್ತೇನೆ, ಕೇಳು" ಎಂದು ಭದ್ರದತ್ತನು ಹುಟ್ಟಿದ

ಸಮಾಚಾರವನ್ನು ಸವಿಸ್ತಾರವಾಗಿ ಭದ್ರಕನು ಹೇಳಿದನು. ತಾಯಿಯ ಹೆಸರನ್ನು ಮಾತ್ರ ಹೇಳದೆ ಹೋದುದರಿಂದ ಅವನು,

"ನನ್ನ ತಾಯಿ ಯಾರು ?"

"ಅವಳ ಹೆಸರನ್ನು ನಾನು ಕಾಣೆ."

"ಅವಳು ನನ್ನನ್ನು ಜೀವಸಹಿತ ಮಣ್ಣು ಮಾಡುವುದಕ್ಕೆ ಒಪ್ಪಿದಳೋ ?"

"ನನಗೆ ತಿಳಿದಮಟ್ಟಿಗೂ ಇಲ್ಲ, ನೀನೂ ಸತ್ತುಹೋದೆ ಎಂದು ಅವಳಿಗೆ ಹೇಳಿ ನಿನ್ನ ತಂದೆಯು ನಿನ್ನನ್ನು ಹೂಳಬೇಕೆಂದು ಬಂದನು. ಅವಳು ಆ ವಿಷಯದಲ್ಲಿ ನಿರಪರಾಧಿ."

"ಆ ಸಾರಿ ನನ್ನನ್ನು ಬಿಡಿಸಿದವರು ಈ ಸಾರಿ ಬಿಡಿಸಲಾರರೋ ?"

"ಈ ಸಾರಿ ನಿನ್ನನ್ನು ಬಿಡಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ನಿನ್ನ ತಂದೆಯೇ ವಿಚಾರಣೆಮಾಡಿ ನಿನ್ನನ್ನು ಶಿಕ್ಷಿಸಲು ಬದ್ಧಕಂಕಣನಾಗಿದ್ದಾನೆ."

"ಹಾಗಾದರೆ ನನ್ನ ಹಣೆಯಲ್ಲಿ ಬರೆದಿರುವಂತೆ ಆಗಲಿ. ನಿನ್ನಲ್ಲಿ ಏನಾದರೂ ಹಣವಿದ್ದರೆ ನನಗೆ ಸದ್ಯಕ್ಕೆ ಸ್ವಲ್ಪ ಕೊಟ್ಟುಹೋಗು" ಎಂದು ಕೇಳಲು ಭದ್ರಕನು ತನ್ನಲ್ಲಿದ್ದುದನ್ನು ಅವನಿಗೆ ಕೊಟ್ಟುಹೋದನು.

ಇದಾದ ಮೂರನೆಯ ದಿನ ಭದ್ರದತ್ತನ ವಿಚಾರಣೆಯು ಪ್ರಾರಂಭವಾಯಿತು. ಆ ಸಮಾಚಾರವು ಚೆನ್ನಾಗಿ ತಿಳಿದಿದ್ದುದರಿಂದ ಊರಿನವರೆಲ್ಲರೂ ಮೊದಲೇ ನ್ಯಾಯಾಸ್ಥಾನಕ್ಕೆ ಬಂದು ಕಿಕ್ಕಿರಿದಿದ್ದರು. ಸರ್ಕಾರದ ಪರವಾಗಿ ಫಿರ್ಯಾದನ್ನು ನಡೆಸುತ್ತಲಿದ್ದ ಅಧಿಕಾರಿಗೆ ಏಳೆಂಟು ದಿನಗಳಿಂದ ಮೈಯು ಸರಿಯಿಲ್ಲದುದರಿಂದ ಆ ಕೆಲಸಕ್ಕೆ ವಲ್ಲಭದೇವನೇ ನೇಮಕವಾದನು.

ನ್ಯಾಯಾಸ್ಥಾನಕ್ಕೆ ಚಿತ್ರಸೇನ, ಭದ್ರಸಿಂಹ, ದಮನಕರೂ ಬಂದಿದ್ದರು. ಅವರಲ್ಲಿ ದಮನಕನು "ಭದ್ರಸಿಂಹ, ನನ್ನ ಸ್ನೇಹಿತ ಅನಂತರಾಜು ಯಾವಾಗ ಬರುತ್ತಾನೆ ?" ಎಂದು ಕೇಳಲು ಭದ್ರಸಿಂಹನು, "ಇನ್ನೇನು ಬಂದಾನು" ಎಂದನು.

"ಅವನು ರಾಜಕುಮಾರನಂತೆಯೇ ನಟಿಸುತ್ತಿದ್ದನು."

'ನಾನು ಆಂಧ್ರದೇಶದ ರಾಜಕುಮಾರ ; ನಮ್ಮ ವಂಶ ಬಹಳ ಪುರಾತನದ್ದು, ನಾವು ಶ್ರೀಮಂತರು' ಎಂದು ಹೇಳಿಕೊಂಡು ಎಂಥ ವೇಷ ಹಾಕಿದ್ದ, ಅಬ್ಬಬ್ಬಾ !"

"ಈ ಶ್ರೀಮಂತನಿಗೆ ಈಗ ನೇಣು ಹಾಕುತ್ತಾರಲ್ಲವೇ ?"

"ಅಪ್ಪಾ, ನೀನು ಮಂತ್ರಿಗೆ ದಕ್ಷಿಣ ಭುಜ, ನಿನಗೆ ತಿಳಿಯದೆ ಇರುವುದೂ ಉಂಟೇ ?"

"ನಾನು ನಿನ್ನೆಯಿಂದ ಮಂತ್ರಿಯನ್ನು ನೋಡಲೇ ಇಲ್ಲ. ನೀನು ವಲ್ಲಭದೇವನನ್ನು ನೋಡಿದ್ದೆಯೋ ? ಏನಾದರೂ ಸಮಾಚಾರಗಳು ತಿಳಿದವೋ ?"

"ಅವನಿಗೆ ಒಂದು ಕಡೆ ಮಗಳು ಸತ್ತ ದುಃಖ ; ಒಂದು ಕಡೆ ಈ ಕೆಲಸದ

ಅವಾಂತರ. ಅವನನ್ನು ಹೇಗೆ ನೋಡುವುದು ? ಇದೂ ಅಲ್ಲದೆ ಅವನ ಮನೆಯಲ್ಲಿ ಜನರು ಒಬ್ಬೊಬ್ಬರಾಗಿ ಸತ್ತುಹೋದರು ; ಆ ದುಃಖದಿಂದ ಅವನು ಯಾರನ್ನೂ ನೋಡುವುದೇ ಇಲ್ಲ."

"ಏಕೆ ಅವನ ಮನೆಯಲ್ಲಿ ಬೇಗಬೇಗ ಅಷ್ಟು ಜನ ಸತ್ತರು ?"

"ಹೇಳುತ್ತೇನೆ, ಕೇಳು. ಅವನ ಹೆಂಡತಿಯ ಕೈಪೆಟ್ಟಿಗೆಯಲ್ಲಿ ಒಂದು ದ್ರಾವಕವಿದೆಯಂತೆ ; ಅದನ್ನು ಅವಳ ಮಗನು ತಿಳಿದು ಯಾರ ಮೇಲಾದರೂ ತನಗೆ ಕೋಪ ಬಂದರೆ ಅವರು ಕುಡಿಯುವ ಪದಾರ್ಥಗಳಿಗೆ ಅದರ ಎರಡು ಮೂರು ತೊಟ್ಟುಗಳನ್ನು ಬಿಟ್ಟುಕೊಡುತ್ತಾನಂತೆ. ಅದರಿಂದ ಅವನ ಮನೆಯಲ್ಲಿ ಅಷ್ಟು ಜನ ಸತ್ತರೆಂದು ಹಿಂದೆ ಅವನ ಮನೆಯಲ್ಲಿದ್ದು ಈಗ ನನ್ನ ಬಳಿಯಲ್ಲಿರುವ ಸೇವಕನು ಹೇಳಿದನು" ಎಂದು ಭದ್ರಸಿಂಹನು ಹೇಳಲಾಗಿ "ಛೇ, ಛೇ ! ಹಾಗಿರಲಾರದು" ಎಂದು ಚಿತ್ರಸೇನನು ಹೇಳಿದನು.

ಹೀಗೆ ಇವರು ಮಾತನಾಡುತ್ತಿದ್ದಾಗ ತಲೆಗೆ ಮುಸುಕು ಹಾಕಿಕೊಂಡು ಯಾವಳೋ ಒಬ್ಬಳು ನ್ಯಾಯಾಸ್ಥಾನಕ್ಕೆ ಬಂದಳು.

"ಓಹೋ ! ಇವಳಾರಪ್ಪಾ, ಗೋಷಾ ಹೆಂಗಸು ?" ಎಂದು ಚಿತ್ರಸೇನನು ಕೇಳಲು, ದಮನಕನು ನಗುತ್ತ "ಈ ರೀತಿ ಬರಬೇಕಾಗಿದ್ದರೆ ಇವಳು ಆ ರಾಜಕುಮಾರ ಅನಂತರಾಜುವಿನ ತಾಯಿಯಾಗಿರಬೇಕು" ಎಂದನು.

"ರಾಜಾ ಮಲಯಸಿಂಹನೇತಕ್ಕೆ ಬರಲಿಲ್ಲ ? ಈ ನಾಟಕದಲ್ಲಿ ಅವನೂ ಒಬ್ಬ ನಟನಲ್ಲವೇ ?"

"ಅವನೂ ಈ ರಾಜಕುಮಾರನಂತೆಯೋ ?"

"ಛೇ ಛೇ ! ಅವನೆಲ್ಲಿ ? ಇವನೆಲ್ಲಿ ? ಮಲಯಸಿಂಹನು ಬಲುದೊಡ್ಡ ಮನುಷ್ಯ" ಎಂದು ಚಿತ್ರಸೇನನು ಹೇಳುತ್ತಿದ್ದ ಹಾಗೆ,

"ಸದ್ದು, ಸದ್ದು ; ನ್ಯಾಯಾಧಿಪತಿಗಳು ಬಿಜಯಮಾಡಿಸುತ್ತಿದ್ದಾರೆ" ಎಂದು ಭಟ್ಟರು ಉಗಡಿಸಿದರು.

ನ್ಯಾಯಾಧಿಪತಿಗಳು ತಮ್ಮ ಆಸನದಲ್ಲಿ ಮಂಡಿಸಿದರು. ಅವರ ಹಿಂದೆ ವಲ್ಲಭದೇವನೂ ಬಂದು ತನ್ನ ಸ್ಥಾನದಲ್ಲಿ ಕುಳಿತುಕೊಂಡನು. ಅವನ ಸೆಡಕನ್ನು ಕಂಡು ಅಲ್ಲಿ ಸೇರಿದ್ದವರೆಲ್ಲರೂ "ಇವನು ದುಃಖಸಮುದ್ರದಲ್ಲಿ ಮುಳುಗಿದ್ದರೂ ಯಾವುದನ್ನೂ ಮೇಲೆ ಹಾಕಿಕೊಳ್ಳದೆ ಸರಕಾರದ ಕೆಲಸದಲ್ಲಿ ಅತ್ಯಾಸಕ್ತನಾಗಿರುತ್ತಾನೆ" ಎಂದು ಆಶ್ಚರ್ಯಪಟ್ಟರು.

"ಅಪರಾಧಿಯನ್ನು ಕರೆದುತನ್ನಿರಿ" ಎಂದು ವಲ್ಲಭದೇವನು ಭಟರಿಗೆ ಅಪ್ಪಣೆ ಮಾಡಿದನು. ಒಡನೆಯೇ ಸಿಪಾಯಿಗಳು ಭದ್ರದತ್ತನನ್ನು ತಂದು ನಿಲ್ಲಿಸಿದರು. ಅವನ ಮುಖದಲ್ಲಿ ಸ್ವಲ್ಪವೂ ದುಃಖ ತೋರುತ್ತಿರಲಿಲ್ಲ.

ಅನಂತರ ಮುಖ್ಯ ನ್ಯಾಯಾಧಿಪನು ವಲ್ಲಭದೇವನನ್ನು ಕುರಿತು, "ಸ್ವಾಮೀ, ಈ

ಅಪರಾಧಿಯ ವಿಷಯದಲ್ಲಿ ಹೇಳಬೇಕಾದುದನ್ನು ಹೇಳೋಣಾಗಲಿ" ಎನ್ನಲು, ಅವನು ಎದ್ದು ಅಪರಾಧಿಯು ಮಾಡಿದ್ದ ಅಕೃತ್ಯಗಳನ್ನೆಲ್ಲ ಒಂದೊಂದಾಗಿ ಬಣ್ಣಿಸಿ, ಕೊನೆಗೆ ಕದರ್ಥಕನನ್ನು ಕೊಂದ ವಿಷಯದಲ್ಲಿ ತಾನು ವಿಶದವಾಗಿ ಬರೆದುಕೊಂಡು ಬಂದಿದ್ದನ್ನು ಓದಿದನು. ಅವನು ಅದನ್ನು ಓದುತ್ತಿದ್ದಾಗ ಅಪರಾಧಿಯು ಅವನ ಮುಖವನ್ನೇ ನೋಡುತ್ತಿದ್ದನು. ತಾನು ಬುದ್ಧಿ ವ್ಯಯಮಾಡಿ ಬರೆದಿದ್ದುದನ್ನು ನ್ಯಾಯಾಧಿಪರು ಶ್ಲಾಘಿಸುವರೋ ತನ್ನ ತಪ್ಪುಗಳನ್ನು ಮನಸ್ಸಿಗೆ ನಾಟುವಂತೆ ಬಣ್ಣಿಸಿರುವುದರಿಂದ ಅಪರಾಧಿಯು ಭಯದಿಂದಾಗಲೇ ಅವಮಾನದಿಂದಾಗಲೀ ತಲೆಬಾಗುವನೋ ಎಂದು ವಲ್ಲಭದೇವನು ಆಗಾಗ ನ್ಯಾಯಾಧಿಪರ ಮುಖವನ್ನೂ, ಅಪರಾಧಿಯ ಮುಖವನ್ನೂ ನೋಡುತ್ತಿದ್ದನು. ಅಲ್ಲಿ ಸೇರಿದ್ದವರೆಲ್ಲರೂ "ಆಹಾ ! ಈ ವಯಸ್ಸಿನಲ್ಲಿಯೇ ಇಷ್ಟು ಕೆಲಸಗಳನ್ನು ಮಾಡಿದ ಈತನು ಈಗ ಸಿಕ್ಕಿಕೊಳ್ಳದಿದ್ದರೆ ಮುಂದೆ ಇನ್ನೇನೇನು ಮಾಡುತ್ತಿದ್ದನೋ" ಎಂದುಕೊಳ್ಳುತ್ತಲಿದ್ದರು.

ಸರಕಾರದ ಪರವಾಗಿ ವಲ್ಲಭದೇವನು ಹೇಳತಕ್ಕುದನ್ನೆಲ್ಲಾ ಹೇಳಲು, ಮುಖ್ಯ ನ್ಯಾಯಾಧಿಪನು ಅಪರಾಧಿಯನ್ನು ಕುರಿತು

"ನಿನ್ನ ಹೆಸರೇನು ?" ಎಂದನು.

"ಸ್ವಾಮೀ, ತಾವು ಕೇಳುವುದನ್ನು ನೋಡಿದರೆ ಪದ್ಧತಿಯ ಪ್ರಕಾರ ವಿಚಾರಣೆ ಮಾಡುವಂತೆ ತೋರುತ್ತದೆ. ಆದರೆ ನನ್ನ ವಿಷಯದಲ್ಲಿ ತಾವು ಹಾಗೆ ಮಾಡಕೂಡದು. ಮುಂದೆ ಅದರ ಕಾರಣವನ್ನು ಅರಿಕೆ ಮಾಡಿಕೊಳ್ಳುತ್ತೇನೆ. ಹಾಗೆ ಆಗದೆಂದರೆ ಸನ್ನಿಧಾನದಲ್ಲಿ ಯಾವ ಉತ್ತರವನ್ನೂ ಕೊಡೆನು" ಎಂದನು. ಅದನ್ನು ಕೇಳಿ ನ್ಯಾಯಾಧಿಪತಿಗಳೂ, ವಲ್ಲಭದೇವನೂ, ಇತರರೂ ಆಶ್ಚರ್ಯಪಟ್ಟರು.

"ಎಲಾ ! ಹಾಗೆಯೇ ಆಗಲಿ. ನಿನ್ನ ವಯಸ್ಸೆಷ್ಟು ?"

"ನಾಳೆಯ ಮಾರ್ಗಶಿರ ಬಹುಳ ದ್ವಾದಶಿಗೆ ಇಪ್ಪತ್ತೊಂದು ವಯಸ್ಸಾಗುತ್ತದೆ" ಎಂದು ಹೇಳಲು ವಲ್ಲಭದೇವನು ತಲೆಯೆತ್ತಿ ನೋಡಿದನು.

"ನೀನೆಲ್ಲಿ ಹುಟ್ಟಿದೆ ?"

"ಅದೇ ಊರಿನ ಸಂಪಿಗೆಯ ವನದ ಮನೆಯ ಮಹಡಿಯ ಮೇಲೆ."

ಅದನ್ನು ಕೇಳಿ ವಲ್ಲಭದೇವನು ಪುನಃ ತಲೆಯನ್ನೆತ್ತಿ ಅಪರಾಧಿಯನ್ನು ನೋಡಿದನು. ಆಗ ಅವನಿಗೆ ಗಾಬರಿಯುಂಟಾಯಿತು.

"ನಿನ್ನ ವೃತ್ತಿಯೇನು ?"

"ಸ್ವಾಮೀ, ಮೊತ್ತಮೊದಲು ಸುಳ್ಳು ಪತ್ರ, ಅನಂತರ ಕಳ್ಳತನ ಈಗ ಕೊಲೆ" ಎಂದು ಅಪರಾಧಿಯು ನಿಧಾನವಾಗಿ ನುಡಿಯಲು ನ್ಯಾಯಾಧಿಪರು ಬೆರಗಾದರು. ಜನರೆಲ್ಲರೂ ಅಸಹ್ಯಪಟ್ಟುಕೊಂಡರು. ವಲ್ಲಭದೇವನಿಗೆ ಮೈಯೆಲ್ಲ ಬೆವರಿತು. ಅವನು ತಟ್ಟನೆ ಎದ್ದು ಸುತ್ತ ನೋಡುತ್ತಿದ್ದನು.

ಆಗ ಭದ್ರದತ್ತನು, "ಸ್ವಾಮೀ, ಯಾರನ್ನು ನೋಡೋಣಾಗುತ್ತದೆ" ಎಂದು ಕೇಳಲು, ಅವನು ಯಾವ ಬದಲನ್ನೂ ಹೇಳದೆ ಸುಮ್ಮನೆ ಕುಳಿತುಕೊಂಡನು.

"ಏಲಾ ಪಾಪಿ, ಮೊದಲು ಬಿರುದುಗಳನ್ನೆಲ್ಲಾ ಹೇಳಿಕೊಂಡು ಬಳಿಕ ಹೆಸರನ್ನು ಹೇಳಿಕೊಂಡರೆ ಖ್ಯಾತಿಯು ಹೆಚ್ಚುವುದೆಂದು ತಿಳಿದು ಮೊದಲು ಹೆಸರನ್ನು ಹೇಳಲಿಲ್ಲವೋ" ಎಂದು ನ್ಯಾಯಾಧಿಪರು ಕೇಳಲು ಭದ್ರದತ್ತನು,

"ಮಹಾಸ್ವಾಮೀ, ನನ್ನ ಅಭಿಪ್ರಾಯವನ್ನು ತಾವು ಸರಿಯಾಗಿ ಅಪ್ಪಣೆ ಕೊಡಿಸೋಣವಾಯಿತು."

ಜನರ ಅಸಹ್ಯವು ಮತ್ತೂ ಹೆಚ್ಚಿತು.

"ನಿನ್ನ ಹೆಸರೇನು ? ಈಗ ಹೇಳು."

"ನನಗೆ ನನ್ನ ಹೆಸರು ತಿಳಿಯದು. ನಮ್ಮಪ್ಪನ ಹೆಸರನ್ನು ಬೇಕಾದರೆ ಹೇಳುತ್ತೇನೆ."

"ಅದನ್ನೇ ಹೇಳು," ಎಂದು ಕೇಳಿದೊಡನೆಯೇ ಸಭಾಸ್ಥಾನವು ನಿಶ್ಶಬ್ದವಾಯಿತು. ಯಾವ ಹೆಸರನ್ನು ಹೇಳುತ್ತಾನೋ ಎಂದು ಎಲ್ಲರೂ ಕೌತುಕದಿಂದ ನಿರೀಕ್ಷಿಸುತ್ತಿದ್ದರು. ಆಗ ಭದ್ರದತ್ತನು,

"ಮಹಾಸ್ವಾಮೀ, ನನ್ನ ತಂದೆಯವರು ವಿಚಾರಣಕರ್ತರು."

"ವಿಚಾರಣಕರ್ತನೆ ?" ಎಂದು ನ್ಯಾಯಾಧೀಶನು ಆಶ್ಚರ್ಯವನ್ನು ಸೂಚಿಸಲು,

"ಅಹುದು ಸ್ವಾಮಿ, ಅವರ ಹೆಸರು ವಲ್ಲಭದೇವ."

ಅದನ್ನು ಕೇಳಿ ವಲ್ಲಭದೇವನಿಗೆ ತಲೆ ತಿರುಗಿ ಬೆವರು ಕಿತ್ತುಕೊಂಡು, ಕೈಯಲ್ಲಿದ್ದ ಕಾಗದವೆಲ್ಲಾ ನೆನೆದುಹೋಯಿತು. ಆಗ ಸಭಾಸ್ಥಾನದಲ್ಲಿ ಗಲಭೆ ಹೆಚ್ಚಾಗಿ ಅದನ್ನು ನಿಲ್ಲಿಸುವುದು ಬಹಳ ಕಷ್ಟವಾಯಿತು. ಕುರ್ಚಿಯಲ್ಲಿ ಕುಳಿತಿದ್ದಂತೆ ವಲ್ಲಭದೇವನು ಸೊಕ್ಕಿದನು. ಅಲ್ಲಿದ್ದ ಒಬ್ಬ ಹೆಂಗಸು ಮೂರ್ಛೆಹೋದಳು.

"ಎಲೋ, ನೀನೆಲ್ಲಿ ಇದ್ದೀಯೇ ಬಲ್ಲೆಯಾ ? ನ್ಯಾಯಾಸ್ಥಾನದಲ್ಲಿ ಹುಡುಗಾಟವಾಡಬೇಡ" ಎಂದು ನ್ಯಾಯಾಧಿಪರು ಹೇಳಲು ಭದ್ರದತ್ತನು

"ಸ್ವಾಮೀ, ನಾನು ಎಂದಿಗೂ ಸಭೆಯಲ್ಲಿ ಹುಡುಗಾಟವಾಡುವವನಲ್ಲ. ನನ್ನ ವಯಸ್ಸನ್ನು ಕೇಳೋಣಾಯಿತು, ಅದನ್ನು ಅರಿಕೆಮಾಡಿಕೊಂಡೆ. ನೀನೆಲ್ಲಿ ಹುಟ್ಟಿದೆ ಎಂದು ಅಪ್ಪಣೆಯಾಯಿತು ; ಅದನ್ನು ಹೇಳಿದೆ. ನನ್ನ ಹೆಸರನ್ನು ಕೇಳಿದುದಾಯಿತು, ಅದರ ವಿಷಯವಾಗಿ ಅರಿಕೆಮಾಡಿಕೊಳ್ಳುತ್ತೇನೆ. ನಾನು ಹುಟ್ಟಿದ ಕೂಡಲೇ ನನ್ನ ತಾಯಿ ತಂದೆಗಳು ಅನಾದರಣೆ ಮಾಡಿ ನನ್ನನ್ನು ತ್ಯಜಿಸಿದುದರಿಂದ ನನಗೆ ಯಾರೂ ಹೆಸರೇ ಇಡಲಿಲ್ಲ. ಅದರಿಂದಲೇ ನನ್ನ ತಂದೆಯ ಹೆಸರನ್ನು ಹೇಳಿದೆನು. ಈ ವಿಚಾರಣೆ ಯನ್ನು ನಡೆಸಬೇಕೆಂದು ಬದ್ಧಕಂಕಣರಾಗಿರುವ ಈ ವಲ್ಲಭದೇವರೇ ನನ್ನ ಜನಕರು" ಎಂದನು.

ಈ ರೀತಿ ಭದ್ರದತ್ತನು ಹೇಳಲು ಅಲ್ಲಿದ್ದವರಿಗೆಲ್ಲಾ ಅದು ನಿಜವೆಂದು ತೋರಿ ಎಲ್ಲರೂ ಏಕಕಾಲದಲ್ಲಿ ವಲ್ಲಭದೇವನನ್ನು ನೋಡಿದರು. ಅಷ್ಟು ಜನಗಳ ದೃಷ್ಟಿ ಪಾತವು ತನ್ನ ಮೇಲೆ ಬೀಳಲು ಅವನು ತಲೆಯನ್ನೆತ್ತಲಾರದೆ ಹೋದನು. ಆಗ ಭದ್ರದತ್ತನು,

"ಸ್ವಾಮೀ, ನ್ಯಾಯಾಧಿಪರೇ, ನಾನು ಹೇಳಿದುದು ಸುಳ್ಳು ಎಂದು ತಾವು ತಿಳಿದಿರಬಹುದೇನೋ. ಯಾವುದೂ ಸುಳ್ಳಲ್ಲ. ನಾನು ಮಾರ್ಗಶಿರ ಬಹುಳ ದ್ವಾದಶೀ ರಾತ್ರಿ ಸುಮಾರು ಹನ್ನೆರಡು ಗಂಟೆಯ ವೇಳೆಯಲ್ಲಿ ಸಂಪಗೆಯ ವನದ ಮನೆಯ ಮಹಡಿಯ ಶಯ್ಯಾಗೃಹದಲ್ಲಿ ಹುಟ್ಟಿದೆನು. ನಾನು ಹುಟ್ಟಿದಾಗ ಅಲ್ಲಿ ನನ್ನ ತಾಯಿತಂದೆಗಳಿಬ್ಬರೇ ಇದ್ದರು. ನಾನು ಹುಟ್ಟಿದ ಕೂಡಲೇ ಮಗುವು ಸತ್ತುಹೋಯಿತೆಂದು ಸುಳ್ಳು ಹೇಳಿ ನಮ್ಮಪ್ಪನು ನನ್ನನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಮನೆಯ ಹಿಂದಣ ತೋಟದಲ್ಲಿ ಹೂಳಿದನು."

ಭದ್ರದತ್ತನು ಹೀಗೆಂದುದನ್ನು ಕೇಳಿ ವಲ್ಲಭದೇವನಿಗೆ ಬಹಳ ಭಯವಾಯಿತು. ಅವನ ಭಯವು ಹೆಚ್ಚಿದಷ್ಟೂ ಜನರಿಗೆ ಅಪರಾಧಿಯ ಮಾತಿನಲ್ಲಿ ನಂಬುಗೆಯು ಹೆಚ್ಚಿತು.

"ನೀನು ಹುಟ್ಟಿದಾಗ ನಡೆದ ಸಂಗತಿಯು ನಿನಗೆ ಗೊತ್ತಾದ ಬಗೆ ಹೇಗೆ?"

"'ಸ್ವಾಮೀ, ಅದನ್ನು ಅರಿಕೆ ಮಾಡುತ್ತೇನೆ, ಲಾಲಿಸಬೇಕು. ನನ್ನ ತಂದೆಯ ಮೇಲಣ ದ್ವೇಷದಿಂದ ಹಗೆ ತೀರಿಸಿಕೊಳ್ಳಬೇಕೆಂದಿದ್ದವನೊಬ್ಬನು ಅ ರಾತ್ರಿ ನನ್ನ ತಂದೆಯನ್ನು ಕೊಲ್ಲಬೇಕೆಂದು ಆ ಮನೆಯ ಹಿಂದುಗಡೆಯ ತೋಟದಲ್ಲಿ ಅವಿತುಕೊಂಡಿದ್ದನು. ನನ್ನನ್ನು ಹೂಳಬೇಕೆಂದು ನನ್ನ ತಂದೆಯು ಅಲ್ಲಿಗೆ ಬಂದಾಗ ಅವನನ್ನು ಕಠಾರಿಯಿಂದ ತಿವಿಯಲು, ಅವನು ಜ್ಞಾನತಪ್ಪಿ ಬಿದ್ದನು. ಆಗ ಆ ಹಗೆಯು ನನ್ನ ತಂದೆಯು ಸತ್ತನೆಂದೂ, ಅವನು ತಂದ ಪೆಟ್ಟಿಗೆಯಲ್ಲಿ ಹಣವಿರಬಹುದೆಂದೂ ಊಹಿಸಿ ಪೆಟ್ಟಿಗೆಯನ್ನು ಎತ್ತಿಕೊಂಡು ಓಡಿಹೋಗಿ, ತನ್ನ ಮೆಯ್ಯ ಮೇಲೆ ಹಾರಿದ್ದ ರಕ್ತವನ್ನು ತೊಳೆದುಕೊಳ್ಳಬೇಕೆಂದು ನದಿಗೆ ಹೋಗಿ ಪೆಟ್ಟಿಗೆಯನ್ನು ಬಿಚ್ಚಿ ನೋಡಲು, ಅದರಲ್ಲಿ ಹೆಣವಿದ್ದುದನ್ನು ಕಂಡು ನೀರಿನಲ್ಲಿ ಬಿಸುಡಬೇಕೆಂದು ಎತ್ತಿದಾಗ ಅದರ ಮೆಯ್ಯು ಬೆಚ್ಚಗಿದ್ದು ಉಸಿರಾಡಲು ಪ್ರಾರಂಭವಾಯಿತು. ಅದನ್ನು ಕಂಡು ಅವನು ನನ್ನನ್ನು ಒಂದು ಅನಾಥಾಲಯದಲ್ಲಿ ಬಿಟ್ಟು ಹೋದನು. ಮೂರು ತಿಂಗಳ ಮೇಲೆ ಒಬ್ಬ ಹೆಂಗಸು ಅಲ್ಲಿಗೆ ಬಂದು ನನ್ನನ್ನು ತನ್ನ ಮನೆಗೆ ಕರೆದು ಹೋಗಿ ಸಾಕಿದಳು. ಅವಳು ಹೇಳಿದಂತೆ ಹೇಳಿಕೊಂಡಿದ್ದಿದ್ದರೆ ನಾನು ಸುಖವಾಗಿಯೇ ಇರುತ್ತಲಿದ್ದೆನು. ನನ್ನ ದುರ್ಬುದ್ಧಿಯು ನನ್ನನ್ನು ಅಲ್ಲಿರಗೊಡದೆ ಅಕೃತ್ಯಗಳಿಗೆ ನೂಕಿತು. ಒಂದಾನೊಂದು ದಿನ ನನ್ನ ದುರದೃಷ್ಟಕ್ಕಾಗಿ ನಾನು ದೇವರನ್ನು ಬಯ್ಯುತ್ತಿದ್ದಾಗ, ನನ್ನ ಸಾಕುತಂದೆಯು ಬಂದು 'ಅಪ್ಪಾ ಏಕೆ ಅನ್ಯಾಯವಾಗಿ ದೇವರನ್ನು ನಿಂದಿಸುತ್ತೀಯೆ. ಇದಕ್ಕೆಲ್ಲಾ ನಿನ್ನ ತಂದೆಯೇ ಕಾರಣ' ಎಂದು ಈಗ ನಾನು ಹೇಳಿದುದನ್ನೆಲ್ಲಾ ನನಗೆ ತಿಳಿಸಿದನು."

"ನಿನ್ನ ತಾಯಿಯೋ ?"

"ನನ್ನ ತಂದೆಯ ಮಾತು ನಿಜವೆಂದು ನಂಬಿದವಳಾದುದರಿಂದ ಈ ವಿಷಯದಲ್ಲಿ ಅವಳ ತಪ್ಪು ಯಾವುದೂ ಇಲ್ಲ."

ಆ ವೇಳೆಗೆ ಸರಿಯಾಗಿ, ಮುಸುಕು ಹಾಕಿಕೊಂಡು ನ್ಯಾಯಾಸ್ಥಾನಕ್ಕೆ ಬಂದು ಇದ್ದ ಹೆಂಗಸು ಕಿಟ್ಟೆಂದು ಕಿರಿಚಿಕೊಂಡು ಪುನಃ ಮೂರ್ಛಿತಳಾದಳು. ಸುತ್ತಮುತ್ತಲಿದ್ದವರು ಶೈತ್ಯೋಪಚಾರವನ್ನು ಮಾಡಬೇಕೆಂದು ಮುಸುಕನ್ನು ತೆಗೆದಾಗ ಅವಳು ಭಾಮಿನಿಯೆಂದು ಗೊತ್ತಾಯಿತು. ಅವಳನ್ನು ಒಂದು ಬಂಡಿಯಲ್ಲಿ ಮಲಗಿಸಿ ಮನೆಗೆ ಕಳುಹಿಸಿದರು.

ಅಷ್ಟು ಹೊತ್ತಿಗೆ ವಲ್ಲಭದೇವನಿಗೆ ಮೆಯ್ಯಲ್ಲಿ ನಡುಕವೂ ಕಿವಿಯಲ್ಲಿ ಒಂದು ವಿಧವಾದ ಧ್ವನಿಯೂ ಉಂಟಾಗಿ ಬುದ್ಧಿಯು ತೊಲಗಿಹೋಯಿತು. ಈ ಸ್ಥಿತಿಯಲ್ಲಿದ್ದರೂ "ಭಾಮಿನೀ, ಭಾಮೀನೀ," ಎಂದು ಜನರೆಲ್ಲರೂ ಆಡುತ್ತಿದ್ದುದನ್ನು ಕೇಳುತ್ತಲೇ ಅವನಿಗೆ ಎಚ್ಚರಿಕೆಯುಂಟಾಯಿತು.

""ಎಲೋ ಭದ್ರದತ್ತ, ಈಗ ನೀನು ಹೇಳಿದುದಕ್ಕೆ ಪ್ರಮಾಣಗಳೇನು ?" ಎಂದು ನ್ಯಾಯಾಧಿಪನು ಕೇಳಲು, ಅವನು

"ಸ್ವಾಮೀ, ಅದು ಅವಶ್ಯಕವೋ ?"

"ಆಹಾ ಅವಶ್ಯಕ."

"ಹಾಗಾದರೆ ವಲ್ಲಭದೇವರನ್ನು ನೋಡೋಣವಾಗಲಿ."

ಎಲ್ಲರೂ ವಲ್ಲಭದೇವನ ಮುಖವನ್ನು ನೋಡಿದರು. ಅವನು ನೋಟಗಳ ಭಾರವನ್ನು ಸಹಿಸಲಾರದೆ ತತ್ತರಿಸುತ್ತಲಿದ್ದನು. ಆಗ ಅವನನ್ನು ನೋಡಿ ಭದ್ರದತ್ತನು,

"ಅಪ್ಪಾಜೀ, ನಾನು ಹೇಳಿದುದು ನಿಜವೋ, ಸುಳ್ಳೋ, ನೀನೇ ನ್ಯಾಯಾಧಿಪತಿಗಳಿಗೆ ಹೇಳು" ಎಂದು ಗಟ್ಟಿಯಾಗಿ ಕೂಗಿಕೊಂಡನು.

ಅದರಿಂದ ವಲ್ಲಭದೇವನಿಗೆ ಕಳವಳವು ಮತ್ತಷ್ಟು ಹೆಚ್ಚಿತು.

ಅವನು ಕುಳಿತಿರಲಾರದೆ ಎದ್ದು ನಿಂತು ಅತ್ತಿತ್ತ ನೋಡಿ ನ್ಯಾಯಾಧಿಪತಿಗಳನ್ನು ಕುರಿತು "ಸ್ವಾಮೀ, ಅವನು ಹೇಳಿದುದೆಲ್ಲಾ ಸತ್ಯ. ದೈವಗತಿಯ ಮುಂದೆ ಯಾವುದೂ ನಿಲ್ಲದು. ನ್ಯಾಯವಿದ್ದಂತೆ ನನ್ನನ್ನು ಶಿಕ್ಷಿಸಿ" ಎಂದನು. ಅದನ್ನು ಕೇಳಿ ನ್ಯಾಯಾಧಿಪತಿಗಳು ವಲ್ಲಭದೇವನನ್ನು ಕನಿಕರದಿಂದ ನೋಡುತ್ತ "ವಲ್ಲಭದೇವರೇ, ಆ ಅವಿವೇಕಿಯ ಮಾತು ಕೇಳಿ ನೀವೇಕೆ ಹೀಗೆ ಕಳವಳಿಸುತ್ತೀರಿ ?" ಎಂದನು.

"ಸ್ವಾಮೀ, ನನಗೆ ಕಳವಳವೇನೂ ಇಲ್ಲ. ನಾನು ಮಾಡಿದ ಪಾಪಫಲವನ್ನು ನಾನೇ ಉಂಡು ತೀರಬೇಕು." ಎಂದು ಹೇಳಿ ಹುಚ್ಚನಂತೆ ಅಲ್ಲಿಂದ ಹೊರಗೆ ಬಂದು ಬಂಡಿಯಲ್ಲಿ ಕುಳಿತು "ಮನೆಗೆ ಹೊಡೆ" ಎಂದು ಅಪಸ್ವರದಲ್ಲಿ ಕಿರಿಚಿಕೊಂಡನು.

'ವಲ್ಲಭದೇವನ ಕೈಗೆ ಸಿಕ್ಕಿದವನು ಬದುಕಿ ಬರುವುದೆಂದರೇನು' ಎಂದು ತಿಳಿದುಕೊಂಡು

ಅಲ್ಲಿಗೆ ಬಂದಿದ್ದವರೆಲ್ಲರೂ ವಿಚಾರಣೆಯ ಪರಿಣಾಮವು ಹೀಗಾದುದನ್ನು ಕಂಡು "ದೈವೀ ವಿಚಿತ್ರಾ ಗತಿಃ, ಇದುವರೆಗೂ ವಲ್ಲಭದೇವನಿಗಿಂತ ವಿವೇಕಿಯೂ ಸದಾಚಾರಿಯೂ ಇಲ್ಲವೆಂದು ತಿಳಿದು ಇದ್ದೆವು. ಈಗ ಅವನ ಬೇಳೆಯ ಕಾಳು ಗೊತ್ತಾಯಿತು. ಪ್ರಪಂಚದಲ್ಲಿ ಯಾರನ್ನು ತಾನೇ ನಂಬುವುದಕ್ಕಾದೀತು" ಎಂದು ಅಲ್ಲಿ ಸೇರಿದ್ದವರೆಲ್ಲರೂ ಹೇಳಿಕೊಳ್ಳುತ್ತ ಹೋದರು.

ಆಗ ನ್ಯಾಯಾಧಿಪತಿಗಳು "ಸಧ್ಯಕ್ಕೆ ವಿಚಾರಣೆಯು ನಿಂತಿದೆ. ಅದು ಪುನಃ ಮತ್ತೊಬ್ಬ ನ್ಯಾಯಾಧಿಪನಿಂದ ನಡೆಯುವುದು" ಎಂದು ಹೇಳಿ ಹೊರಟುಹೋದರು.

"ಭದ್ರಸಿಂಹ ವಲ್ಲಭದೇವನಿಗಿಂತ ರಾಜಸಿಂಹನೇ ವಾಸಿ. ಅವಮಾನಪಟ್ಟು ಕೊಂಡು ಬದುಕಿರುವುದಕ್ಕಿಂತ ಪ್ರಾಣ ಬಿಡುವುದೇ ಮೇಲು" ಎಂದು ಚಿತ್ರಸೇನನು ಹೇಳಲು, ದಮನಕನು,

"ಅಯ್ಯೋ, ನಾನು ಅವನ ಮಗಳು ವಿಮಲೆಯನ್ನು ಮದುವೆ ಮಾಡಿಕೊಳ್ಳಬೇಕೆಂದು ಇದ್ದೆನಲ್ಲಾ ! ಅವಳು ಸತ್ತುಹೋದುದೇ ಒಳ್ಳೆಯದಾಯಿತು" ಎಂದುಕೊಂಡನು.

## ೭೦
## ವಲ್ಲಭದೇವನ ಪ್ರಾಯಶ್ಚಿತ್ತ

ವಲ್ಲಭದೇವನು ಭದ್ರದತ್ತನ ವಿಚಾರಣೆಗೆ ನ್ಯಾಯಾಸ್ಥಾನಕ್ಕೆ ಮನೆಯಿಂದ ಹೊರಡುವುದಕ್ಕೆ ಮುಂಚೆ ಅವನ ಮನೆಯಲ್ಲಿ ಕೆಲವು ಸಂಗತಿಗಳು ನಡೆದಿದ್ದವು.

ವಲ್ಲಭದೇವನು ಭದ್ರದತ್ತನ ಮೇಲೆ ತಪ್ಪನ್ನು ಆಪಾದನೆ ಮಾಡಲೋಸುಗ ವಿಚಾರಣೆಯ ಮೊದಲ ದಿನ ರಾತ್ರಿಯೆಲ್ಲಾ ನಿದ್ದೆಗೆಟ್ಟು ಯೋಚನೆ ಮಾಡಿ ಬರೆಯುತ್ತಲಿದ್ದು ಬೆಳಗಾಗುತ್ತಲೇ ತಂಗಾಳಿಯಲ್ಲಿ ಸ್ವಲ್ಪ ಓಡಾಡಿದರೆ ಅನುಕೂಲವೆಂದು ತಿಳಿದು ಮನೆಯ ಹಿಂದಣ ತೋಟದಲ್ಲಿ ತಿರುಗಾಡುತ್ತಲಿದ್ದನು. ಆಗ ಮಹಡಿಯ ಮೇಲೆ ಕಿಟಕಿಯ ಹತ್ತಿರ ಕುಳಿತಿದ್ದ ದೀನನಾಥನು ತೋಟದಲ್ಲಿ ಯಾವುದನ್ನೋ ಗುರುತಿಸಿ ನೋಡುತ್ತಿದ್ದುದನ್ನು ಕಂಡು, ಅವನು ಯಾವುದನ್ನು ನೋಡುತ್ತಾನೆಂದು ಹಾಗೆಯೇ ನೋಡಲು ಅಲ್ಲಿ ತನ್ನ ಹೆಂಡತಿಯು ಮಗನನ್ನು ಆಡಿಸುತ್ತಿದ್ದುದನ್ನು ಕಂಡನು. ಒಡನೆಯೇ ಅವನ ಮುಖವು ಬೆಂಡಾಯಿತು. ವೃದ್ಧನ ದೃಷ್ಟಿಯು ತನ್ನ ಮೇಲೆ ಬೀಳಲು, ಅವನು ಗಡಗಡನೆ ನಡುಗಿ "ಅಪ್ಪಾಜೀ, ನನ್ನ ಮಾತು ನನಗೆ ಜ್ಞಾಪಕವಿದೆ ; ಕೊಂಚ ಹೊತ್ತು ಸುಮ್ಮನಿದ್ದರೆ ನಿನ್ನ ಮನಸ್ಸು ತೃಪ್ತಿಯಾಗುವಂತೆ ಮಾಡುವೆನು" ಎಂದು ಸನ್ನೆಮಾಡಿ ಒಳಗೆ ಹೋದನು.

ತನ್ನ ಕೊಠಡಿಗೆ ಹೋಗಿ ಸುಮಾರು ಒಂದು ಗಂಟೆಯ ಕಾಲ ಮುಂದೆ

ಮಾಡಬೇಕಾದುದನ್ನು ನಿಶ್ಚಯಿಸಿ, ಭೋಜನವನ್ನು ತೀರಿಸಿಕೊಂಡು ನ್ಯಾಯಾಸ್ಥಾನಕ್ಕೆ ಹೊರಡಲು ಸಿದ್ಧನಾಗಿ ಹೆಂಡತಿಯನ್ನು ಕೂಗಿದನು. ಅಷ್ಟರೊಳಗಾಗಿಯೇ ಅವಳು ಎಂದಿನಂತೆ ಗಂಡನಿಗೆ ತಾಂಬೂಲವನ್ನು ಕೊಡುವುದಕ್ಕೋಸುಗ ಅವನ ಕೊಠಡಿಗೆ ಬಂದಳು.

ಇದೀಗ ಸರಿಯಾದ ಸಮಯವೆಂದು ಯೋಚಿಸಿ ವಲ್ಲಭದೇವನು ಅವಳ ಜತೆಯಲ್ಲಿ ಬಂದ ನಾಗಕುಮಾರನನ್ನು ಮುದ್ದಿಟ್ಟು, "ಹೊರಗೆ ಆಡುತ್ತಿರು' ಎಂದು ಕಳುಹಿಸಿ ಬಾಗಿಲನ್ನು ಮುಚ್ಚಿಕೊಂಡು "ಎಲೇ ! ನೀನು ಹಾಕುತ್ತಿದ್ದ ವಿಷವನ್ನು ಎಲ್ಲಿ ಇಟ್ಟಿದ್ದೀಯೇ ?" ಎಂದು ಗದ್ದರಿಸಲು, ನಾಲ್ಕು ಕಡೆಯಲ್ಲಿಯೂ ಹೊತ್ತಿ ಉರಿಯುವ ದಾವಾಗ್ನಿಯ ನಡುವೆ ಸಿಕ್ಕಿಕೊಂಡು ಒದ್ದಾಡುವ ಹರಿಣಿಯಂತೆ ನಾಗಮಣಿಯು ನಡುಗುತ್ತ ಯಾವ ಬದಲನ್ನು ಹೇಳಲೂ ತೋಚದೆ ಸುಮ್ಮನಿದ್ದಳು. ವಲ್ಲಭದೇವನು ಪುನಃ ಪ್ರಶ್ನೆಮಾಡಲು ಅವಳು,

"ಸ್ವಾಮೀ, ಹಾಗೆಂದರೇನು ?"

ಎಂದಳು.

"ನನ್ನ ಮಾವ, ಅತ್ತೆ, ಹರಿದಾಸ, ವಿಮಲೆ, ಇವರಿಗೆಲ್ಲಾ ಹಾಕಿ ಕೊಂದೆಯಲ್ಲಾ ಆ ವಿಷವನ್ನು ಎಲ್ಲಿ ಇಟ್ಟಿದ್ದೀಯೇ ?"

"ಅಯ್ಯೋ, ಏನನ್ನು ಹೇಳುತ್ತೀರಿ ; ನಾನು ಯಾವುದನ್ನೂ ಕಂಡವಳಲ್ಲ."

"ನೀನು ಈ ನಾಲ್ಕು ಜನರನ್ನು ಅತಿ ಚಮತ್ಕಾರವಾಗಿ ಈ ಲೋಕದಿಂದ ಸಾಗಿಸಿಬಿಟ್ಟೆ ನಾನು ನಿನ್ನಲ್ಲಿ ಮೋಹಾವೇಶದಿಂದ ಮರುಳಾಗಿ ಈ ಸಂಗತಿಯನ್ನು ತಿಳಿಯದೆ ಹೋದೆನು. ನನ್ನ ಅತ್ತೆ ಮಾವಂದಿರು ಸತ್ತಮೇಲೆ ಪಂಡಿತರು ವಿಷದ ವಿಷಯವನ್ನು ನನಗೆ ಸೂಚಿಸಿದರು. ಹರಿದಾಸನು ಸತ್ತ ಮೇಲೆ ಆ ವಿಷಯದಲ್ಲಿ ನನಗೂ ನಂಬುಗೆಯುಂಟಾಗಿ ಆ ಪಶುಪ್ರಾಣಿ ವಿಮಲೆಯ ಮೇಲೆ ಅನುಮಾನಪಟ್ಟೆನು. ಅವಳೂ ಹೋದಮೇಲೆ ಈ ಕೆಲಸ ನಿನ್ನದೇ ಎಂದು ಪರಿಷ್ಕಾರವಾಗಿ ತಿಳಿದುಹೋಯಿತು. ಏಕಕಾಲದಲ್ಲಿ ಇಷ್ಟು ಸಾವುಗಳು ಆದಮೇಲೆ ನಿನ್ನ ಕೃತ್ಯಗಳು ಹೇಗೆ ಹೊರಬೀಳದೆ ಇದ್ದಾವು ? ಅದು ಹೊರಬಿದ್ದ ಮೇಲೆ ಹೇಗೆತಾನೇ ನಾನು ಬದುಕಿದ್ದೇನು ?"

ವಲ್ಲಭದೇವನು ಈ ರೀತಿ ಹೇಳಲು ನಾಗಮಣಿಯು ಸ್ವಲ್ಪ ಸುಧಾರಿಸಿಕೊಂಡು ಹುಸಿನಗುತ್ತ

"ಸ್ವಾಮೀ, ತಾವು ನನ್ನ ಪತಿಯಾಗಿ ಈ ವಿಷಯವನ್ನು ಪ್ರಶ್ನೆಮಾಡುತ್ತೀರೋ, ನ್ಯಾಯಾಧಿಪತಿಯಾಗಿ ಕೇಳುತ್ತೀರೋ ?"

"ನ್ಯಾಯಾಧಿಪತಿಯಾಗಿ ಕೇಳುತ್ತೇನೆ."

"ಹಾಗಾದರೆ ನೀವು ಅವರಿವರ ಮಾತನ್ನು ಕೇಳುವುದು ನ್ಯಾಯವೇ ?"

"ಓಹೋ, ವಿಷವಿಕ್ಕುವವರೆಲ್ಲ ಹೇಡಿಗಳೆಂದು ಕೇಳಿದ್ದೆ ; ಅದು ನಿಜವೆಂದು ಈಗ

ಗೊತ್ತಾಗುತ್ತದೆ. ನೀನು ಚತುರೆಯಾದುದರಿಂದ ಆ ವಿಷದಲ್ಲಿ ಸ್ವಲ್ಪವನ್ನಾದರೂ ಇಟ್ಟುಕೊಳ್ಳದಿರಲಾರೆ" ಎಂದು ವಲ್ಲಭದೇವನು ಹೇಳಲು, ಅವಳು ಯಾವ ಮಾತನ್ನೂ ಆಡದೆ ಅವನ ಕಾಲ ಮೇಲೆ ಬಿದ್ದಳು.

"ತಪ್ಪು ಮಾಡಿ ಈಗ ಒಪ್ಪಿಕೊಂಡರೆ ಏನು ಪ್ರಯೋಜನ ? ಇದರಿಂದ ನಿನಗೆ ಕೊಡುವ ಶಿಕ್ಷೆಯು ಎಷ್ಟು ಮಾತ್ರಕ್ಕೂ ಲಘುವಾಗಲಾರದು."

"ಶಿಕ್ಷೆಯೇ ? ಯಾರಿಗೆ ?"

"ನನ್ನ ಹೆಂಡತಿಯಾದುದರಿಂದ ನಿನಗೆ ಶಿಕ್ಷೆಯಾಗಲಾರದೆಂದಿದ್ದೀಯೋ ? ನಿನಗಾಗಿಯೇ ಶೂಲವು ಕಾದಿದೆ. ಈ ವಿಷದಲ್ಲಿ ನಿನಗೆ ಸಾಕಾಗುವಷ್ಟನ್ನು ಮಿಗಿಸಿಕೊಂಡಿದ್ದ ಹೊರತು ನಿನಗೆ ಶಿಕ್ಷೆಯು ತಪ್ಪದು. ನಾನು ಬಹುಕಾಲದಿಂದ ಕಷ್ಟಪಟ್ಟು ಸಂಪಾದಿಸಿದ್ದ ಹೆಸರೂ ಗೌರವವೂ ನಿನ್ನಿಂದ ಹಾಳಾಗಿಹೋದುವು. ನೀನು ಈ ವಿಷವನ್ನು ಕುಡಿದೇತೀರಬೇಕು. ಇಲ್ಲದಿದ್ದರೆ ನಿನ್ನನ್ನು ನಾನೇ ಸರ್ಕಾರಕ್ಕೆ ಒಪ್ಪಿಸುವೆನು. ನೀನು ಶೂಲದಲ್ಲಿ ಸಾಯುವುದು ನನಗೆ ಇಷ್ಟವಿಲ್ಲ. ಅದಕ್ಕಾಗಿಯೇ ವಿಷಪ್ರಾಶನ ಮಾಡೆಂದು ಹೇಳಿದೆ."

"ಸ್ವಾಮೀ, ನಾನು ಇನ್ನೂ ಸಣ್ಣವಳು ; ಈಗಲೇ ಸಾಯಲಾರೆನು. ಕರುಣಿಸಿ ನಾನು ನಿಮ್ಮ ಕೈ ಹಿಡಿದ ಪತ್ನಿಯಲ್ಲವೇ ? ನೀವು ಅತಿ ಪ್ರೀತಿಯಿಂದ ಕಾಣುವ ನಾಗಕುಮಾರನ ತಾಯಿಯಲ್ಲವೇ ?" ಎಂದು ಎರಡು ಕೈಗಳನ್ನೂ ಜೋಡಿಸಿಕೊಂಡು ಬೇಡಿದಳು.

"ಈ ವಯಸ್ಸಿನಲ್ಲಿಯೇ ಇಷ್ಟು ಕೆಲಸಗಳನ್ನು ಮಾಡಿದವಳು ಮುಂದೆ ಇನ್ನೇನನ್ನು ತಾನೇ ಮಾಡಲಾರೆ ? ನನ್ನನ್ನೂ ನನ್ನ ಮಗನನ್ನೂ ಒಂದು ದಿನವಲ್ಲ ಒಂದು ದಿನ ಅದೇ ವಿಷದಿಂದ ಕೊಲ್ಲದೆ ಇರಲಾರೆ."

"ನಿಮ್ಮನ್ನೇ, ನನ್ನ ಮಗನನ್ನೇ ! ಅಯ್ಯೋ, ಅಯ್ಯೋ" ಎಂದು ಕಿರಿಚಿಕೊಂಡು ನೆಲದ ಮೇಲೆ ಬಿದ್ದು ಹೊರಳಿದಳು. ಆಗ ವಲ್ಲಭದೇವನು,

"ಇಗೋ ಕೇಳು. ಈ ಆಟವನ್ನೆಲ್ಲಾ ಕಟ್ಟಿಡು. ಇದೇ ನನ್ನ ಕೊನೆಯ ಮಾತು. ನಾನು ನ್ಯಾಯಾಸ್ಥಾನಕ್ಕೆ ಹೋಗಿ ಬರುವುದರೊಳಗಾಗಿ ನೀನಿಟ್ಟುಕೊಂಡಿರುವ ವಿಷವನ್ನು ಕುಡಿದು ಸಾಯದಿದ್ದರೆ, ವಿಚಾರಣೆ ಮಾಡಿ ನಿನ್ನನ್ನು ಶೂಲಕ್ಕೆ ಹಾಕಿಸಿಬಿಡುವೆನು. ಹಾಗೆ ಮಾಡದಿದ್ದರೆ ನನ್ನ ಹೆಸರು ವಲ್ಲಭದೇವನಲ್ಲ" ಎಂದು ಹೇಳಿ ಬಂಡಿಯಲ್ಲಿ ಕುಳಿತು ನ್ಯಾಯಾಸ್ಥಾನಕ್ಕೆ ಹೊರಟುಹೋದನು.

ಅಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಮರಳಿ ಇಲ್ಲಿ ಹೇಳಬೇಕಾದುದು ಇಲ್ಲ. ಭದ್ರದತ್ತನು ಹೇಳಿದುದನ್ನೆಲ್ಲಾ ವಲ್ಲಭದೇವನು ಒಪ್ಪಿಕೊಂಡಾಗ ಜನರಿಗೆ ಅವನಲ್ಲಿದ್ದ ಗೌರವವು ತೊಲಗಿತು ; ಆದರೂ ಅವನಿಗುಂಟಾದ ದುಃಖ ಪರಂಪರೆಗಾಗಿ ಅವರಿಗೆ ಪಶ್ಚಾತ್ತಾಪವುಂಟಾಗಿ ಅವನು ನ್ಯಾಯಾಸ್ಥಾನದಿಂದ ಹುಚ್ಚನಂತೆ ಹೊರಕ್ಕೆ ಓಡಿಹೋದಾಗ

ಮರ್ಯಾದೆಯಿಂದ ಅವನಿಗೆ ದಾರಿಯನ್ನು ಬಿಟ್ಟುಕೊಟ್ಟು "ಅಯ್ಯೋ! ಇವನಿಗೆ ಈ ಅವಸ್ಥೆ ಬರಬಹುದೇ" ಎಂದು ದುಃಖಪಟ್ಟರು.

ವಲ್ಲಭದೇವನು ಬಂಡಿಯಲ್ಲಿ ಕುಳಿತು ನೆಟ್ಟಗೆ ಮನೆಗೆ ಹೋದನು. ಅವನಿಗೆ ಆಗ ಶರೀರದಲ್ಲಿ ರಕ್ತಕ್ಕೆ ಬದಲಾಗಿ ಕರಗಿದ ಸೀಸವು ಹರಿಯುತ್ತಿರುವಂತೆ ತೋರಿತು. ಮಯ್ಯ ಒಂದೊಂದು ಭಾಗದಲ್ಲಿಯೂ ಒಂದೊಂದು ವಿಧವಾದ ವೇದನೆಯನ್ನು ಅವನು ಅನುಭವಿಸಿದನು. 'ಸಂಕಟ ಬಂದರೆ ವೆಂಕಟರಮಣ' ಎಂಬಂತೆ ಅವನಿಗೆ ಆಗ ದೇವರ ಸ್ಮರಣೆಯುಂಟಾಗಿ "ಭಗವಂತಾ! ಇದುವರೆಗೂ ಅಹಂಕಾರದಿಂದ ನಿನ್ನನ್ನು ನಾನು ಸ್ಮರಿಸದಿದ್ದುದರಿಂದ ನನಗೆ ಈ ಗತಿಯುಂಟಾಯಿತು" ಎಂದು ತನ್ನ ಹಿಂದಣ ಕೃತ್ಯಗಳನ್ನೆಲ್ಲಾ ಒಂದೊಂದಾಗಿ ನೆನಸಿಕೊಂಡು "ಅಯ್ಯೋ! ನನ್ನ ದುಷ್ಕೃತ್ಯಗಳಿಂದ ಎಷ್ಟು ಜನರಿಗೆ ಸಂಕಟವೂ ಹಿಂಸೆಯೂ ಉಂಟಾಯಿತೋ? ಅವರು ಎಷ್ಟು ನೊಂದುಕೊಂಡರೋ? ನನ್ನ ಹೆಂಡತಿಯ ಕೃತ್ಯಗಳು ನಾನು ಮಾಡಿದ ಕೃತ್ಯಗಳಿಗಿಂತ ಏನೂ ಗುರುತರವಲ್ಲ; ಅಯ್ಯೋ! ನಾನೇನೋ ಬಹಳ ಪರಿಶುದ್ಧಾತ್ಮನೆಂದು ತಿಳಿದು ವಿಷಪ್ರಾಶನ ಮಾಡೆಂದು ಹೆಂಡತಿಗೆ ಅಪ್ಪಣೆ ಮಾಡಿ ಬಂದೆನು. ನನ್ನ ಸಹವಾಸದಿಂದ ಅವಳು ಪಾತಕಿಯಾದಳು. ಪಾತಕಿಯಾದ ನಾನು ಭೂಮಿಯ ಮೇಲೆ ಇದ್ದುಕೊಂಡು ಅವಳು ಸಾಯುವುದೆಂದರೇನು? ನಾವಿಬ್ಬರೂ ಪಾತಕಿಗಳಾದುದರಿಂದ ಈ ದೇಶವನ್ನು ಬಿಟ್ಟು ಬೇರೆ ಕಡೆಗೆ ಹೋಗಿ ಹೆಸರನ್ನು ಬದಲಾಯಿಸಿಕೊಂಡಾದರೂ ಜೀವಿಸಿರೋಣ. ಅವಳು ವಿಷ ಕುಡಿಯುವುದಕ್ಕೆ ಮುಂಚೆಯೇ ಮನೆಗೆ ಹೋಗಿ ಅವಳೊಡನೆ ಈ ಹಾಳು ದೇಶವನ್ನು ಬಿಟ್ಟು ಎಲ್ಲಿಗಾದರೂ ಹೋಗಿ ಬದುಕೋಣ" ಎಂದುಕೊಂಡು ಅತಿ ವೇಗದಿಂದ ಬಂಡಿಯನ್ನು ಓಡಿಸಿಕೊಂಡು ಹೋದನು.

ಮನೆಯ ಮುಂದೆ ಬಂಡಿಯು ನಿಲ್ಲುವಷ್ಟರಲ್ಲಿಯೇ ವಲ್ಲಭದೇವನು ಆತುರದಿಂದ ಧುಮ್ಮಿಕ್ಕಿ ಬಾಗಿಲಲ್ಲಿದ್ದ ಸೇವಕರ ಮುಖವನ್ನು ನೋಡಿ "ಅವಳು ಸತ್ತಿದ್ದರೆ ಇವರು ಹೀಗಿರಲಾರರು" ಎಂದುಕೊಂಡು ಒಳಕ್ಕೆ ಹೋಗಿ, ಒಂದೇ ಉಸಿರಿನಲ್ಲಿ ಹಂತಗಳನ್ನು ಹತ್ತಿ ಹೆಂಡತಿಯಿದ್ದ ಕಿರುಮನೆಗೆ ದುಡದುಡನೆ ಓಡಿ, ಬಾಗಿಲು, ಹಾಕಿದ್ದುದನ್ನು ಕಂಡು ಗಾಬರಿಯಿಂದ "ಎಲೇ, ಎಲೇ, ಬಾಗಿಲು ತೆಗೆ; ನಾನು ಬಂದಿದ್ದೇನೆ" ಎಂದು ಕೂಗಿದನು. ಒಳಗಣಿಂದ ಸಣ್ಣ ಧ್ವನಿಯಲ್ಲಿ "ಯಾರದು?" ಎಂದು ಕೇಳಿದ ಹಾಗಾಯಿತು ವಲ್ಲಭದೇವನು "ನಾನು, ನಾನು ಬಾಗಿಲನ್ನು ತೆಗೆ" ಎಂದನು.

ಒಳಗೆ ಮತ್ತೇನೂ ಸದ್ದೇ ಆಗಲಿಲ್ಲ. ಆಗ ಅವನು ಗಾಬರಿಯಿಂದ ಬಾಗಿಲನ್ನು ಮೀಟಿ ಒಳಕ್ಕೆ ಹೋದನು. ನಾಗಮಣಿಯು ಮಲಗಿದ್ದಂತೆ ಕೈ ನೀಡಿ "ಸ್ವಾಮೀ, ತಮ್ಮ ಇಷ್ಟಾರ್ಥವು ಸಂದಿತೇ? ಇನ್ನು ಮೇಲೆ ನೆಮ್ಮದಿಯಾಗಿರಿ" ಎಂದು ಹೇಳಿದಳು. ಒಡನೆಯೇ ಪ್ರಾಣ ಹೋಯಿತು.

"ಅಯ್ಯೋ ! ಇವಳಂತೂ ಹೋದಳು ; ಇನ್ನು ಮಗುವನ್ನಾದರೂ ಕರೆದುಕೊಂಡು ಹೋಗುತ್ತೇನೆ" ಎಂದು ನಾಗಕುಮಾರನನ್ನು ಹುಡುಕಿ ಎಲ್ಲಿಯೂ ಕಾಣದೆ ಸೇವಕರನ್ನು ಕೂಗಿ

"ಎಲಾ, ಮಗುವೆಲ್ಲಿ ? ನೋಡಿ" ಎಂದು ಹೇಳಲು, ಅವರು

"ಸ್ವಾಮಿ ! ಈಗ ಸುಮಾರು ಅರ್ಧ ಗಂಟೆಗೆ ಮುಂಚೆ ಅಮ್ಮನವರು ಅವರನ್ನು ಕರೆದುಕೊಂಡು ಒಳಕ್ಕೆ ಹೋದರು ; ಆಮೇಲೆ ಅವರನ್ನು ನಾವು ಯಾರೂ ನೋಡಲಿಲ್ಲ."

"ಹಾಗೆಯೇ ?" ಎಂದು ವಲ್ಲಭದೇವನು ಮುಖದಲ್ಲಿ ಹೊರಟ ಬೆವರನ್ನು ಒಂದು ಕೈಯಿಂದ ಒರಸಿಕೊಳ್ಳುತ್ತ ಮತ್ತೊಂದು ಕೈಯಿಂದ ಕೈಪಿಡಿಯ ಗೋಡೆಯನ್ನು ಹಿಡಿದುಕೊಂಡು, ಮರಳಿ ಹೆಂಡತಿಯ ಕೊಠಡಿಗೆ ಹೋಗಿ "ಮಗೂ, ನಾಗಕುಮಾರ, ಎಲ್ಲಿದ್ದೀಯೋ ?" ಎಂದು ಕೂಗಿದನು. ಬದಲೇ ಬರಲಿಲ್ಲ. ಹಾಗೆಯೇ ಹುಡುಕುತ್ತ ಬಂದಾಗ ಕತ್ತಲಲ್ಲಿ ಒಂದು ಸೋಫಾವಿನ ಮೇಲೆ ಮಗುವು ಮಲಗಿದ್ದಿತು. ಆಗ ವಲ್ಲಭದೇವನ ಅತ್ಯಾನಂದದಿಂದ ಅದನ್ನೆತ್ತಿಕೊಂಡು ಹೊರಕ್ಕೆ ಬಂದನು. ಅದರ ಕೈಯಲ್ಲಿ ಒಂದು ಕಾಗದವಿದ್ದಿತು. ಅದನ್ನು ಕಂಡು ಬಿಚ್ಚಿ ಓದಿದನು. ಅದರಲ್ಲಿ :—

"ಈ ಮಗುವು ನನ್ನ ಪ್ರಾಣಕ್ಕಿಂತ ಹೆಚ್ಚಾಗಿದ್ದಿತು. ಇದನ್ನು ನೀವು ಬಲ್ಲಿರಿ. ಇದಕ್ಕಾಗಿಯೇ ನಾನು ಆ ಕೊಲೆಗಳನ್ನು ಮಾಡಿದೆನು. ಇದನ್ನು ಬಿಟ್ಟು ಇರಲಾರದೆ ನನ್ನ ಸಂಗಡವೇ ಕರೆದುಕೊಂಡು ಹೋದೆನು" ಎಂದು ಬರೆದಿದ್ದಿತು. ಅದನ್ನು ನಂಬದೆ, ಸತ್ತ ಮರಿಯನ್ನು ಪರೀಕ್ಷಿಸಿ ನೋಡುವ ಹೆಣ್ಣು ಸಿಂಹದಂತೆ ಪರೀಕ್ಷಿಸಿ, ವಲ್ಲಭದೇವನು ಅದು ಸತ್ತುಹೋಯಿತೆಂದು ತಿಳಿದು ಮಗುವನ್ನು ತಾಯಿಯ ಮಗ್ಗುಲಲ್ಲಿ ಮಲಗಿಸಿ ದೀನನಾಥನ ಕೊಠಡಿಗೆ ಹೋದನು. ಆಗ ಅಲ್ಲಿ ನಿರ್ಮಲಾನಂದನು ವೃದ್ಧನೊಂದಿಗೆ ಮಾತನಾಡುತ್ತಲಿದ್ದನು. ವಲ್ಲಭದೇವನು ಅವನನ್ನು ಕಂಡು "ಸ್ವಾಮೀ, ತಾವು ಈ ಮನೆಗೆ ಬಂದಾಗಲೆಲ್ಲಾ ಒಂದೊಂದು ಸಾವು ಆಗುವಂತಿದೆ. ಈಗ ಇಲ್ಲಿಗೆ ಏಕೆ ಬಂದಿರಿ ?" ಎಂದು ಕೇಳಿದನು. ಅದಕ್ಕೆ ಆನಂದನು,

"ನಿಮ್ಮ ಸಾಲವು ಹರಿಯಿತು ; ಇನ್ನು ಮುಂದೆ ದೇವರು ನಿಮ್ಮನ್ನು ನೆಮ್ಮದಿಯಾಗಿಡಲಿ, ಎಂದು ಹರಸಿ ಹೋಗೋಣವೆಂದು ಬಂದೆ."

"ಹಾ, ಹಾ ! ಈ ಧ್ವನಿಯನ್ನು ಎಲ್ಲಿಯೋ ಕೇಳಿದಂತೆ ಇದೆ."

"ಅದು ನಿಶ್ಚಯ" ಎಂದು ಆನಂದನು ತಲೆಗೆ ಸುತ್ತಿದ್ದ ಕಾವಿಯ ಬಟ್ಟೆಯನ್ನು ತೆಗೆದನು.

"ನೀವು ರಾಜಾ ಮಲಯಸಿಂಹರು !"

"'ಅಲ್ಲ, ಅಲ್ಲ. ಹಾಗೆಯೇ ನೋಡಿ, ಚೆನ್ನಾಗಿ ಜ್ಞಾಪಿಸಿಕೊಳ್ಳಿರಿ."

“ಹಾಗಾದರೆ ಈ ಧ್ವನಿಯನ್ನು ನಾನು ಮೊದಲು ಎಲ್ಲಿ ಕೇಳಿದ್ದೆ, ಹೇಳಿ ನೋಡೋಣ ?”

“ಇಪ್ಪತ್ತುಮೂರು ವರುಷಗಳ ಹಿಂದೆ ಮಲಯಪಟ್ಟಣದಲ್ಲಿ ರೇಣುಕೆಯ ಮದುವೆಯ ದಿನ.”

“ಹಾಗಾದರೆ ನೀವು ನಿರ್ಮಲಾನಂದರೂ ಅಲ್ಲ, ರಾಜಾ ಮಲಯಸಿಂಹರೂ ಅಲ್ಲ, ಇನ್ನಾರು ?”

“ಬಿಟ್ಟುಬಿಡುವುದಾಗಿ ಭಾಷೆಕೊಟ್ಟು ಸ್ವಾರ್ಥಕ್ಕಾಗಿ ನಿರಪರಾಧಿಯಾದ ಯಾವನನ್ನು ಯಾವಜ್ಜೀವವೂ ಜಾಲದುರ್ಗದಲ್ಲಿ ಸೆರೆಯಲ್ಲಿಡಿಸಿದಿರೋ, ವೃದ್ಧನಾದ ಯಾರ ತಂದೆಯನ್ನು ಹೊಟ್ಟೆಗಿಲ್ಲದೆ ಸಾಯುವಂತೆ ಮಾಡಿದಿರೋ, ಮದುವೆಯಾಗಬೇಕೆಂದಿದ್ದ ಯುವತಿಯನ್ನು ಮದುವೆಯಾಗದಂತೆ ಅಡ್ಡಿ ಮಾಡಿ ಯಾರ ಸ್ವಾತಂತ್ರ್ಯವನ್ನೂ ಸುಖವನ್ನೂ ಹಾಳುಮಾಡಿದಿರೋ, ಆ ಧರ್ಮದೇವನೇ ನಾನು.”

“ಧರ್ಮದೇವ, ಧರ್ಮದೇವ, ನೀನೇ ಧರ್ಮದೇವ ? ಸರಿ ಸರಿ ; ಈಗೆಲ್ಲವೂ ವಿಶದವಾಯಿತು. ಧರ್ಮದೇವ, ಇಲ್ಲಿ ಬಾ”

ಎಂದು ಅವನ ಕೈ ಹಿಡಿದು, ಕರೆದುಕೊಂಡು ಹೋಗಿ, ತನ್ನ ಹೆಂಡತಿ ಮತ್ತು ಮಗನ ಹೆಣಗಳ ಮುಂದೆ ನಿಲ್ಲಿಸಿ,

“ಇದನ್ನು ನೋಡು ; ನಿನ್ನ ಹಗೆ ತೀರಿತೇ ? ನಿನಗೆ ಸಂತೋಷವಾಯಿತೇ ? ತೃಪ್ತಿಯಾಯಿತೇ ?”

ಆ ಸನ್ನಿವೇಶವನ್ನು ಕಂಡು ರಾಜನು ಅತಿ ದುಃಖಿತನಾಗಿ “ಅಯ್ಯೋ ದೇವರೇ, ಇದೇನು ಅವಿವೇಕ ? ಸಾಧ್ಯವಾದರೆ ಈ ಮಗುವನ್ನಾದರೂ ಬದುಕಿಸುತ್ತೇನೆ” ಎಂದು ಮಗುವನ್ನು ಎತ್ತಿಕೊಂಡು ವಿಮಲೆಯ ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡನು. ಅದನ್ನು ನೋಡಿ ವಲ್ಲಭದೇವನು “ಅಯ್ಯೋ, ಅಯ್ಯೋ ! ಇವನು ನನ್ನ ಮಗುವನ್ನು ಎತ್ತಿಕೊಂಡು ಹೋಗುತ್ತಿದ್ದಾನೆಯಲ್ಲಾ,” ಎಂದು ಅರಚಿಕೊಳ್ಳುತ್ತ ಹಿಂದೆಯೇ ಓಡಿಹೋದನು. ಅವನಿಗೆ ಕಾಲು ಬಾರದೆ ಹೋಯಿತು. ಕಣ್ಣು ಗುಡ್ಡೆಗಳು ಗೂಡಿನಿಂದ ಕಿತ್ತು ಬರುತ್ತವೆಯೋ ಎಂಬಂತೆ ಮುಂದಕ್ಕೆ ಚಾಚಿಕೊಂಡು ನಟ್ಟುಹೋಗಿದ್ದವು. ಎದೆಯನ್ನು ಬಿಗಿದು ಬಿಗಿದು ಅವನ ಉಗುರುಗಳು ರಕ್ತದಿಂದ ತೋದುಹೋದವು. ಕೆನ್ನೆಯ ನರಗಳು ಉಬ್ಬಿಕೊಂಡು ಕುದಿಯುವ ರಕ್ತವು ಅಲ್ಲಿಂದ ಮೇರೆದಪ್ಪಿ ಮೆದುಳಿಗೆ ಹಾದು ಎಲ್ಲಿ ಅದನ್ನು ಕೊಚ್ಚಿಬಿಡುವುದೋ ಎಂಬಂತಿದ್ದುವು. ಈ ರೀತಿ ಅವನು ಕೊಂಚ ಹೊತ್ತು ಇದ್ದನು. ಅವನಿಗೆ ಬುದ್ಧಿಯು ವಿಕಲ್ಪವಾಯಿತು. ತರುವಾಯ ಅವನು 'ಹ, ಹ, ಹಾ !' ಎಂದು ಅಟ್ಟಹಾಸಮಾಡಿಕೊಂಡು ಗುಡುಗುಡನೆ ಮಹಡಿಯನ್ನು ಇಳಿದು ಓಡಿ ಹೋದನು.

ಮಲಯಸಿಂಹನು ವಿಷಹರವಾದ ಔಷಧಿಗಳನ್ನು ಮಗುವಿನ ಬಾಯಿಗೆ ಸುರಿಯಲು

ಅದು ಕುಟುವಾಯಿಂದ ಕೆಳಕ್ಕೆ ಹರಿಯಿತು. ಅದನ್ನು ನೋಡಿ ಇದರ ಪ್ರಾಣಹೋಯಿತೆಂದು ತಿಳಿದು ಬಾಗಿಲನ್ನು ತೆಗೆದುಕೊಂಡು ಹೊರಗೆ ಬಂದು, ಅದನ್ನು ತಾಯಿಯ ಬಳಿ ಯಥಾಪ್ರಕಾರ ಮಲಗಿಸಿ ವಲ್ಲಭದೇವನನ್ನು ಹುಡುಕಿಕೊಂಡು ಹೋದನು. ಆಗ ಅವನು ಮನೆಯ ಹಿಂದುಗಡೆಯ ತೋಟದಲ್ಲಿ ಒಂದು ಗುದ್ದಲಿಯನ್ನು ಹಿಡಿದು ಅಗೆಯುತ್ತಲಿದ್ದನು. ರಾಜನು ಅದನ್ನು ಕಂಡು,

"ಅಯ್ಯೋ ಪಾಪ ! ನಿಮ್ಮ ಮಗನು ಸತ್ತುದು ತುಂಬ ಅನ್ಯಾಯವಾಯಿತು."

ವಲ್ಲಭದೇವನಿಗೆ ಅವನ ಮಾತಿನ ಮೇಲೆ ಗಮನವೇ ಹೋಗಲಿಲ್ಲ. ತನ್ನ ಪಾಡಿಗೆ ತಾನು "ಎಲ್ಲಿಯೋ ನೆಲದಲ್ಲಿ ಹುದುಗಿಕೊಂಡಿದ್ದಾನೆ. ಅಗೆದು ತೆಗೆಯುತ್ತೇನೆ, ನೋಡು" ಎಂದು ನೆಲವನ್ನು ಅಗೆಯುತ್ತಲಿದ್ದನು.

ಅವನ ಅವಸ್ಥೆಯನ್ನು ನೋಡಿ ಮಲಯಸಿಂಹನು 'ಇವನಿಗೆ ಹುಚ್ಚು ಹಿಡಿಯಿತು. ಇನ್ನು ನಾನು ಇಲ್ಲಿದ್ದು ಏನು ಪ್ರಯೋಜನವಿಲ್ಲ. ಉಳಿದಿರುವರನ್ನಾದರೂ ಬದುಕಿಸಿಕೊಳ್ಳುತ್ತೇನೆ' ಎಂದುಕೊಂಡು ತನ್ನ ಮನೆಗೆ ಹೊರಟನು.

## ೭೧
## ಪ್ರಯಾಣ

ಮಲಯಸಿಂಹನು ತನ್ನ ಮನೆಗೆ ಹೋದಾಗ ನಿಲ್ಲುವುದಕ್ಕೆ ನೆರಳಿಲ್ಲದ ಪಿಶಾಚದಂತೆ ಅಲೆಯುತ್ತಿದ್ದ ಜಯವೀರನನ್ನು ನೋಡಿ ನಸುನಗೆಯಿಂದ,

"ಜಯವೀರ, ನಾಳೆಯ ದಿನ ಇಲ್ಲಿಂದ ಹೊರಡುತ್ತೇನೆ ; ಅಣಿಮಾಡಿಕೋ."

"ಸ್ವಾಮೀ, ನಾನು ಯಾವಾಗಲೂ ಅಣಿಯಾಗಿಯೇ ಇದ್ದೇನೆ. ಇಲ್ಲಿ ತಮಗೇನೂ ಕೆಲಸವಿಲ್ಲವೋ ?"

"ಅಪ್ಪಾ, ನಾನು ಮಾಡಬೇಕಾದುದಕ್ಕಿಂತ ಹೆಚ್ಚಾಗಿ ಮಾಡಿರಲಾರೆ, ಹಾಗೇನಾದರೂ ಮಾಡಿದ್ದರೆ ದೇವರೇ ಮನ್ನಿಸಬೇಕು."

ಅಮರಪುರದಲ್ಲಿ ಈಚೆಗೆ ನಡೆದ ಸಂಗತಿಗಳನ್ನು ಕುರಿತು ಜನರು ತಮ ತಮಗೆ ತೋರಿದಂತೆ ಹೇಳಿಕೊಳ್ಳುತ್ತಲಿದ್ದರು. ಮುಖ್ಯವಾಗಿ ದೊಡ್ಡವರೆಂದೆನಿಸಿದ್ದ ವಲ್ಲಭದೇವ, ರಾಜಸಿಂಹ, ದುರ್ಮತಿ, ಇವರುಗಳಿಗೆ ಹಠಾತ್ತಾಗಿ ಬಂದ ವಿಪತ್ತಿನ ಮಾತೇ ಮಾತು. ಜಯವೀರನು ತನ್ನ ತಂಗಿಯನ್ನೂ ಭಾವನನ್ನೂ ಕಂಡು ಊರಿಗೆ ಹೋಗಿ ಬರುತ್ತೇನೆಂದು ಹೇಳಹೋದಾಗ ಅವರಿಬ್ಬರೂ ಆ ವಿಚಾರವಾಗಿಯೇ ಮಾತನಾಡುತ್ತಿದ್ದರು.

"ನೆನ್ನೆಯ ದಿನ ಶ್ರೀಮಂತರಾಗಿ ಗೌರವಸ್ಥರೆನಿಸಿಕೊಂಡಿದ್ದ ಈ ಮೂವರು ಇಂದು

ಹೀಗಾದುದನ್ನು ನೋಡಿದರೆ ಅವರು ಮಾಡಿದ ವಿಶೇಷವಾದ ಪಾಪದ ಫಲವೆಂದು ತೋರುತ್ತದೆ" ಎಂದು ಮನೋಮೋಹನನು ಹೇಳಲು, ರತ್ನಾಂಬೆಯು

"ಹಾಗೆ ಹೇಳುವುದು ಸರಿಯಲ್ಲ ; ನಮ್ಮಪ್ಪನು ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿ ಇದ್ದಾಗ ಯಾರಾದರೂ ಹೀಗೆ ಹೇಳಿದ್ದರೆ ಸರಿಯಾಗುತ್ತಲಿದ್ದಿತೋ ?" ಎಂದಳು.

"ಯಾವ ವಿಧವಾದ ಶಿಕ್ಷೆಯನ್ನೂ ಕೊಡದೆ ಅವರನ್ನು ಕಾಪಿಡಲು ದೇವರು ಯಾವನೋ ಒಬ್ಬ ಮಹಾಪುರುಷನನ್ನು ಕಳುಹಿಸಿದನು" ಎಂದು ಮನೋಮೋಹನನು ಹೇಳುವ ವೇಳೆಗೆ ಸರಿಯಾಗಿ ರಾಜಾ ಮಲಯಸಿಂಹನು ಅಲ್ಲಿಗೆ ಬಂದನು. ಅದನ್ನು ಕಂಡು ಗಂಡಹೆಂಡಿರಿಬ್ಬರೂ ಆನಂದಪಟ್ಟರು. ಅವರ ಮಧ್ಯದಲ್ಲಿದ್ದರೂ ಜಯವೀರನಿಗೆ ಅವರು ಆಡುತ್ತಿದ್ದ ಮಾತುಗಳ ಮೇಲೆ ಜ್ಞಾನವೇ ಇರಲಿಲ್ಲ ; ಆಗ ರಾಜನು

"ರತ್ನಾಂಬೇ ! ಇಲ್ಲಿಂದ ಪ್ರಯಾಣಮಾಡಬೇಕೆಂದು ಏರ್ಪಾಡು ಮಾಡಿಕೊಂಡು ಹೊರಡುವುದಕ್ಕೆ ಮುಂಚೆ ನಿಮಗೆ ಹೇಳಿ ಹೋಗೋಣವೆಂದು ಬಂದೆನು."

"ಈಗ ತಾವೆಲ್ಲಿಗೆ ಪ್ರಯಾಣಮಾಡುತ್ತೀರಿ ?"

"ಸದ್ಯದಲ್ಲಿ ಮಲಯಪಟ್ಟಣಕ್ಕೆ ; ನಿಮ್ಮಣ್ಣನೂ ಬರುತ್ತಾನೆ."

"ಹಾಗೆಯೇ ?"

"ಅಹುದು."

"ರಾಜರೇ, ನಮ್ಮಣ್ಣನ ಸಂಕಟವನ್ನು ನೀಗಿಸಿ ಅವನ ಮನಸ್ಸಂತೋಷಪಡಿಸಿ ಕಳುಹಿಸಿಕೊಡಬೇಕು."

ಜಯವೀರನು ತನಗುಂಟಾದ ದುಃಖವನ್ನೂ ಅಪನಂಬುಗೆಯನ್ನೂ ಹೊರಪಡಿಸಿಕೊಳ್ಳದಂತೆ ಇದ್ದನು. ಅದನ್ನು ಕಾಣದವನಂತೆ ರಾಜನು,

"ಅಮ್ಮಾ, ನಿನಗೆ ನಾವಿಕ ಸೈಂಧವನಲ್ಲಿ ಇನ್ನೂ ನಂಬುಗೆಯಿದೆಯೋ ?"

"ಅದು ಎಂದಿಗೆ ತಾನೇ ತಪ್ಪೀತು, ಸ್ವಾಮೀ ?"

"ಹಾಗಾದರೆ ಕೇಳು. ನಿಮ್ಮಣ್ಣನು ಇನ್ನೊಂದು ತಿಂಗಳೊಳಗಾಗಿ ಆನಂದದಿಂದ ಹಿಂತಿರುಗಿ ಬರುವನು" ಎಂದು ರಾಜನು ರತ್ನಾಂಬೆಗೆ ಹೇಳುತ್ತ ಜಯವೀರನ ಮುಖವನ್ನು ನೋಡಲು, ಅವನು ತಲೆಯನ್ನು ಅಲುಗಿಸುತ್ತ ತನಗೆ ಆ ಮಾತಿನಲ್ಲಿ ಅನುಮಾನವುಂಟೆಂಬ ಭಾವವನ್ನು ಸೂಚಿಸಿದನು.

"ಈ ಊರಿಗೆ ಹಿಂದಿರುಗಿ ಬಂದ ಮೇಲೆ ನಿಮ್ಮಣ್ಣನನ್ನು ನೋಡಿದರೆ ನೀನೇ ಆಶ್ಚರ್ಯಪಟ್ಟೀಯೆ. ಬಂಡಿಯು ಬಾಗಿಲಲ್ಲಿ ನಿಂತಿದೆ ; ಹೊರಡುತ್ತೇನೆ. ದಂಪತಿಗಳಿಗೆ ಯಾವಾಗಲೂ ಭಗವಂತನು ಕಲ್ಯಾಣವನ್ನು ಉಂಟುಮಾಡಲಿ."

"ಸ್ವಾಮೀ, ತಾವು ಪುನಃ ಇಲ್ಲಿಗೆ ಬಿಜಯಮಾಡಿಸುತ್ತೀರೋ ? ನಮ್ಮ ಅಪ್ಪಾಜಿಯವರಿಗೆ ತಾವು ಮಾಡಿದ ಉಪಕಾರಕ್ಕಾಗಿ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಅಪ್ಪಣೆಯಾದರೆ ಹೇಳುತ್ತೇನೆ."

"ಅಮ್ಮಾ, ಆ ವಿಷಯಲ್ಲಿ ನೀನು ಏನನ್ನೂ ಹೇಳಬೇಡ. ನಿನ್ನ ಹೃದಯದಲ್ಲಿರುವ ಭಾವವು ನೋಟದಿಂದಲೇ ಹೊರಪಡುತ್ತದೆ. ನಾನು ಇಂಥವನೆಂದು ನಿಮಗಾರಿಗೂ ತಿಳಿಯಕೂಡದೆಂದಿದ್ದೆನು. ನಿಮ್ಮಣ್ಣನ ಮುಷ್ಕರದಿಂದ ಅದು ಬಯಲಾಯಿತು. ಅನಾಮಧೇಯನಾಗಿಯೂ ಅಜ್ಞಾತನಾಗಿಯೂ ಇದ್ದ ನನ್ನನ್ನು ದೇವರು ಕರುಣೆಯಿಂದ ಕಟಾಕ್ಷಿಸಿ ನನ್ನಿಂದ ಕೆಲವು ಕಾರ್ಯಗಳನ್ನು ಮಾಡಿಸಿದನು. ಅದರಿಂದ ನೀವು ನನಗೆ ಹೇಳಬೇಕೆಂದಿರುವ ಯಾವತ್ತನ್ನೂ ದೇವರಲ್ಲಿ ಅರಿಕೆಮಾಡಿಕೊಳ್ಳಿರಿ. ನಿಮಗೆ ಮಂಗಳವಾಗಲಿ. ಪುನಃ ನಿಮ್ಮನ್ನು ನಾನು ನೋಡಲಾರೆ. ನೀವು ನನ್ನನ್ನು ಮರೆಯಕೂಡದು."

"ತಾವು ಪುನಃ ಇತ್ತ ಬರುವುದೇ ಇಲ್ಲವೇ ? ಹಾಗಾದರೆ ತಾವು ನಮ್ಮನ್ನು ಉದ್ಧಾರಮಾಡಲೋಸುಗ ಸ್ವರ್ಗದಿಂದ ಇಲ್ಲಿಗೆ ಬಂದು ಇಲ್ಲಿನ ಕೆಲಸವನ್ನು ನೆರವೇರಿಸಿಕೊಂಡು ಪುನಃ ಸ್ಥಾನವನ್ನು ಹೊಂದುತ್ತೀರೋ, ಏನೋ ?" ಎಂದು ಮನೋಮೋಹನನು ಹೇಳಲು ರಾಜನು

"ನನ್ನಂಥವನಿಗೆ ತಾವು ಹಾಗೆ ಹೇಳಬಾರದು. ನಾನೂ ನಿಮ್ಮಂತೆಯೆ ಒಬ್ಬ ಮನುಷ್ಯನು ; ಎಷ್ಟೋ ತಪ್ಪುಗಳನ್ನು ಮಾಡಿದ್ದೇನೆ. ಸ್ವರ್ಗಲೋಕದವರಿಗೂ ಪಾಮರನಾದ ನನಗೂ ಎಲ್ಲಿಯ ಸಾಟಿ ?"

"ಸ್ವಾಮೀ, ನಮ್ಮಣ್ಣನ ಮನೋವ್ಯಥೆಯನ್ನು ದೂರಪಡಿಸಿ ಅವನನ್ನು ಸಂತೋಷಚಿತ್ತನನ್ನಾಗಿ ಮಾಡಿ ನಮ್ಮ ಬಳಿಗೆ ಕಳುಹಿಸಿಕೊಡಬೇಕು" ಎಂದು ರಾಜನ ಕಿವಿಯಲ್ಲಿ ರತ್ನಾಂಬೆಯು ಹೇಳಲು, ಅವನು "ಅಮ್ಮಾ, ನಿನ್ನ ಇಷ್ಟದಂತೆಯೇ ಆಗುತ್ತದೆ, ಧೈರ್ಯವಾಗಿರು" ಎಂದು ಹೇಳಿ ಜಯವೀರನನ್ನು ಕರೆದುಕೊಂಡು ಹೊರಟನು.

ಹೊರಗೆ ಬಂದು ಬಂಡಿಯನ್ನು ಏರುವ ವೇಳೆಗೆ ಸರಿಯಾಗಿ ವಾಮನಭಟ್ಟನು ಬಂದು ನಿಂತನು.

"ಆ ವೃದ್ಧನನ್ನು ಕಂಡು ನಾನು ಕೊಟ್ಟಿದ್ದ ಕಾಗದವನ್ನು ಅವನ ಮುಂದಿಟ್ಟೆಯೋ ?"

"ಹುಂ."

"ಅದಕ್ಕೆ ಮುದುಕನು ಏನೆಂದು ಹೇಳಿದನು ?"

ಮುದುಕನು ಒಪ್ಪಿಗೆಯನ್ನು ಸೂಚಿಸಿದಾಗ ಕಣ್ಣು ಮುಚ್ಚುವಂತೆಯೇ ವಾಮನಭಟ್ಟನು ಸಂಜ್ಞೆಮಾಡಿ ತೋರಿಸಿದನು.

"ಇನ್ನು ಬಂಡಿಯು ಹೊರಡಲಿ" ಎಂದ ಕೂಡಲೇ ತಂದಿದ್ದ ಕುದುರೆ ಗಳು ವಾಯುವೇಗದಿಂದ ಹೊರಟವು ; ಗೊರಸುಗಳ ಹೊಡೆತದಿಂದ ಕಿಡಿಗಳು ಹಾರಿದವು.

ಊರ ಹೊರಗೆ ಸುಮಾರು ಐದು ಮೈಲಿಗಳು ಹೋದ ಬಳಿಕ ರಾಜನು ಬಂಡಿಯನ್ನು ನಿಲ್ಲಿಸಿ ಕೆಳಗೆ ಇಳಿದು ಸಮೀಪದಲ್ಲಿದ್ದ ಗುಡ್ಡವನ್ನು ಹತ್ತಿ ಅಮರಪುರವನ್ನು ನೋಡುತ್ತ

"ಮಹಾನಗರವೇ ! ನಿನ್ನ ಬಾಗಿಲು ಹೊಕ್ಕು ಆರು ತಿಂಗಳಾಗುತ್ತಾ ಬಂದಿತು. ಪರಮಾತ್ಮನಿಂದ ಪ್ರೇರಿತನಾಗಿ ನಿನ್ನಲ್ಲಿಗೆ ಬಂದೆ ; ಅವನ ಅನುಗ್ರಹದಿಂದ ಕೃತಾರ್ಥನಾದೆ ; ಇನ್ನು ಹೊರಡುವೆನು. ನನ್ನ ಅಂತರಂಗವನ್ನು ಬಲ್ಲ ಅವನೊಬ್ಬನಿಗೇ ಇಷ್ಟು ದಿನಗಳು ನಾನು ಇಲ್ಲಿದ್ದ ರಹಸ್ಯವನ್ನು ಅರಿಕೆ ಮಾಡಿಕೊಂಡಿರುವೆನು. ನಿನ್ನನ್ನು ಬಿಟ್ಟು ಹೋಗುವ ಈ ಸಮಯದಲ್ಲಿ ನನಗೆ ಅಹಂಕಾರವಿಲ್ಲ, ದ್ವೇಷವಿಲ್ಲ ; ಶೋಕವು ಮಾತ್ರ ನನ್ನನ್ನು ಬೆನ್ನ ಹತ್ತಿ ಬರುವುದೆಂಬುದನ್ನು ಆ ಪರಮಾತ್ಮನೊಬ್ಬನೇ ಬಲ್ಲ. ಅವನು ನನಗೆ ಕೊಟ್ಟ ಶಕ್ತಿಯನ್ನು ಸ್ವಾರ್ಥಸಾಧನಕ್ಕಾಗಲಿ ವ್ಯರ್ಥಕಾರ್ಯಕ್ಕಾಗಲಿ ವಿನಿಯೋಗಿಸಲಿಲ್ಲವೆಂಬುದನ್ನು ಅವನೊಬ್ಬನೇ ಬಲ್ಲ. ಮಹಾನಗರವೇ, ನಾನು ಹುಡುಕಿದುದನ್ನು ತಲ್ಲಣಿಸುತ್ತಿರುವ ನಿನ್ನ ಹೃದಯದಲ್ಲಿಯೇ ಕಂಡೆನು, ನಿನ್ನ ಗರ್ಭದಲ್ಲಿ ಹುದುಗಿದ್ದ ಪಾಪವನ್ನು ತಲಪರ್ಯಂತರವಾಗಿ ಶೋಧಿಸಿ ಮೂಲೋತ್ಪಾಟನ ಮಾಡಿದೆನು. ಇನ್ನು ನನ್ನ ಕೆಲಸವಾಯಿತು. ನನ್ನ ಕರ್ತವ್ಯ ಕಾರ್ಯವು ಪೂರಯಿಸಿತು. ಇನ್ನು ನಿನ್ನ ದೆಸೆಯಿಂದ ನನಗೆ ಸುಖವೂ ಇಲ್ಲ. ದುಃಖವೂ ಇಲ್ಲ. ನಮೋ ನಮಃ" ಎಂದು ಹೇಳಿ ಬಂಡಿಯಲ್ಲಿ ಕುಳಿತನು.

ಬಂಡಿಯು ಪುನಃ ಅತಿ ವೇಗದಿಂದ ಹೊರಟಿತು. ಅದರಲ್ಲಿ ಇಬ್ಬರೂ ಮೌನವಾಗಿ ಕುಳಿತಿದ್ದರು. ಜಯವೀರನ ಮುಖದಲ್ಲಿ ದುಃಖವು ತುಂಬಿ ತುಳುಕುತ್ತಲಿದ್ದಿತು. ಅವನಾಗಿ ಮಾತನಾಡಲಿ ಎಂದು ರಾಜನು ಸುಮ್ಮನಿದ್ದು, ಕೊನೆಗೆ ಅವನು ಮೌನ ಮುದ್ರೆಯನ್ನು ವಹಿಸಿರುವುದನ್ನು ಕಂಡು

"ಜಯವೀರ ನನ್ನೊಂದಿಗೆ ಬಂದುದಕ್ಕಾಗಿ ನೀನು ವ್ಯಸನಪಡುತ್ತೀಯೋ ?"

"ಸ್ವಾಮೀ, ಇಲ್ಲ. ಅಮರಪುರವನ್ನು ಬಿಟ್ಟು ಬಂದುದೇ ದುಃಖ."

"ಅಲ್ಲಿ ನಿನಗೆ ಸುಖವಿದೆ ಎಂದು ಇದ್ದರೆ ನಾನು ನಿನ್ನನ್ನು ಸಂಗಡ ಕರೆದುಕೊಂಡು ಬರುತ್ತಲೇ ಇರಲಿಲ್ಲ."

"ವಿಮಲೆಯು ಅಮರಪುರದಲ್ಲಿ ದೀರ್ಘ ನಿದ್ರೈಯುತ್ತಿರುವಾಗ ನಾನು ತಮ್ಮ ಕೂಡ ಬಂದುದು ಮತ್ತೊಂದು ಸಾರಿ ಅವಳನ್ನು ಕಳೆದುಕೊಂಡಂತಾಗಿದೆ.

"ಜಯವೀರ, ಕಳೆದುಹೋದ ನಮ್ಮ ಸ್ನೇಹಿತರೆಲ್ಲ ಭೂತರಾಗಿ ಅಲ್ಲಲ್ಲಿಯೇ ಇರುತ್ತಾರೆಂದು ತಿಳಿಯಬೇಡ. ಅವರು ಯಾವಾಗಲೂ ನಮ್ಮ ಹೃದಯದಲ್ಲಿಯೇ ಇರುತ್ತಾರೆ. ಅಂಥವರ ದೇಹವು ಮಾಯವಾದರೂ ಅವರ ನೆನಪು ನಮ್ಮ ಹೃದಯವನ್ನು ಎಂದಿಗೂ ಬಿಟ್ಟು ಅಗಲದು. ನನಗೆ ಇಬ್ಬರು ಸ್ನೇಹಿತರು ; ಜನ್ಮ ಕೊಟ್ಟ ತಂದೆಯೊಬ್ಬ, ಜ್ಞಾನೋಪದೇಶ ಮಾಡಿದ ಗುರುವೊಬ್ಬ. ನಾನು ಮಾಡುವುದೆಲ್ಲಾ ಅವರ ಪ್ರೇರಣೆಯಿಂದಲೇ. ನನಗೆ

ಯಾವಾಗ ಯಾವ ವಿಷಯದಲ್ಲಿ ಅನುಮಾನವುಂಟಾದರೂ ಅವರೊಡನೆ ಆಲೋಚಿಸದೆ ಯಾವ ಕೆಲಸವನ್ನೂ ಮಾಡೆನು. ನಾನು ಮಾಡಿದುದರಲ್ಲಿ ಒಳ್ಳೆಯದೇನಾದರೂ ಇದ್ದರೆ ಅದು ಅವರ ಅನುಗ್ರಹದಿಂದಲೇ ಆದುದು. ವಿಮಲೆಯಿಂದ ನಿನಗೆ ಸುಖವುಂಟಾಗುವುದು. ಈ ವಿಷಯದಲ್ಲಿ ಇನ್ನೂ ಅನುಮಾನವಿದ್ದರೆ ನಿಧಾನವಾಗಿ ನಿನ್ನ ಅಂತರಂಗದಲ್ಲಿ ಆಲೋಚನೆ ಮಾಡು."

"ನನ್ನ ಅಂತರಂಗವು ದುಃಖದಿಂದ ತುಂಬಿಹೋಗಿರುವುದರಿಂದ ದುಃಖವೊಂದಲ್ಲದೆ ಬೇರೆ ಯಾವುದೂ ತಿಳಿಯುವುದೇ ಇಲ್ಲ."

"ಮನಸ್ಸ್ಥೈರ್ಯವಿಲ್ಲದವರಿಗೆ ಎಲ್ಲವೂ ಕತ್ತಲಾಗಿಯೇ ಕಾಣುವುದು. ನಿನ್ನ ಅವಸ್ಥೆಯೂ ಹಾಗೆಯೇ ಇದೆ."

ಮಾರನೆಯ ದಿನ ಅರುಣೋದಯಕ್ಕೆ ಸರಿಯಾಗಿ ಬಂಡಿಯು ಮಲಯಪಟ್ಟಣವನ್ನು ಸಮೀಪಿಸಿತು. ಅದು ಊರ ಹತ್ತಿರಕ್ಕೆ ಹೋದ ಹಾಗೆಲ್ಲಾ ಅದರಲ್ಲಿ ಕುಳಿತಿದ್ದವರಿಗೆ ಒಂದು ವಿಧವಾದ ಆನಂದವು ಉಕ್ಕುತ್ತಲಿದ್ದಿತು. ತಾವು ಬಾಲ್ಯದಲ್ಲಿ ನೋಡಿದ್ದ ಸ್ಥಳಗಳೂ ಅಲ್ಲಿಯ ಅನುಭವಗಳೂ ಒಂದೊಂದಾಗಿ ಸ್ಮರಣೆಗೆ ಬಂದುವು. ಬಂಡಿಯು ರೇವಿನ ಬಳಿಗೆ ಬರಲು ಇಬ್ಬರೂ ಇಳಿದರು. ಆಗ ಜಯವೀರನು,

"ಇದೀಗ, ನೀವು ಮುಳುಗಿಹೋಗಿದ್ದ ಜಯಲಕ್ಷ್ಮಿಯನ್ನು ತಂದು ಕೊಟ್ಟು ನಮ್ಮ ಮಾನವನ್ನು ಉಳಿಸಿದಾಗ, ನನ್ನ ತಂದೆಯು ನಮ್ಮನ್ನೆಲ್ಲಾ ಸಂತೋಷದಿಂದ ಆಲಂಗಿಸಿಕೊಂಡ ಸ್ಥಳ. ಆ ಕಾಲದಲ್ಲಿ ನನ್ನ ಮುಖದ ಮೇಲೆ ಬಿದ್ದ ಅವನ ಆನಂದಬಾಷ್ಪಗಳ ಬಿಸಿಯು ಇನ್ನೂ ಆರಿಹೋಗಿಲ್ಲ."

ಅದಕ್ಕೆ ರಾಜನು ನಸುನಗುತ್ತ "ಆಗ ನಾನು ಅಗೋ, ಆ ಮರದ ಮರೆಯಲ್ಲಿ ನಿಂತು ನಿಮ್ಮನ್ನೆಲ್ಲಾ ನೋಡುತ್ತಲಿದ್ದೆನು" ಎಂದು ತಾನು ನಿಂತಿದ್ದ ಸ್ಥಳವನ್ನು ತೋರಿಸಿದನು. ಅದೇ ಸ್ಥಳದಲ್ಲಿ ಮುಖಕ್ಕೆ ಮುಸುಕು ಹಾಕಿಕೊಂಡು ಯಾವಳೋ ಒಬ್ಬ ಹೆಂಗಸು ರೇವಿನಲ್ಲಿದ್ದ ಹಡಗನ್ನು ನೋಡುತ್ತ ನಿಂತಿದ್ದು "ಉಸ್ಸ್" ಎಂದು ನಿಟ್ಟುಸಿರನ್ನು ಬಿಟ್ಟಳು. ಆ ಶಬ್ದವನ್ನು ಕೇಳಿ ರಾಜನು ಬಹುವಾಗಿ ವ್ಯಾಕುಲಪಟ್ಟನು.

ಆಗ ಜಯವೀರನು ರಾಜನನ್ನು ಕುರಿತು "ಸ್ವಾಮೀ, ಆ ಹಡಗನ್ನು ನೋಡಿರಿ. ಅದರ ಹಿಂದುಗಡೆಯಲ್ಲಿ ನಿಂತು ಯಾವನೋ ಹೋಗಿಬರುತ್ತೇನೆಂದು ಸೂಚಿಸುತ್ತಲಿದ್ದಾನೆ. ಅವನು ಉದಯಸಿಂಹನಿರಬಹುದೆಂದು ತೋರುತ್ತದೆ" ಎಂದನು.

ಮಲಯಸಿಂಹನು ಆ ಕಡೆಗೆ ತಿರುಗದೆಯೇ "ಅಹುದು," ಎಂದನು.

"ಆ ಕಡೆ ನೋಡದೆಯೇ ಉದಯಸಿಂಹನೆಂದು ಹೇಗೆ ತಿಳಿದಿರಿ ?" ರಾಜನು ಯಾವ ಬದಲನ್ನೂ ಹೇಳದೆ ನಕ್ಕು,

"ಜಯವೀರ, ಇಲ್ಲಿ ಎಲ್ಲಾದರೂ ಓಡಾಡುತ್ತ ಇರು. ನನಗೆ ಸ್ವಲ್ಪ ಕೆಲಸವಿದೆ ; ಅದನ್ನು ಮುಗಿಸಿಕೊಂಡು ಬರುತ್ತೇನೆ."

ಆಗ ಜಯವೀರನು ಪೂರ್ವದಲ್ಲಿ ತಾವು ವಾಸವಾಗಿದ್ದ ಮನೆಯ ಬಳಿಗೆ ಹೊರಟನು. ಅವನು ಕಣ್ಣಿಗೆ ಮರೆಯಾಗುವವರೆಗೂ ರಾಜನು ಅಲ್ಲಿಯೇ ನಿಂತಿದ್ದು ಬಳಿಕ ಮುಸುಕು ಹಾಕಿಕೊಂಡು ನಿಟ್ಟುಸಿರನ್ನು ಬಿಡುತ್ತಿದ್ದ ಹೆಂಗಸು ಹೋದ ದಾರಿಯನ್ನು ಹಿಡಿದು ಅವಳು ಪೂರ್ವದಲ್ಲಿ ಧರ್ಮದೇವನೂ ಭುಜಂಗಭೂಷಣನೂ ಇದ್ದ ಮನೆಯ ಆವರಣಕ್ಕೆ ಹೋದುದನ್ನು ಕಂಡು ಅವಳ ಹಿಂದೆಯೇ ಹೋದನು. ಅವಳು ಆ ಮನೆಯ ಮುಂದುಗಡೆಯ ಜಗಲಿಯಲ್ಲಿ ಕುಳ್ಳಿರಲು ರಾಜನು ಅವಳನ್ನು ನೋಡಿ,

"ಲಲಿತಾಂಗೀ, ನಿನ್ನ ಸುಖವನ್ನೆಲ್ಲ ಹಾಳುಮಾಡಿದ ನಾನು ಹೇಗೆ ತಾನೇ ಮರಳಿ ಅದನ್ನು ಕೊಟ್ಟೇನು ? ಆದರೂ ನಿನ್ನಲ್ಲಿ ವಿಶ್ವಾಸದಿಂದ ನಿನ್ನ ದುಃಖೋಪಶಮನಾರ್ಥವಾಗಿ ಒಂದು ಯೋಚನೆಯನ್ನು ಮಾಡಿದ್ದೇನೆ, ಅದನ್ನು ಕೇಳು."

"ನಾನು, ಬಹು ನಿರ್ಭಾಗ್ಯಳು. ಈ ಕಷ್ಟವು ನನ್ನ ಹಗೆಗೂ ಬೇಡ. ಗಂಡನು ಸತ್ತುಹೋದನು. ಇರುವ ಒಬ್ಬ ಮಗನೂ ನನ್ನನ್ನು ಅಗಲಿದನು."

"ಲಲಿತಾಂಗೀ, ನಿನ್ನ ಮಗನು ಸತ್ಪುತ್ರ. ಅವನು ನಿನ್ನನ್ನು ಬಿಟ್ಟು ಹೋದರೇನು ? ಜಾಗ್ರತೆಯಾಗಿಯೇ ಬಂದು ನಿನ್ನನ್ನು ಸೇರುವನು. ಅವನು ಇಲ್ಲಿಯೇ ಇದ್ದುಕೊಂಡಿದ್ದರೆ ನಿನ್ನ ದುಃಖವು ಮತ್ತಷ್ಟು ಹೆಚ್ಚುತ್ತಿದ್ದಿತೇ ಹೊರತು ಎಂದೂ ನಿವಾರಣೆ ಯಾಗುತ್ತಿರಲಿಲ್ಲ. ಅವನು ಈಗ ಹೊರಟುದು ಅವನ ಪುರೋಭಿವೃದ್ಧಿಯ ಅಂಕುರವೆಂದು ತಿಳಿ. ದೇವರು ಅವನನ್ನು ಒಳ್ಳೆಯ ಸ್ಥಿತಿಯಲ್ಲಿ ಇಡುತ್ತಾನೆ. ನಿನಗೂ ಮುಂದೆ ಸಂತೋಷವಾದೀತು."

"ದುಃಖಸಮುದ್ರಲ್ಲಿ ಮುಳುಗಿ ಈಗಲೋ ನಾಳೆಯೋ ಸಾಯುವವಳಿಗೆ ಮುಂದೆ ಸುಖವೆತ್ತಣದು ? ಅದರಿಂದ ಯಾವ ಸ್ಥಳದಲ್ಲಿ ಸುಖವುಂಟಾಗುವುದೆಂದು ಬಾಲ್ಯದಲ್ಲಿ ಬಯಸಿ ಇದ್ದೆನೋ ಅಂಥ ದಯಾಶಾಲಿಯಾದ ನೀನು ನನ್ನನ್ನು ಈಗ ಅದೇ ಸ್ಥಳದಲ್ಲಿ ತಂದಿಟ್ಟಿದ್ದೀಯೆ. ಅದಕ್ಕಾಗಿ ನಾನು ನಿನಗೆ ಎಷ್ಟು ಕೃತಜ್ಞಳಾಗಿದ್ದರೆ ತಾನೇ ತೀರೀತು."

"ನ್ಯಾಯವಾಗಿ ನೋಡಿದರೆ ನೀನು ನನ್ನನ್ನು ದ್ವೇಷಿಸಬೇಕು. ಹಾಗೆ ಮಾಡದೆ ಈ ರೀತಿ ಹೇಳುವುದನ್ನು ನೋಡಿದರೆ ನನ್ನ ಹೃದಯವು ಶತಧಾವಿದಳಿತವಾಗಿ ಹೋಗುತ್ತದೆ."

"ನಿನ್ನನ್ನು ದ್ವೇಷಿಸುವುದೇ ? ನನ್ನ ಮಗನನ್ನು ಉಳಿಸಿಕೊಟ್ಟೆಯಲ್ಲಾ ಎಂದೋ ? ಒಂದಾನೊಂದು ಕಾಲದಲ್ಲಿ ನನ್ನ ಮುಖದರ್ಶನವು ನಿನಗೆ ಹರ್ಷವನ್ನೀಯುತ್ತಲಿದ್ದಿತು ; ಈಗ ಅದರಿಂದ ನಿನಗೆ ಸಂತಾಪವುಂಟಾಗಬಹುದು. ಆದರೂ ಚಿಂತೆಯಿಲ್ಲ, ನಿನಗೆ ಅದನ್ನು ತೋರಿಸುತ್ತೇನೆ, ನೋಡು. ನಿನ್ನನ್ನು ದ್ವೇಷಿಸುವ ಅಭಿಪ್ರಾಯವಾಗಲಿ ನಿಂದಿಸುವ ಅಭಿಪ್ರಾಯವಾಗಲಿ ಅದರಲ್ಲಿ ತೋರುತ್ತದೆಯೇ ಹೇಳು. ಇದು ನಿನ್ನ ತಪ್ಪಲ್ಲ, ನನ್ನದು ದೇವರಲ್ಲಿ ನ್ಯಸ್ತಭರಳಾಗಿ ನೀನು ಬರುವವರೆಗೂ ಕಾದಿರದೆ ನೀನು ಸತ್ತೆ ಎಂಬ ತಪ್ಪು

ಅಭಿಪ್ರಾಯದಿಂದ ಮತ್ತೊಬ್ಬನನ್ನು ಮದುವೆಯಾಗಿ ನಾನು ಕೆಟ್ಟೆನು. ಈ ವಯಸ್ಸಿಗೆ ನಾನು ಎಷ್ಟು ಮುದುಕಿಯಾಗಿ ಹೋಗಿದ್ದೇನೆ, ನೋಡು. ಹೀಗಾದುದೇತಕ್ಕೆ ಬಲ್ಲೆಯೋ ? ನಿನ್ನಷ್ಟು ಮನೋದಾರ್ಢ್ಯವಿಲ್ಲದಿದ್ದುದರಿಂದಲ್ಲವೇ ? ನೀನು ಕಷ್ಟಪಟ್ಟಿದ್ದರೂ ಚಿಕ್ಕವನಾಗಿ ಕಾಣುತ್ತೀಯೆ" ಎಂದು ಹೇಳುತ್ತ ಲಲಿತಾಂಗಿಯು ಮುಖವನ್ನು ಎರಡು ಕೈಗಳಿಂದಲೂ ಮುಚ್ಚಿಕೊಂಡು ಗಳಗಳನೆ ಅತ್ತಳು. ಹಾಗೆಯೇ ಸಮಾಧಾನಮಾಡಿಕೊಂಡು,

"ಆರಂಭದಲ್ಲಿ ಮಾಡಿದ ಒಂದು ತಪ್ಪಿಗಾಗಿ ಅದರ ಫಲವನ್ನು ಪುರುಷಾಯುಸ್ಸೂ ಅನುಭವಿಸಬೇಕಾಗುತ್ತದೆ ಎಂಬ ಹಿರಿಯರ ಮಾತು ಸುಳ್ಳಲ್ಲ. ನೀನು ಸತ್ತುಹೋದೆ ಎಂದು ಕೇಳಿ ನಾನು ಏಕೆ ಸಾಯದೆ ಉಳಿದೆ ? ನಾನು ಸಾಯದೆ ಇದ್ದುದರಿಂದ ಈ ದುಃಖವೆಲ್ಲ ಪ್ರಾಪ್ತವಾಯಿತು. ನೀನು ಅಮರಪುರಕ್ಕೆ ಬಂದಾಗ ನಿನ್ನ ಗುರುತನ್ನು ಹಿಡಿದವಳು ನಾನೊಬ್ಬಳೇ, ಆಗಲೇ ನಿನ್ನನ್ನು ಕೇಳಿಕೊಂಡಿದ್ದಲ್ಲಿ ನನ್ನ ಮಗನನ್ನು ಉಳಿಸಿದಂತೆಯೇ ಗಂಡನನ್ನೂ ಉಳಿಸುತ್ತಿದ್ದೆ. ನಾನು ಏಕೆ ಆಗ ಬೇಡಲಿಲ್ಲ. ಇದೆಲ್ಲಾ ನನ್ನ ಗ್ರಹಚಾರ. ನಾನು ಬಹು ಪಾಪಿ ; ನನ್ನ ಸಮೀಪಕ್ಕೆ ಬಂದವರೆಲ್ಲರೂ ನನ್ನ ಸಂಪರ್ಕದಿಂದ ಪಾಪಿಗಳಾಗುವರು."

"ಲಲಿತಾಂಗೀ, ನೀನು ಬಹು ಪರಿಶುದ್ಧಳು. ಹಾಗೆ ಹೇಳಬಹುದೇ ?"

"ನಾನು ಪಾಪಿಯಲ್ಲದಿದ್ದರೆ ನನ್ನ ಗಂಡನೇಕೆ ಸಾಯುತ್ತಲಿದ್ದ ?"

"ಅವನ ದುಷ್ಕರ್ಮವೇ ಅವನನ್ನು ಕೊಂಡುಹೋಯಿತು. ಅವನೂ ನಿನ್ನಂತೆಯೆ ಏಕೆ ಸದ್ಗುಣಸಂಪನ್ನನಾಗಿರಬಾರದಾಗಿದ್ದಿತು ?" ಎಂದು ಹೇಳಿ ಎದ್ದು ಮನೆಯನ್ನು ಪ್ರವೇಶಿಸಿದನು.

ಮತ್ತೆ ರಾಜನು "ಲಲಿತಾಂಗೀ ! ಇನ್ನೊಂದು ಮಾತು, ನಿನಗೆ ಯಾವ ಅನುಕೂಲ ಬೇಕಾದರೂ ಮಾಡಿಕೊಡುತ್ತೇನೆ. ಯಾವುದನ್ನೂ ಕೇಳದೆ ನೀನು ಹೀಗೆ ಹೊರಟು ಹೋಗುವುದು ಸರಿಯೇ ?" ಎನ್ನಲು ಅವಳು

"ನನ್ನಂಥವಳಿಗೆ ಇನ್ನೇನು ಬೇಕು ; ಮಗನು ಸುಖವಾಗಿದ್ದರೆ ಸಾಕು."

"ಅವನಿಗೆ ದೀರ್ಘಾಯುವುಂಟಾಗಲೆಂದು ನೀನು ಭಗವಂತನಲ್ಲಿ ಮೊರೆಯಿಡು. ಅವನ ಮಿಕ್ಕ ಯೋಗಕ್ಷೇಮಗಳು ನನ್ನ ಪಾಲಿನದು. ಮುಂದೆ ನೀನು ಏನು ಮಾಡಬೇಕೆಂದಿದ್ದೀಯೆ ?"

"ಪೂರ್ವದ ಲಲಿತಾಂಗಿಯಂತೆ ಈಗ ಎಲ್ಲಿಯಾದರೂ ಕೆಲಸ ಮಾಡಿ ಹೊಟ್ಟೆ ಹೊರೆಯುವುದಕ್ಕೆ ಆಗುವುದಿಲ್ಲ. ನೀನು ದಯೆಮಾಡಿ ನನಗಾಗಿ ಇಟ್ಟಿದ್ದ ಹಣದಲ್ಲಿ ಜೀವನ ಮಾಡುತ್ತೇನೆ."

"ನಿನ್ನ ಗಂಡನ ಎಲ್ಲಾ ಸ್ವತ್ತನ್ನೂ ನೀನು ಹೀಗೆ ವರ್ಜಿಸಿ ಬಂದಿರುವುದು ಸರಿಯಲ್ಲ. ನೀನು ಸಂಸಾರವನ್ನು ಒಪ್ಪವಾಗಿ ಮಾಡುತ್ತಿದ್ದೆಯಾದುದರಿಂದ ಆ ಆಸ್ತಿಯಲ್ಲಿ ನ್ಯಾಯವಾಗಿ ನಿನಗೆ ಅರ್ಧ ಸೇರಬೇಕು. ಅದನ್ನಾದರೂ ಇಟ್ಟುಕೊಳ್ಳಬೇಕಾಗಿದ್ದಿತು."

"ನೀನು ಆಡುವ ಮಾತನ್ನು ನೋಡಿದರೆ ನನಗೆ ಏನೋ ಒಂದು ವಿಧವಾಗಿ ಸಹಾಯ

ಮಾಡಿಕೊಡುವಂತೆ ತೋರುತ್ತದೆ. ನಾನೆಂದಿಗೂ ಅದಕ್ಕೆ ಒಪ್ಪುವುದಿಲ್ಲ. ನನ್ನ ಮಗನೂ ಅದಕ್ಕೆ ಒಪ್ಪಲಾರನು."

"ಅವನ ಸಮ್ಮತಿಯಿಲ್ಲದೆ ನಾನು ಯಾವುದನ್ನೂ ಮಾಡುವುದಿಲ್ಲ. ಅವನು ಒಪ್ಪಿದರೆ ಆಗಬಹುದೋ ?"

"ನನಗೇನು ಬೇಕಾಗಿದೆ ? ಅವನು ಸುಖವಾಗಿದ್ದರೆ ಸಾಕು" ಎಂದು ಹೇಳಿ ಲಲಿತಾಂಗಿಯು ಮನೆಯನ್ನು ಹೊಕ್ಕಳು. ಅಲ್ಲಿಂದ ಹೊರಡುವುದಕ್ಕೆ ಕಾಲೇ ಬಾರದೆ ಮಲಯಸಿಂಹನು ದುಃಖದಿಂದ ಬಸವಳಿದು ಮೆಲ್ಲಮೆಲ್ಲಗೆ ರೇವಿನ ಮಾರ್ಗವನ್ನು ಹಿಡಿದು ಹೋದನು.

## ೭೨
# ಭೂತಕಾಲದ ವಿಮರ್ಶೆ

ನಾಗಕುಮಾರನು ಸತ್ತುದಿನಿಂದ ತಾನು ಮಾಡಿದುದೆಲ್ಲಾ ಸರಿಯೋ ಅಲ್ಲವೋ ಎಂದು ಮಲಯಸಿಂಹನಿಗೆ ಅನುಮಾನ ತೋರಿತು ; ಲಲಿತಾಂಗಿಗೂ ತನಗೂ ನಡೆದ ಸಂವಾದದಿಂದ ಹಿಂದಣ ಸಂಗತಿಗಳು ಅವನ ನೆನಪಿಗೆ ಬಂದುವು. ಇನ್ನಾರಾದರೂ ಸಾಧಾರಣ ಮನುಷ್ಯರಾಗಿದ್ದರೆ ಕೊರಗಿ ಸಾಯುತ್ತಲಿದ್ದರು ; ಅನ್ಯಾದೃಶ ಸ್ವಭಾವನಾದುದರಿಂದ ಅವನು ಈ ರೀತಿ ಯೋಚಿಸಿದನು :

"ನಾನು ಹಿಂದೆ ಮಾಡಿದುದೆಲ್ಲಾ ಸರಿಯೋ, ತಪ್ಪೋ ? ಹತ್ತು ವರ್ಷಗಳಿಂದ ಶ್ರಮಪಟ್ಟು ಒಂದೊಂದು ಕಲ್ಲನ್ನಾಗಿ ಹೊತ್ತು ಬಲವಾದ ಆಸ್ತಿಭಾರ ಹಾಕಿ ಕಟ್ಟಿದ್ದ ಕೋಟೆಯು ಒಂದು ನಿಮಿಷಮಾತ್ರದಲ್ಲಿ ಧ್ವಂಸವಾಗಿ ಹೋಯಿತೇ ? ನಾನು ಮಾಡಿದುದೆಲ್ಲಾ ಅವಿವೇಕದಿಂದಲೇ ಆಗಿದ್ದರೆ ನನ್ನಂಥ ಪಾಪಿಯು ಈ ಲೋಕದಲ್ಲಿಯೇ ಇರಲಾರನು. ಪ್ರತಿ ದಿನವೂ ಕೆಲಸ ಮಾಡುವುದಕ್ಕೆ ಮೊದಲು ಇದು ನಿರ್ವಿಘ್ನವಾಗಿಯೂ ಅವಿವೇಕರಹಿತವಾಗಿಯೂ ನಡೆಯುವಂತೆ ಕೃಪೆಮಾಡು ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೆನು. ಆದುದರಿಂದ ಯಾವ ಅನುಮಾನಕ್ಕೂ ಕಾರಣವಿಲ್ಲ. ಆದರೂ ನಾನು ಮನುಷ್ಯಮಾತ್ರನು; ನನ್ನ ಕೆಲಸದಲ್ಲಿ ಅವಿವೇಕವಾಗಿದ್ದರೂ ಇರಬಹುದು. ಅದನ್ನು ನಿರ್ಧಾರ ಮಾಡಿಕೊಳ್ಳದಿದ್ದರೆ ಸ್ವಪ್ನದಲ್ಲಿ ಆದ ಗಾಯವನ್ನು ಎಚ್ಚೆತ್ತ ಮೇಲೆ ಮುಟ್ಟಿನೋಡಿಕೊಂಡಂತಾಗುವುದು.

"ನಾನು ಯಾರು ? ನನ್ನ ಪೂರ್ವಸ್ಥಿತಿ ಯಾವುದು ? ಈಗಿನ ಅವಸ್ಥೆಯೇನು ? ಹಾಗೆ ಇದ್ದವನು ಹೀಗೆ ಆಗುವುದಕ್ಕೆ ಕಾರಣವೇನು ? ಮೊತ್ತಮೊದಲು ನಾನೊಬ್ಬ ಬಡವನ ಮಗ. ಬಡವನಾಗಿದ್ದರೂ ನಮ್ಮಪ್ಪನು ಯೋಗ್ಯನಾಗಿದ್ದ. ನಾನು ಅಶಕ್ತನಾಗಿಯೂ ಓದುಬರೆಹ

ಬಾರದ ಶುಂಠನಾಗಿಯೂ ಇದ್ದು, ಪಿಶುನರ ಕೈಗೆ ಸಿಕ್ಕಿ ಸ್ವಾತಂತ್ರ್ಯವನ್ನು ಕಳೆದುಕೊಂಡು, ಹದಿನಾಲ್ಕು ವರ್ಷಗಳ ಕಾಲ ಅಂಧಕೂಪದಲ್ಲಿ ಬಿದ್ದು ನರಳುತ್ತಿದ್ದೆನು. ಅಂಥವನಿಗೆ ಯೋಗಾನಂದನ ಸಾನ್ನಿಧ್ಯವೂ, ಬುದ್ಧಿ ಕೌಶಲ್ಯವೂ, ಐಶ್ವರ್ಯವೂ, ಹೇಗೆ ಲಭಿಸಿದುವು ? ನಿರ್ಹೇತುಕ ಕರುಣಾನಿಧಿಯಾದ ಭಗವಂತನ ಅನುಗ್ರಹದಿಂದಲ್ಲವೇ ? ಇವುಗಳನ್ನೆಲ್ಲಾ ನನಗೆ ಏತಕ್ಕೆ ಭಗವಂತನು ಇತ್ತನು ? ತಪಸ್ಸನ್ನು ಮೆಚ್ಚಿ ಕೊಟ್ಟನೆಂದು ಹೇಳಲೇ ? ನಾನು ತಪಸ್ಸು ಮಾಡಿದವನೇ ಅಲ್ಲ ; ಭಕ್ತಿಯನ್ನು ಮೆಚ್ಚಿಕೊಟ್ಟನೆಂಬೆನೇ ? ನಾನು ಭಕ್ತಿ ಮಾಡಲೂ ಇಲ್ಲ ; ಇವುಗಳನ್ನೆಲ್ಲಾ ಸ್ವಪ್ರಯೋಜನಕ್ಕಾಗಿ ದೇವರು ನನಗೆ ಕೊಡಲಿಲ್ಲ ; ಲೋಕಹಿತಕ್ಕಾಗಿ ಕೊಟ್ಟನೆಂದೇ ಹೇಳಬೇಕು. ಲೋಕಹಿತವಾವುದು ? ದುಷ್ಕಾರ್ಯಗಳನ್ನು ಬೇರೊಡನೆ ಕಿತ್ತುಹಾಕಿ ಸತ್ಕಾರ್ಯಗಳನ್ನು ನೆಲೆನಿಲ್ಲಿಸುವುದು. ಹೀಗಿರುವಲ್ಲಿ ನಾನು ಯಾವ ರೀತಿಯಲ್ಲಿ ತಪ್ಪಿ ನಡೆದೆನು ?

"ಒಂದು ವೇಳೆ ನಾನು ಮಾಡಿದ ಕೆಲಸಗಳು ಪ್ರಕೃತಿಸಂಬಂಧದಿಂದ ಅಹಂಕಾರಮಿಶ್ರವಾಗಿರಬಹುದು ; ಅದಕ್ಕೆ ನನ್ನ ಪೂರ್ವಾವಸ್ಥೆಯ ಸ್ಮರಣೆಯೇ ಪ್ರಾಯಶ್ಚಿತ್ತ ಎಲೋ ಮಲಯಸಿಂಹ, ನೀನು ಅಹಂಕಾರವನ್ನು ತೊರೆದು, ಐಶ್ವರ್ಯಶೌರ್ಯಚಾತುರ್ಯಗಳನ್ನು ಒತ್ತಟ್ಟಿಗಿಟ್ಟು, ಆ ಧರ್ಮದೇವನ ದಾರಿದ್ರ್ಯವನ್ನೂ ಅಂಧಕೂಪವಾಸವನ್ನೂ ಯೋಗಾನಂದನ ಚೇಲವನ್ನೂ ನೆನೆಸಿಕೋ" ಎಂದು ಹೇಳಿಕೊಳ್ಳುತ್ತ ರಾಜನು ರೇವನ್ನು ಸೇರಿ, ಅಲ್ಲಿ ಕಿಕ್ಕಿರಿದಿದ್ದ ದೋಣಿಗಳಲ್ಲಿ ಒಂದನ್ನು ಏರಿ "ಜಾಲದುರ್ಗಕ್ಕೆ ಬಿಡು" ಎಂದ ಕೂಡಲೆ ದೋಣಿಯು ಹೊರಟಿತು.

ಅದು ಹೋಗುತ್ತಿದ್ದಾಗ ರಾಜನಿಗೆ ತಾನು ಇಪ್ಪತ್ತನಾಲ್ಕು ವರ್ಷಗಳ ಹಿಂದೆ ಧರ್ಮದೇವನಾಗಿ ಅನುಭವಿಸಿದುದೆಲ್ಲಾ ಜ್ಞಾಪಕಕ್ಕೆ ಬಂದುವು. ಪಾಳಯದಲ್ಲಿ ಕಂಡ ಬೆಳಕೂ, ಕತ್ತಲಲ್ಲಿ ತೋರಿದ ಜಾಲದುರ್ಗದ ಆಕಾರವೂ ಓಡಿಹೋಗುವ ಪ್ರಯತ್ನ ಮಾಡಿದಾಗ ಸಿಪಾಯಿಗಳಿಗೂ ತನಗೂ ಆದ ಹೋರಾಟವೂ, ಅವರು ಚುಚ್ಚಲು ತನ್ನ ಎದೆಯ ಮೇಲಿಟ್ಟ ಕತ್ತಿಯ ಮೊನೆಯೂ, ಒಂದೊಂದಾಗಿ ಮನಸ್ಸಿಗೆ ವಿಶದವಾಗಿ ತೋರುತ್ತಿದ್ದಿತು. ದೋಣಿಯು ಜಾಲದುರ್ಗವನ್ನು ಸಮೀಪಿಸುತ್ತ ಬಂದಾಗ ರಾಜನಿಗೆ ಒಂದು ವಿಧವಾದ ಭಯವು ತೋರಿ, ಹಿಂದುಗಡೆಗೆ ಹೋಗಿ ಕೆಳಗೆ ಕುಳಿತನು. ದೋಣಿಯವನು "ಅಗೋ ಜಾಲದುರ್ಗ" ಎಂದು ಹೇಳುತ್ತಲೆ ಧರ್ಮದೇವನು ಪೂರ್ವದಲ್ಲಿ ಎಲ್ಲಿ ಇಳಿದಿದ್ದನೋ ಅಲ್ಲಿಯೇ ಇಳಿದನು. ಅವನಿಗೆ ಆಗ ದೊಡ್ಡದಾಗಿ ಕಂಡ ಪ್ರಯಾಣವು ಈಗ ಸಣ್ಣದಾಗಿ ಕಂಡಿತು.

ಧರ್ಮದೇವನು ಜಾಲದುರ್ಗದಿಂದ ತಪ್ಪಿಸಿಕೊಂಡು ಹೋದ ಕೆಲವು ವರ್ಷಗಳ ಮೇಲೆ ಅಲ್ಲಿ ಬಂದಿಯವರನ್ನಿಡುವುದನ್ನು ತಪ್ಪಿಸಿಬಿಟ್ಟು, ಆ ಪ್ರಾಂತ್ಯ ಕಡಲು ಕಳ್ಳರ ಕಾಟ ಹೆಚ್ಚಾಗಿದ್ದುದರಿಂದ ಅದನ್ನು ತಪ್ಪಿಸುವುದಕ್ಕಾಗಿ ಸರಕಾರದವರು ಅಲ್ಲಿ ಕೆಲವು ಸಿಪಾಯಿಗಳನ್ನು ಕಾವಲಾಗಿ ಇಟ್ಟಿದ್ದರು. ರಾಜನು ದೋಣಿಯಿಂದ ಇಳಿದ ಕೂಡಲೇ ಒಬ್ಬ

ಸಿಪಾಯಿಯು ಅವನ ಬಳಿಗೆ ಬಂದು "ಸ್ವಾಮೀ, ತಾವು ಯಾರು ? ಈ ಸ್ಥಳದಲ್ಲಿರುವ ವಿಶೇಷಗಳನ್ನು ನೋಡುವುದಕ್ಕೆ ಬಂದಿದ್ದೀರೋ ?" ಎಂದು ಕೇಳಿದನು. ಅವನು ಅಹುದೆಂದನು.

"ಹಾಗಾದರೆ ಇತ್ತ ಬಿಜಯಮಾಡಿಸಿ" ಎಂದು ಸಿಪಾಯಿಯು ಅವನನ್ನು ಕರೆದುಕೊಂಡು ಹೋಗಿ ಅಲ್ಲಿಯ ಬಂದಿಗಳ ಮನೆಗಳನ್ನೂ, ಬಂದಿಶಾಲೆಯ ಯಜಮಾನನ ವಾಸಗೃಹವನ್ನೂ, ಸತ್ತ ಬಂದಿಯವರನ್ನು ಸಮುದ್ರದಲ್ಲಿ ಬಿಸುಡುತ್ತಿದ್ದ ಸ್ಥಳವನ್ನೂ ತೋರಿಸಿದನು.

"ಇಲ್ಲಿ ಇನ್ನೇನೂ ನೋಡತಕ್ಕದ್ದು ಇಲ್ಲವೋ ?" ಎಂದು ರಾಜನು ಕೇಳಲು, ಸಿಪಾಯಿಯು,

"ಸ್ವಾಮೀ, ಎರಡು ಅಂಧಕೂಪಗಳು ಇವೆ. ತಮ್ಮಂಥವರು ಅವುಗಳನ್ನು ನೋಡಲೊಡಂಬಡಲಾರರು."

"ಇಲ್ಲಿರುವ ವಿಶೇಷಗಳನ್ನು ನೋಡುವುದಕ್ಕಾಗಿ ಇಷ್ಟು ದೂರ ಬಂದ ಮೇಲೆ ಅವುಗಳನ್ನೂ ನೋಡುತ್ತೇನೆ."

"ಹಾಗಾದರೆ ಬಿಜಯಮಾಡಿರಿ" ಎಂದು ಸಿಪಾಯಿಯು ಹಿಂದೆ ಧರ್ಮದೇವನಿದ್ದ ಕೂಪಕ್ಕೆ ಅವನನ್ನು ಮೊದಲು ಕರೆದುಕೊಂಡು ಹೋದನು. ತಾನು ಅಲ್ಲಿ ಹಿಂದೆ ಮಲಗಿಕೊಳ್ಳುತ್ತಲಿದ್ದ ಸ್ಥಳವನ್ನೂ, ತೇವವಾದ ಗೋಡೆಯನ್ನೂ, ಕಷ್ಟಪಟ್ಟು ಒಳಕ್ಕೆ ನುಗ್ಗುತ್ತಲಿರುವ ಬೆಳಕನ್ನೂ ನೋಡಿ, ಗಡಗಡನೆ ನಡುಗಿ, ಒಂದು ಮರದ ತುಂಡಿನ ಮೇಲೆ ಕುಳಿತುಕೊಂಡು, ಸಿಪಾಯಿಯನ್ನು ನೋಡಿ

"ಅಯ್ಯಾ, ಈ ಕೂಪದಲ್ಲಿ ಮನುಷ್ಯರೂ ಇರುತ್ತಿದ್ದರೇ ?"

"ಸ್ವಾಮೀ, ಅಹುದು, ಈಗ ತಾವು ಕುಳಿತಿರುವ ಕೂಪದಲ್ಲಿ ಅತಿ ಸಾಹಸಿಯಾದ ಯುವಕನೊಬ್ಬನು ಇದ್ದನಂತೆ. ಅವನ ಸಾಹಸ ಕಾರ್ಯಗಳು ಅತ್ಯಾಶ್ಚರ್ಯಕರವಾದುವು. ಅದನ್ನು ಕೇಳುವ ಕುತೂಹಲವು ತಮಗೆ ಇದ್ದಲ್ಲಿ ಹೇಳುತ್ತೇನೆ."

"ಹಾಗಾದರೆ ಹೇಳು, ನೋಡೋಣ" ಎಂದು ತನ್ನ ಹಿಂದಣ ಕಥೆಯನ್ನೆಲ್ಲ ತಾನೇ ಕೇಳುತ್ತ ಭಯದಿಂದ ಎದೆಯು ಹಾರುತ್ತಿರಲು ಮುಖದಲ್ಲಿ ಬೆವರು ಸುರಿಯುವುದಕ್ಕೆ ಪ್ರಾರಂಭಿಸಿತು.

"ಮಹಾಸ್ವಾಮೀ, ಲಾಲಿಸಬೇಕು. ಈ ಕೂಪದಲ್ಲಿ ಧರ್ಮದೇವನೆಂಬ ಒಬ್ಬ ಯುವಕನೂ ಈ ಪಕ್ಕದ ಕೂಪದಲ್ಲಿ ಒಬ್ಬ ಸನ್ಯಾಸಿಯೂ ಇದ್ದರಂತೆ. ಈ ಎರಡು ಕೂಪಗಳ ಮಧ್ಯೆ ಐವತ್ತು ಅಡಿಗಳ ಮಂದದ ಗೋಡೆಯಿದೆ. ಇಬ್ಬರು ಬಂದಿಗಳೂ ಈ ಗೋಡೆಯನ್ನು ಕೊರೆದು ದಾರಿಮಾಡಿಕೊಂಡು ಪ್ರತಿನಿತ್ಯವೂ ಒಬ್ಬರೊಡನೆ ಒಬ್ಬರು ಸೇರುತ್ತಲಿದ್ದರಂತೆ."

"ಸುರಂಗವನ್ನು ಮಾಡಿದವರಾರು ?"

"ಸನ್ಯಾಸಿಯು ವೃದ್ಧನಂತೆ ; ಮೇಲೂ ಅವನಿಗೆ ಬುದ್ಧಿಸ್ತಿಮಿತವಾಗಿರಲಿಲ್ಲವಂತೆ.

ಆದುದರಿಂದ ಈ ಕೂಪದಲ್ಲಿದ್ದ ಧರ್ಮದೇವನೇ ಈ ಗೋಡೆಯನ್ನು ಕೊರೆದು ಹಾದಿಯನ್ನು ಮಾಡಿರಬೇಕು."

ಹೀಗೆಂದು ಹೇಳುತ್ತಲೆ ರಾಜನು ಯೋಗಾನಂದನ ಪಾದಾರವಿಂದಗಳಿಗೆ ತಲೆಬಾಗಿ "ಸ್ವಾಮೀ ಗುರುವರ್ಯರೇ, ತಮ್ಮ ಯೋಗ್ಯತೆಯನ್ನು ಈ ಪಾಮರರು ಹೇಗೆತಾನೆ ಅರಿತಾರು ?" ಎಂದುಕೊಂಡನು.

"ಮಹಾಸ್ವಾಮೀ, ಆ ಹಾದಿಯು ಇನ್ನೂ ಹಾಗೆಯೇ ಇದೆ ; ಬೇಕಾದರೆ ಪರಾಂಬರಿಸಬಹುದು. ಬೆಳಕನ್ನು ತರುತ್ತೇನೆ."

"ಬೆಳಕು ಗಿಳಕು ಏನೂ ಬೇಡ ; ನನಗೆ ಹಾಗೆಯೇ ಕಾಣುತ್ತದೆ."

"ಹಿಂದೆ ಈ ಕೂಪದಲ್ಲಿದ್ದವನಿಗೂ ಹಾಗೆಯೇ ಕಾಣುತ್ತಿದ್ದಿತಂತೆ ; ತಾವೂ ಅವನಂತೆಯೇ ಕಾಣುತ್ತದೆ" ಎಂದು ಸಿಪಾಯಿಯು ಹೇಳಲು, ರಾಜನು ಬೆಚ್ಚಿದವನಾಗಿ "ಏನೆಂದೆ ?" ಎಂದು ಕೇಳಿದನು.

"ಇದರಲ್ಲಿದ್ದ ಧರ್ಮದೇವನಿಗೂ ಕಗ್ಗತ್ತಲೆಯಲ್ಲಿ ಕಣ್ಣು ಚೆನ್ನಾಗಿ ಕಾಣುತ್ತಿದ್ದಿತಂತೆ. ಈ ಕತ್ತಲಲ್ಲಿ ಕಣ್ಣು ಕಾಣುವುದೆಂದು ತಾವು ಹೇಳಿದುದರಿಂದ ನಾನು ಹಾಗೆ ಹೇಳಿದೆ."

'ಅದು ಹದಿನಾಲ್ಕುವರ್ಷಗಳ ಅಭ್ಯಾಸದ ಫಲ' ಎಂದು ತನ್ನಲ್ಲಿ ತಾನೇ ಹೇಳಿಕೊಳ್ಳುತ್ತ ಆಳು ತೋರಿಸಿದ ಸುರಂಗದ ಬಾಯಿಯ ಬಳಿಗೆ ಹೋಗಿ ರಾಜನು,

"ಓಹೋ ! ಇದೆಯೋ ನೀನು ಹೇಳಿದ ಸುರಂಗ ?"

"ಮಹಾಸ್ವಾಮೀ, ಅಹುದು. ಇವರಿಬ್ಬರೂ ಹೀಗಿರುವಲ್ಲಿ ಆ ವೃದ್ಧ ಸನ್ಯಾಸಿಯು ಧನುರ್ವಾಯು ಬಂದು ಸತ್ತುಹೋದನು. ಆಗ ಅಲ್ಲಿದ್ದ ಸಾಹಸಿಯು ಏನು ಮಾಡಿದ ಬಲ್ಲಿರಾ ?

"ಕಾಣೆ"

"ಇಲ್ಲಿ ಸತ್ತವರನ್ನು ಗೋಣಿಯ ಚೀಲದಲ್ಲಿ ಹಾಕಿ ಹೊಲಿದು ಹೆಣದ ಕಾಲಿಗೆ ಒಂದು ಭಾರವಾದ ಸೀಸದ ಗುಂಡನ್ನು ಕಟ್ಟಿ ಚೀಲದೊಂದಿಗೆ ಸಮುದ್ರದಲ್ಲಿ ಬಿಸುಡುವ ಪದ್ಧತಿ. ಅವನು ಅದನ್ನು ಅರಿಯದೆ ಹೆಣಗಳನ್ನು ಹೂಳುತ್ತಾರೆಂದು ತಿಳಿದು, ತನ್ನನ್ನು ಹೂಳಿ ಆಳುಗಳು ಅತ್ತ ಹೋದ ಮೇಲೆ ತಾನು ಎದ್ದು ಎಲ್ಲಿಯಾದರೂ ಓಡಿಹೋಗಬೇಕೆಂದು ನಿಶ್ಚಯಿಸಿ, ಸನ್ಯಾಸಿಯ ಶವವನ್ನು ಹೊರಕ್ಕೆ ತೆಗೆದು ತನ್ನ ಹಾಸಿಗೆಯ ಮೇಲೆ ಮಲಗಿಸಿ, ಗೋಣಿಯ ಚೀಲವನ್ನು ಹೊಕ್ಕು ಒಳಗಡೆಯಿಂದ ಬಾಯನ್ನು ಹೊಲಿದುಕೊಂಡು ಕಾದಿದ್ದನು. ಚೀಲವನ್ನು ಸಮುದ್ರಕ್ಕೆ ಬಿಸುಟಾಗ ಅದರಲ್ಲಿದ್ದ ತರುಣನು ಕಿಟ್ಟೆಂದು ಕಿರಿಚಿಕೊಂಡನಂತೆ."

"ಕೊನೆಗೆ ಅವನ ಗತಿ ಏನಾಯಿತು ?"

"ಆಗುವುದೇನು ತಿಳಿದೇ ಇದೆ. ಮೇಲಿನಿಂದ ನೀರಿನಲ್ಲಿ ಬಿದ್ದ ಪೆಟ್ಟಿಗೆ ಅವನ ಪ್ರಾಣ

ಹೋಗಿರಬೇಕು, ಹಾಗಿಲ್ಲದಿದ್ದರೆ ಕಾಲಿಗೆ ಕಟ್ಟಿದ್ದ ಗುಂಡಿನ ಸಮೇತ ಸಮುದ್ರದಲ್ಲಿ ಅವನು ಮುಳುಗಿ ಸತ್ತಿರಬೇಕು. ಅಯ್ಯೋ ಪಾಪ ! ಅವನ ಆಗಿನ ಅವಸ್ಥೆಯನ್ನು ಯೋಚಿಸಿಕೊಂಡರೆ ಮೈಯ್ಯು ಜುಮ್ಮೆನ್ನುತ್ತದೆ."

"ಇದೇನೋ ಆಯಿತು, ಆ ಮುದಿ ಸನ್ಯಾಸಿಯು ಇದ್ದ ಕೂಪವನ್ನು ನೋಡೋಣ ಬಾ."

ಸಿಪಾಯಿಯು ಅವನನ್ನು ಅಲ್ಲಿಗೆ ಕರೆದುಕೊಂಡು ಹೋಗಿ,

"ಸ್ವಾಮೀ, ಇದೇ ಆ ಸನ್ಯಾಸಿ ಇದ್ದ ಕೂಪ. ಇದೇ ಇಲ್ಲಿಗೆ ಆ ಸಾಹಸಿಯು ಸುರಂಗಮಾಡಿ ಬರುತ್ತಲಿದ್ದ ದಾರಿ" ಎಂದು ಅದರ ಬಾಯಿಗೆ ಮುಚ್ಚಿದ್ದ ಕಲ್ಲನ್ನು ತೆಗೆದು ತೋರಿಸಿ, "ಈ ಮುಚ್ಚಳದ ಕಲ್ಲು ಸವೆದಿರುವುದನ್ನು ನೋಡಿದ ಪ್ರಾಜ್ಞನೊಬ್ಬನು ಸುಮಾರು ಹತ್ತು ವರ್ಷಗಳ ಕಾಲ ಆ ಬಂದಿಯವರು ತಿರುಗುತ್ತಿದ್ದಿರಬೇಕೆಂದು ಹೇಳಿದನು. ಈ ಸುರಂಗವನ್ನು ತೋಡಲು ಅವನು ಎಷ್ಟು ಕಾಲ ಕಷ್ಟಪಟ್ಟನೋ ?"

"ಅವನ ವಿಷಯದಲ್ಲಿ ನೀನು ಮರುಕವುಳ್ಳವನಂತೆ ತೋರುತ್ತದೆ."

"ಸ್ವಾಮೀ, ಅವನೂ ನಮ್ಮಂತೆಯೇ ಮನುಷ್ಯನಲ್ಲವೇ ? ಈ ಕೂಪದಲ್ಲಿಟ್ಟರೆ ಯಾರುತಾನೆ ಹಾಗೆ ಮಾಡದೆ ಇರುವರು ?" ಎಂದು ಸಿಪಾಯಿಯು ಹೇಳಲು ರಾಜನು ಜೇಬಿನಿಂದ ಎರಡು ವರಹಗಳನ್ನು ತೆಗೆದು ಅವನ ಕೈಯಲ್ಲಿಟ್ಟನು.

"ಸ್ವಾಮೀ, ಇವು ವರಹಗಳು, ತಾವು ನೋಡದೆ ಇವುಗಳನ್ನು ಕೊಟ್ಟಂತೆ ತೋರುತ್ತದೆ."

"ಅಪ್ಪಾ, ನಾನು ಅವುಗಳನ್ನು ವರಹಗಳೆಂದು ತಿಳಿದೇ ಕೊಟ್ಟೆನು" ಎಂದು ರಾಜನು ಹೇಳಲು ಸಿಪಾಯಿಯು ಆಶ್ಚರ್ಯದಿಂದ ಅವನ ಮುಖವನ್ನು ನೋಡುತ್ತ

"ಸ್ವಾಮೀ ತಾವು ಉದಾರಿಗಳು. ಈ ಕೂಪದಲ್ಲಿ ನನಗೆ ಒಂದು ಪುಸ್ತಕ ಸಿಕ್ಕಿತು. ತಮಗೆ ಅದನ್ನು ಅರ್ಪಿಸುವೆನು."

"ಅದಾವ ಪುಸ್ತಕ ?"

"ಇಲ್ಲಿದ್ದ ಸನ್ಯಾಸಿಯು ತಾನು ಹೊದೆಯುವ ಬಟ್ಟೆಗಳನ್ನು ಹರಿದು ಅದರ ಮೇಲೆ ಏನನ್ನೋ ಬರೆದಿದ್ದಾನೆ"

"ಹಾಗೋ ! ತೆಗೆದುಕೊಂಡು ಬಾ, ನೋಡೋಣ."

"ತಾವು ಇಲ್ಲಿಯೇ ಕುಳ್ಳಿರಿ. ಇಗೋ ತಂದೆನು" ಎಂದು ಹೇಳಿ ಸಿಪಾಯಿಯು ಅದನ್ನು ತರುವುದಕ್ಕೆ ಹೋದನು.

ಆಗ ರಾಜನು ಆನಂದನು ಮಲಗಿಕೊಂಡಿದ್ದ ಮಂಚಕ್ಕೆ ನಮಸ್ಕಾರ ಮಾಡಿ ಅವನ ಮೂರ್ತಿಯನ್ನು ಧ್ಯಾನಿಸುತ್ತ "ಸ್ವಾಮೀ, ತಮ್ಮ ಅನುಗ್ರಹದಿಂದ ನನಗೆ ಸ್ವಾತಂತ್ರ್ಯವೂ ಜ್ಞಾನವೂ ಐಶ್ವರ್ಯವೂ ಲಾಭವಾದುವು. ತಾವು ನನಗೆ ಗುರುಗಳು. ತಾವಾದರೋ

ಮಹಾಜ್ಞಾನಿಗಳು ; ಧರ್ಮಾಧರ್ಮಗಳನ್ನು ಬಲ್ಲವರು. ಈಗ ನನಗೆ ಉಂಟಾದ ಅನುಮಾನಗಳನ್ನು ಪರಿಚ್ಛೇದಿಸಿ ಕೊಡಬೇಕು" ಎಂದು ಮನಃಪೂರ್ವಕವಾಗಿ ಬೇಡಿಕೊಂಡನು. ಅಷ್ಟರೊಳಗಾಗಿಯೇ ಸಿಪಾಯಿಯು ಪುಸ್ತಕವನ್ನು ತಂದುಕೊಡಲು ರಾಜನು ಭಯಭಕ್ತಿಯಿಂದ ಅದನ್ನು ಬಿಚ್ಚಿನೋಡಿದನು,

"ಪರಿರಕ್ಷಿಸೆ ಸಾಧುಗಳಂ ।
ಪರಿಹರಿಸಲ್ ಬನ್ನವಡಿಪ ದುಷ್ಕೃತ್ಯಗಳಂ ॥
ನಿರವಿಸೆ ಧರ್ಮಸ್ಥಿತಿಯಂ ।
ಧರೆಯೊಳ್ ಹರಿ ಸುಜನರಂ ಕರಂ ಪುಟ್ಟಿಸುಗಂ ॥"

ಎಂಬ ಶ್ಲೋಕವು ಮೊದಲು ಅವನ ಕಣ್ಣಿಗೆ ಬಿದ್ದಿತು. ಆಗ ರಾಜನು "ಸ್ವಾಮೀ, ಗುರುವೇ ! ತಮ್ಮ ಕೃಪೆಯಿಂದ ನನ್ನ ಅನುಮಾನವು ದೂರವಾಯಿತು" ಎಂದುಕೊಂಡು ಸಿಪಾಯಿಗೆ ಮನ್ನಣೆಮಾಡಿ ಅಲ್ಲಿಂದ ಮಲಯಪಟ್ಟಣಕ್ಕೆ ಹಿಂತಿರುಗಿ ಹೋದನು. ಅಲ್ಲಿಗೆ ಹೋಗಿ ರಾಜನು ಆ ಊರಿನಲ್ಲೆಲ್ಲ ಜಯವೀರನನ್ನು ಹುಡುಕಿ ಬೇಸತ್ತು ಈ ಕಥಾಪ್ರಾರಂಭದಲ್ಲಿ ನಮ್ಮ ಪಾಠಕರಿಗೆ ಪರಿಚಯವಾದ ಸತ್ರಕ್ಕೆ ಹೋಗಲು, ಅಲ್ಲಿಯ ಒಂದು ಕೊಠಡಿಯಲ್ಲಿ ಅವನು ದುಃಖಾಕ್ರಾಂತನಾಗಿ ಕುಳಿತಿದ್ದುದನ್ನು ಕಂಡು,

"ಅಪ್ಪಾ ಜಯವೀರ, ನೀನು ಈ ರೀತಿ ದುಃಖಪಡುತ್ತಲಿರುವುದು ತರವೇ ? ನಾನು ಎಷ್ಟು ಸಾರಿ ನಿನಗೆ ಹೇಳಲಿ. ಈ ಊರಿನಲ್ಲಿ ನಿನ್ನ ಕೆಲಸವು ಇನ್ನೂ ಮುಗಿಯಿತೋ ಇಲ್ಲವೋ ?"

"ನನಗೆ ಇನ್ನೇನು ಕೆಲಸ ? ಮೊದಲು ನಾವಿದ್ದ ಮನೆಗೆ ಹೋಗಿ ನಿಡುನಿದ್ದೆಗೈಯುತ್ತಿರುವ ನನ್ನ ತಂದೆ ತಾಯಿಗಳ ಸ್ಮರಣೆಯನ್ನು ಮಾಡಿ ಅನಂತರ ನನ್ನ ಸ್ನೇಹಿತ ಉದಯಸಿಂಹನ ವಿಷಯವಾಗಿ ಕೆಲವು ಸೈನ್ಯಾಧಿಪರುಗಳಿಗೆ ಲೇಖನವನ್ನು ಬರೆದೆನು. ಇನ್ನೇನೂ ಕೆಲಸವಿಲ್ಲ."

"ಅಪ್ಪಾ, ನೀನೂ ನಿನ್ನ ತಂದೆಯ ಹಾಗೆಯೇ ಧರ್ಮಿಷ್ಠನೂ ಉದಾರಿಯೂ ಆಗಿದ್ದೀಯೆ. ನಿನಗೆ ದೇವರು ಶೀಘ್ರದಲ್ಲಿಯೇ ಶ್ರೇಯಸ್ಸನ್ನು ಕೊಟ್ಟು ನಿನ್ನ ಮನಸ್ಸಂತೋಷಪಡಿಸಾನು. ನಾನು ಇಂದ್ರಪ್ರಸ್ಥಕ್ಕೆ ಹೋಗಬೇಕಾಗಿದೆ. ಅಲ್ಲಿಂದ ಮಲಯದ್ವೀಪಕ್ಕೆ ಹೋಗುತ್ತೇನೆ. ನೀನು ಅಲ್ಲಿಗೆ ಬರಬೇಕು. ಅದಕ್ಕೆ ತಕ್ಕ ಏರ್ಪಾಡನ್ನು ಮಾಡಿದ್ದೇನೆ. ಅದುವರೆಗೂ ನೀನು ನನಗೆ ಕೊಟ್ಟಿರುವ ಮಾತನ್ನು ಎಲ್ಲಾದರೂ ಮರೆತೀಯೇ ಜೋಕೆ."

"ಅದನ್ನು ನಾನೊಂದು ವೇಳೆ ಮರೆತರೋ ?"

"ಪ್ರಮಾಣಪೂರ್ವಕ ಕೊಟ್ಟ ಮಾತನ್ನು ಎಂದಿಗೂ ಮರೆಯಕೂಡದು."

"ರಾಜರೇ, ನನಗೆ ಅಷ್ಟಿಷ್ಟು ದುಃಖವಲ್ಲ. ಹೀಗಿರುವಲ್ಲಿ ನಾನು ಒಂದು ವೇಳೆ ಕೊಟ್ಟ ಮಾತನ್ನು ಮರೆತರೆ ತಾವು ಕ್ಷಮಿಸಬೇಕು."

"ಅಪ್ಪಾ, ದುಃಖಸಮುದ್ರದಲ್ಲಿ ನಿನಗಿಂತ ಹೆಚ್ಚಾಗಿ ಮುಳುಗಿದ್ದ ಒಬ್ಬನನ್ನು ನಾನು ಬಲ್ಲೆನು."

"ನನಗಿಂತ ದುಃಖಿಯು ಈ ಲೋಕದಲ್ಲಿಯೇ ಇಲ್ಲ."

"ತಲೆನೋವು ಬಂದವನು ಅದಕ್ಕಿಂತ ಹೆಚ್ಚು ಹಿಂಸೆ ಕೊಡುವ ರೋಗವೇ ಇಲ್ಲವೆಂದು ಹೇಳುತ್ತಾನೆ. ಅವರವರ ಕಷ್ಟ ಅವರವರಿಗೆ ದೊಡ್ಡದೆಂದು ತಿಳಿಯುತ್ತಾರೆ."

"ನಾನು ಪ್ರೀತಿಸುವ ವಸ್ತು ಹೋದ ಮೇಲೆ ಈ ಲೋಕದಲ್ಲಿ ಬದುಕಿದ್ದು ಏನು ಪ್ರಯೋಜನ ?"

"ಜಯವೀರ, ನಾನು ಹೇಳುವುದನ್ನು ಸಾವಧಾನವಾಗಿ ಕೇಳು. ನಿನ್ನಂತೆಯೇ ಒಬ್ಬನು ಅತಿಸುಂದರಿಯಾದ ಯುವತಿಯನ್ನು ಪ್ರೀತಿಸುತ್ತಲಿದ್ದು ಅವಳುಂಟಾದರೆ ಲೋಕವುಂಟೆಂದು ಎಣಿಸಿಕೊಂಡಿದ್ದನು. ವೃದ್ಧನಾದ ಅವನ ತಂದೆಗೆ ಆ ಮಗನಲ್ಲದೆ ಮತ್ತಾರೂ ದಿಕ್ಕಿಲ್ಲ. ಮಗನು ಆ ತರುಣಿಯನ್ನು ಮದುವೆಮಾಡಿಕೊಂಡು ತಂದೆಯೊಂದಿಗೆ ಸುಖವಾಗಿರಬೇಕೆಂದು ಯೋಚಿಸಿ ಏರ್ಪಾಡೆಲ್ಲವನ್ನೂ ಮಾಡಿ ದೇವರೂಟವಾಗುತ್ತಿದ್ದಾಗ, ಅವನು ಶತ್ರುಗಳು ಒಳಸಂಚನ್ನು ಮಾಡಿ, ಬೇಕೆಂದು ಅವನನ್ನು ಸೆರೆಮನೆಗೆ ಕೊಂಡುಹೋದರು."

"ಒಂದು ವಾರ, ತಿಂಗಳು ಅಥವಾ ವರ್ಷ ಸೆರೆಯಲ್ಲಿದ್ದು ಹಿಂತಿರುಗಿ ಬಂದು ಅವನು ಅವಳನ್ನು ಮದುವೆಯಾಗಿದ್ದಾನು. ನನ್ನ ಗತಿ ಹಾಗಲ್ಲ."

"ಅವನು ಹದಿನಾಲ್ಕು ವರ್ಷಗಳು ಸೆರೆಯಲ್ಲಿರಬೇಕಾಯಿತು" ಎಂದು ರಾಜನು ಹೇಳಲು ಜಯವೀರನು ನಡನಡುಗಿ,

"ಅಬ್ಬಬ್ಬಾ, ಹದಿನಾಲ್ಕು ವರ್ಷಗಳೇ ?"

"ಅಹುದು, ಆ ಕಾಲದಲ್ಲಿ ಅವನಿಗುಂಟಾದ ಕಷ್ಟಗಳು ಅಷ್ಟಿಷ್ಟಲ್ಲ. ವೃದ್ಧನಾದ ತಂದೆಯ ಗತಿಯೇನಾಯಿತೋ ? ತಾನು ವರಿಸಿದ್ದ ತರುಣಿಯು ಏನಾದಳೋ ? ಎಂದು ಒಂದು ಪಕ್ಕದಲ್ಲಿ ಚಿಂತೆ ; ಮತ್ತೊಂದು ಕಡೆ ಬಂದಿಶಾಲೆಯ ಅಂಧಕೂಪ ದಲ್ಲಿ ಸೇರಿಸಿದ್ದುದರಿಂದ ಉಂಟಾಗಿದ್ದ ತೊಂದರೆ. ಹೀಗಿರುವಲ್ಲಿ ಅವನು ದೇವರನ್ನು ದೃಢವಾಗಿ ನಂಬಿದ್ದುದರಿಂದ ಭಗವಂತನು ಅವನಲ್ಲಿ ಕೃಪೆಮಾಡಿ ಅವನಿಗೆ ಬುದ್ಧಿಯನ್ನೂ ಜ್ಞಾನವನ್ನೂ ಐಶ್ವರ್ಯವನ್ನೂ ದಯಪಾಲಿಸಿ ಸೆರೆಯಿಂದ ಬಿಡುಗಡೆ ಮಾಡಿದನು. ಅವನು ಸೆರೆಮನೆಯಿಂದ ಹೊರಟು ತಂದೆಯನ್ನು ನೋಡಬೇಕೆಂದು ಅವನಿದ್ದ ಮನೆಗೆ ಹೋದಾಗ ತಂದೆಯು ಬಹುಕಾಲಕ್ಕೆ ಹಿಂದೆಯೇ ಸತ್ತುಹೋಗಿದ್ದನೆಂದು ತಿಳಿಯಿತು."

"ನನ್ನ ತಂದೆ ಬದುಕಿದ್ದಾನೆಯೋ ? ಮುದುಕರು ಸಾಯುವುದು ಏನು ಆಶ್ಚರ್ಯ ?"

"ನಿಮ್ಮ ತಂದೆಯು ಮಕ್ಕಳೆಲ್ಲರ ಮುಂದೆ ನೆಮ್ಮದಿಯಾಗಿ ಸತ್ತರು. ಅವನ

ತಂದೆಯೋ ? ಇದ್ದ ಮಗನೂ ಹೋಗಿ ಕೇಳುವವರೇ ದಿಕ್ಕಿಲ್ಲದೆ ಅನ್ನ ಬಟ್ಟೆಗೂ ಗತಿಯಿಲ್ಲದೆ ಪೇಚಾಡಿ ಸತ್ತನು."

"ಅಯ್ಯೋ ಪಾಪ !"

"ನೋಡಿದೆಯೋ ? ನಿನಗಿಂತ ಅವನು ದುಃಖಿ ಎಂದು ಒಪ್ಪಿಕೊಳ್ಳುತ್ತೀಯೋ ?"

"ತಂದೆಯು ಸತ್ತರೇನು ? ಪ್ರೀತಿಪಾತ್ರವಾಗಿದ್ದವಳನ್ನು ಅವನು ಮದುವೆಯಾಗಿ ಸುಖದಿಂದಿದ್ದಿರಬಹುದು."

"ಅವನ ಹಣೆಯಲ್ಲಿ ಅದೂ ಬರೆದಿರಲಿಲ್ಲ"

"ಅವಳೂ ಸತ್ತುಹೋದಳೋ ?"

"ಇಲ್ಲ. ಅದಕ್ಕಿಂತ ದುಃಖಕರವಾದ ಸಂಗತಿ ನಡೆದುಹೋಯಿತು."

"ಅದೇನು ?"

"ಅವಳು ಅವನ ಹಗೆಯನ್ನೇ ಮದುವೆಯಾದಳು. ಈಗ ನಿನ್ನ ದುಃಖವು ಹೆಚ್ಚೋ ? ಅವನದು ಹೆಚ್ಚೋ ? ಹೇಳು."

"ಆಮೇಲೆ ಅವನು ಸುಖವಾಗಿದ್ದನೋ ?"

"'ಜೀವನ್ ಭದ್ರಾಣಿ ಪಶ್ಯತಿ' ಎಂದು ನುಡಿದಿರುವ ವಚನವನ್ನು ನಂಬಿ ಎಂದಾದರೂ ಒಂದು ದಿನ ದೈವಾನುಗ್ರಹದಿಂದ ಸುಖವುಂಟಾಗಬಹುದೆಂದು ಅವನು ಧೈರ್ಯವಾಗಿದ್ದಾನೆ" ಎಂದು ರಾಜನು ಹೇಳಲು, ಜಯವೀರನು ಕಿಂಕಂ ಎನ್ನದೆ,

"ತಮ್ಮ ಅಪ್ಪಣೆಯಾದಂತೆ ನಡೆದುಕೊಳ್ಳುತ್ತೇನೆ ; ಮಾಘ ಶುದ್ಧ ಪಂಚಮಿಯ ದಿವಸವು ತಮಗೆ ಜ್ಞಾಪಕವಿರಬೇಕು."

"ಅಪ್ಪಾ ಜಯವೀರ, ನೀನು ಹೇಗೆ ನನಗೆ ಪ್ರಮಾಣ ಮಾಡಿ ಕೊಟ್ಟಿದ್ದಿಯೋ ಹಾಗೆಯೇ ನಾನೂ ನಿನಗೆ ಪ್ರಮಾಣಮಾಡಿ ಕೊಟ್ಟಿದ್ದೇನೆಂದು ತಿಳಿಯುವನಾಗು. ನಿನಗಾಗಿ ಒಂದು ಸಣ್ಣ ದೋಣಿಯನ್ನು ಮಾಡಿಸಿದ್ದೇನೆ. ಅದರಲ್ಲಿ ನೀನು ಮನ ಬಂದ ಕಡೆ ಸುತ್ತುತ್ತ ವಿಹರಿಸುತ್ತಿದ್ದು ಆ ದಿನಕ್ಕೆ ಸರಿಯಾಗಿ ಮಲಯದ್ವೀಪಕ್ಕೆ ಬಾ. ನಿನಗಾಗಿ ಅಲ್ಲಿ ನಾನು ಕಾದಿರುತ್ತೇನೆ. ಅಲ್ಲಿಯವರೆಗೆ ಯಾವ ಅವಿವೇಕವಾದ ಯೋಚನೆಯನ್ನು ಮಾಡಬೇಡ."

"ಹಾಗೆಯೇ ಆಗಲಿ."

# ೭೩
# ದುರ್ಮತಿಯ ದುರ್ಗತಿ

ಮಲಯ ಪಟ್ಟಣದಿಂದ ರಾಜನು ಇಂದ್ರಪ್ರಸ್ಥಕ್ಕೆ ಹೊರಟಾಗ ಆ ಪಟ್ಟಣದ ಬಳಿ ಒಬ್ಬ ಪ್ರಯಾಣಿಕನು ಒಂದು ಕುದುರೆಯ ಬಂಡಿಯಲ್ಲಿ ಹೋಗುತ್ತಿದ್ದನು. ಇಂದ್ರಪ್ರಸ್ಥಕ್ಕೆ ಇನ್ನೂ ಸುಮಾರು ಐದಾರು ಮೈಲಿಗಳ ದೂರವಿದ್ದಿತು. ಆ ಪಟ್ಟಣದ ಸುತ್ತಮುತ್ತಣ ಸನ್ನಿವೇಶವು ಬಹು ರಮಣೀಯವಾಗಿಯೂ ಆಹ್ಲಾದಜನಕವಾಗಿಯೂ ಇದ್ದುದರಿಂದ ಅಲ್ಲಿಗೆ ಹೋಗುವರೆಲ್ಲರೂ ಅದನ್ನು ಅನುಭವಿಸಲೋಸುಗ ಬಂಡಿಯಿಂದ ಇಳಿದು ನಿಧಾನವಾಗಿ ನಡೆದು ಹೋಗುವ ಪದ್ಧತಿ. ಈ ಪ್ರಯಾಣಿಕನಿಗೆ ಆ ಅನುಭವದ ರುಚಿಯೇ ಇರಲಿಲ್ಲವಾಗಿ ಅವನು ಬಂಡಿಯಿಂದ ಇಳಿಯದೆ ಜೇಬಿನಲ್ಲಿಟ್ಟುಕೊಂಡಿದ್ದ ಒಂದು ಸಣ್ಣ ಕಾಗದವನ್ನು ಆಗಾಗ ತೆಗೆದು ನೋಡಿ "ಹಣದ ಚೀಟು ಭದ್ರವಾಗಿ ಇದೆ" ಎನ್ನುತ್ತ ಅದನ್ನು ಜೇಬಿನಲ್ಲಿಟ್ಟುಕೊಳ್ಳುತ್ತಲಿದ್ದನು. ಬಂಡಿಯು ಶೀಘ್ರದಲ್ಲಿ ಇಂದ್ರಪ್ರಸ್ಥಕ್ಕೆ ಹೋಗಿ ಪಶುಪತಿಯ ಭೋಜನಶಾಲೆಯ ಮುಂದೆ ನಿಂತಿತು.

ಸಾಧಾರಣವಾಗಿ ಪಟ್ಟಣಗಳಲ್ಲಿರುವ ಸತ್ರ ಭೋಜನಶಾಲೆಗಳ ಮುಂದೆ ಸೋಮಾರಿಗಳು, ಯಾಚಕರೂ, ಕಳ್ಳರೂ ಇರುತ್ತಾರೆ. ಇಂದ್ರಪ್ರಸ್ಥವು ದೊಡ್ಡ ಪಟ್ಟಣವಾಗಿಯೂ ಪ್ರಸಿದ್ಧ ಯಾತ್ರಾಸ್ಥಳವಾಗಿಯೂ ಇದ್ದುದರಿಂದ ಪಶುಪತಿಯ ಭೋಜನಶಾಲೆಯ ಬಾಗಿಲಲ್ಲಿ ಇಂತಹ ಜನಗಳನೇಕರು ವಿಶೇಷವಾಗಿ ಸೇರುತ್ತಲಿದ್ದರು. ಅವರಿಗೆ ಎಲ್ಲಾ ದೇಶಭಾಷೆಗಳೂ ಗೊತ್ತಿದ್ದುದರಿಂದ ಪ್ರಯಾಣಿಕರೊಡನೆ ಅವರವರ ಭಾಷೆಗಳಲ್ಲಿಯೇ ಮಾತನಾಡಿ ಅವರಿಗೆ ಬೇಕಾದ ಸಮಾಚಾರಗಳನ್ನೂ ಹಣವನ್ನೂ ಸಂಗ್ರಹಿಸುತ್ತಲಿದ್ದರು.

ನಮ್ಮ ಪ್ರಯಾಣಿಕನು ಬಂಡಿಯಿಂದಿಳಿದು ಪಶುಪತಿಯನ್ನು ವಿಚಾರಿಸಿಕೊಂಡು ಸತ್ರದ ಒಳಕ್ಕೆ ಹೋಗುವುದರೊಳಗಾಗಿಯೇ ಮೇಲೆ ಹೇಳಿದ ಜನರಲ್ಲಿ ಒಬ್ಬನು 'ನಾನು ಹುಡುಕುತ್ತಲಿದ್ದವನು ಇವನೆ' ಎಂದು ಗೊತ್ತುಮಾಡಿಕೊಂಡನು. ಪಶುಪತಿಯು ಆ ಪ್ರಯಾಣಿಕನನ್ನು ಇದಿರುಗೊಂಡು ಬಂದು ಊಟ ಉಪಚಾರಗಳಿಗೆ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡಿದನು.

ಆಗಂತುಕನು ಭೋಜನ ತೀರಿಸಿಕೊಂಡು ಹೊರಗೆ ಹೊರಟಾಗ ಸತ್ರದ ಮುಂದೆ ಕುಳಿತಿದ್ದವನು ಅವನ ಬೆನ್ನುಹತ್ತಿದನು. ಪ್ರಯಾಣಿಕನು ಕುದುರೆ ಬಂಡಿಗೆ ಹೇಳಿಕಳುಹಿಸಿದ್ದು ಅದು ಬರುವುದು ಸಾವಕಾಶವಾದುದರಿಂದ "ಇಲ್ಲಿಗೆ ಬಂಡಿಯು ಬಂದರೆ ಅದನ್ನು ಧನಾಗಾರಪತಿ ನಂದಕುಮಾರರ ಮನೆಗೆ ಕಳುಹಿಸು" ಎಂದು ಪಶುಪತಿಗೆ ಹೇಳಿ, ತಾನು ಪಾದಚಾರಿಯಾಗಿಯೇ, ಅಲ್ಲಿಗೆ ಹೋಗಿ ಮನೆಯ ಮುಂದೆ ನಿಂತು ದ್ವಾರಪಾಲಕನನ್ನು ಕುರಿತು

"ಯಜಮಾನರು ಇದ್ದಾರೆಯೋ ?" ಎಂದು ಕೇಳಿದನು.

"ಸ್ವಾಮೀ, ಯಾರು ದಯಮಾಡಿಸಿದ್ದಾರೆಂದು ಯಜಮಾನರಿಗೆ ಹೇಳಲಿ?"

"ಶ್ರೀಮಂತ ದುರ್ಮತಿಗಳು ಬಂದಿದ್ದಾರೆಂದು ತಿಳಿಸು."

"ಮಹಾಸ್ವಾಮೀ ಅಪ್ಪಣೆ" ಎಂದು ತಲೆಬಾಗಿ ದ್ವಾರಪಾಲಕನು ಒಳಗೆ ಹೋಗಿ ಯಜಮಾನನಿಗೆ ಈ ವಿಚಾರವನ್ನು ತಿಳಿಸಲು "ಅವನನ್ನು ಒಳಗೆ ಕರೆದುಕೊಂಡು ಬಾ" ಎಂದು ಅವನು ಅಪ್ಪಣೆಯನ್ನಿತ್ತನು. ಅವನು ಹೊರಕ್ಕೆ ಬಂದು "ಸ್ವಾಮೀ, ಬಿಜಯಮಾಡಿಸಬೇಕು" ಎಂದು ಹೇಳಿ ದುರ್ಮತಿಯನ್ನು ಒಳಕ್ಕೆ ಸಂಗಡ ಕರೆದುಕೊಂಡು ಹೋದನು.

ದುರ್ಮತಿಯ ಬೆನ್ನ ಹತ್ತಿ ಬಂದಿದ್ದವನು ಒಳಗೆ ಬರೆಯುತ್ತಲಿದ್ದ ಕರಣಿಕನ ಬಳಿಗೆ ಹೋಗಿ ಕುಳಿತುಕೊಂಡನು. ಅವನು ತಲೆಯೆತ್ತಿ ನೋಡಿ,

"ಪ್ರತಿರೋಧಿ, ಇದೇನು ಇಲ್ಲಿಗೆ ಬಂದೆ ? ಈ ಪ್ರಯಾಣಿಕನಲ್ಲಿ ಏನಾದರೂ ಸ್ವಾರಸ್ಯವನ್ನು ಕಂಡು ಬಂದಿದೆಯೋ ?"

"ಈ ಸಾರಿ ನನ್ನ ಬುದ್ಧಿವಂತಿಗೆ ಏನೂ ಇಲ್ಲ ; ಇವನ ವಿಷಯವಾಗಿ ಮೊದಲೇ ವರ್ತಮಾನ ಬಂದಿದ್ದಿತು."

"ಹಾಗಾದರೆ ಅವನ ಸಂಗತಿಯೆಲ್ಲಾ ನಿನಗೆ ಗೊತ್ತೋ ?"

"ಹುಂ. ಆದರೆ ಹಣ ಇಷ್ಟು ಎಂಬುದು ಚೆನ್ನಾಗಿ ತಿಳಿಯದು."

"ಹಾಗಾದರೆ ತಾಳು. ವಿಚಾರಿಸಿ ಹೇಳುತ್ತೇನೆ" ಎಂದು ಕರಣಿಕನು ಒಳಕ್ಕೆ ಹೋಗಿ ಐದು ನಿಮಿಷಗಳಲ್ಲಿ ಹಿಂತಿರುಗಿ ಬಂದು,

"ಐವತ್ತು ಲಕ್ಷ ವರಹಗಳು" ಎಂದನು.

"ಹೋದ ಸಾರಿ ನೀನು ಕೊಟ್ಟ ವರ್ತಮಾನವು ತಪ್ಪಾಯಿತು ; ಇದೂ ಹಾಗೆಯೋ ?"

"ಯಾವ ಸಾರಿ ? ಆ ಜಗನ್ನಾಥದವನ ವಿಷಯವ್ರೋ ?"

"ಅಲ್ಲ, ಅದೇನೋ ಸರಿಯಾಗಿ ಇದ್ದಿತು. ಆ ಮಾರವಾರದ ರಾಜಕುಮಾರನ ವಿಷಯದಲ್ಲಿ ಮೂರು ಲಕ್ಷ ವರಹವೆಂದು ನೀನು ಹೇಳಿದ್ದೆ ; ಅವನಲ್ಲಿ ಎರಡೂವರೆ ಲಕ್ಷವೇ ಸಿಕ್ಕಿತು."

"ನೀನು ಸರಿಯಾಗಿ ಹುಡುಕಿರಲಾರೆ."

"ಲುಂಗಿಒಂಪನೇ ಹುಡುಕಿದನು."

"ಹಾಗೋ ?" ಎಂದು ಕರಣಿಕನು ಹೇಳುವ ವೇಳೆಗೆ ಯಾರೋ ಒಳಗಣಿಂದ ಬರುವಂತೆ ಹೆಜ್ಜೆಯ ಸದ್ದಾಯಿತು. ದುರ್ಮತಿಯು ಆ ಕೊಠಡಿಗೆ ಬರುತ್ತಿರುವುದನ್ನು ಕಂಡು ಕರಣಿಕನು ಏನನ್ನೋ ಬರೆಯತೊಡಗಿದನು. ಪ್ರತಿರೋಧಿಯು ಕೈಯಲ್ಲಿಟ್ಟುಕೊಂಡಿದ್ದ ಜಪಸರವನ್ನು ಎಣಿಸತೊಡಗಿದನು.

ಅಷ್ಟು ಹೊತ್ತಿಗೆ ದುರ್ಮತಿಯ ಬಂಡಿಯು ಬಂದು ಬಾಗಿಲಲ್ಲಿ ನಿಂತಿತು.

ದುರ್ಮತಿಯು ಅದರಲ್ಲಿ ಕುಳಿತ ಕೂಡಲೇ ಬಂಡಿಯವನು, "ಸ್ವಾಮೀ, ಎಲ್ಲಿಗೆ ಹೊಡೆಯಲಿ ?" ಎಂದು ಕೇಳಲು "ಪಶುಪತಿಯ ಭೋಜನಶಾಲೆಗೆ" ಎಂದನು.

ಹಣವು ಕೈಸೇರುವುದೋ ಇಲ್ಲವೋ ಎಂದು ಅನುಮಾನಪಡುತ್ತಲಿದ್ದ ದುರ್ಮತಿಯು, ಕೇಳಿದ ಕೂಡಲೇ ನಂದಕುಮಾರನು ಹಣವನ್ನು ಕೊಡಲು, ಆನಂದಪರವಶನಾಗಿ, ಆ ದಿನ ರಾತ್ರಿ ಅಲ್ಲಿಯೇ ಇದ್ದು ಮಾರನೆಯ ದಿನ ಬೆಳಿಗ್ಗೆ ಅಷ್ಟು ಹೊತ್ತಿಗೇ ಎದ್ದು ವನವಾಸಿಗೆ ಹೋಗಬೇಕೆಂದು ಯೋಚಿಸಿ ಪಶುಪತಿಯನ್ನು ಕೂಗಿ "ನಾಳೆಯ ಬೆಳಗಿನ ಜಾವದಲ್ಲಿ ವನವಾಸಿಗೆ ಹೊರಡಬೇಕಾಗಿದೆ ; ಅದಕ್ಕಾಗಿ ಒಂದು ಕುದುರೆ ಟಪ್ಪಾಲು ಬಂಡಿಯನ್ನು ಮಾಡಿಕೊಡು" ಎಂದನು.

"ಮಹಾಸ್ವಾಮಿ, ಅಪ್ಪಣೆ. ಬಂಡಿಯು ಎಷ್ಟು ಹೊತ್ತಿಗೆ ಇಲ್ಲಿರಬೇಕು ?"

"ನಾಲ್ಕು ಗಂಟೆಗೆ ಸರಿಯಾಗಿ."

ದುರ್ಮತಿಯು ಆ ರಾತ್ರಿ ಊಟಮಾಡಿ ನಂದಕುಮಾರನ ಮನೆಯಿಂದ ತಂದ ಐವತ್ತು ಲಕ್ಷ ವರಗಳ ನೋಟುಗಳನ್ನು ಒಂದೊಂದಾಗಿ ಲೆಕ್ಕಮಾಡಿ ಭದ್ರವಾಗಿ ಒಂದು ಬಟ್ಟೆಯಲ್ಲಿ ಕಟ್ಟಿ ಸೊಂಟಕ್ಕೆ ಬಿಗಿದುಕೊಂಡು ನೆಮ್ಮದಿಯಾಗಿ ಮಲಗಿದನು. ಅಮರಪುರವನ್ನು ಬಿಟ್ಟ ಮೇಲೆ ಅವನು ಹೀಗೆ ಮಲಗಿದ್ದು ಈಗಲೇ. ಬಂಡಿಯು ಹೊತ್ತಿಗೆ ಮುಂಚೆ ಬಂದು ನಿಂತಿದ್ದರೂ ಅವನಿಗೆ ಎಚ್ಚರವಾಗಲಿಲ್ಲ. ಅವನು ಸುಮಾರು ಒಂಬತ್ತು ಗಂಟೆಗೆ ಎದ್ದು "ಈಗ ಹೊರಟು ಊಟಕ್ಕೆ ಏತಕ್ಕೆ ತೊಂದರೆ ಮಾಡಿಕೊಳ್ಳಲಿ, ಊಟ ಮಾಡಿಕೊಂಡೇ ಹೊರಡುವುದು ಸರಿ" ಎಂದು ಯೋಚಿಸಿ ಎರಡು ಗಂಟೆಗೆ ಬಂಡಿಯನ್ನು ತರುವಂತೆ ಹೇಳಿ ಕಳುಹಿಸಿದನು. ಅದನ್ನು ಕಂಡು ಪ್ರತಿರೋಧಿಯು ಬಾಗಿಲಲ್ಲಿದ್ದ ಒಬ್ಬ ಹುಡುಗನನ್ನು ಕರೆದು ಅವನ ಕಿವಿಯಲ್ಲಿ ಏನನ್ನೋ ಹೇಳಲು ಅವನು ಆ ಬಂಡಿಯ ಹಿಂದೆಯೇ ಓಡಿಹೋದನು.

ಬಂಡಿಯು ಎರಡು ಗಂಟೆಗೆ ಬರಲಿಲ್ಲ ; ನಾಲ್ಕು ಗಂಟೆಗೆ ಬಂದಿತು.

"ಏಕೆ ಇಷ್ಟು ಹೊತ್ತು ಮಾಡಿದೆ" ಎಂದು ದುರ್ಮತಿಯು ಕೇಳಲು ಬಂಡಿಯವನು,

"ಸ್ವಾಮೀ, ಕುದುರೆಯು ಎಲ್ಲಿಗೋ ಓಡಿಹೋಗಿದ್ದಿತು ; ಅವನು ಹಿಡಿದು ತರಲು ಇಷ್ಟು ಹೊತ್ತಾಯಿತು."

"ಈಗ ಹೊರಟರೆ ಕತ್ತಲೆಗೆ ಮುಂಚೆ ಮುಂದಣ ಊರನ್ನು ಸೇರಬಹುದೋ ?"

"ಸ್ವಾಮೀ, ಧಾರಾಳವಾಗಿ ಸೇರಬಹುದು."

ದುರ್ಮತಿಯು ತನ್ನ ಸರಕುಗಳನ್ನು ತೆಗೆಸಿಕೊಂಡು ಬಂಡಿಯನ್ನು ಏರುವುದಕ್ಕೆ ಬಂದಾಗ ಬಾಗಿಲಲ್ಲಿದ್ದ ಸೋಮಾರಿಗಳೆಲ್ಲರೂ ಒಂದೇ ಸಾರಿ ಎದ್ದು "ಮಹಾರಾಜರೇ, ರಾಜಧಿರಾಜರೇ, ಇದು ಧರ್ಮಸ್ಥಳ, ಯಾತ್ರಾಸ್ಥಳ. ಧರ್ಮಮಾಡಿದರೆ ನಿಮಗೆ ಪುಣ್ಯ ಬರುತ್ತದೆ" ಎಂದು ಎರಡು ಕೈಗಳನ್ನೂ ಜೋಡಿಸಿಕೊಂಡು ಬೇಡಲು, "ನನ್ನನ್ನು

ಇದುವರೆಗೆ ಯಾರೂ ಮಹಾರಾಜನೆಂದಾಗಲೀ ರಾಜಾಧಿರಾಜನೆಂದಾಗಲೀ ಕರೆಯಲಿಲ್ಲ. ಈಗ ಇವರು ಕರೆಯುತ್ತಾರೆ' ಎಂದು ಹರ್ಷಚಿತ್ತನಾಗಿ ಎಂದೂ ಧರ್ಮಮಾಡದೆ ಇದ್ದವನು ಆಗ ಜೇಬಿನಿಂದ ಕೆಲವು ಬೆಳ್ಳಿಯ ನಾಣ್ಯಗಳನ್ನು ತೆಗೆದು ನೆಲದ ಮೇಲೆ ಎರಚಿ ಬಂಡಿಯಲ್ಲಿ ಕುಳಿತುಕೊಂಡನು.

ಬಂಡಿಯು ಹೊರಟಿತು. ಅಲ್ಲಿಯೇ ಕುಳಿತಿದ್ದ ಪ್ರತಿರೋಧಿಯು ಅದರ ಹಿಂದೆ ಕುಳಿತನು. ಬಂಡಿಯು ಇಂದ್ರಪ್ರಸ್ಥವನ್ನು ಬಿಟ್ಟು ಊರ ಹೊರಗೆ ಹೋಗುವ ವೇಳೆಗೆ ಸುಮಾರು ಸಾಯಂಕಾಲ ಐದೂವರೆ ಗಂಟೆಯಾಯಿತು. ನಾಲ್ಕು ಮೈಲಿ ದೂರ ಹೋಗುವುದರೊಳಗಾಗಿಯೇ ಸಾರಥಿಯು ಆ ಕುದುರೆಗಳನ್ನು ಬಿಚ್ಚಿಕೊಂಡು ಹೊರಟು ಹೋದನು. ಮತ್ತೊಬ್ಬನು ಬೇರೆ ಕುದುರೆಗಳನ್ನು ಕಟ್ಟಿ ಬಂಡಿಯನ್ನು ಮುಂದಕ್ಕೆ ಬಿಟ್ಟನು. ಸ್ವಲ್ಪ ದೂರ ಹೋಗುವುದರೊಳಗಾಗಿಯೇ ಕತ್ತಲಾಗುತ್ತ ಬಂದಿತು. ದುರ್ಮತಿಯು ದಿಗಿಲುಬಿದ್ದು ಸಾರಥಿಯನ್ನು ಕುರಿತು "ಎಲಾ, ಮುಂದಣ ಊರು ಇನ್ನೂ ಎಷ್ಟು ದೂರವಿದೆ ? " ಎಂದು ಕೇಳಲು "ಇನ್ನೊಂದು ಗಂಟೆಯಲ್ಲಿ ನಿಮ್ಮನ್ನು ಸರಿಯಾದ ಸ್ಥಳದಲ್ಲಿ ಬಿಡುತ್ತೇನೆ" ಎಂದನು.

ದುರ್ಮತಿಗೆ ನಿದ್ದೆಮಾಡಬೇಕೆಂದಿದ್ದರೂ ದಿಗಿಲಿನಿಂದ ನಿದ್ದೆಯು ಹತ್ತಲಿಲ್ಲ. ಅವನು ಕೊಂಚ ಹೊತ್ತು ತನ್ನ ಹೆಂಡತಿಯ ವಿಷಯವನ್ನೂ, ಇನ್ನಷ್ಟು ಹೊತ್ತು ಮಗಳ ವಿಷಯವನ್ನೂ, ಮತ್ತಷ್ಟು ವೇಳೆ ತನ್ನಲ್ಲಿ ಹಣವಿಟ್ಟು ಮೋಸಹೋದವರ ವಿಷಯವನ್ನೂ ನೆನೆಸಿಕೊಂಡು "ಯಾರೂ ಎತ್ತ ಹೋದರೇನು ? ನಾನು ವನವಾಸಿಗೆ ಹೋಗಿ ಅಲ್ಲಿ ಧನಾಗಾರಪತಿಯಿಂದ ಬರಬೇಕಾದ ಹಣವನ್ನು ತೆಗೆದುಕೊಂಡು, ಅದನ್ನೂ ಈಗ ನನ್ನ ಬಳಿ ಇರುವ ಹಣವನ್ನೂ ಬಡ್ಡಿಗೆ ಹಾಕಿಕೊಂಡು ಸಾಯುವವರೆಗೆ ನೆಮ್ಮದಿಯಾಗಿ ಅಮರ ದೇಶದ ಅಧಿಕಾರಿಗಳ ಕಾಟವಿಲ್ಲದೆ ಜೀವನ ಮಾಡಿಕೊಂಡಿರುತ್ತೇನೆ' ಎಂದುಕೊಂಡು ಕಿಟಕಿಯಲ್ಲಿ ಇಣಕಿ ನೋಡಿ ಬಂಡಿಯ ಪಕ್ಕದಲ್ಲಿ ಯಾವನೋ ಸವಾರನು ಬರುತ್ತಲಿದ್ದುದನ್ನು ಕಂಡು "ಇವನಾರು? ಪೋಲೀಸಿನವನೋ? ಅಮರದೇಶದಿಂದ ತಂತಿಯ ವರ್ತಮಾನ ಬಂದು ನನ್ನನ್ನು ಹಿಡಿಯಲೋಸುಗ ಬಂದಿದ್ದಾನೋ ?' ಎಂದು ಯೋಚಿಸಿಕೊಂಡು, ಅವನನ್ನು ಕುರಿತು "ಅಪ್ಪಾ, ನೀನಾರು ? ಎಲ್ಲಿಗೆ ಹೋಗುತ್ತೀಯ ?" ಎಂದು ಕೇಳಲು ಅವನು "ಚುಪ್‌ರಹೋ" ಎಂದನು. ಅವನು ಹೇಳಿದ ಮಾತಿನ ಅರ್ಥವು ತಿಳಿಯದೇ ಇದ್ದ ಕಾರಣ ದುರ್ಮತಿಯು "ಅದು ಸರಿ" ಎಂದು ಸುಮ್ಮನಾಗಿ ಪುನಃ ಮತ್ತೊಂದು ಕಡೆಯ ಕಿಟಕಿಯಲ್ಲಿ ತಲೆಹಾಕಿ ನೋಡಲು ಅಲ್ಲಿಯೂ ಒಬ್ಬ ಸವಾರನು ಪಕ್ಕದಲ್ಲಿ ಬರುತ್ತಲಿರುವುದನ್ನು ಕಂಡನು.

ಅಷ್ಟು ಹೊತ್ತಿಗೆ ಚಂದ್ರೋದಯವಾಯಿತು. ಬೆಳದಿಂಗಳಲ್ಲಿ ಇಂದ್ರಪ್ರಸ್ಥದ ದೇವಾಲಯಗಳೂ ಗೋಪುರಗಳೂ ಸೌಧಗಳೂ ಬೆಳ್ಳಿಯಿಂದ ಲೇಪ ಮಾಡಿದಂತೆ ಶುಭ್ರವಾಗಿ ಹೊಳೆಯುತ್ತಲಿದ್ದುವು. ಅವುಗಳನ್ನು ಕಂಡು ದುರ್ಮತಿಯು ಈ ಬಂಡಿಯು ಊರನ್ನು ಸುತ್ತುತ್ತಿದೆಯೇ ಹೊರತು ಊರು ಬಿಟ್ಟು ಹೋಗಲೇ ಇಲ್ಲವೆಂದು ತಿಳಿದು,

"ನಾನು ಇಲ್ಲಿಯ ಕಳ್ಳರ ಕೈಗೆ ಸಿಕ್ಕಿರಬಹುದೋ" ಎಂದು ಅನುಮಾನ ತಟ್ಟಿ ಗಡಗಡನೆ ನಡುಗಿದನು. ಅವನ ಮೈಯ ಕೂದಲೆಲ್ಲಾ ಎದ್ದು ನಿಂತುವು. ಅವನು ಹೀಗೆ ಅವಸ್ಥೆ ಪಡುತ್ತಿದ್ದಾಗ ಮತ್ತೆ ಐದಾರು ಸವಾರರು ಬಂಡಿಯ ಸುತ್ತಲೂ ಬಳಸಿಕೊಂಡು ಬಂಡಿಯನ್ನು ನಿಲ್ಲಿಸಿ 'ನಿಚ್ಚೆ ಉಘ್ರೋ' ಎಂದು ಅಪ್ಪಣೆ ಮಾಡಲು ಅದರ ಅರ್ಥವನ್ನು ತಿಳಿಯದೆ ದುರ್ಮತಿಯು ಸುಮ್ಮನಿದ್ದನು.

ಆ ಸವಾರರಲ್ಲಿ ಮುಖ್ಯನಾದವನು ಪುನಃ ಅದನ್ನೇ ಅವರದೇಶ ಭಾಷೆಯಲ್ಲಿ ಹೇಳಲು, ದುರ್ಮತಿಯು ನಡುಗುತ್ತ ಕೆಳಗೆ ಇಳಿದು ಅವನು ಹೇಳಿದಂತೆ ಅವನ ಹಿಂದೆಯೇ ಹೋದನು. ಮಿಕ್ಕವರು ದುರ್ಮತಿಯ ಹಿಂದೆ ಹೋಗುತ್ತ ಅವನನ್ನು ಮುಂದುಮುಂದಕ್ಕೆ ತಳ್ಳಿಕೊಂಡು ನಮ್ಮ ಪಾಠಕಮಹಾಶಯರಿಗೆ ಮೊದಲೇ ಪರಿಚಯವಾಗಿರುವ ಬಂಕಕ್ಕೆ ಕರೆದುಕೊಂಡು ಹೋದರು. ಇವರು ಹೋಗುತ್ತಿದ್ದಾಗ ದಾರಿಯಲ್ಲಿ ಪಹರೆ ಕೊಡುತ್ತಲಿದ್ದವನು "ಅಲ್ಲಿ ಬರುವವರಾರು" ಎಂದು ಕೇಳಲು ಪ್ರತಿರೋಧಿಯು "ಯಜಮಾನನೆಲ್ಲಿ ?" ಎಂದು ಕೇಳಿದನು.

"ಅಗೋ ! ಆ ಮಂಟಪದಲ್ಲಿ ಕುಳಿತಿದ್ದಾನೆ" ಎಂದು ಹೇಳಲು ಸವಾರರು ದುರ್ಮತಿಯನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವನ ಮುಂದೆ ನಿಲ್ಲಿಸಿದರು. "ಇವನೆಯೋ"? ಎಂದು ಯಜಮಾನನು ಕೇಳಲು ಪ್ರತಿರೋಧಿಯು "ಅಹುದು ಮಹಾಸ್ವಾಮೀ" ಎಂದನು.

"ಎಲ್ಲಿ, ಅವನ ಮುಖವನ್ನು ನೋಡೋಣ" ಎಂದೊಡನೆಯೇ ಆಳುಗಳು ಉರಿಯುತ್ತಲಿದ್ದ ದೀವಟಿಗೆಯನ್ನು ದುರ್ಮತಿಯ ಮುಖದ ಮುಂದೆ ಹಿಡಿದರು.

"ಇವನಿಗಾಗಿ ಅಣಿಮಾಡಿರುವ ಕೊಠಡಿಯಲ್ಲಿ ಕೂಡಿರಿ" ಎಂದು ಅಪ್ಪಣೆ ಮಾಡಿ ಯಜಮಾನನು ಮರಳಿ ಪುಸ್ತಕವನ್ನು ಓದಲಾರಂಭಿಸಿದನು.

ಅಪ್ಪಣೆಯಂತೆ ಆಳುಗಳು ದುರ್ಮತಿಯನ್ನು ಕೊಠಡಿಯಲ್ಲಿ ಕೂಡಿ ಬೀಗಹಾಕಿದರು. ಈ ಕಳ್ಳರ ವಿಷಯವಾಗಿ ಉದಯಸಿಂಹನು ಅಮರಪುರದಲ್ಲಿ ಹೇಳಿದ್ದ ಕಥೆಯು ಆಗ ಅವನಿಗೆ ಜ್ಞಾಪಕಕ್ಕೆ ಬಂದಿತು. ತನ್ನಲ್ಲಿ ಬೇಕಾದಷ್ಟು ಹಣವಿರುವುದರಿಂದ ಕೇಳಿದಷ್ಟು ಹಣವನ್ನು ಕೊಟ್ಟು ಮಾರನೆಯ ದಿನವೇ ಅಲ್ಲಿಂದ ಬಿಡುಗಡೆ ಮಾಡಿಕೊಂಡು ಹೊರಟುಹೋಗಬಹುದೆಂದು ದುರ್ಮತಿಯು ಧೈರ್ಯವಾಗಿದ್ದನು.

ಮರುದಿನ ಬೆಳಗಾಗಲು ದುರ್ಮತಿಯು ಕಣ್ಣುಬಿಟ್ಟು ನೋಡಿದಾಗ ತಾನು ನಿತ್ಯವೂ ಮಲಗುತ್ತಿದ್ದ ಶಯ್ಯಾಗೃಹ, ಸುಪ್ಪತ್ತಿಗೆ, ಮಂಚ, ಸೊಳ್ಳೆಪರದೆಗಳನ್ನು ಕಾಣದೆ, ಸಣ್ಣ ಕೊಠಡಿಯನ್ನೂ ಹುಲ್ಲು ಹಾಸಿಗೆಯನ್ನೂ, ಸುಣ್ಣದ ಗೋಡೆಗಳನ್ನು ಕಂಡು ಸ್ವಪ್ನವೋ ನಿಜವೋ ಎಂದು ಸ್ವಲ್ಪಕಾಲ ಭ್ರಮಿಸಿ, ಅನಂತರ ತನ್ನನ್ನು ಹಿಡಿದು ಕಳ್ಳರು ಆ ಕೋಣೆಯಲ್ಲಿ ಕೂಡಿದುದನ್ನು ನೆನಸಿಕೊಂಡು ಹಣವನ್ನೇನಾದರೂ ಅಪಹರಿಸಿದರೋ ಎಂದು ನಡುವನ್ನು ಮುಟ್ಟಿನೋಡಿಕೊಂಡನು.

"ಇವರು ಎಂತಹ ಕಳ್ಳರು? ನನ್ನ ಹಣವನ್ನೇನೂ ಮುಟ್ಟಿಲ್ಲ. ಇವರ ಅಭಿಪ್ರಾಯವೇನಿರಬಹುದು? ವಿಚಾರಿಸಿ ನೋಡೋಣ" ಎಂದು ದುರ್ಮತಿಯು ಎದ್ದು ಕದದ ಹತ್ತಿರಕ್ಕೆ ಬಂದು ಬೆಳಕಿಗೆ ಬಿಟ್ಟಿದ್ದ ಸಂದಿನಲ್ಲಿ ಇಣಕಿ ನೋಡಿದನು. ಅಲ್ಲಿದ್ದ ಕಾವಲಿನವನು ರೊಟ್ಟಿಯನ್ನು ತಿನ್ನುತ್ತ, ನೀರುಳ್ಳಿಯನ್ನು ಕಡಿಯುತ್ತ ಒಂದು ಮಡಕೆಯಿಂದ ನೀರನ್ನು ಕುಡಿಯುತ್ತಲಿದ್ದನು. ಅದನ್ನು ನೋಡಿ ದುರ್ಮತಿಯು ಅಸಹ್ಯಪಟ್ಟು ಈ ಕಚ್ಚು ಪದಾರ್ಥವನ್ನು ತಿಂದು ಹೇಗೆತಾನೇ ಬದುಕುತ್ತಾರೆ ಎಂದುಕೊಂಡು,

"ಅಪ್ಪಾ ಕಾವಲಿನವನೇ, ನನ್ನನ್ನು ಏಕೆ ಇಲ್ಲಿ ಇಟ್ಟಿರುತ್ತಾರೆ?" ಎಂದು ಕೇಳಿದನು.

"ನನಗೆ ತಿಳಿಯದು."

"ಇನ್ನಾರಿಗೆ ತಿಳಿದಿದೆ?"

"ನಮ್ಮ ಯಜಮಾನರಿಗೆ."

"ಅವನನ್ನು ಸ್ವಲ್ಪ ಕರೆಯುತ್ತೀಯಾ?"

"ಇಲ್ಲಿ ಬಿಟ್ಟು ಹೋಗುವುದಕ್ಕೆ ನನಗೆ ಅಪ್ಪಣೆಯಿಲ್ಲ. ಸರದಿಯವನು ಬಂದ ಮೇಲೆ ಬೇಕಾದರೆ ನೋಡೋಣ."

"ಅವನು ಬರುವುದು ಯಾವಾಗ?"

"ಮಧ್ಯಾಹ್ನಕ್ಕೆ."

"ಹಾಗಾದರೆ ಸರಿ" ಎಂದು ದುರ್ಮತಿಯು ಮಧ್ಯಾಹ್ನದವರೆಗೆ ಸುಮ್ಮನಿದ್ದನು. ಸರದಿಯವನು ಬಂದ ಮೇಲೆ ಮೊದಲಿದ್ದವನು ಯಜಮಾನನ ಬಳಿಗೆ ಹೋಗಿ ದುರ್ಮತಿಯು ಹೇಳಿದುದನ್ನು ತಿಳಿಸಲು ಅವನು "ಈಗ ಆಗದು ಎಂದು ಹೇಳಿಬಿಡು" ಎಂದನು.

ಮಧ್ಯಾಹ್ನವಾಯಿತು, ಇನ್ನೂ ಆಹಾರವನ್ನು ತಂದುಕೊಡಲಿಲ್ಲ ; ಯಜಮಾನನೂ ಬರಲಿಲ್ಲ. ದುರ್ಮತಿಗೆ ಹಸಿವು ಮಿತಿಮೀರಿತು. ಆ ಕಾವಲುಗಾರನು ಹೊರಟುಹೋದನು. ಪ್ರತಿರೋಧಿಯು ಪಹರೆ ಕೊಡುವುದಕ್ಕೆ ಬಂದನು. ಅವನು ಒಂದು ಗೂಡೆಯ ತುಂಬ ಬಗೆಬಗೆಯಾದ ಫಲಗಳನ್ನೂ ಭಕ್ಷ್ಯಗಳನ್ನೂ ಇಟ್ಟುಕೊಂಡು ತಿನ್ನುತ್ತಿದ್ದನು. ಇದನ್ನೆಲ್ಲಾ ಕದದ ಸಂದಿನಲ್ಲಿ ಇಣಿಕಿನೋಡುತ್ತಿದ್ದ ದುರ್ಮತಿಗೆ ಬಾಯಲ್ಲಿ ನೀರೂರಿತು. ಆಗ ಅವನು ಕಾವಲುಗಾರನನ್ನು ಕರೆದು,

"ಅಪ್ಪಾ, ನನಗೆ ತುಂಬ ಹಸಿವು ಆಗುತ್ತದೆ, ಆಹಾರವೇನೂ ಇಲ್ಲವೇ ?" ಎಂದನು.

"ಮಹಾಪ್ರಭೋ, ತಮಗೆ ಹಸಿವಾಗುತ್ತದೆಯೇ ? ಇಲ್ಲಿ ತಿಂಡಿ ಸಿಕ್ಕುವುದೇ ಕಷ್ಟ ; ಒಂದು ವೇಳೆ ಸಿಕ್ಕಿದರೂ ತುಂಬ ಬೆಲೆ ಕೊಡಬೇಕು. ಇಲ್ಲಿ ಹಾಲು ಮಾತ್ರ ಸಿಕ್ಕುತ್ತದೆ. ಅದಕ್ಕೂ ಬೆಲೆ ಬಲು ಹೆಚ್ಚು."

"ಹಾಗಾದರೆ ನನಗೆ ಒಂದು ರೊಟ್ಟಿಯನ್ನೂ ಸ್ವಲ್ಪ ನೀರನ್ನೂ ಕೊಟ್ಟರೆ ಸಾಕು."

"ಮಹಾಸ್ವಾಮಿ, ಹಾಲಿಗಿಂತ ನೀರಿಗೆ ಬೆಲೆ ಹೆಚ್ಚು."

"ನಮ್ಮೂರಿನಲ್ಲಿ ಒಂದು ರೊಟ್ಟಿಗೆ ಒಂದು ಆಣೆ ; ನೀರು ಸುಮ್ಮನೆ ಸಿಕ್ಕುತ್ತದೆ."

"ಮಹಾಸ್ವಾಮೀ, ಇಲ್ಲಿ ಒಂದು ಒಳ್ಳೆಯ ರೊಟ್ಟಿಗೆ ಒಂದು ಲಕ್ಷ ವರಹಗಳು. ಕ್ಷಾಮ ಬಂದು ನೀರೇ ಇಲ್ಲದಿದ್ದುದರಿಂದ ಒಂದು ಲೋಟ ನೀರಿಗೆ ಎರಡು ಲಕ್ಷ ವರಹಗಳಾಗುತ್ತವೆ. ಈ ಬೆಲೆಯನ್ನು ಕೊಟ್ಟರೆ ರೊಟ್ಟಿಯನ್ನೂ ನೀರನ್ನೂ ತಂದು ಕೊಡುತ್ತೇನೆ."

"ಅಯ್ಯೋ ! ಅಯ್ಯೋ ! ಇದು ಏನು ಅನ್ಯಾಯ ! ನನ್ನನ್ನು ತಿಂಡಿಯಿಲ್ಲದೆ ಕೊಲ್ಲಬೇಕೆಂದು ಮಾಡಿದ್ದೀರೋ ?"

"ಮಹಾಸ್ವಾಮೀ, ನಮಗೆ ಆ ಯೋಚನೆಯೇನೂ ಇಲ್ಲ. ತಮಗೇನಾದರೂ ಸಾಯಬೇಕೆಂಬ ಆಸೆಯಿದ್ದರೆ ಭೋಜನಮಾಡದೆ ಇರಬಹುದು."

"ನೀವು ಕೇಳುವಷ್ಟು ಹಣವನ್ನು ಎಲ್ಲಿಂದ ತರಲಿ ?"

"ಮಹಾಸ್ವಾಮೀ, ಏಕೆ ಸುಳ್ಳು ಹೇಳುತ್ತೀರಿ ? ತಮ್ಮಲ್ಲಿ ಐವತ್ತು ಲಕ್ಷ ವರಹಗಳು ಇಲ್ಲವೇ ?" ಎಂದು ಪ್ರತಿರೋಧಿಯು ಹೇಳಲು, ದುರ್ಮತಿಯು ನಡುಗಿ 'ಇನ್ನೇನು ಗತಿ ! ಆಹಾರವಿಲ್ಲದೆ ಸತ್ತರೂ ಚಿಂತೆಯಿಲ್ಲ' ಎಂದುಕೊಂಡು "ಅಪ್ಪಾ, ನನಗೇನು ಬೇಡ" ಎಂದನು.

"ಮಹಾಸ್ವಾಮೀ, ತಮ್ಮ ಚಿತ್ತ" ಎಂದು ಹೇಳಿ ಪ್ರತಿರೋಧಿಯು ತನ್ನ ಕೆಲಸವನ್ನು ನೋಡಿಕೊಳ್ಳುತ್ತಲಿದ್ದನು. ರಾತ್ರಿ ಎಂಟು ಗಂಟೆಯಾಯಿತು. ಆಹಾರವನ್ನು ತಿನ್ನಕೂಡದೆಂದಿದ್ದ ದುರ್ಮತಿಯು ಹಸಿವನ್ನು ತಡೆಯಲಾರದೆ ಕಾವಲುಗಾರನನ್ನು ನೋಡಿ,

"ಅಪ್ಪಾ, ನೀನು ಹೇಳಿದಂತೆಯೇ ಆಗಲಿ. ಅರ್ಧ ರೊಟ್ಟಿಯನ್ನೂ ಅರ್ಧ ಲೋಟ ನೀರನ್ನೂ ತಂದುಕೊಡು."

"ಮಹಾಸ್ವಾಮೀ, ಇಲ್ಲಿ ಅರ್ಧ ರೊಟ್ಟಿಗೂ ಒಂದೇ ಬೆಲೆ, ಪೂರಾರೊಟ್ಟಿಗೂ ಒಂದೇ ಬೆಲೆ. ನೀರಿಗೂ ಹಾಗೆಯೇ."

"ಏನಾದರೂ ಆಗಲಿ, ಒಂದು ರೊಟ್ಟಿಯನ್ನೂ ಅಷ್ಟು ನೀರನ್ನೂ ತಂದು ಕೊಡು ."

ಒಡನೆಯೇ ಪ್ರತಿರೋಧಿಯು ಅವುಗಳನ್ನು ತಂದಿಟ್ಟನು. ದುರ್ಮತಿಯು ತಿನ್ನಬೇಕೆಂದು ರೊಟ್ಟಿಗೆ ಕೈಚಾಚಲು, ಪ್ರತಿರೋಧಿಯು

"ಮಹಾಸ್ವಾಮೀ, ಹಣ ಕೊಟ್ಟ ಹೊರತು ಇವುಗಳನ್ನು ಮುಟ್ಟಕೂಡದು" ಎಂದನು.

ಅವುಗಳನ್ನು ನೋಡುತ್ತಲೇ ದುರ್ಮತಿಗೆ ಹಸಿವೂ ಬಾಯಾರಿಕೆಯೂ ಹೆಚ್ಚಿ 'ಹಣವು ಹೋದರೆ ಹೋಗಲಿ, ಪ್ರಾಣವೊಂದಿದ್ದರೆ ಸಾಕು' ಎಂದು ಯೋಚಿಸಿ ಎರಡು ಲಕ್ಷ ವರಹಗಳನ್ನು ಕೊಟ್ಟು ಆ ರೊಟ್ಟಿಯಲ್ಲಿ ಅರ್ಧವನ್ನು ತಿಂದು ಸ್ವಲ್ಪ ನೀರನ್ನು ಕುಡಿದು ಮಿಕ್ಕುದನ್ನು ಮಾರನೆಯ ದಿನಕ್ಕೆ ಇಟ್ಟುಕೊಂಡನು.

ಮೂರನೆಯ ದಿನ ಎಂದಿನಂತೆ ಅವನಿಗೆ ಹಸಿವಾಗಿ ಕದದ ಕಿಂಡಿಯಲ್ಲಿ ಇಣಿಕಿ ನೋಡಲು ಯಾವನೋ ಹೊಸ ಕಾವಲುಗಾರನೊಬ್ಬನು ಇದ್ದನು. ಹೊಸಬನೊಂದಿಗೆ ವ್ಯಾಪಾರಮಾಡುವುದಕ್ಕಿಂತ ಹಳಬನೊಂದಿಗೇ ಮಾಡುವುದು ಲೇಸೆಂದು ತಿಳಿದು, ಕಾವಲುಗಾರನನ್ನು ಕುರಿತು "ಮೊನ್ನೆ ರಾತ್ರಿ ಇದ್ದ ಕಾವಲುಗಾರನನ್ನು ಬರಹೇಳುತ್ತೀಯಾ ?" ಎಂದನು. ಆಗವನು ಪ್ರತಿರೋಧಿಯನ್ನು ಕರೆಯಲು ಅವನು ಬಂದು "ಮಹಾಸ್ವಾಮೀ, ಏನಪ್ಪಣೆ ?" ಎಂದು ಕೇಳಿದನು.

"ನನಗೆ ಮೊನ್ನೆಯ ಹಾಗೆಯೇ ಆಹಾರ ತಂದು ಕೊಡು."

"ಮಹಾಸ್ವಾಮೀ, ಇಂದು ಅವುಗಳಿಗೆ ಬೆಲೆಯು ಒಂದಕ್ಕೆರಡಾಗಿ ಹೋಗಿವೆ."

"ಅಯ್ಯೋ ಪಾಪಿಗಳಾ, ನನ್ನನ್ನು ಸುಲಿಯಬೇಕೆಂದಿದ್ದೀರೋ ?"

"ಮಹಾಸ್ವಾಮೀ, ನಮ್ಮ ಯಜಮಾನರವರ ಅಭಿಪ್ರಾಯ ಹಾಗಿದ್ದರೂ ಇರಬಹುದು."

"ಯಜಮಾನ ! ಅವನಾರು ?"

"ತಮ್ಮ ಸ್ವಾರಿ ಇಲ್ಲಿಗೆ ಚಿತ್ತಯಿಸಿದಾಗ ಆ ಮಂಟಪದಲ್ಲಿ ಕುಳಿತು ಓದುತ್ತಿದ್ದರಲ್ಲಾ, ಅವರೇ ನಮ್ಮ ಯಜಮಾನರು."

"ಅವನನ್ನು ಕರೆ" ಎಂದು ದುರ್ಮತಿಯು ಹೇಳಲು, ಕೂಡಲೇ ಲುಂಗಿ ಒಂಪನು ಇದಿರಿಗೆ ಬಂದು ನಿಂತು "ಮಹಾಪ್ರಭೋ ಏನಪ್ಪಣೆ ?" ಎಂದನು.

"ನೀನೇಯೋ ಈ ಕಳ್ಳರಿಗೆಲ್ಲ ಯಜಮಾನ ?"

"ಅಹುದು ಮಹಾಸ್ವಾಮೀ."

"ಆಹಾರ ಕೊಡದೆ ನನ್ನನ್ನು ಹೀಗೇಕೆ ಕೊಲ್ಲುತ್ತೀರಿ ?"

"ಮಹಾಸ್ವಾಮೀ, ನಾವು ನಿಮ್ಮನ್ನು ಕೊಲ್ಲುವವರಾಗಿದ್ದರೆ ತಾವು ಇಲ್ಲಿಗೆ ಬಿಜಯಮಾಡಿದ ದಿನವೇ ಆ ಕೆಲಸವನ್ನು ಮಾಡುತ್ತಲಿದ್ದೆವು."

"ಹಾಗಾದರೆ ನನ್ನ ಬಿಡುಗಡೆಗಾಗಿ ಏನು ಕೊಡಬೇಕು ?"

"ತಮ್ಮಲ್ಲಿ ಈಗ ಇರುವ ಹಣ."

"ಆ ಹಣವನ್ನು ನೀವು ತೆಗೆದುಕೊಳ್ಳುವುದಾದರೆ ನನ್ನನ್ನು ಮೊದಲು ಕೊಂದುಬಿಡಿ."

"ನಿಮ್ಮನ್ನು ಕೊಲ್ಲುವುದಕ್ಕೆ ನಮಗೆ ಅಪ್ಪಣೆಯಿಲ್ಲ."

"ಯಾರ ಅಪ್ಪಣೆ ?"

"ನಮ್ಮ ಯಜಮಾನರ ಅಪ್ಪಣೆ."

"ನೀನೇ ಯಜಮಾನನೆಂದು ಈಗತಾನೇ ಹೇಳಿದೆಯಲ್ಲಾ !"

"ಇವರಿಗೆಲ್ಲಾ ನಾನು ಯಜಮಾನ ; ನನಗೊಬ್ಬರು ಯಜಮಾನರಿದ್ದಾರೆ."

"ನಿನ್ನ ಯಜಮಾನನು ಈ ರೀತಿ ಮಾಡಹೇಳಿದ್ದಾನೆಯೋ ?"

"ಹೂಂ."

"ಹತ್ತು ಲಕ್ಷ ವರಹಗಳನ್ನು ತೆಗೆದುಕೊಂಡು ನನ್ನನ್ನು ಬಿಟ್ಟುಬಿಡುತ್ತೀಯಾ ?"

"ಆಗುವುದಿಲ್ಲ."

"ಇಪ್ಪತ್ತು ಲಕ್ಷ ?"

"ಸಾಲದು"

"ಮೂವತ್ತು ?"

"ಊಹುಂ."

"ನಲವತ್ತು ?"

"ಪ್ರಯೋಜನವಿಲ್ಲ."

"ಹಾಗಾದರೆ ಎಲ್ಲವನ್ನೂ ತೆಗೆದುಕೊಂಡು ನನ್ನನ್ನು ಕೊಂದುಬಿಡು."

"ಮಹಾಸ್ವಾಮೀ, ನಡೆಯದ ಮಾತನ್ನಾಡಿ ಏನು ಪ್ರಯೋಜನ ? ನಿಮಗೆ ವೃಥಾ ಆಯಾಸವಾಗುತ್ತದೆ. ಆಯಾಸ ಹೆಚ್ಚಿದಷ್ಟೂ ಹಸಿವೂ ದಾಹವೂ ಹೆಚ್ಚು. ಇವು ಹೆಚ್ಚಿದಷ್ಟೂ ವೆಚ್ಚವು ಹೆಚ್ಚುವುದು."

"ನಾನು ಹಣ ಕೊಡದಿದ್ದರೋ ?"

"ಹಸಿವನ್ನೂ ದಾಹವನ್ನು ಅನುಭವಿಸಬೇಕು" ಎಂದು ಲುಂಗಿ ಒಂಪನು ಹೇಳಲು, ದುರ್ಮತಿಯ ಮುಖವು ಬಿಳ್ಚೇರಿ,

"ನನ್ನನ್ನು ಕೊಲ್ಲಲು ಅಪ್ಪಣೆಯಿಲ್ಲ ಎಂದು ಹೇಳಿದೆಯಲ್ಲ ?"

"ಅಹುದು."

"ಆಹಾರವಿಲ್ಲದೆ ಸತ್ತರೆ ಕೊಂದಹಾಗಲ್ಲವೋ ?"

"ಮಹಾಸ್ವಾಮೀ, ನಾವಾಗಿ ಕೊಲ್ಲುವುದಕ್ಕೂ ನೀವಾಗಿ ಸಾಯುವುದಕ್ಕೂ ವ್ಯತ್ಯಾಸವಿಲ್ಲವೇ ?"

"ನೀವೆಲ್ಲರೂ ಪರಮಚಂಡಾಲರು. ಕೈಯಲ್ಲಿರುವ ಹಣವನ್ನೆಲ್ಲಾ ಕೊಟ್ಟುಬಿಟ್ಟು ಸಂಕಟಪಟ್ಟು ಸಾಯುವುದಕ್ಕಿಂತ ಹಣವನ್ನು ಕೈಯಲ್ಲಿಟ್ಟುಕೊಂಡು ಸಂತೋಷದಿಂದ ಸಾಯುವುದು ಮೇಲು. ಇನ್ನು ನಾನು ನಿಮಗೆ ಒಂದು ಕಾಸನ್ನೂ ಕೊಡೆನು. ಆಹಾರವಿಲ್ಲದಿದ್ದರೂ ಚಿಂತೆಯಿಲ್ಲ" ಎಂದು ದುರ್ಮತಿಯು ನಿರ್ಧಾರ ಮಾಡಿಕೊಂಡು ಹುಲ್ಲಿನ ಮೇಲೆ ಮಲಗಿದನು.

"ಮಹಾಸ್ವಾಮಿ, ತಮ್ಮ ಚಿತ್ತ" ಎಂದು ಹೇಳಿ ಒಂಪನು ಬಾಗಿಲ ಬೀಗ ಹಾಕಿಕೊಂಡು ಹೋದನು.

ದುರ್ಮತಿಗೆ ಹಸಿವಿನಿಂದ ನಿದ್ದೆಯೇ ಬರಲಿಲ್ಲ. "ಈ ಜನರು ಯಾರು ? ಇವರು ಕಳ್ಳರೇ ಆಗಿದ್ದರೆ ನನ್ನಲ್ಲಿರುವ ಹಣವನ್ನು ಕಸುಕೊಂಡು ಬಿಟ್ಟುಬಿಡುತ್ತಲಿದ್ದರು ; ಇಲ್ಲವೇ ಕೊಂದುಹಾಕುತ್ತಲಿದ್ದರು. ಕಳ್ಳರೆಲ್ಲರೂ ಇವನೇ ಯಜಮಾನನೆಂದು ಹೇಳಿದರೂ, ಇವನು ತನಗೊಬ್ಬ ಯಜಮಾನನಿರುತ್ತಾನೆಂದು ಹೇಳಿದ. ಅವನಾರಿರುಹುದು? ಏನಾದರೂ ಆಗಲಿ,

ಹಣವಿಲ್ಲದೆ ಬದುಕಿರುವುದಕ್ಕಿಂತ ಹಣವಿದ್ದು ಸಾಯುವುದು ಮೇಲು, ಸಾವು ಹೇಗಿರಬಹುದು ? ಭಯಂಕರವಾಗಿಯೇ ಇರಬೇಕು ; ಇಲ್ಲದಿದ್ದರೆ ಜನರು ಸಾವೆಂದರೆ ಅಷ್ಟು ಹೆದರುತ್ತಿರಲಿಲ್ಲ" ಎಂದು ತನ್ನ ಜನ್ಮದಲ್ಲಿ ಇದುವರೆಗೂ ತೋರದ ಯೋಚನೆಯನ್ನು ಮಾಡತೊಡಗಿ, ಕೊನೆಗೆ "ಏನಾದರೂ ಆಗಲಿ, ಹಣವನ್ನು ಕೈಬಿಡೆನು" ಎಂದು ನಿರ್ಧಾರ ಮಾಡಿಕೊಂಡು ಅವನು ಎರಡು ದಿನಗಳವರೆಗೆ ಅನ್ನಪಾನಗಳಿಲ್ಲದೆ ಬಿದ್ದುಕೊಂಡಿದ್ದನು.

ಈ ಲೋಕದಲ್ಲಿ ಇಬ್ಬರೀಗ ಹಸಿವನ್ನು ತಡೆಯಬಲ್ಲವರು. ಶ್ವಾಸಧಾರಣೆಯನ್ನು ಮಾಡುವ ಯೋಗಿಯೊಬ್ಬ, ಅಪರಿಮಿತ ದ್ರವ್ಯವಿದ್ದರೂ ಹೊಟ್ಟೆಗೆ ತಿನ್ನದ ಪರಮಲೋಭಿಯೊಬ್ಬ. ನಮ್ಮ ದುರ್ಮತಿಯು ಯೋಗಿಯೂ ಅಲ್ಲ, ಪರಮ ಲೋಭಿಯೂ ಅಲ್ಲ ; ಆದುರಿಂದ ಮಾರನೆಯ ದಿನ ಅವನು "ಪ್ರಾಣಹೋದ ಮೇಲೆ ದುಡ್ಡಿದ್ದು ಏನು ಪ್ರಯೋಜನ ?" ಎಂದು ತನಗೆ ಬೇಕಾದುದನ್ನೆಲ್ಲಾ ತರಿಸಿಕೊಂಡು ತಿಂದನು. ಹೀಗೆ ಮಾಡುವುದರಲ್ಲಿ ಅವನ ಕೈಯಲ್ಲಿದ್ದ ಹಣವೆಲ್ಲ ವೆಚ್ಚವಾಗಿ ಇಪ್ಪತ್ತೈದುಸಾವಿರ ವರಹಗಳು ಮಟ್ಟಿಗೆ ಉಳಿದುವು. ಆಗ ಅವನು ಒಂಪನನ್ನು ಕರೆಸಿ "ನನ್ನಲ್ಲಿರುವ ಈ ಹಣದೊಂದಿಗೆ ಬಿಟ್ಟುಬಿಟ್ಟರೆ ಬದುಕಿಕೊಳ್ಳುತ್ತೇನೆ" ಎನ್ನಲು, ಅವನು "ಮಹಾಸ್ವಾಮೀ, ಅದೆಲ್ಲ ಆಗದ ಮಾತು" ಎಂದನು.

"ಈ ಹಣವು ಇಲ್ಲದೆ ನಾನು ಎಲ್ಲಿಗೆ ಹೋಗಲಿ ? ಏನು ಮಾಡಲಿ ? ಹೇಗಿದ್ದರೂ ಇವರು ನನ್ನನ್ನು ಜೀವಸಹಿತ ಬಿಡುವ ಹಾಗೆ ತೋರುವುದಿಲ್ಲ. ಬಿಟ್ಟರೂ ಸರಿಯೆ, ಬಿಡದಿದ್ದರೂ ಸರಿಯೇ, ಈ ಹಣದಲ್ಲಿ ಒಂದು ಕಾಸನ್ನೂ ವೆಚ್ಚಮಾಡುವುದಿಲ್ಲ. ದೇವರು ಮಾಡಿಸಿದಂತಾಗಲಿ" ಎಂದು ದುರ್ಮತಿಯು ಹುಟ್ಟಿದ ಇಷ್ಟು ದಿವಸಕ್ಕೆ ದೇವರನ್ನು ಸ್ಮರಿಸಿದನು. ಹೀಗೆ ಎರಡು ದಿನಗಳು ಕಳೆದುವು. ಮೂರನೆಯ ದಿನ ಬೆಳಿಗ್ಗೆ ದುರ್ಮತಿಗೆ ಮೈಮೇಲೆ ಸ್ಮರಣೆಯು ಅರ್ಧಪಾಲು ತಪ್ಪಿ ಯಾವನೋ ಒಬ್ಬ ವೃದ್ಧನು ತನ್ನಂತೆಯೇ ಆಹಾರವಿಲ್ಲದೆ ಸಂಕಟಪಡುತ್ತ ಸತ್ತಹಾಗೆ ಕಂಡನು. ಆಗ ಬೆಚ್ಚಿ ತೆವಳಿಕೊಂಡು ಬಾಗಿಲ ಬಳಿಗೆ ಬಂದು "ಅಯ್ಯಾ ಪ್ರತಿರೋಧಿ, ನಾನೂ ನಿಮ್ಮಂತೆಯೇ ಮನುಷ್ಯನು; ನೀವು ನನ್ನನ್ನು ಹೀಗೆ ಆಹಾರವಿಲ್ಲದೆ ಕೊಲ್ಲುವುದು ನ್ಯಾಯವೇ ? ನನಗೆ ಪ್ರಾಣ ಹೋಗುವಂತಿದೆ, ನಿಮ್ಮ ಯಜಮಾನನನ್ನು ಜಾಗ್ರತೆಯಾಗಿ ಕರೆದುಕೊಂಡು ಬಾ" ಎಂದು ದೀನಸ್ವರದಿಂದ ಬೇಡಿಕೊಳ್ಳಲು ಯಜಮಾನನು ಬಂದು ಇದಿರಿಗೆ ನಿಂತು "ಮಹಾಸ್ವಾಮೀ, ಏನಪ್ಪಣೆ ?" ಎಂದನು.

"ಅಪ್ಪಾ, ನಾನು ಇನ್ನು ಇಲ್ಲಿದ್ದರೆ ಸಾಯುವುದೇ ನಿಶ್ಚಯ, ನಿನಗೆ ನನ್ನ ಮೇಲೆ ಸ್ವಲ್ಪವೂ ಕರುಣೆಯಿಲ್ಲವೇ ? ನನ್ನ ಸಂಕಟವನ್ನು ಯಾರುತಾನೇ ಸಹಿಸಬಲ್ಲರು ?"

"ಸ್ವಾಮೀ, ಹಾಗೆ ಹೇಳುವುದು ಕಷ್ಟ. ಹೊಟ್ಟೆಗಿಲ್ಲದೆ ಇದಕ್ಕಿಂತ ಹೆಚ್ಚಾಗಿ ಅನುಭವಿಸಿದವರು ಲೋಕದಲ್ಲಿ ಎಷ್ಟೋ ಜನರಿಲ್ಲವೇ ?"

"ಹಾಗೆ ಯಾರನ್ನೂ ನಾನು ಕಾಣೆನು."

"ಹೊಟ್ಟೆಗಿಲ್ಲದೆ ಸತ್ತವರನ್ನು ಕೇಳಿಲ್ಲವೇ ?"

ಈ ಮಾತನ್ನು ಕೇಳುತ್ತಲೆ ದುರ್ಮತಿಗೆ ತಾನು ಕೊಂಚ ಮುಂಚೆ ಸ್ವಪ್ನಾವಸ್ಥೆಯಲ್ಲಿ ಕಂಡಿದ್ದ ಮುದುಕನು ಜ್ಞಾಪಕಕ್ಕೆ ಬಂದು "ಅಹುದು ಅಹುದು" ಎಂದು ತನ್ನ ಎದೆಯನ್ನು ಹೊಡೆದುಕೊಂಡನು.

"ಈಗಲಾದರೂ ಇತರರ ವಿಷಯದಲ್ಲಿ ಕರುಣೆಯೂ ಪಶ್ಚಾತ್ತಾಪವೂ ಉಂಟಾಗುವುವೋ ?"

"ಪಶ್ಚಾತ್ತಾಪ ! ಏತಕ್ಕೆ ಪಶ್ಚಾತ್ತಾಪ ?"

"ನಿನ್ನ ದುಷ್ಕೃತ್ಯಗಳಿಗಾಗಿ" ಎಂದು ಹೇಳುತ್ತ ಒಂಪನ ಹಿಂದೆ ಮರೆಯಾಗಿ ನಿಂತಿದ್ದವನೊಬ್ಬನು ದುರ್ಮತಿಯ ಇದಿರಿಗೆ ಬಂದು ನಿಂತನು.

"ರಾಜಾ ಮಲಯಸಿಂಹ !" ಎಂದುಕೊಂಡು ದುರ್ಮತಿಯು ಬೆದರಿ ಬೆಂಡಾದನು.

"ನಾನು ರಾಜಾ ಮಲಯಸಿಂಹನಲ್ಲ."

"ಹಾಗಾದರೆ ನೀನಾರು ?"

"ನೀನು ಯಾರನ್ನು ಅಸೂಯೆಯಿಂದಲೂ ದುರಾಸೆಯಿಂದಲೂ ಪಾತಾಳಕ್ಕೆ ತುಳಿದು ಅವನ ಅಧಿಕಾರವನ್ನು ಅಪಹರಿಸಿದೆಯೋ, ಮದುವೆಯಾಗುವ ವೇಳೆಯಲ್ಲಿ ಯಾರನ್ನು ಮೋಸದಿಂದ ಹದಿನಾಲ್ಕು ವರ್ಷಗಳು ಸೆರೆಯಲ್ಲಿರುವಂತೆ ಮಾಡಿದೆಯೋ, ಯಾರ ತಂದೆಯನ್ನು ಆಹಾರವಿಲ್ಲದೆಯೂ ದಿಕ್ಕಿಲ್ಲದೆಯೂ ಸಂಕಟಪಡಿಸಿ ಸಾಯಿಸಿದೆಯೋ ಆ ಧರ್ಮದೇವನೇ ನಾನು; ಈಗ ನಿನಗಾದ ಶಿಕ್ಷೆಯು ಸಾಕು."

ದುರ್ಮತಿಯು "ಹಾಗೆಯೇ ? ಹಾಗೆಯೇ ?" ಎನ್ನುತ್ತ ಜ್ಞಾನತಪ್ಪಿ ಬಿದ್ದುಕೊಂಡನು.

ಆಗ ರಾಜನು ಅವನಿಗೆ ಉಪಚಾರವನ್ನು ಮಾಡುವಂತೆ ಒಂಪನಿಗೆ ಹೇಳಿ, ಪ್ರಜ್ಞೆ ಬಂದ ಮೇಲೆ "ದುರ್ಮತಿ, ನೀನೇ ಪುಣ್ಯವಂತ ; ನಿನ್ನ ಜತೆಯರಿಬ್ಬರಲ್ಲಿ ಒಬ್ಬನು ಪ್ರಾಣ ಬಿಟ್ಟನು, ಮತ್ತೊಬ್ಬನಿಗೆ ಹುಚ್ಚು ಹಿಡಿಯಿತು. ಈಗ ನಿನ್ನಲ್ಲಿರುವ ಹಣವನ್ನು ನೀನೇ ಇಟ್ಟುಕೋ, ನಿನಗೆ ಪ್ರಾಣಭಯವಿಲ್ಲ. ನೀನು ಅಪಹರಿಸಿದ್ದ ಧರ್ಮದ ನಿಧಿಯನ್ನು ಅವರವರಿಗೆ ಸಲ್ಲಿಸಿದ್ದೇನೆ ಇನ್ನು ಮೇಲೆ ಎಲ್ಲಿಗಾದರೂ ಹೋಗು" ಎಂದು ಹೇಳಿ, ಒಂಪನನ್ನು ಕುರಿತು, ಈತನಿಗೆ ಈ ದಿವಸ ಸುಖಭೋಜನವನ್ನು ಮಾಡಿಸಿ ನಾಳೆ ಬೆಳಿಗ್ಗೆ ಇವನನ್ನು ಕಳುಹಿಸಿಕೊಡು" ಎಂದು ಹೊರಟುಹೋದನು.

ಅವನ ಅಪ್ಪಣೆಯಂತೆ ಆ ದಿನ ಒಂಪನೇ ಇದಿರಿಗಿದ್ದು ದುರ್ಮತಿಗೆ ಮೃಷ್ಟಾನ್ನ ಭೋಜನವನ್ನು ಮಾಡಿಸಿ, ಮಾರನೆಯ ದಿನ ಬೆಳಗಿನ ಜಾವದಲ್ಲಿ ಅವನನ್ನು ಕಳುಹಿಸಿಕೊಟ್ಟನು. ಬೆಳಗಾದ ಮೇಲೆ ದುರ್ಮತಿಯು ದಾರಿಯಲ್ಲಿದ್ದ ಹಳ್ಳದಲ್ಲಿ ಇಳಿದು ಮುಖವನ್ನು ತೊಳೆದುಕೊಳ್ಳುವಾಗ, ತಲೆಯೆಲ್ಲಾ ಬೆಳ್ಳಗಾಗಿಹೋಗಿರುವುದನ್ನು ನೋಡಿಕೊಂಡು ಭ್ರಾಂತನಾದನು.

## ೭೪
# ಮಾಘ ಶುದ್ಧ ಪಂಚಮಿ

ಸಂಜೆಯ ಆರು ಗಂಟೆಯ ಸಮಯ. ಪಳಿಕುವಣ್ಣದ ಬೆಳಕಿನಲ್ಲಿ ಶರತ್ಕಾಲದ ಅಸ್ತಸೂರ್ಯನ ಕಿರಣಗಳು ಹೊಂಬಣ್ಣವಾಗಿ ಸಾಗರದ ನೀರಿನಲ್ಲಿ ಪ್ರತಿಫಲಿಸುತ್ತಿದ್ದುವು. ಮಧ್ಯಾಹ್ನದ ಬಿಸಿಲ ಬೇಗೆಯಿಂದ ತಪಿಸಿದವಳಾಗಿ ಪ್ರಕೃತಿದೇವಿಯು ನಿದ್ದೆ ಮಾಡುತ್ತಿದ್ದು ಹೊತ್ತು ಮುಳುಗುವ ವೇಳೆಯಲ್ಲಿ ಎಚ್ಚರಗೊಂಡು ನಿಟ್ಟುಸಿರನ್ನು ಬಿಡುತ್ತಿರುವಳೋ ಎಂಬಂತೆ ಸಂಧ್ಯಾಕಾಲದಲ್ಲಿ ಮಂದಮಾರುತವು ಸುಳಿಯುತ್ತಿದ್ದಿತು. ಸಾಗರದ ಕಟುಗಂಧವನ್ನೂ ಓಷಧಿಗಳ ಸುಗಂಧವನ್ನೂ ಕೊಂಡು ಸುಖಸ್ಪರ್ಶಿಯಾದ ಪಶ್ಚಿಮವಾಯುವು ಸಮುದ್ರತೀರದಲ್ಲಿ ಬೀಸುತ್ತಿದ್ದಿತು. ಸೆಕೆಯು ಕೊಂಚ ಕೊಂಚವಾಗಿ ಕಡಿಮೆಯಾಯಿತು.

ಸಂಜೆಯ ಮಂಜಿನಲ್ಲಿ ಆ ಮಹಾಸಾಗರದ ನಡುವೆ ಲಘುವೆನಿಸಿದ ರಮಣೀಯವಾದ ಕ್ರೀಡಾನೌಕವು, ಸರೋವರದಲ್ಲಿ ಪಕ್ಷಗಳನ್ನು ಬಿಚ್ಚಿಕೊಂಡು ನೀರಿನ ಮೇಲೆ ಹರಿದಾಡುವ ರಾಜಹಂಸನ ಚೆಂದದಿಂದ ಒಪ್ಪುತ್ತಿದ್ದಿತು. ಧ್ರುತಗತಿಯಿಂದ ಹೋಗುತ್ತಿದ್ದ ಅದರ ಹಾದಿಯು ನೀರಿನಲ್ಲಿ ಬಿಳಿಯ ಗೆರೆಯಂತೆ ಕಾಣಿಸುತ್ತಿದ್ದಿತು.

ಪಡುಗಡೆಯಲ್ಲಿ ಸೂರ್ಯನು ಕೊಂಚಕೊಂಚವಾಗಿ ಮರೆಯಾಗುತ್ತ ಬಂದನು. ವಾರುಣಿಯು ತನ್ನ ನೀಲಾಂಬರದಲ್ಲಿ ಪ್ರಾಣಪ್ರಿಯನನ್ನು ಬೈತಿಟ್ಟಳು. ಅನುರಾಗಿಯಾದ ಆ ತೇಜೋಮೂರ್ತಿಯು ಅವಳಿಗೆ ತಿಳಿಯದಂತೆ ತನ್ನ ಕರಗಳಿಂದ ಜಲದೇವತೆಯರನ್ನು ಮುಟ್ಟುತ್ತಿರುವನೋ ಎಂಬಂತೆ ಕೆಂಪು ಬಣ್ಣದ ಸೂರ್ಯಾಂಶುಗಳು ಒಂದೊಂದು ಅಲೆಯ ತಲೆಯ ಮೇಲೆಯೂ ನೆಲೆನಿಂದು ಜ್ವಾಜ್ವಲ್ಯಮಾನವಾಗಿ ಮಾಡುತ್ತಿದ್ದುವು. ಮೊಗದ ಮೇಲೆ ಜೋಲಾಡುವ ಕುರುಳನ್ನು ಓಸರಿಸುವಷ್ಟು ಗಾಳಿಯೂ ಇಲ್ಲದಿದ್ದರೂ ಆ ಕ್ರೀಡಾ ನೌಕವು ವೇಗವಾಗಿ ಮುಂದುವರಿಯುತ್ತಿದ್ದಿತು. ಉದ್ದವಾಗಿಯೂ ಶ್ಯಾಮಲವರ್ಣ ವಾಗಿಯೂ ಇದ್ದ ತರುಣನೊಬ್ಬನು ಅದರ ಮುಖಭಾಗದಲ್ಲಿ ನಿಂತಿದ್ದನು. ಅವನು ನಾವಿಕರನ್ನು ನೋಡಿ,

"ಈ ಜಲ ಮಧ್ಯದಲ್ಲಿ ಕಾಣುತ್ತಿರುವ ಕರಿಯ ಗುಡ್ಡವೇ ಮಲಯದ್ವೀಪವೋ ?" ಎಂದು ಕೇಳಿದನು.

"ಅಹುದು ಮಹಾಪ್ರಭೋ, ಅದೇ ಮಲಯದ್ವೀಪ, ನಾವು ಅದನ್ನು ಸೇರಿದ್ದೇವೆ" ಎಂದು ಅಂಬಿಗರೊಡೆಯನು ಉತ್ತರವನ್ನು ಕೊಟ್ಟನು.

"ನಾವು ಅದನ್ನು ಸೇರಿದೆವೇ ?" ಎಂದು ಅನಿರ್ವಚನೀಯವಾದ ಶೋಕದಿಂದ ಆ ಪಥಿಕನು ಹೇಳುತ್ತ "ಸರಿ, ಸರಿ, ಅದೀಗ ನಮ್ಮ ಆಶ್ರಯ" ಎಂದು ಮೆಲ್ಲಗೆ ಹೇಳಿಕೊಂಡು ಚಿಂತೆಯಿಂದ ಅನ್ಯಮನಸ್ಕನಾದನು. ಅವನ ಚಿಂತೆಯ ಭಾರದಿಂದ ಕಣ್ಣುಗಳಲ್ಲಿ ನೀರು

ತುಂಬಲಿಲ್ಲ. ಮೊಗದಲ್ಲಿ ದುಗುಡದೊಡಗೂಡಿದ ನಗೆಯೊಂದು ಮೂಡಿತು. ಒಂದೆರಡು ನಿಮಿಷಗಳೊಳಗೆ ಆ ದ್ವೀಪದಲ್ಲಿ ದೊಡ್ಡದಾದ ಬೆಳಕು ಕಾಣಬಂದು ಒಡನೆಯೇ ಕಣ್ಮರೆಯಾಯಿತು. ತುಪಾಕಿಗಳ ಸದ್ದು ನೌಕೆಯವರಿಗೆ ಕೇಳಿಸಿತು.

ಆಗ ಅಂಬಿಗರ ಯಜಮಾನನು ತರುಣನನ್ನು ನೋಡಿ,

"ಮಹಾಸ್ವಾಮೀ, ಅದು ದ್ವೀಪದವರು ಮಾಡಿದ ಸಂಜ್ಞೆ. ಅದಕ್ಕೆ ಉತ್ತರರೂಪವಾಗಿ ತಾವು ಸಂಜ್ಞೆಯನ್ನು ಮಾಡುವಿರಾ ?"

"ಯಾವ ಸಂಜ್ಞೆ?" ಎಂದು ತರುಣನು ಕೇಳಿದನು.

ಅದಕ್ಕೆ ನಾವಿಕರ ಯಜಮಾನನು "ಜೀಯಾ, ಇತ್ತ ಪರಾಂಬರಿಸಬೇಕು" ಎಂದು ದ್ವೀಪದಿಂದ ಹೊಗೆಯೇಳುತ್ತಿದ್ದ ಸ್ಥಾನವನ್ನು ತೋರಿಸಿದನು. ಪಥಿಕನು ಕನಸು ಕಂಡವರೇಳುವಂತೆ ಎಚ್ಚತ್ತು "ಓಹೋ, ಸರಿ, ಸರಿ, ಗೊತ್ತಾಯಿತು, ಅದನ್ನು ತಾ" ಎಂದನು,

ಅಂಬಿಗರೊಡೆಯನು ಅವನ ಕೈಗೆ ಸಿದ್ಧವಾಗಿದ್ದ ತುಪಾಕಿಯೊಂದನ್ನು ಕೊಟ್ಟನು. ಅದನ್ನು ಅವನು ಸಾವಧಾನದಿಂದ ಎತ್ತಿಹಿಡಿದು 'ಢಂ' ಎಂದು ಆಕಾಶಕ್ಕೆ ಹಾರಿಸಿದನು. ಒಡನೆಯೇ ನೌಕೆಯ ಪಟುಗಳನ್ನಿಳುಹಿ ಕೊಲ್ಲಿಗೆ ನೂರು ಗಜ ದೂರದಲ್ಲಿ ಲಂಗರನ್ನು ಹಾಕಿದರು.

ನೌಕೆಯ ಪಕ್ಕದಲ್ಲಿ ದೋಣಿಯೊಂದು ನೀರಿಗೆ ಇಳಿಯಿತು. ಅದರಲ್ಲಿ ನಾಲ್ವರು ಅಂಬಿಗರೂ ಒಬ್ಬ ಮೇಸ್ತ್ರಿಯೂ ಇದ್ದರು. ಪಥಿಕನು ದೋಣಿಗೆ ಇಳಿದನು. ಅವನು ಕುಳ್ಳಿರಲಿಕ್ಕಾಗಿ ಮುಖಭಾಗದಲ್ಲಿ ನೀಲವರ್ಣದ ಕಂಬಳಿಯನ್ನು ಹಾಸಿದ್ದರು. ಯುವಕನು ಅದರ ಮೇಲೆ ಕುಳ್ಳಿರದೆ ಕೈ ಕಟ್ಟಿಕೊಂಡು ನಿಂತಿದ್ದನು. ನೆನೆದ ಪಕ್ಷಗಳನ್ನು ಆರಿಸಿಕೊಳ್ಳುವುದಕ್ಕಾಗಿ ಬಿಚ್ಚಿಕೊಂಡಿರುವ ಹಕ್ಕಿಗಳ ರೆಕ್ಕೆಗಳಂತೆ ಅಂಬಿಗರ ಕೈಯಲ್ಲಿ ನೀರಿನಿಂದ ಅರೆಯೆತ್ತಿ ಹಿಡಿದ ಹುಟ್ಟುಗಳು ಕಾಣುತ್ತಿದ್ದುವು. ಅವರು ಅಪ್ಪಣೆಯನ್ನು ನಿರೀಕ್ಷಿಸುತ್ತಿದ್ದರು.

"ಹುಂ, ಹೊರಡಲಿ" ಎಂದು ತರುಣನು ಹೇಳಿದನು. ಅಂಬಿಗರ ಹುಟ್ಟುಗಳೆಂಟೂ ಏಕಕಾಲದಲ್ಲಿ ಸದ್ದಾಗದಂತೆ ನೀರನ್ನು ಬಗೆದುವು. ದೋಣಿಯು ಆ ರಭಸಕ್ಕೆ ವೇಗವಾಗಿ ಹೊರಟು ಸ್ವಾಭಾವಿಕವಾಗಿ ಖಾತದಲ್ಲಿ ತನ್ನ ನಿಲ್ದಾಣವನ್ನು ಬಂದು ಸೇರಿತು.

"ಮಹಾಸ್ವಾಮಿ, ತಾವು ನಮ್ಮ ಹೆಗಲ ಮೇಲೆ ಕುಳಿತುಕೊಳ್ಳಿರಿ. ನಿಮ್ಮನ್ನು ದ್ವೀಪದಲ್ಲಿ ಬಿಡುತ್ತೇವೆ" ಎಂದು ಅಂಬಿಗರು ಹೇಳಿದರು. ತರುಣನು ಉದಾಸೀನಭಾವದಿಂದ ಕೈಯನ್ನು ಅಲುಗಿಸುತ್ತ ನೀರಿನಲ್ಲಿ ಇಳಿದನು. ಅವನ ನಡುಮಟ್ಟಕ್ಕೆ ನೀರು ಬಂದು ಬಟ್ಟೆಯೆಲ್ಲವೂ ತೋದುಹೋಯಿತು. ಅವನು ಮುಂದೆ ಹೊರಟನು, ಹಿಂದೆ ಅಂಬಿಗರು ಹೋದರು. ನೂರುಹೆಜ್ಜೆಗಳ ದೂರ ನಡೆದ ತರುವಾಯ ಅವರಿಗೆ ಗಟ್ಟಿ ನೆಲವು ಸಿಕ್ಕಿತು. ಯುವಕನು ನೀರನ್ನು ಕೊಡವಿಕೊಳ್ಳುತ್ತ ಇನ್ನೂ ಕತ್ತಲಾಗಿದ್ದುದರಿಂದ ಹಾದಿ ತಿಳಿಯದೆ ಯಾರಾದರೂ

ಬರುತ್ತಿದ್ದಾರೆಯೋ ಎಂದು ಸುತ್ತಲೂ ನೋಡಿದನು. ಆಗ ಯಾರೋ ಅವನ ಹೆಗಲ ಮೇಲೆ ಕೈಯಿಟ್ಟು "ಜಯವೀರ, ಹೇಳಿದ ವೇಳೆಗೆ ತಪ್ಪದೆ ಬಂದುಬಿಟ್ಟೆಯಾ ?" ಎಂದು ಕೇಳಿದರು. ಅವನ ಮೈಯು ನಡುಗಿತು. ಅವನು ಹಿಂತಿರುಗಿ ನೋಡಿ,

"ಓಹೋ, ರಾಜಾ ಮಲಯಸಿಂಹರು" ಎಂದು ಸಂತಸಗೊಂಡು ಅವನಿಗೆ ವಂದಿಸಿದನು.

"ಅಯ್ಯ, ಕುಮಾರ, ನೀನು ನೀರಿನಲ್ಲಿ ನೆನೆದು ಮುದ್ದೆಯಾಗಿ ಹೋಗಿದ್ದೀಯೆ, ಬೇರೆ ಬಟ್ಟೆಯನ್ನು ಉಟ್ಟುಕೊಳ್ಳುತ್ತೀಯಂತೆ. ನಿನಗೆ ನಾನು ಒಂದು ಬಿಡಾರವನ್ನು ಮಾಡಿದ್ದೇನೆ, ಅಲ್ಲಿಗೆ ಬಾ, ನಿನ್ನ ಚಳಿಯೂ ದಣಿವೂ ಪರಿಹಾರವಾಗುತ್ತದೆ."

ತನ್ನನ್ನು ಅಲ್ಲಿಗೆ ಕರೆದುತಂದಿದ್ದ ಅಂಬಿಗರು ಒಂದು ಮಾತನ್ನೂ ಆಡದೆ ಕೂಲಿಯನ್ನೂ ಕೇಳದೆ ಹೊರಟುಹೋದುದನ್ನು ಕಂಡು ಜಯವೀರನು ಅತ್ಯಾಶ್ಚರ್ಯಭರಿತನಾದನು. ಅದನ್ನು ನೋಡಿ ಮಲಯಸಿಂಹನು,

"ಅಯ್ಯ ಕುಮಾರ, ಅಂಬಿಗರು ಎತ್ತ ಹೋದರೆಂದು ನೋಡುತ್ತಿದ್ದೀಯಾ ?"

"ಅಹುದು, ಅವರು ಕೂಲಿಯನ್ನು ತೆಗೆದುಕೊಳ್ಳದೆಯೇ ಹೊರಟು ಹೋದರು."

"ಚಿಂತೆಯಿಲ್ಲ, ಈ ದ್ವೀಪಕ್ಕೆ ಬರತಕ್ಕವರಿಂದ ಯಾವ ತೆರದ ಬಾಡಿಗೆ ಬಂಕಗಳನ್ನೂ ತೆಗೆಯಕೂಡದೆಂದು ನಾನು ನೌಕಾಧೀಶ್ವರರೊಡನೆ ಒಪ್ಪಂದ ಮಾಡಿಕೊಂಡಿದ್ದೇನೆ" ಎಂದು ಮಲಯಸಿಂಹನು ನಸುನಕ್ಕನು. ಜಯವೀರನು ಆಶ್ಚರ್ಯದಿಂದ ಅವನನ್ನು ನೋಡುತ್ತ

"ರಾಜರೇ, ನೀವು ಇಲ್ಲಿರುವ ಹಾಗೆ ಅಮರಪುರದಲ್ಲಿ ಇರಲಿಲ್ಲ."

"ಅದು ಹೇಗೆ?"

"ಇಲ್ಲಿ ನೀವು ನಗುತ್ತಲಿದ್ದೀರಿ."

ರಾಜನ ಮುಖವು ಬಾಡಿತು. ಅವನು ಜಯವೀರನನ್ನು ನೋಡಿ,

"ಅಯ್ಯಾ, ಕುಮಾರ, ನೀನು ನನ್ನನ್ನು ಎಚ್ಚರಿಸಿದುದು ಒಳ್ಳೆಯದಾಯಿತು. ಮತ್ತೊಮ್ಮೆ ನಿನ್ನನ್ನು ನೋಡಿ ನನಗೆ ತುಂಬ ಸಂತೋಷವಾಯಿತು. ಆ ವೇಳೆಯಲ್ಲಿ ಸುಖವು ಕ್ಷಣಿಕವೆಂಬುದು ನೆನಪಿಗೆ ಬರಲಿಲ್ಲ."

ಆಗ ಜಯವೀರನು ಮಲಯಸಿಂಹನ ಕೈಗಳನ್ನು ಹಿಡಿದುಕೊಂಡು,

"ರಾಜರೇ, ನೀವು ಉಲ್ಲಾಸದಿಂದ ನಗುತ್ತಲಿರಿ. ಸಂಕಟಪಟ್ಟವರಿಗೆ ಮುಂದೆ ಶುಭವಾದೀತೆಂಬ ನಂಬುಗೆಯನ್ನು ನಿಮ್ಮ ಔದಾಸೀನ್ಯದಿಂದ ಪ್ರಕಟಪಡಿಸಿರಿ. ನೀವು ಪರಮ ದಯಾಶಾಲಿಗಳು, ಬಲು ಒಳ್ಳೆಯವರು, ಧರ್ಮಶೀಲರು. ನನಗೆ ಧೈರ್ಯವುಂಟುಮಾಡಲೋಸುಗವೇ ನೀವು ಹಸನ್ಮುಖಿಗಳಾಗಿರುವಂತಿದೆ."

"ಇಲ್ಲ, ಇಲ್ಲ, ಕುಮಾರ ಜಯವೀರ, ನಾನು ನಿಜವಾಗಿಯೂ ಸಂತಸದಿಂದ ಇದ್ದೆನು."

"ಹಾಗಿದ್ದರೆ ನನ್ನ ನೆನಪು ನಿಮಗೆ ಬರುವುದೇ ಇಲ್ಲ. ಅದು ಒಳ್ಳೆಯದೇ ಆಯಿತು."

"ಅದು ಹೇಗೆ?"

"ಸಾಯುವುದಕ್ಕೆ ಬಂದಿರುವ ನಾನು ಇಗೋ ತಮಗೆ ನಮಿಸುತ್ತೇನೆ."

"ಹಾಗಾದರೆ ನಿನ್ನ ಮನಸ್ಸಿಗೆ ಇನ್ನೂ ನೆಮ್ಮದಿಯಾಗಿಲ್ಲವೋ ?" ಎಂದು ಮಲಯಸಿಂಹನು ವಿಸ್ಮಯದಿಂದ ಕೇಳಿದನು.

ಅದನ್ನು ಕೇಳಿ ಜಯವೀರನು ನಿಂದಾವ್ಯಂಜಕವಾದ ದೃಷ್ಟಿಯಿಂದ ಮಲಯಸಿಂಹನನ್ನು ನೋಡುತ್ತ

"ನಾನು ನೆಮ್ಮದಿಯಾಗಿರುವುದಕ್ಕೆ ಆಗುವುದೆಂದು ನೀವು ತಿಳಿದು ಕೊಂಡಿದ್ದೀರಾ ?"

"ಅಯ್ಯ ಜಯವೀರ, ನಾನು ಹೇಳಿದ ಮಾತುಗಳು ನಿನಗೆ ಗೊತ್ತಾದುವೇ? ಬುಡಬುಡಿಕೆಯಂತೆ ಬರಿಯ ಸದ್ದಾಗುವ ಮಾತುಗಳನ್ನಾಡುವ ನಾಡಾಡಿಯೆಂದು ನೀನು ನನ್ನನ್ನು ತಿಳಿದೆಯಾ ? ಮನಸ್ಸಿಗೆ ನೆಮ್ಮದಿಯಾಯಿತೋ ಎಂದು ನಾನು ಕೇಳಿದರೆ ನನ್ನ ಸಂಗಡ ಯಾವುದನ್ನೂ ಮುಚ್ಚುಮರೆ ಮಾಡಕೂಡದು, ತಿಳಿಯಿತೋ ? ಅಯ್ಯಾ, ಈಗ ನಾವು ನಿನ್ನ ಅಂತರಂಗವನ್ನು ಪರಿಶೀಲನೆ ಮಾಡಿ ನೋಡೋಣ ; ಗಾಯಗೊಂಡ ಹೆಬ್ಬುಲಿಯು ಬೆಚ್ಚುವಂತೆ ನಿನ್ನನ್ನು ಮೊತ್ತಮೊದಲು ಬೆಚ್ಚಿಸಿದ ಆ ದುಃಖೋದ್ರೇಕವು ಇನ್ನೂ ನಿನ್ನ ಮನದಲ್ಲಿ ಇದೆಯೇ ? ಸತ್ತ ಹೊರತು ಉಪಶಮನವಾಗದೆಂದಿದ್ದ ಆ ವಿಷಾದವು ಇನ್ನೂ ನಿನ್ನನ್ನು ಬಾಧಿಸುತ್ತಿದೆಯೇ ? ಬಾಳಿ ಬದುಕುವವರನ್ನು ಸಾಯಲೆಳಸುವಂತೆ ಮಾಡುವ ಆ ಶೋಕಭಾರವು ಇನ್ನೂ ನಿನ್ನನ್ನು ಕಾಡುತ್ತಿದೆಯೇ ? ನಿರೀಕ್ಷಿಸುತ್ತಿದ್ದ ಶುಭಫಲವು ಕೈಸೇರದೆ ತಳುವಿತೆಂದು ಜಿಹಾಸೆಗೊಂಡಿದ್ದೀಯಾ ? ಬುದ್ಧಿನಾಶದಿಂದ ಪ್ರಲಾಪಿಸುತಿದ್ದೀಯಾ ? ಅಯ್ಯ ಕುಮಾರ, ನಿನಗೆ ಅಳುವುದಕ್ಕಾಗದೆ, ನನ್ನ ಕೊರಗಿ ಬಾಡಿದ ಹೃದಯವು ನಾಶವಾಗಿ, ನೀನು ಸಮಸ್ತ ಭಾರವನ್ನೂ ಭಗವಂತನಲ್ಲಿ ಇಟ್ಟಿರುವೆಯಾದರೆ, ಆಗ ನಿನ್ನ ದುಃಖವು ಶಮನವಾಯಿತೆಂದೂ ತಿಳಿದುಕೋ; ಇನ್ನು ವಿಲಪಿಸಬೇಡ" ಎಂದು ಹೇಳಿದನು.

ಆ ಮಾತಿಗೆ ಜಯವೀರನು ಮೆಲ್ಲಮೆಲ್ಲನೆ "ರಾಜರೇ, ಲಾಲಿಸಬೇಕು. ನಾನು ಮರ್ತ್ಯಲೋಕದಲ್ಲಿದ್ದರೂ ನನ್ನ ಭಾವನೆಗಳೆಲ್ಲವೂ ಭಗವಂತನಲ್ಲಿ ನೆಲಸಿರುತ್ತವೆ. ನಾನು ಮಿತ್ರರ ಸಾನ್ನಿಧ್ಯದಲ್ಲಿ ದೇಹತ್ಯಾಗ ಮಾಡಬೇಕೆಂದು ಬಂದಿದ್ದೇನೆ. ನನ್ನ ವಿಶ್ವಾಸಕ್ಕೆ ಪಾತ್ರರಾದವರು ಕೆಲವರುಂಟು. ನನ್ನ ತಂಗಿ ರತ್ನಾಂಬೆಯಲ್ಲಿ ನನಗೆ ತುಂಬ ಮಮತೆ ; ಅವಳ ಗಂಡ ಮನೋಮೋಹನನೆಂದರೆ ತುಂಬ ವಿಶ್ವಾಸ ; ಸಂತೋಷದಿಂದ ಸಾಯಬೇಕಾದರೆ ಮನಸ್ಸು ಬಲು ಗಟ್ಟಿಯಾಗಿರಬೇಕು. ನನ್ನನ್ನು ನೋಡಿದರೆ ತಂಗಿಯು ಕಣ್ಣೀರು ಕರೆದು ಮೂರ್ಛಿತಳಾಗುತ್ತಾಳೆ. ಮನೋಮನೋಹನನು ನನ್ನ ಕೈಯಿಂದ ಶಸ್ತ್ರವನ್ನು ಕಿತ್ತುಕೊಂಡು

ತನ್ನ ಅಬ್ಬರದಿಂದ ಮನೆಯವರೆಲ್ಲರೂ ಬೆಬ್ಬರಬೀಳುವಂತೆ ಮಾಡುತ್ತಾನೆ. ನೀವಾದರೆ ಅತಿಮಾನುಷರು. ನಾನು ಸಂತೋಷವಾಗಿ ಸಾಯುವಂತೆ ಮಾಡಲಾರಿರಾ ?" ಎನ್ನಲು ಮಲಯಸಿಂಹನು,

"ಜಯವೀರ, ನಿನ್ನ ದುಃಖಗಳನ್ನು ಹೇಳಿಕೊಂಡು ಹಂಬಲಿಸುವಷ್ಟು ಹೇಡಿಯಾಗಿ ಹೋದೆಯಾ ?"

"ರಾಜರೇ, ಇಲ್ಲ, ಇಲ್ಲ. ಈಗ ನಾನು ಶಾಂತನಾಗಿದ್ದೇನೆ. ನನ್ನ ನಾಡಿಯು ಮಂದವಾಗಿಯೂ ಇಲ್ಲ ; ವೇಗವಾಗಿಯೂ ಇಲ್ಲ ; ಒಂದೇ ರೀತಿಯಾಗಿ ನಡೆಯುತ್ತದೆ. ನಾನು ಸ್ವಸ್ಥನಾದನೆಂದು ತೋರುತ್ತಿದೆ. ಶುಭೋದರ್ಕವನ್ನು ನಿರೀಕ್ಷಿಸುತ್ತಿರಬೇಕೆಂದು ನೀವು ಕಟ್ಟು ಮಾಡಿದಿರಿ ; ಸ್ವಾಮೀ, ಮಂದಭಾಗ್ಯರಾದ ಉಪದೇಶಕರು, ನೀವೇನು ಮಾಡಿದಿರಿ ಬಲ್ಲಿರಾ ? ನಾನು ಒಂದು ತಿಂಗಳವರೆಗೆ ನಿರೀಕ್ಷಿಸಿದೆನು. ಯಾತನೆಯನ್ನು ಅನುಭವಿಸಿದೆನು. ಮಾನವನಿಂದೇನಾದೀತು ? ನಾನು ನಿರೀಕ್ಷಣೆ ಮಾಡಿದೆನು. ಯಾವುದನ್ನು ? ಅತ್ಯದ್ಭುತವಾದ ಮಾಯೆಯನ್ನೋ ಇಂದ್ರಜಾಲವನ್ನೋ ಹೇಳಲಾರೆನು. ಅದನ್ನೇ ನೀವು ಶುಭೋದರ್ಕವೆಂದು ಕರೆಯುತ್ತಿದ್ದೀರಿ. ನಿಮ್ಮೊಂದಿಗೆ ಮಾತನಾಡುತ್ತಿದ್ದ ಈ ಹದಿನೈದು ನಿಮಿಷಗಳಲ್ಲಿ ನೀವು ಉದ್ದೇಶವಿಲ್ಲದೆ ನನ್ನ ಮನವನ್ನು ನೋಯಿಸಿಬಿಟ್ಟಿರಿ. ನೀವು ಹೇಳಿದ ಒಂದೊಂದು ನುಡಿಯಿಂದಲೂ ನನಗೆ ಇನ್ನು ಸುಖಪ್ರಾಪ್ತಿಯಿಲ್ಲವೆಂಬ ಅಂಶವು ದೃಢಪಡುತ್ತದೆ. ಅಹಹ ! ರಾಜರೇ, ನಾನು ಮೃತ್ಯುವಿನ ತೋಳಿನಲ್ಲಿ ಸುಖವಾಗಿ ನಿಡುನಿದ್ದೆಯನ್ನು ಮಾಡುತ್ತೇನೆ" ಎಂದು ಶೋಕೋದ್ರೇಕದಿಂದ ಹೇಳಲು, ಮಲಯಸಿಂಹನ ಮೈಯು ಗುಡಿಗಟ್ಟಿತು. ಜಯವೀರನು ಮರಳಿ,

"ಸ್ವಾಮೀ, ಹಿತಕಾರಿಗಳೇ, ಮಾಘ ಶುದ್ಧ ಪಂಚಮಿಯವರೆಗೆ ಕಾದಿರಬೇಕೆಂದು ಅಪ್ಪಣೆ ಮಾಡಿದ್ದಿರಿ. ಈ ದಿನವೇ ಮಾಘ ಶುದ್ಧ ಪಂಚಮಿ. ಈಗ ಒಂಬತ್ತು ಗಂಟೆಯಾಗಿದೆ. ಇನ್ನು ಮೂರು ಗಂಟೆಗಳ ಹೊತ್ತಿಗೆ ಪಂಚಮಿಯು ಮುಗಿಯುತ್ತದೆ. ಅದುವರೆಗೂ ನಾನು ಬದುಕಿರಬೇಕು."

"ಹಾಗೆಯೇ ಆಗಲಿ, ಬಾ" ಎಂದು ಮಲಯಸಿಂಹನು ಕರೆದನು. ಜಯವೀರನು ಅವನ ಹಿಂದೆ ಮೆಲ್ಲಮೆಲ್ಲಗೆ ಹೋದನು. ಇಬ್ಬರೂ ಗುಹೆಯನ್ನು ಹೊಕ್ಕರು. ತಾನು ರತ್ನಗಂಬಳಿಯ ಮೇಲೆ ನಡೆಯುತ್ತಿರುವಂತೆ ಜಯವೀರನಿಗೆ ತೋರಿತು. ಯಾರೋ ಬಾಗಿಲನ್ನು ತೆರೆದಂತಾಯಿತು. ಅಲ್ಲೆಲ್ಲಾ ದಿವ್ಯವಾದ ಪರಿಮಳವು ತುಂಬಿಹೋಯಿತು. ಪ್ರಕಾಶವಾಗಿ ಬೆಳಕಿದ್ದಿತು. ಇದನ್ನೆಲ್ಲಾ ಕಂಡು ಎಲ್ಲಿ ತನಗೆ ಧೈರ್ಯವು ಕೆಡುವುದೋ ಎಂದು ಅಂಜಿಕೊಂಡು ಜಯವೀರನು ಮುಂದಕ್ಕೆ ಅಡಿಯಿಡದೆ ನಿಂತು ಬಿಟ್ಟನು. ಆಗ ಮಲಯಸಿಂಹನು ಅವನನ್ನು ಮೆಲ್ಲಮೆಲ್ಲನೆ ಒಳಗೆ ಕರೆದುಕೊಂಡು ಹೋಗಿ,

"ಅಯ್ಯಾ ಕುಮಾರ, ನಮಗೆ ಉಳಿದಿರುವ ಮೂರು ಗಂಟೆಯ ಆಯುರ್ದಾಯವನ್ನು ಏಕೆ ಸುಖವಾಗಿ ನೂಕಬಾರದು ?"

"ತಮ್ಮ ಇಷ್ಟದಂತೆಯೇ ಆಗಬಹುದು. ಮರಣವು ಮರಣವೇ, ಮರಣವೆಂದರೆ ನಿವೃತ್ತಿ ; ಎಂದರೆ ಜೀವನದಿಂದ ಹೊರಗು. ಆದಕಾರಣ ದುಃಖದಿಂದಲೂ ಹೊರಗು" ಎನ್ನುತ್ತ ಕುಳಿತುಕೊಂಡನು.

ಮಲಯಸಿಂಹನೂ ಅವನ ಇದಿರಿಗೆ ಕುಳಿತನು. ಇಬ್ಬರೂ ಆ ದಿವ್ಯವಾದ ಭೋಜನಶಾಲೆಯಲ್ಲಿ ಕುಳಿತಿದ್ದರು. ಅಲ್ಲಿದ್ದ ಶಿಲಾನಿರ್ಮಿತ ಪುತ್ರಿಕೆಗಳು ತಲೆಯ ಮೇಲೆ ಫಲಪುಷ್ಪ ಪೂರಿತವಾದ ಪುಟಿಕೆಗಳನ್ನು ಧರಿಸಿದ್ದುವು. ಜಯವೀರನು ನಿರವಧಾನವಾಗಿ ಸುತ್ತಲೂ ನೋಡಿದನು, ಅವನಿಗೆ ಯಾವ ವಿಶೇಷವೂ ಕಾಣಬರಲಿಲ್ಲ.

ಅವನು ಮಲಯಸಿಂಹನನ್ನು ನೋಡಿ,

"ರಾಜರೇ, ನಾವು ಈಗ ಗಂಡಸರಂತೆ ಮಾತನಾಡೋಣ."

"ಆಗಬಹುದು."

"ರಾಜರೇ, ನೀವು ಮಾನುಷೀಜ್ಞಾನದ ಸಾರವನ್ನರಿತವರು. ಈ ಪಾರ್ಥಿವ ಪ್ರಪಂಚಕ್ಕಿಂತ ಉತ್ಕೃಷ್ಟವಾದ ಬೇರೊಂದು ಪ್ರಪಂಚದಿಂದ ಇಲ್ಲಿಗೆ ಬಂದಂತಿದೆ."

"ಅಹುದು, ನೀನು ಹೇಳಿದುದು ಸಟೆಯಲ್ಲ. ನಾನು ದುಃಖ ಪ್ರಪಂಚದಿಂದ ಬಂದಿದ್ದೇನೆ."

"ನೀವು ಹೇಳಿದುದನ್ನೆಲ್ಲ ನಾನು ವಿಚಾರ ಮಾಡದೆ ನಂಬಿಕೊಂಡನು. ನಿರೀಕ್ಷಿಸುತ್ತಿರು ಎಂದಿರಿ ; ನಿರೀಕ್ಷಿಸಿದೆನು. ಸಾಯಬೇಡವೆಂದಿರಿ ; ಬದುಕಿದ್ದೇನೆ. ನೀವು ಮರಣವನ್ನೂ ಕಂಡಿರಬಹುದೆಂದು ಭಾವಿಸಿ 'ಸಾಯುವುದು ಕಷ್ಟವೋ' ಎಂದು ನಿಮ್ಮನ್ನು ಕೇಳುವುದರಲ್ಲಿದ್ದೆನು."

"ಅಹುದು, ಕಷ್ಟ. ಇನ್ನೂ ಬದುಕಬೇಕೆಂದಿರುವ ದೇಹವನ್ನು ಬಲಾತ್ಕಾರದಿಂದ ಭಂಗಪಡಿಸಿದರೂ ಹರಿತವಾದ ಕತ್ತಿಯಿಂದ ಮೈಯನ್ನು ಕುತ್ತಿಕೊಂಡರೂ ಮೃದುತಾಡನ ಮಂತ್ರದಿಂದಲೇ ಅವ್ಯವಸ್ಥೆಯಾಗುವ ಮೇದಸ್ಸಿನೊಳಗೆ ತುಪಾಕದ ಗುಂಡನ್ನು ಹುಗಿಸಿಕೊಂಡರೂ ಮರಣವು ಕಷ್ಟವೇ ಸರಿ. ನಿರ್ವೃತಿಲಾಭಕ್ಕಾಗಿ ಮಹಾರ್ಘವಾದ ಜೀವವನ್ನು ವಿನಿಮಯ ಮಾಡುವುದರಿಂದ ಪಶ್ಚಾತ್ತಾಪವೂ ತಲೆದೋರುತ್ತದೆ."

"ಸುಖವೂ ಕಷ್ಟವೂ ಜೀವದ್ದಶೆಯಲ್ಲಿರುವಂತೆಯೇ ಮರಣದಶೆಯಲ್ಲಿಯೂ ಇರುತ್ತವೆ. ಅದನ್ನೀಗ ನಾವು ಅರಿಯಬೇಕು."

"ನಿನ್ನ ಮಾತು ಸರಿ, 'ಯದ್ಭಾವಂ ತದ್ಭವತಿ.' ನಮ್ಮನ್ನು ಸೋಗಿಲೊಳಿಟ್ಟು ತೂಗಿ ಜೋಗುಳವಾಡುವ ದಾದಿಯೆಂದಾಗಲಿ, ದೇಹದಿಂದ ಜೀವವನ್ನು ಬಲಾತ್ಕರಿಸಿ ಹಿರಿದುಕೊಂಡು ಹೋಗುವ ಕರಾಳಿಯೆಂದಾಗಲಿ ಮೃತ್ಯುವನ್ನು ನಾವು ಭಾವಿಸಬಹುದು.

ಮುಂದೆ ಯುಗಾಂತರಗಳಲ್ಲಿ ಮನುಷ್ಯರಿಗೆ ವಿವೇಕವು ಅತ್ಯಧಿಕವಾಗುತ್ತ ಬಂದು ಮರಣತತ್ವಜ್ಞಾನವು ತಲೆದೋರಿದರೆ ಆಗ ಅದು ಪ್ರಿಯೆಯ ವಕ್ಷೋರಂಗದಲ್ಲಿ ಪ್ರಿಯನು ನಿದ್ರಿಸಿ ಸುಖಪಡುವಂತೆಯೇ ಸುಖವಾಗಿ ಪರಿಣಮಿಸುತ್ತದೆ."

"ನೀವು ಸಾಯಬೇಕಾದರೆ ಈ ರೀತಿಯಾದ ಮರಣವನ್ನೇ ಬಯಸುತ್ತೀರಾ ?"

"ಅಹುದು."

"ರಾಜರೇ, ಕಡಲ ನಡುಗಡೆ ಜನಸಂಚಾರವಿಲ್ಲದ ಈ ಭೂಗರ್ಭದ ಅರಮನೆಗೆ ನೀವು ನನ್ನನ್ನು ಕರೆಸಿದುದಕ್ಕೆ ಕಾರಣವು ತಿಳಿಯಿತು. ನನ್ನಲ್ಲಿ ನಿಮಗೆ ಬಹು ಪ್ರೀತಿಯಿರುವುದರಿಂದಲ್ಲವೇ ? ಸಾಯುವಾಗ ವಿಮಲೆಯ ಹೆಸರನ್ನು ಹೇಳಿಕೊಂಡು ಲೇಶವಾದ ವೇದನೆಯನ್ನೂ ಅರಿಯದೆ ನಾನು ಸುಖವಾಗಿ ದೇಹತ್ಯಾಗವನ್ನು ಮಾಡಬೇಕೆಂಬ ಉದ್ದೇಶದಿಂದಲ್ಲವೇ ?"

"ಜಯವೀರ, ನಿನ್ನ ಊಹೆಯು ಸರಿಯಾದುದು. ಅದು ನಿಜ. ನನ್ನ ಉದ್ದೇಶವೂ ಅದೇ."

"ನಾಳೆಯಿಂದ ನನಗೆ ದುಃಖಾನುಭವವಿಲ್ಲವೆಂಬ ಭಾವನೆಯಿಂದ ಮನಸ್ಸಿಗೆ ಆನಂದವಾಗುತ್ತದೆ."

"ನೀನು ಯಾರಿಗಾಗಿಯೂ ವ್ಯಸನಪಡುವುದಿಲ್ಲವೋ ?"

"ಇಲ್ಲ."

"ನನಗಾಗಿಯೂ ?"

ಆ ಮಾತನ್ನೂ ಕೇಳಿ ಜಯವೀರನ ನಿರ್ಮಲವಾದ ಕಣ್ಣುಗಳಿಗೆ ಮಂಜು ಮುಸುಕಿದಂತಾಯಿತು. ಅವನ ನೇತ್ರಗಳು ಅಪೂರ್ವವಾದ ತೇಜಸ್ಸನ್ನು ಪಡೆದುವು. ಅವುಗಳಿಂದ ಒಂದೆರಡು ಅಶ್ರುಬಿಂದುಗಳು ಅವನ ಕೆನ್ನೆಯ ಮೇಲೆ ಉರುಳಿದುವು.

"ಜಯವೀರ, ನೀನು ಯಾವುದಕ್ಕೋ ಹಂಬಲಿಸುತ್ತಿದ್ದರೂ ಸಾಯಬೇಕೆಂದು ಬಯಸುತ್ತಿದ್ದೀಯಾ ?"

"ರಾಜರೇ, ನಿಮ್ಮನ್ನು ಬೇಡಿಕೊಳ್ಳುತ್ತಿದ್ದೇನೆ ; ನನ್ನ ಯಾತನೆಯನ್ನು ಪುಟಗೊಳಿಸಬೇಡಿರಿ" ಜಯವೀರನು ಮೆಲ್ಲಮೆಲ್ಲನೆ ಹೇಳಿದನು.

ಇವನು ವಶವಾಗುವುದರಲ್ಲಿದ್ದಾನೆಂದು ತರ್ಕಿಸಿ ಮಲಯಸಿಂಹನು 'ಈತನಿಗೆ ನಾನು ಸುಖವುಂಟುಮಾಡಬೇಕೆಂದು ಬಯಸುತ್ತಿದ್ದೇನೆ. ಇದುವರೆಗೆ ನಾನು ಮಾಡಿದ ಕೃತ್ಯಗಳಿಗೆಲ್ಲಾ ಈ ಪ್ರತಿದಾನವು ನಿಷ್ಕೃತಿರೂಪವಾಗಿರಬೇಕೆಂದು ನನಗೆ ಆಸೆ. ಈತನು ಸುಖಪಡಲಿಕ್ಕೆ ತಕ್ಕಷ್ಟು ಸಂಕಟಪಡದವನಾಗಿದ್ದು, ನಾನು ಮೋಸಹೋಗಿದ್ದರೆ ನನ್ನ ಗತಿಯೇನಾಗಬೇಕು ? ಹಾ ದೈವವೇ' ಎಂದುಕೊಂಡು,

"ಜಯವೀರ, ನೀನೇನೋ ಕಡುನೊಂದವನು, ನಿಜ. ಅದಕ್ಕಾಗಿ ಪ್ರಾಣವನ್ನು ಬಿಡುವ ಆಸೆಯುಂಟೇ ?" ಎಂದು ಕೇಳಿದನು.

ಆ ಮಾತಿಗೆ ಜಯವೀರನು ದುಃಖವ್ಯಂಜಕವಾದ ನಗೆಯನ್ನು ಬೀರುತ್ತ "'ರಾಜರೇ, ಪ್ರಮಾಣವಾಗಿ ಹೇಳುತ್ತೇನೆ, ಕೇಳಿರಿ, ಈ ಜೀವವು ನನ್ನದಲ್ಲ."

"ಈ ಪ್ರಪಂಚದಲ್ಲಿ ನನಗೆ ನಂಟರೊಬ್ಬರೂ ಇಲ್ಲ ; ಅದನ್ನು ನೀನು ಬಲ್ಲೆ. ನಾನು ನಿನ್ನನ್ನೇ ನನ್ನ ಮಗನೆಂದು ಭಾವಿಸಿಕೊಂಡಿದ್ದೇನೆ. ಮಗನು ಬದುಕಿರುವುದಕ್ಕೋಸ್ಕರವಾಗಿ ನನ್ನ ಸಕಲೈಶ್ವರ್ಯವನ್ನೂ ಪ್ರಾಣವನ್ನೂ ತ್ಯಾಗ ಮಾಡಿಬಿಡುತ್ತೇನೆ."

"ಇದೇನು, ಹೀಗೆನ್ನುತ್ತೀರಿ ?"

"ಅತುಳೈಶ್ವರ್ಯದಿಂದ ಲಭಿಸುವ ಸುಖವನ್ನರಿಯದವನಾಗಿ ನೀನು ಪ್ರಾಣ ಬಿಡಬೇಕೆಂದಿದ್ದೀಯೇ. ಅಯ್ಯಾ ಕುಮಾರ, ನನಗೆ ನೂರಾರು ಕೋಟಿ ದ್ರವ್ಯವಿದೆ. ಅದನ್ನೆಲ್ಲಾ ನಿನಗೆ ಕೊಟ್ಟುಬಿಡುತ್ತೇನೆ. ಸಂಪತ್ತಿನಿಂದ ಲಭಿಸದ ಅಭೀಷ್ಟವೂ ಪ್ರಪಂಚದಲ್ಲಿ ಉಂಟೇ ? ನೀನು ಕೀರ್ತಿಕಾಮನೋ ? ಅದನ್ನು ಪಡೆಯುವ ಸಕಲ ಮಾರ್ಗಗಳೂ ನಿನ್ನ ಕರಗತವಾಗುತ್ತವೆ. ಬೇಕಾದರೆ ನೀನು ಈ ಪ್ರಪಂಚವನ್ನು ತಲೆಕೆಳಗೆ ಮಾಡಿಬಿಡಬಹುದು. ಧರ್ಮವನ್ನು ವಿಪರ್ಯಾಸ ಮಾಡಬಹುದು. ಉನ್ಮತ್ತಾಶಯಕ್ಕೆ ವಶನಾಗಿ ಅತ್ಯಂತ ಪಾಪಿಯೆನ್ನಿಸಿಕೊಳ್ಳಲೂ ಬಹುದು. ಆದರೆ ಬದುಕಿರಬಹುದು."

"ರಾಜರೇ, ಮಾತು ಕೊಟ್ಟಿದ್ದೀರಿ. ಇನ್ನು ಮೂವತ್ತು ನಿಮಿಷಗಳಿವೆ."

"ಜಯವೀರ, ಏನಿದು ? ನನ್ನ ಮನೆಯಲ್ಲಿ ನನ್ನ ಕಣ್ಣೆದುರಿಗೇ ಈ ಕೆಲಸವನ್ನು ಮಾಡುತ್ತೀಯಾ ?"

"ರಾಜರೇ, ಹಾಗಾದರೆ ನಾನು ಮತ್ತೆ ಎಲ್ಲಿಗಾದರೂ ಹೋಗುತ್ತೇನೆ ; ಅಪ್ಪಣೆ ಕೊಡಿರಿ. ಇಲ್ಲದಿದ್ದರೆ ನೀವು ಸ್ವಾರ್ಥತೆಯಿಂದ ನನ್ನಲ್ಲಿ ವಾತ್ಸಲ್ಯವನ್ನು ತೋರಿಸುತ್ತಿದ್ದೀರೆಂದು ತಿಳಿಯುತ್ತೇನೆ."

ಜಯವೀರನ ನುಡಿಯನ್ನು ಕೇಳಿ ಮಲಯಸಿಂಹನ ಮುಖವು ವಿಕಸಿತವಾಯಿತು. ಅವನು ಜಯವೀರನನ್ನು ನೋಡಿ,

"ಕುಮಾರ ಜಯವೀರ, ನಿನಗೆ ಸಾಯಲೇಬೇಕೆಂದು ತೋರಿಹೋಗಿದೆ. ಅದನ್ನು ಯಾವ ರೀತಿಯಿಂದಲೂ ತಿದ್ದುವುದಕ್ಕಾಗುವುದಿಲ್ಲ. ನೀನೇನೋ ಬಹುವಾಗಿ ದುಃಖಿತನಾಗಿದ್ದೀಯೇ. ದೈವಿಕ ವ್ಯಾಪಾರದಿಂದಲೇ ನಿನ್ನ ದುಃಖವು ಶಮನವಾಗಬೇಕು. ಅಪ್ಪ, ಕುಳ್ಳಿರು, ನಿರೀಕ್ಷಿಸು."

ಜಯವೀರನು ಕುಳಿತನು. ರಾಜನು ಎದ್ದು ತನ್ನ ಬಂಗಾರದ ಸರಪಣಿಯಲ್ಲಿದ್ದ ಬೀಗದೆಸಳಿನಿಂದ ಒಂದು ಪೆಟ್ಟಿಗೆಯನ್ನು ತೆರೆದು ಒಂದು ಬೆಳ್ಳಿಯ ಭರಣಿಯನ್ನು ತೆಗೆದು ಮೇಜಿನ ಮೇಲಿಟ್ಟನು. ಅದಕ್ಕೆ ಸುಂದರವಾಗಿ ನಕಾಸನ್ನು ಮಾಡಿದ್ದಿತು. ಅದರ ನಾಲ್ಕು ಮೂಲೆಯಲ್ಲಿಯೂ ಅಂದವಾದ ಗಂಧರ್ವಪ್ರತಿಮೆಗಳು ತಲೆ ತಗ್ಗಿಸಿಕೊಂಡು ನಿಂತಿರುವಂತೆ ಖಚಿತವಾಗಿದ್ದವು. ಅದರೊಳಗಣಿಂದ ದಿವ್ಯವಾದ ಸುವರ್ಣಮಯವಾದ ಪೆಟ್ಟಿಗೆಯನ್ನು ಈಚೆಗೆ ತೆಗೆದಿಟ್ಟು ಗುಪ್ತವಾಗಿದ್ದ ಕೀಲನ್ನು ಅಮುಕಿದನು. ಪೆಟ್ಟಿಗೆಯ ಮುಚ್ಚಳವು

ತೆರೆದುಹೋಯಿತು. ಒಳಗೆ ಜಿಡ್ಡಾದ ಯಾವುದೋ ಒಂದು ಪದಾರ್ಥವಿದ್ದಿತು. ಪೆಟ್ಟಿಗೆಗೆ ಕೆತ್ತಿದ್ದ ಇಂದ್ರನೀಲಮಾಣಿಕ್ಯ ವಜ್ರಗಳ ಬೆಳಕಿನಿಂದ ಆ ಪದಾರ್ಥದ ಬಣ್ಣವಿಂತಹುದೆಂದು ಗೊತ್ತಾಗುತ್ತಿರಲಿಲ್ಲ. ಮಲಯಸಿಂಹನು ಚಿನ್ನದಿಂದ ಲೇಪ್ಪಮಾಡಿದ್ದ ಚಮಚವನ್ನು ತೆಗೆದುಕೊಂಡು ಆ ಪದಾರ್ಥವನ್ನು ಕೊಂಚಮಟ್ಟಿಗೆ ತೆಗೆದು ಕೊಂಚ ಹೊತ್ತು ಜಯವೀರನನ್ನು ಎವೆಯಿಕ್ಕದೆ ನೋಡುತ್ತಿದ್ದನು. ಚಮಚದೊಳಗಿದ್ದ ಆ ಸ್ನಿಗ್ಧವಸ್ತುವು ಎಳಗರುಕೆಯ ಬಣ್ಣವಾಗಿದ್ದಿತು.

ತರುವಾಯ ರಾಜನು ಅದನ್ನು ಜಯವೀರನಿಗೆ ಕೊಟ್ಟು "ಅಯ್ಯಾ ಕುಮಾರ, ನೀನು ಇದನ್ನೇ ಕೇಳಿದ್ದೆ. ನಾನೂ ಇದನ್ನೇ ಕೊಡುತ್ತೇನೆಂದು ಹೇಳಿದ್ದೆನು" ಎಂದು ಹೇಳಿ ಇನ್ನೊಂದು ಚಮಚದಿಂದ ಆ ಪದಾರ್ಥವನ್ನು ಮತ್ತಷ್ಟು ತೆಗೆದಿಟ್ಟನು. ಆಗ ಜಯವೀರನು,

"ನಾನು ನಿಮಗೆ ತುಂಬ ಕೃತಜ್ಞನಾಗಿದ್ದೇನೆ, ರಾಜರೆ" ಎಂದು ಹೇಳಿ ಅವನ ಕಯ್ಯಲ್ಲಿದ್ದ ಇನ್ನೊಂದು ಚಮಚವನ್ನು ಕಂಡು,

"ಇದೇನಿದು ? ನೀವೇಕೆ ಇದನ್ನು ತೆಗೆದುಕೊಳ್ಳುತ್ತೀರಿ, ಬೇಡ" ಎಂದು ರಾಜನ ಕಯ್ಯನ್ನು ಹಿಡಿದುಕೊಂಡನು.

"ಅಯ್ಯಾ, ಕೇಳು, ನನಗೂ ಈ ಬದುಕಿನಲ್ಲಿ ಬೇಸರ ಹುಟ್ಟಿಹೋಗಿದೆ. ಇಂತಹ ಅನುಕೂಲವಾದ ಕಾಲವು ಒದಗಿರುವಾಗ" ಎನ್ನುವಷ್ಟರಲ್ಲಿ ಜಯವೀರನು,

"ರಾಜರೇ, ತಡೆಯಿರಿ, ಪ್ರೀತಿಸುತ್ತಲೂ ಪ್ರೀತಿಯನ್ನು ಪಡೆಯುತ್ತಲೂ ಇರುವ ನೀವು ಶುಭೋದರ್ಕದಲ್ಲಿ ವಿಶ್ವಾಸವಿಟ್ಟಿರುವ ನೀವು, ನನ್ನಂತೆ ಮಾಡಬಹುದೇ ? ಹಾಗೇನಾದರೂ ಮಾಡಿದರೆ ನಿಮಗೆ ಪಾಪವು ಸಂಘಟನೆಯಾಗುತ್ತದೆ. ಸ್ವಾಮೀ ಮಹಾನುಭಾವರೇ, ನಾನು ಹೋಗುತ್ತೇನೆ. ಬೀಳುಕೊಡಿರಿ. ನನಗೆ ನಿಮ್ಮಿಂದಾದ ಮಹೋಪಕಾರಗಳನ್ನೆಲ್ಲಾ ಸ್ವರ್ಗದಲ್ಲಿರುವ ವಿಮಲೆಯೊಡನೆ ಹೇಳುತ್ತೇನೆ"

ಎನ್ನುತ್ತ ಲೇಶಮಾತ್ರವು ಶಂಕಿಸದೆ ಮಲಯಸಿಂಹನು ಕೊಟ್ಟ ದುರ್ಜ್ಞೇಯವಾದ ಆ ಪದಾರ್ಥವನ್ನು ಬಾಯಿಗೆ ಹಾಕಿಕೊಂಡು ಮೆಲ್ಲಮೆಲ್ಲನೆ ನುಂಗಿಬಿಟ್ಟನು. ಇಬ್ಬರೂ ಮೌನವಾಗಿದ್ದರು. ಮೂಕನಾದ ವಾಮನಭಟ್ಟನು ಪಾನಸಾಮಗ್ರಿಗಳನ್ನು ಇರಿಸಿ ಹೊರಟುಹೋದನು.

ಇತ್ತ ಜಯವೀರನ ಕಣ್ಣುಗಳಿಗೆ ಅಲ್ಲಿಯ ಶಿಲಾವಿಗ್ರಹಗಳ ಕೈಯ್ಗಳಲ್ಲಿ ಉರಿಯುತ್ತಿದ್ದ ದೀವಿಗೆಗಳು ಕಾಂತಿಹೀನವಾಗುತ್ತ ಬಂದವು. ಅಲ್ಲಿ ತುಂಬಿಹೋಗಿದ್ದ ಸುಗಂಧವು ಅವನ ಮೂಗಿಗೆ ಅಷ್ಟಾಗಿ ಕಂಪನ್ನು ಬೀರಲಿಲ್ಲ. ಮಲಯಸಿಂಹನು ಕೊಂಚ ಮರೆಯಾಗಿ ಇದಿರಲ್ಲಿ ಕುಳಿತು ಅವನನ್ನೇ ನೋಡುತ್ತಿದ್ದನು. ಅವನ ಹೊಳೆಹೊಳೆವ ಕಣ್ಣುಗಳಲ್ಲದೆ ಜಯವೀರನಿಗೆ ಬೇರಾವುದೂ ಕಾಣುತ್ತಿರಲಿಲ್ಲ. ಆ ತರುಣನಿಗೆ ದುಃಖವು ಮಿತಿಮೀರಿ ಬಂದಿತು. ಕ್ರಮಕ್ರಮವಾಗಿ ಅವನಿಗೆ ಅಲ್ಲಿದ್ದ ವಸ್ತುಗಳ ಆಕಾರವೂ ಬಣ್ಣವೂ

ತೋರದೆ ಹೋಯಿತು. ಅವನ ಆಕುಲದೃಷ್ಟಿಗೆ ಅಲ್ಲಿಯ ಗೋಡೆಗಳಲ್ಲೆಲ್ಲಾ ಬಾಗಿಲುಗಳೂ ತೆರೆಗಳೂ ಕಾಣಿಸುತ್ತಿದ್ದವು. ಅವನು ಮಲಯಸಿಂಹನ ಕೈಯನ್ನು ಹಿಡಿದುಕೊಳ್ಳಬೇಕೆಂದು ಪ್ರಯತ್ನಪಟ್ಟನು. ತೋಳನ್ನು ಎತ್ತುವುದಕ್ಕೆ ಆಗದೆ ಹೋಯಿತು. ಪುತ್ರನನ್ನು ಅತ್ಯಂತ ವಾತ್ಸಲ್ಯದಿಂದ ನೋಡುತ್ತಿರುವ ತಂದೆಯೋಪಾದಿಯಲ್ಲಿ ರಾಜನು ತನ್ನನ್ನು ನೋಡುತ್ತಿದ್ದಾನೆಂದು ಜಯವೀರನಿಗೆ ಬೋಧನೆಯಾಯಿತು. ಮಲಯಸಿಂಹನು ಎರಡರಷ್ಟು ಉದ್ದವಾಗಿ ಬೆಳೆದು ತಲೆಯ ಕಪ್ಪು ಕೂದಲನ್ನು ಬೆನ್ನ ಮೇಲೆ ಜೋಲಾಡಿಸಿಕೊಂಡು ವೈರಶೋಧನೆಗಾಗಿ ಬಂದಿರುವ ದೇವತೆಯೋ ಎಂಬಂತೆ ಜಯವೀರನಿಗೆ ಕಾಣಿಸಿದನು. ಜಯವೀರನು ಪರಾಜಿತನಾಗಿ ಬೇರೆ ಮಗ್ಗುಲಾದನು. ಅವನಿಗೆ ಸುಖವಾದ ಸುಷುಪ್ತಿಯುಂಟಾಯಿತು. ಬಲಗುಂದಿ, ಕ್ಷೀಣವಾಗಿ, ನಿರುದ್ಧಶ್ವಾಸನಾಗಿದ್ದ ಅವನಿಗೆ ಬಾಹ್ಯಜ್ಞಾನವು ತಪ್ಪಿಹೋಯಿತು. ಮರಣಕ್ಕೆ ಪೂರ್ವಭಾವಿಯಾಗಿ ಉಂಟಾಗುವ ಅನಿಶ್ಚಿತವಾದ ಚಿತ್ತಭ್ರಾಂತಿಯು ತಲೆದೋರಿತು. ಮಾತನಾಡುವುದಕ್ಕೆ ಹೋದನು. ನಾಲಗೆಯು ಹೊರಳಲಿಲ್ಲ. ಮ್ಲಾನವಾದ ಕಣ್ಣುಗಳು ಅನೈಚ್ಛಿಕವಾಗಿ ಮುಚ್ಚಿಹೋದವು. ತಾನು ತಮೋವೃತ್ತನಾಗಿದ್ದೇನೆಂದು ತಿಳಿದಿದ್ದರೂ, ಕಣ್ಣುಗಳು ಮುಚ್ಚಿಹೋಗಿದ್ದರೂ, ಜಯವೀರನಿಗೆ ಆ ಉದಾತ್ತಪುರುಷನು ಓಡಾಡುವುದೆಲ್ಲಾ ಕಾಣಬರುತ್ತಿದ್ದಿತು.

ಮಲಯಸಿಂಹನು ಮತ್ತೊಂದು ಬಾಗಿಲನ್ನು ತೆರೆದನು. ಜಯವೀರನು ಮೃತ್ಯುಲೋಕಕ್ಕೆ ಪ್ರಯಾಣ ಮಾಡುತ್ತಿದ್ದ ಕೋಣೆಗೆ ತುಂಬ ಬೆಳಕು ಬಿದ್ದಿತು. ಆ ಸುಖಸುಷುಪ್ತಿಯಲ್ಲಿ ಆ ಬಾಗಿಲ ಹೊಸ್ತಿಲ ಮೇಲೆ ಪರಮ ಸುಂದರಿಯಾದ ಯುವತಿಯೊಬ್ಬಳು ನಿಂತಿರುವಂತೆ ಜಯವೀರನಿಗೆ ತೋರಿತು. ಗೌರಾಂಗಿಯಾದ ಆಕೆಯು ಮಂದಹಾಸಸುಂದರವದನಾರವಿಂದೆಯಾಗಿ ವೈರಶೋಧನೆಗೋಸ್ಕರ ಬಂದಿರುವ ಸಿದ್ಧಪುರುಷನ ಮನಸ್ಸನ್ನು ಮಗ್ಗಿಸುವುದಕ್ಕಾಗಿ ಅವತಾರಮಾಡಿದ ದಯಾಮೂರ್ತಿಯೋ ಎಂಬಂತೆ ಅವನಿಗೆ ಗೋಚರೆಯಾದಳು. ಮೃತ್ಯುಮುಖನಾದ ಆತನು "ಇದೇನಿದು ? ಇದು ದೇವಲೋಕವೇ ! ಈ ಗಂಧರ್ವಕನ್ಯೆಯು ರೂಪ ಲಾವಣ್ಯಗಳಲ್ಲಿ ನಾನು ಕಳೆದುಕೊಂಡ ಕನ್ನಿಕೆಯಂತೆಯೇ ಕಾಣುತ್ತಿದ್ದಾಳೆ" ಎಂದುಕೊಂಡನು. ಮಲಯಸಿಂಹನು ಜಯವೀರನನ್ನು ಅವಳಿಗೆ ತೋರಲು, ಆಕೆಯು ಕಯ್ಗಳನ್ನು ಕಟ್ಟಿಕೊಂಡು ಸುಹಾಸವದನೆಯಾಗಿ ಅವನ ಬಳಿಗೆ ಬಂದಳು.

ಜಯವೀರನು ಮನದಲ್ಲಿಯೇ "ವಿಮಲೆ, ವಿಮಲೆ" ಎಂದುಕೊಂಡನು. ಬಾಯಿಂದ ಮಾತು ಹೊರಡಲಿಲ್ಲ. ಆಕೆಯು ಇನ್ನೂ ಹತ್ತಿರಕ್ಕೆ ಹೋದಳು. ಅವನ ತುಟಿಗಳು ಅಲುಗಿದುವು.

"ವಿಮಲೇ, ಯಾವನಿಗಾಗಿ ನಿನ್ನ ಭಾಗ್ಯವನ್ನು ಸಮರ್ಪಿಸಿ ಇದ್ದೀಯೋ, ಯಾವನಿಂದ ನಿನ್ನನ್ನು ಮರಣವು ಅಗಲಿಸುವುದರಲ್ಲಿದ್ದಿತೋ ಅಂಥ ನಿನ್ನ ಪ್ರಾಣಪ್ರಿಯನಾದ ಜಯವೀರನು

ಕರೆಯುತ್ತಿದ್ದಾನೆ. ನಾನು ದೈವೇಚ್ಛೆಯಿಂದ ಮೃತ್ಯುವನ್ನು ಜಯಿಸಿದೆನು. ನಿನ್ನನ್ನು ಪಡೆಯಲೋಸುಗ ಅವನೂ ಮೃತ್ಯುಮುಖಕ್ಕೆ ಧಾವಿಸಿದನು. ಇನ್ನು ಈ ಪ್ರಪಂಚದಲ್ಲಿ ನಿಮ್ಮಿಬ್ಬರಿಗೂ ಅಗಲಿಕೆಯುಂಟಾಗುವುದಿಲ್ಲ. ನಾನಿಲ್ಲದಿದ್ದರೆ ನೀವಿಬ್ಬರೂ ಅಂದೇ ಮೃತ್ಯುವಶರಾಗುತ್ತಿದ್ದಿರಿ. ನಿಮ್ಮಿಬ್ಬರ ಜೀವಗಳನ್ನುಳುಹಿಸಿ ಈ ನನ್ನ ಕಾರ್ಯವನ್ನು ಭಗವಂತನು ಪ್ರಾಯಶ್ಚಿತ್ತರೂಪವಾಗಿ ಅಂಗೀಕರಿಸಲಿ" ಎಂದು ಮಲಯಸಿಂಹನು ಹೇಳಿದನು.

ಆಗ ವಿಮಲೆಯು "ರಾಜರೇ, ತಮ್ಮ ಈ ಮಹೋಪಕಾರಕ್ಕಾಗಿ ನಾನು ಸದಾ ನಿಮ್ಮನ್ನು ಸ್ಮರಿಸುತ್ತೇನೆ. ನನ್ನ ಕೃತಜ್ಞತೆಯ ವಿಷಯದಲ್ಲಿ ತಾವು ಕಿಂಚಿತ್ತಾದರೂ ಅನುಮಾನಪಡತಕ್ಕುದಿಲ್ಲ. ಬೇಕಾದರೆ ಕೋಮಲೆಯನ್ನು ಕೇಳಿ ನೋಡಿರಿ. ಆಕೆಯು ನನ್ನ ಪ್ರಿಯಭಗಿನೀ. ನಾವು ಅಮರಪುರವನ್ನು ಬಿಟ್ಟಂದಿನಿಂದ ನಿಮ್ಮ ವಿಷಯವಾಗಿ ಮಾತು ಬಂದಾಗಲೆಲ್ಲ, 'ಶಾಂತಭಾವದಿಂದ ಈ ಶುಭದಿನವನ್ನು ನಿರೀಕ್ಷಿಸುತ್ತಿರು' ಎಂದು ಆಕೆಯು ನನಗೆ ಹೇಳುತ್ತಿದ್ದಳು" ಎಂದಳು.

ಆ ಮಾತಿಗೆ ರಾಜನು ತನ್ನ ಅಂತರಂಗದ ವಿಕ್ರಿಯೆಯನ್ನು ಅಡಗಿಸಲರಿಯದೆ,

"ವಿಮಲೆ, ನಿನಗೆ ಹಾಗಾದರೆ ಕೋಮಲೆಯಲ್ಲಿ ಪ್ರೀತಿವಿಶ್ವಾಸಗಳಿವೆಯೇ ?"

"ಅವಳೆಂದರೆ ನನ್ನ ಪ್ರಾಣ" ಎಂದು ವಿಮಲೆಯು ಉತ್ತರವಿತ್ತಳು.

"ಹಾಗಾದರೆ ನನಗೊಂದು ಉಪಕಾರ ಮಾಡುತ್ತೀಯಾ, ವಿಮಲೇ ?"

"ಏನೆಂದಿರಿ ರಾಜರೇ, ಅಂತಹ ಭಾಗ್ಯವು ನನಗುಂಟೇ ?"

"ಅಮ್ಮಾ, ಕೋಮಲೆಯನ್ನು ಒಡಹುಟ್ಟಿದವಳೆಂದು ನೀನು ಹೇಳಿದ್ದೀಯೆ. ನನ್ನಲ್ಲಿ ನಿನಗಿರುವ ಕೃತಜ್ಞತೆಯೆಲ್ಲವನ್ನೂ ನೀನು ಅವಳಲ್ಲಿ ತೋರು. ಇನ್ನು ಮುಂದೆ ಅವಳಿಗಾರೂ ದಿಕ್ಕಿಲ್ಲ. ಅವಳನ್ನು ನೀನು ಕಾಪಿಟ್ಟುಕೊಂಡಿರಮ್ಮ" ಎಂದು ಮಲಯಸಿಂಹನು ಮನೋವ್ಯಾಕುಲದಿಂದ ಗದ್ಗದ ಕಂಠನಾಗಿ ಹೇಳಿದನು.

"ಮುಂದೆ ದಿಕ್ಕಿಲ್ಲವೇ, ಅದೇಕೆ ?" ಎಂದು ಹಿಂದೆ ಒಂದು ವಾಣಿಯು ಕೇಳಿಸಿತು. ಅವನು ತಿರುಗಿ ನೋಡಿದನು. ಕೋಮಲೆಯು ಭಯದಿಂದಲೂ ಆಶ್ಚರ್ಯದಿಂದಲೂ ಮಲಯಸಿಂಹನನ್ನು ನೋಡುತ್ತ ಸ್ತಬ್ಧಳಾಗಿ ನಿಂತಿದ್ದಳು. ಅದನ್ನು ನೋಡಿ ಮಲಯಸಿಂಹನು,

"ಕೋಮಲೆ, ಅದೇಕೆ ಎಂಬೆಯಾ. ನಿನಗೆ ನಾಳೆಯಿಂದ ಯಾವ ಬಗೆಯಾದ ನಿರ್ಬಂಧವೂ ಇರುವುದಿಲ್ಲ. ನೀನು ಮುಂದೆ ಜನಸಮುದಾಯದಲ್ಲಿ ನಿನ್ನ ಪೂರ್ವಸ್ಥಿತಿಯನ್ನು ಪಡೆದು ಬಾಳುವಳಾಗು. ನನ್ನ ದುರ್ದೈವದಿಂದ ಇನ್ನು ನಿನ್ನನ್ನು ಕಾಡಿಸುವುದಿಲ್ಲ. ಎಲೌ ರಾಜಪುತ್ರೀ, ನಿನ್ನ ತಂದೆಯ ಸಕಲೈಶ್ವರ್ಯವನ್ನೂ ಭೋಗಭಾಗ್ಯಗಳನ್ನೂ ನಾನು ನಿನಗೆ ಕೊಟ್ಟಿದ್ದೇನೆ" ಎಂದನು.

ಆ ಮಾತನ್ನು ಕೇಳಿ ಕೋಮಲೆಯು ಕಳೆಗೆಟ್ಟು ತನ್ನ ಧವಳಹಸ್ತಗಳೆರಡನ್ನೂ ಎತ್ತಿ ಆಕಾಶವನ್ನು ತೊರುತ್ತ ಅತ್ಯಂತ ವ್ಯಾಕುಲತೆಯಿಂದ ಕೊರಳನರಗಳುಬ್ಬಲಾಗಿ ಕಂಬನಿಗರೆಯುತ್ತ "ನನ್ನೆರೆಯಾ, ನನ್ನನ್ನು ಬಿಟ್ಟು ಹೋಗುತ್ತೀರಾ ?" ಎಂದು ರೋದಿಸಿದಳು.

"ಕೋಮಲೇ ನೀನು ಇನ್ನೂ ಚಿಕ್ಕ ಪ್ರಾಯದವಳು ; ಪರಮ ಸುಂದರಿ ; ನನ್ನ ಹೆಸರನ್ನು ಮರೆತುಬಿಟ್ಟು ಎಲ್ಲಿಯಾದರೂ ಸುಖವಾಗಿ ಬಾಳು" ಎಂದನು.

"ಎನ್ನೊಡೆಯ, ನಿಮ್ಮ ಇಷ್ಟದಂತೆಯೇ ಆಗಲಿ; ನಿಮ್ಮ ಹೆಸರನ್ನು ಮರೆತು ಬಿಟ್ಟು ನಾನು ಸುಖವಾಗಿ ಬಾಳುತ್ತೇನೆ" ಎಂದು ಹೇಳುತ್ತ ಕೋಮಲೆಯು ಹಿಂಜರಿದಳು.

ಅದನ್ನು ನೋಡಿ ವಿಮಲೆಯು,

"ಅಯ್ಯೋ ದೇವರೇ, ಇದೇನಿದು ? ರಾಜರೇ ಅವಳು ಕಂಗೆಟ್ಟಿದ್ದಾಳೆ ನೋಡಿರಿ, ಅವಳು ತುಂಬ ನೊಂದುಕೊಂಡಿದ್ದಾಳಲ್ಲ ಸಂತೈಸಬಾರದೇ ?" ಎಂದಳು.

ಕೋಮಲೆಯು ಅವಳನ್ನು ನೋಡಿ,

"ಅಕ್ಕಯ್ಯ, ಅದೆಲ್ಲ ಅವರಿಗೇಕೆ ತಿಳಿಯಬೇಕಮ್ಮ ; ಅವರು ಒಡೆಯರು, ನಾನು ಬಡವೆ. ನೋಡುವುದಕ್ಕೂ ಬಿಡುವುದಕ್ಕೂ ಅವರು ಸ್ವತಂತ್ರರು" ಎಂದು ಹೃದಯವಿದ್ರಾವಿಯಾದ ಮಾತನ್ನಾಡಿದಳು.

ಮಲಯಸಿಂಹನ ಮೈಯು ಜುಮ್ಮೆಂದಿತು. ಅವನು ಕೋಮಲೆಯನ್ನು ನೋಡಿದನು. ಅವಳ ದೃಷ್ಟಿಪಾತದ ವೇಗವನ್ನು ಸಹಿಸಲರಿಯದೆ ; 'ಭಗವಂತ, ನನ್ನ ಅನುಮಾನವು ಕೊನೆಗೂ ನಿಶ್ಚಯವಾಯಿತೇ ?' ಎಂದುಕೊಂಡು,

"ಕೋಮಲೇ, ಹಾಗಾದರೆ ನೀನು ನನ್ನನ್ನು ಬಿಟ್ಟಿರಲಾರೆಯಾ ?" ಎಂದನು.

ಅದಕ್ಕಾ ಸುಕುಮಾರಿಯು "ಸ್ವಾಮೀ, ನಾನು ಇನ್ನೂ ಸಣ್ಣವಳು. ನನ್ನ ಬದುಕನ್ನು ನೀವು ಸುಖಮಯವಾಗಿ ಮಾಡಿದ್ದೀರಿ. ಆದುದರಿಂದ ಈಗಾಗಲೇ ಸಾಯಲಿಕ್ಕೆ ಮನಸ್ಸು ಒಪ್ಪುವುದಿಲ್ಲ" ಎಂದು ಮೃದುವಾಗಿ ಹೇಳಿದಳು.

"ಹಾಗಾದರೆ ನಿನ್ನ ಮನಸ್ಸಿನಲ್ಲಿ ಏನಿದೆ ಹೇಳು. ನಾನು ನಿನ್ನಿಂದ ಅಗಲಿದರೆ–"

"ಎನ್ನೆರೆಯ, ನನ್ನಿಂದ ಜೀವವು ಅಗಲುತ್ತದೆ, ನಿಶ್ಚಯ."

"ನಿನಗೆ ನನ್ನಲ್ಲಿ ಅನುರಾಗವುಂಟೇನು ?"

"ವಿಮಲೇ, ಅಕ್ಕ ನೀನು ಹೇಳಮ್ಮ, ನಿನಗೆ ಜಯವೀರನಲ್ಲಿ ಅನುರಾಗವುಂಟೇ ?" ಎಂದು ಕೋಮಲೆಯು ನುಡಿಯಲು ಮಲಯಸಿಂಹ ಹೃದಯವು ಆನಂದಾತಿರೇಕದಿಂದ ವಿಸ್ಫಾರಿತವಾಯಿತು. ಅವನು ತನ್ನೆರಡು ತೋಳುಗಳಿಂದಲೂ ಕೋಮಲೆಯನ್ನು ತಕ್ಕಯಿಸಿಕೊಂಡು 'ಎಲೌ ಸುಂದರೀಮಣಿಯೇ, ನಿನ್ನ ಇಷ್ಟವಿದ್ದಂತೆಯೇ ಆಗಲಿ, ನಾನು ಹಗೆಗಳೊಡನೆ ಪ್ರತಿಭಟಿಸುತ್ತಿದ್ದಾಗ ಈ ಪ್ರತಿಫಲವನ್ನು ಅನುಗ್ರಹಿಸಬೇಕೆಂದೇ ಭಗವಂತನು ನನ್ನನ್ನು ಉಳುಹಿದನು. ನನ್ನ ಕಾರ್ಯಸಾಧನೆಯು ದುಃಖದಿಂದಲೇ ಮಡಿಯುತ್ತದೆಯೆಂದು ತಿಳಿದಿದ್ದೆನು. ಅದು ಭಗವಂತನ ಚಿತ್ತಕ್ಕೆ ಬಾರಲಿಲ್ಲ. ನನ್ನ

ಕಾರ್ಯಗಳಿಗಾಗಿ ನಾನು ದಂಡಿಸಿಕೊಳ್ಳಬೇಕೆಂದಿದ್ದೆನು. ಪರಮಾತ್ಮನು ಅವುಗಳನ್ನೆಲ್ಲಾ ಕ್ಷಮಿಸಿಬಿಟ್ಟನು. ಕೋಮಲೇ, ನೀನು ನನ್ನಲ್ಲಿ ಅನುರಾಗವನ್ನು ಬೀರು. ಅದರಿಂದ ನಾನು ನೆನಸಿಕೊಳ್ಳುವುದಕ್ಕೆ ಇಷ್ಟಪಡದ ನೆನಪುಗಳು ಮರೆತಾದರೂ ಹೋಗುವುವೋ ಏನೋ ?" ಎಂದನು.

"ಎನ್ನೊಡೆಯ, ಹಾಗೆಂದರೇನು ?"

"ನಾನು ಇಪ್ಪತ್ತುವರ್ಷಗಳ ಕಾಲದವರೆಗೆ ಶ್ರಮಪಟ್ಟು ಕಲಿತ ವಿಷಯವನ್ನು ನಿನ್ನ ಒಂದು ನುಡಿಯಿಂದಲೇ ವ್ಯಕ್ತವಾಗಿ ತಿಳಿಸಿಬಿಟ್ಟೆ ಈ ಲೋಕದಲ್ಲಿ ನಿನ್ನೊಬ್ಬಳ ಹೊರತು ನನಗೆ ಬೇರೆ ಯಾರೂ ಇಲ್ಲ. ನಿನ್ನ ಮೂಲಕವಾಗಿ ನಾನು ಜೀವಿಸುತ್ತೇನೆ ಆನಂದಪಡುತ್ತೇನೆ ದುಃಖವನ್ನೂ ಅನುಭವಿಸುತ್ತೇನೆ" ಎಂದು ಮಲಯಸಿಂಹನು ಹೇಳಿದನು.

ಆಗ ಕೋಮಲೆಯು "ಅಕ್ಕಯ್ಯ, ಅವರ ಮಾತು ಕೇಳಿದೆಯಾ ? ಅವರಿಗಾಗಿ ಪ್ರಾಣವನ್ನು ಕೊಡಲಿರುವ ನನ್ನ ಮೂಲಕವಾಗಿ ಅವರು ದುಃಖವನ್ನು ಅನುಭವಿಸುತ್ತಾರಂತೆ" ಎಂದು ಹೇಳಿದಳು.

ಆ ಮಾತಿಗೆ ಮಲಯಸಿಂಹನು ಕೆಲವು ಹೊತ್ತು ಮೌನದಿಂದಿದ್ದು "ನನಗೆ ನಿಜಾಂಶವು ತಿಳಿದುಬಂದಿತು. ನನ್ನ ವಿಧಿಯು ಪ್ರತಿಫಲರೂಪವಾಗಿದ್ದರೂ ಸರಿ ; ದಂಡರೂಪವಾಗಿದ್ದರೂ ಸರಿ, ಅದನ್ನು ಮೀರಲಾರೆನು" ಎನ್ನುತ್ತ "ಕೋಮಲೇ, ಬಾರೆ"ಂದು ಅವಳ ಕೈಹಿಡಿದು ಕರೆದುಕೊಂಡು ಹೊರಟುಹೋದನು.

ಒಂದು ಗಂಟೆಯ ಕಾಲವಾಯಿತು. ವಿಮಲೆಯು ನಿರುದ್ಧಶ್ವಾಸದಿಂದ ಸ್ತಂಭೀಭೂತೆಯಾಗಿ ಜಯವೀರನು ಮಗ್ಗುಲಲ್ಲಿ ಕುಳಿತಿದ್ದಳು. ಅವನಿಗೆ ಕೊಂಚ ಕೊಂಚವಾಗಿ ಜೀವವು ಕೂಡುತ್ತ ಬಂದಿತು. ಮೈಯು ಅಲುಗತೊಡಗಿತು. ಮೂಗಿನಲ್ಲಿ ಮಂದವಾಗಿ ಉಸಿರಾಡಿತು. ಅವನು ಮೆಲ್ಲಗೆ ಕಣ್ಣು ತೆರೆದನು. ಮೊತ್ತಮೊದಲ ದೃಷ್ಟಿಯು ನಿರ್ದೇಶಶೂನ್ಯವಾಗಿ ನೆಟ್ಟುಕೊಂಡಿದ್ದಿತು. ತರುವಾಯ ಬುದ್ಧಿಯು ಪ್ರಸರಿಸಿತು. ಅದರೊಂದಿಗೆ ಮನೋಭಾವವೂ ದುಃಖವೂ ತಲೆದೋರಿದುವು. ಅವನು ನಿರಾಶೆಯಿಂದ "ಅಯ್ಯೋ, ರಾಜನು ನನಗೆ ಮೋಸಮಾಡಿಬಿಟ್ಟನೇ, ನಾನು ಸಾಯಲಿಲ್ಲವಲ್ಲ" ಎಂದುಕೊಳ್ಳುತ್ತ ಮೇಜಿನ ಮೇಲಿದ್ದ ಚೂರಿಯನ್ನು ತೆಗೆದುಕೊಂಡನು.

ಆಗ ವಿಮಲೆಯು ಪ್ರಸನ್ನಭಾವದಿಂದ ನಸುನಗುತ್ತ "ಇದೇನಿದು? ಪ್ರಾಣಕಾಂತ ನಿಮಗೆ ಎಚ್ಚರಿಕೆಯಾಯಿತೇ, ನನ್ನನ್ನು ನೋಡಿರಿ" ಎನ್ನಲು ಜಯವೀರನು ಉನ್ಮತ್ತನಂತೆ ಚೀತ್ಕಾರ ಮಾಡುತ್ತ ಸಂಶಯಾವಿಷ್ಟನಾಗಿ ಸ್ವಪ್ನದರ್ಶನದಿಂದ ಮುಗ್ಧನಾದವನಂತೆ ಮೊಳಕಾಲುಗಳನ್ನು ಊರಿಕೊಂಡು ತಲೆಬಾಗಿ ಕುಳಿತುಬಿಟ್ಟನು.

ಮಾರನೆಯ ದಿನದ ಬೆಳಿಗ್ಗೆ ವಿಮಲೆಯೂ ಜಯವೀರನೂ ಸಮುದ್ರ ತೀರದಲ್ಲಿ ಸಂಚರಿಸುತ್ತಿದ್ದರು. ಆಗ ವಿಮಲೆಯು ಪ್ರಿಯನ ಸಂಗಡ ರಾಜಾ ಮಲಯಸಿಂಹನು ತನ್ನ ಕೋಣೆಗೆ ಬಂದುದನ್ನು ತನಗೆ ಕೇಡೆಣಿಸಿದವರು ಮಾಡಬೇಕೆಂದಿದ್ದುದನ್ನು ವಿಶದವಾಗಿ

ಹೇಳಿದಳು. ಅವರು ಈ ರೀತಿ ಮಾತನಾಡುತ್ತ ಗುಹೆಯನ್ನು ಹೊಕ್ಕರು. ಮೇಲುಗಡೆಯು ತೆರೆದು ಹೋಗಿದ್ದಿತು. ಗೋಚರುವಾಗುತ್ತಿದ್ದ ನೀಲಾಂಬರದ ಒಂದೆರಡು ತಾರಿಕೆಗಳು ಇನ್ನೂ ಮಿನುಗುತ್ತಿದ್ದುವು. ಬಂಡೆಯ ಮೇಲೆ ಯಾವನೋ ನಿಂತಿದ್ದನು. ಜಯವೀರನು ಅವನನ್ನು ವಿಮಲೆಗೆ ತೋರಿಸಿದನು. ಅವನು ಕ್ರೀಡಾನೌಕದ ಅಧಿಕಾರಿ ಯಾಗಪ್ಪ ಎಂದು ವಿಮಲೆಯು ಹೇಳಿ ಅವನನ್ನು ಕೂಗಿದಳು.

"ನೀನೇನಾದರೂ ನಮ್ಮ ಸಂಗಡ ಮಾತನಾಡಬೇಕೋ ?" ಎಂದು ಜಯವೀರನೇ ಕೇಳಿದನು.

"ಸ್ವಾಮೀ, ಇದನ್ನು ಮಲಯಸಿಂಹರಾಜರು ತಮಗೆ ಕೊಡ ಹೇಳಿದರು" ಎಂದು ಯಾಗಪ್ಪನು ಜಯವೀರನ ಕೈಗೆ ಒಂದು ಕಾಗದವನ್ನು ಕೊಟ್ಟನು. ಜಯವೀರನು ಅದನ್ನು ಬಿಚ್ಚಿ ಈ ರೀತಿಯಾಗಿ ಓದಿದನು:—

"ಕುಮಾರ ಜಯವೀರನಿಗೆ:—

"ಈ ರೇವಿನಲ್ಲಿ ನಿಮಗಾಗಿ ಒಂದು ಹಡಗು ಕಾದಿದೆ. ನಿಮ್ಮನ್ನು ಯಾಗಪ್ಪನು ಮಲಯಪಟ್ಟಣಕ್ಕೆ ಕರೆದುಕೊಂಡು ಹೋಗುತ್ತಾನೆ. ನೀನು ವಿಮಲೆಯನ್ನು ಮದುವೆ ಮಾಡಿಕೊಳ್ಳುವುದಕ್ಕೆ ಮೊದಲು ನಿಮ್ಮಿಬ್ಬರನ್ನೂ ನೋಡಬೇಕೆಂದು ದೀನನಾಥರು ಆ ಊರಲ್ಲಿ ನಿರೀಕ್ಷಿಸುತ್ತಿದ್ದಾರೆ. ಈ ಗುಹೆಯೊಳಗಿರುವ ಸಮಸ್ತವನ್ನೂ ಅಮರಪುರ ದಲ್ಲಿರುವ ನನ್ನ ಎರಡು ಸೌಧಗಳನ್ನೂ ಜಹಗೀರಿಯನ್ನೂ ನನ್ನ ಯಜಮಾನ ಧನಕೋಟಿಯವರ ಕುಮಾರನಾದ ನಿನಗೆ ಧರ್ಮದೇವನೆನಿಸಿದ ನಾನು ನಿನ್ನ ಮದುವೆಯಲ್ಲಿ ಬಳುವಳಿಯಾಗಿ ಕೊಟ್ಟಿರುತ್ತೇನೆ. ಅದನ್ನು ನೀನು ವಿಮಲೆಯೊಡನೆ ಅನುಭವಿಸಿಕೊಂಡು ಬರುವುದು. ವಿಮಲೆಗೆ ಅವಳ ತಂದೆಯ ಕಡೆಯಿಂದ ಬರುವ ಅಪರಿಮಿತವಾದ ಸಂಪತ್ತನ್ನು ಅವಳು ದೀನರಿಗೂ ಅನಾಥರಿಗೂ ಕೊಟ್ಟುಬಿಡಲಿ. ಅವಳ ತಂದೆಯು ಉನ್ಮಾದಗ್ರಸ್ತನಾಗಿದ್ದಾನೆ. ಮಲತಾಯಿಯೂ ತಮ್ಮನೂ ಮೃತ್ಯುಗ್ರಸ್ತರಾಗಿಹೋದರು. ಯಾವನು ಕಲಿಪುರುಷನಂತೆ ಬಹು ಪ್ರಬಲನಾಗಿ ಭಗವಂತನಿಗೆ ಸರಿಸಮನೆಂದೆಣಿಸಿಕೊಂಡಿದ್ದು ಈಗ ಆ ಪರಮಾತ್ಮನೊಬ್ಬನೇ ಸರ್ವಶಕ್ತನೂ ಸರ್ವಜ್ಞನೂ ಎಂದು ಭಕ್ತಿಯಿಂದ ನಂಬಿರುವನೋ ಅವನಿಗಾಗಿ ನಿನ್ನ ಭಾಗ್ಯದೇವತೆಯಾದ ವಿಮಲೆಯು ಭಗವಂತನ ಸನ್ನಿಧಿಯಲ್ಲಿ ಹರಸಿಕೊಳ್ಳುವಂತೆ ಹೇಳು. ಅದರಿಂದ ಅವನ ದುಃಖವು ಕಮ್ಮಿಯಾದೀತು. ಜಯವೀರ, ನಾನು ನಿನ್ನೊಡನೆ ವರ್ತಿಸಿದ ರಹಸ್ಯವಿದೀಗ. ಈ ಪ್ರಪಂಚದಲ್ಲಿ ದುಃಖವೂ ಇಲ್ಲ ; ಸುಖವೂ ಇಲ್ಲ. ನಮ್ಮ ಸ್ಥಿತಿಗಳ ವ್ಯತ್ಯಾಸವನ್ನು ಹೋಲಿಸಿಕೊಂಡರೆ ತೋರುವ ಭಾವಭೇದವನ್ನೇ ಸುಖ ದುಃಖಗಳೆನ್ನುವರಲ್ಲದೆ ಮತ್ತಾವುದೂ ಇಲ್ಲ. ಪರಿಪೂರ್ಣವಾಗಿ ದುಃಖವನ್ನು ಉಂಡುಬಲ್ಲವನೀಗ ಸುಖದ ಪರಕಾಷ್ಠೆಯನ್ನು ಅನುಭವಿಸಬಲ್ಲನು. ಸಾಯುವುದು ಏನೆಂದು ನಮಗೆ ತಿಳಿದಿರುವುದರಿಂದ ಬದುಕಿರುವುದರ ಆನಂದವು ಚೆನ್ನಾಗಿ ಗೊತ್ತಾಗುತ್ತದೆ.

ನನ್ನ ಕಂದಗಳಿರಾ, ನೀವು ಬಹುಕಾಲ ಬಾಳಿ ಬದುಕಿರಿ. ಪರಮಾತ್ಮನು ಮನುಷ್ಯನಿಗೆ ಭವಿಷ್ಯದ್ರಹಸ್ಯವನ್ನು ಅನುಗ್ರಹಿಸುವವರೆಗೂ ಮನುಷ್ಯಜ್ಞಾನದ ಪರಮಾವಧಿಯು "ಶುಭೋದರ್ಕವನ್ನು ನಿರೀಕ್ಷಿಸುತ್ತಿರು" ಎಂಬ ಈ ಎರಡು ಮಾತುಗಳಲ್ಲಿ ಅಡಗಿಹೋಗುತ್ತವೆ. ಇದನ್ನು ನೀವು ಮರೆಯಬೇಡಿರಿ.

ಇಂತು ನಿಮ್ಮ ಮಂಗಳಕಾಂಕ್ಷಿ, — ರಾಜಾ ಮಲಯಸಿಂಹ."

ಕಾಗದವನ್ನು ಓದುತ್ತಿದ್ದಾಗ ತನ್ನ ತಂದೆಗೆ ಬುದ್ಧಿಭ್ರಮೆಯಾದುದೂ ಮಲತಾಯಿಯೂ ತಮ್ಮನೂ ಮೃತರಾದುದೂ ವಿಮಲೆಗೆ ಆಗತಾನೇ ತಿಳಿಯ ಬಂದಿತು. ಅವಳು ಕಳೆಗೆಟ್ಟು ಬಿಸುಸುಯ್ಯುತ್ತ ಕಂಬನಿಗರೆದಳು. ಅವಳು ಈಗಣ ಸುಖಕ್ಕೋಸ್ಕರ ತುಂಬ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಜಯವೀರನು ನಾಲ್ಕು ಕಡೆಯನ್ನೂ ನೋಡಿ, "ರಾಜರ ಉದಾರ ಬುದ್ಧಿಯಿಂದ ನಾವೆಲ್ಲರೂ ಜಿತರಾಗಿ ಹೋದೆವು. ನನ್ನ ಅಲ್ಪ ಸಂಪತ್ತಿನಿಂದಲೇ ವಿಮಲೆಯು ತುಷ್ಟಳಾಗುತ್ತಾಳೆ. ಅದು ಹಾಗಿರಲಿ. ನನ್ನನ್ನು ರಾಜರ ಬಳಿಗೆ ಕರೆದುಕೊಂಡು ಹೋಗಪ್ಪ ಅವರು ಎಲ್ಲಿದ್ದಾರೆ ?" ಎನ್ನಲು ಯಾಗಪ್ಪನು ದೃಕ್ಪಥವನ್ನು ತೋರಿದನು.

"ಹಾಗೆಂದರೇನು ? ರಾಜರೆತ್ತ ಹೋದರು ? ಕೋಮಲೆಯೆಲ್ಲಿದ್ದಾಳೆ ?" ಎಂದು ಇಬ್ಬರೂ ಕೇಳಿದರು. ಯಾಗಪ್ಪನು ಮರಳಿ ದೃಕ್ಪಥವನ್ನು ತೋರಿಸಿದರು.

ಅವನು ತೋರಿದೆಡೆಯನ್ನೂ ಇಬ್ಬರೂ ನೋಡಿದರು. ಸಾಗರದ ನೀಲ ಜಲವೂ ನೀಲಾಂಬರವೂ ಮುಟ್ಟುತ್ತಿದ್ದ ದೃಕ್ಪಥದಲ್ಲಿ ಅಗಲವಾದ ಬಿಳಿಯ ಪಟವೊಂದು ಗೋಚರವಾಯಿತು.

ಆಗ ಜಯವೀರನು "ಅಹಹಾ, ಅವರು ಹೊರಟುಹೋದರು. ನನ್ನ ತಂದೆಯೇ, ನಿನಗೆ ಶುಭವಾಗಲಿ" ಎಂದನು.

"ಕೋಮಲೆಯೂ ಹೊರಟುಹೋದಳು. ಕೋಮಲೇ, ತಂಗಿ, ನಿನಗೆ ಭಗವಂತನು ಮಂಗಳವನ್ನುಂಟುಮಾಡಲಿ" ಎಂದು ವಿಮಲೆಯೂ ಹೇಳಿದಳು.

"ಅವರನ್ನು ನಾವು ಮರಳಿ ನೋಡುವೆವೋ ! ಇಲ್ಲವೋ ?" ಎಂದು ಜಯವೀರನು ಕಂಬನಿದುಂಬಿದನು.

ಅವನನ್ನು ನೋಡಿ ವಿಮಲೆಯು, "ನನ್ನ ಪ್ರಾಣಾಧಿಕ, 'ಮನುಷ್ಯ ಜ್ಞಾನದ ಪರಮಾವಧಿಯು ಶುಭೋದರ್ಕವನ್ನು ನಿರೀಕ್ಷಿಸುತ್ತಿರು ಎಂಬ ಮಾತುಗಳಲ್ಲಿ ಅಡಕವಾಗಿದೆ' ಎಂದು ರಾಜನು ಹೇಳಿದ ಮಾತನ್ನು ನೀವು ಮರೆತುಹೋದಿರಾ ?" ಎಂದು ಕೇಳಿದಳು.

## ೭೫
## ಕಥೋಪಸಂಹಾರ

ಉದಯಸಿಂಹನು ಅಮರರಾಜನ ಸೇನೆಯಲ್ಲಿ ಸೇರಿಕೊಂಡು, ತನ್ನ ಜಾಣ್ಮೆಯಿಂದಲೂ ಪರಾಕ್ರಮದಿಂದಲೂ ಅಧಿಕಾರಿಗಳಿಗೂ ಯೋಧರಿಗೂ ಪ್ರಿಯನೆನಿಸಿಕೊಂಡು, ಕಾಲಕ್ರಮದಲ್ಲಿ ದೊಡ್ಡ ಅಧಿಕಾರಕ್ಕೆ ಬಂದನು. ಸ್ವಲ್ಪ ದಿವಸಗಳಲ್ಲಿಯೇ ಅಮರರಾಜನಿಗೂ ಅವನ ಹಗೆಯಾದ ರಾಜನಿಗೂ ಕದನವು ಕೈಗಟ್ಟಿತು. ಧರ್ಮಪ್ರಭುವಾದ ಅಮರರಾಜನು ರಾಜ್ಯಲೋಭದಿಂದ ತನ್ನ ಮೇಲೆ ಸೇನಾಸಮೇತನಾಗಿ ಯುದ್ಧಕ್ಕೆ ಬಂದ ಶತ್ರುರಾಜನನ್ನು ನಿಗ್ರಹಿಸದೆ ಇರುವುದು ಸರಿಯಲ್ಲವೆಂದು ತಿಳಿದು, ತಾನೂ ತನ್ನ ದಂಡನ್ನೆಲ್ಲಾ ಕೂಡಿಸಿ ಯುದ್ಧಕ್ಕೆ ಅಣಿಮಾಡಿಕೊಂಡನು. ಉದಯಸಿಂಹಪ್ರಭೃತಿಗಳಾದ ಯೋಧಾಗ್ರೇಸರರ ಕೈಸನ್ನೆಯಿಂದ ಪಡೆಯು ನಡೆದು, ರಣಾಂಗದಲ್ಲಿ ಬಹುಕಾಲ ಯುದ್ಧವು ನಡೆಯುತ್ತಿದ್ದಿತು. ಜಯಲಕ್ಷ್ಮಿಯು ಯಾವ ಪಕ್ಷವನ್ನು ವಹಿಸಲಿಲ್ಲ. ಈ ರೀತಿ ಯುದ್ಧವಾಗಿ ಇತ್ತಂಡದಲ್ಲಿಯೂ ಬಹು ಜನರು ಹತರಾದರು.

ಹೀಗಿರುವಲ್ಲಿ, ಇತ್ತ ಸುಮಂತನೆಂಬೊಬ್ಬ ಭಟನು ಉದಯಸಿಂಹನ ಬಳಿಗೆ ಬಂದು "ಜೀಯಾ, ನಾನು ಇದುವರೆಗೆ ಈ ಭೂಮಂಡಲವೆಲ್ಲ ತಿರುಗಿ, ಹಲವು ದೊರೆಗಳ ಬಳಿಯಲ್ಲಿ ಇದ್ದುಕೊಂಡು, ತಮ್ಮ ಪರಾಕ್ರಮವನ್ನೂ, ವಿವೇಕವನ್ನೂ ಕೇಳಿ ಮನಸೋತು, ತಮ್ಮ ಸೇವೆ ಮಾಡಿ ಧನ್ಯನಾಗಬೇಕೆಂದು ಬಂದಿದ್ದೇನೆ. ತಮ್ಮ ಆಶ್ರಿತ ವರ್ಗದಲ್ಲಿ ನನಗೆ ಆಶ್ರಯವನ್ನಿತ್ತು ಪಾಲಿಸಬೇಕು" ಎಂದು ವಿನಯಪರನಾಗಿ ಬೇಡಿಕೊಂಡನು. ಅವನ ಪೂರ್ವೋತ್ತರಗಳಾವುವೂ ತನಗೆ ತಿಳಿಯದಿದ್ದುದರಿಂದ, "ಕೆಲವು ದಿನಗಳವರೆಗೆ ಇವನ ಶೀಲಾದಿಗಳನ್ನು ಪರೀಕ್ಷಿಸಿ ಯೋಗ್ಯನಾಗಿದ್ದರೆ ಹತ್ತಿರ ಇಟ್ಟುಕೊಳ್ಳೋಣ" ಎಂದು ಯೋಚಿಸಿದವನಾಗಿ, ಉದಯಸಿಂಹನು ಸುಮಂತನನ್ನು ನೋಡಿ "ಅಯ್ಯಾ, ನೀನು ಕೆಲವು ದಿನಗಳವರೆಗೆ ನನ್ನ ಬಳಿಯಲ್ಲಿಯೇ ಇದ್ದುಕೊಂಡಿರು" ಎಂದು ಹೇಳಿ ಅವನನ್ನು ತನ್ನ ಹತ್ತಿರ ಇಟ್ಟುಕೊಂಡನು. ಯಜಮಾನನಲ್ಲಿ ಕೇವಲ ವಿಶ್ವಾಸದಿಂದ ಸುಮಂತನು ಹಗಲೂ ಇರುಳೂ ನೆರಳಿನಂತೆ ಉದಯಸಿಂಹನನ್ನು ಎಡೆಬಿಡದೆ ಅನುಸರಿಸಿಕೊಂಡು, ತನ್ನ ವಿವೇಕದಿಂದಲೂ ಪರಾಕ್ರಮದಿಂದಲೂ ಚಾತುರ್ಯದಿಂದಲೂ ಅವನ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಂಡು ಅವನ ಪ್ರೀತಿವಿಶ್ವಾಸಕ್ಕೆ ಪಾತ್ರನಾದನು.

ಯುದ್ಧವು ಇನ್ನೂ ಘೋರವಾಗಿಯೇ ನಡೆಯುತ್ತಿದ್ದಿತು. ಉದಯಸಿಂಹನು ತನ್ನ ಸೈನ್ಯವನ್ನು ಬಹುಪರಾಕ್ರಮದಿಂದ ನಡೆಯಿಸುತ್ತಿದ್ದು ರಣಾಂಗದಲ್ಲಿ ಎಲ್ಲಿ ನೋಡಿದರೂ ತಾನೇ ತಾನಾಗಿ ಹಗೆಗಳ ಪಡೆಯನ್ನು ಸಂಹಾರಮಾಡುತ್ತಿದ್ದನು. ಒಂದು ದಿನ ಸುಮಂತನು ಹೇಗೋ ಶತ್ರುಗಳ ಬಲವು ಕುಗ್ಗಿತೆಂದು ತಿಳಿದವನಾಗಿ, ತನಗೆ ಆಪ್ತನಾದ ಕೆಲವು ಜನ ಭಟರನ್ನು

ಸಂಗಡ ಕರೆದುಕೊಂಡು ಯಜಮಾನನಿಗೆ ತಿಳಿಸದೆ ಶತ್ರುಗಳ ಪಾಳಯವನ್ನು ಹೊಕ್ಕು, ಆ ರಾಜನ ಬಿಡಾರದ ಬಳಿಗೆ ಹೋಗಿ, ಅಲ್ಲಿದ್ದ ಕಾವಲುಗಾರರನ್ನೆಲ್ಲಾ ಯಮಪುರಿಗೆ ಕಳುಹಿಸಿ, ಒಳಹೊಕ್ಕು, ಮೆಯ್ಗಾವಲ ಭಟರನ್ನೆಲ್ಲಾ ಪರಲೋಕಾತಿಥಿಗಳನ್ನು ಮಾಡಿ, ಅಲ್ಲಿದ್ದ ಧನಕನಕವಸ್ತುವಾಹನಾದಿಗಳೊಡನೆ ರಾಜನನ್ನು ಸೆರೆಹಿಡಿದುಕೊಂಡು ಬಂದು, ಯಜಮಾನನನ್ನು ಕಂಡು, "ಜೀಯಾ, ನೀವು ಧರ್ಮಿಷ್ಠರು, ಶತ್ರುಭಯಂಕರರು. ತಮ್ಮ ಅನುಗ್ರಹದಿಂದ ಕೇವಲ ಅಬಲನಾದ ನಾನು ಈ ಹಗೆಯನ್ನು ಹಿಡಿದು ತಂದೆನು. ಇವನನ್ನು ತಾವು ಮಂತ್ರಿಗೆ ಒಪ್ಪಿಸಿದರೆ ತಮಗೆ ಐಶ್ವರ್ಯವೂ, ಕೀರ್ತಿಯೂ ಲಾಭವಾಗುವುದು" ಎಂದು ಹೇಳಿದನು. ಅದನ್ನು ಕೇಳಿ ಉದಯಸಿಂಹನು ಸುಪ್ರೀತನಾಗಿ "ಅಯ್ಯಾ ಯೋಧಾಗ್ರಣಿಯೇ, ನಿನ್ನಂತ ಪರಾಕ್ರಮಿಯಾದವನು ಈ ಲೋಕದಲ್ಲಿಯೇ ಇಲ್ಲ. ನಿನ್ನಿಂದ ನಾನು ಐಶ್ವರ್ಯವನ್ನೂ ಕೀರ್ತಿಯನ್ನೂ ಪಡೆದೆನು. ಈ ದಿನ ಸಾಯಂಕಾಲ ಇವರನ್ನು ಮಂತ್ರಿಗೆ ಒಪ್ಪಿಸೋಣ. ನೀನು ತುಂಬ ಬಳಲಿರುವೆ. ವಿಶ್ರಮಿಸಿಕೋ" ಎಂದು ಹೇಳಿ ಅವನನ್ನು ಕಳುಹಿಸಿಕೊಟ್ಟನು. ಆ ವೇಳೆಗೆ ಮಿತ್ರಮಂಡಲವು "ಈ ಅಮಿತ್ರಮಂಡಲವೆಲ್ಲಾ ಪರಾಜಿತವಾಯಿತು. ಇನ್ನು ನಾನೂ ವಿಶ್ರಮಿಸಿಕೊಳ್ಳುವೆನು" ಎಂದು ಮನೆಗೆ ಹೋದ ರೀತಿಯಲ್ಲಿ ಮೆಲ್ಲಮೆಲ್ಲನೆ ಮುಳುಗಿತು. ಧರ್ಮವು ಜಯಿಸುವುದೆಂದು ಲೋಕಕ್ಕೆ ಸಾರುವಂತೆ ದೇವಾಲಯಗಳಲ್ಲಿ ಸಂಜೆಯ ವಾದ್ಯಗಳು ಮೊಳಗಿದುವು. ಅಕ್ರಮದಿಂದ ಬಂದ ರಾಜನ ವಿಕ್ರಮವು ಅಳಿದು ಮೊಗವು ಕಪ್ಪೇರುವುದನ್ನು ಸೂಚಿಸುವಂತೆ ಕತ್ತಲೆಯು ಲೋಕವನ್ನು ಆಕ್ರಮಿಸುತ್ತ ಬಂದಿತು.

ಆ ಸಮಯದಲ್ಲಿ ಉದಯಸಿಂಹನು ಉಚಿತಾಭರಣಗಳನ್ನು ಧರಿಸಿಕೊಂಡು, ಸುಮಂತನು ಕೋಳ ತಂದ ಭಂಡಾರವನ್ನು ತೆಗೆಯಿಸಿಕೊಂಡು, ಶತ್ರುರಾಜನನ್ನೂ ಕರೆದುಕೊಂಡು, ಮಂತ್ರಿಯ ಬಳಿಗೆ ಹೋಗುವ ಸನ್ನಾಹದಿಂದ ಸುಮಂತನನ್ನು ಕರೆದನು. ಅವನು ಎಲ್ಲಿಯೂ ಇರಲಿಲ್ಲ. ಎಲ್ಲಿ ಇರಬಹುದೆಂದು ಹುಡುಕಿ ಹುಡುಕಿ ಎಲ್ಲಿಯೂ ಕಾಣದೆ ಬಳಲಿ ಬೇಸತ್ತು ಮಂತ್ರಿಯ ಸಮೀಪಕ್ಕೆ ಹೋಗಿ ಶತ್ರುರಾಜನನ್ನು ಭಂಡಾರದೊಡನೆ ಅವನಿಗೆ ಒಪ್ಪಿಸಿದನು. ಧರ್ಮಪ್ರಿಯನಾದ ಆ ಮಂತ್ರಿಯು ಅದನ್ನು ಕಂಡು ಸಂತೋಷದಿಂದ ಮೈಯುಬ್ಬಿದವನಾಗಿ, "ಉದಯಸಿಂಹ, ನಮ್ಮ ರಾಜನು ನಿನ್ನನ್ನು ಇಷ್ಟು ದಿವಸ ಸಲಹಿದುದಕ್ಕೆ ಸಫಲವಾಯಿತು. ನೀನೇ ಧನ್ಯನು. ಇಂದಿನಿಂದ ನಿನ್ನ ಪುಣ್ಯದ್ರುಮವು ಫಲಿಸತೊಡಗಿತು. ಈ ವಿಷಯವನ್ನು ಕುರಿತು ನಮ್ಮ ಮಹಾರಾಜರವರ ಸನ್ನಿಧಿಗೆ ಒಂದು ಬಿನ್ನವತ್ತಳೆಯನ್ನು ಕಳುಹಿಸುತ್ತೇನೆ" ಎಂದು ಹೇಳಿ ಆ ದಿನವೇ ಉದಯಸಿಂಹನ ಧೈರ್ಯಶೌರ್ಯಗಳನ್ನು ವಿಶದವಾಗಿ ವಿವರಿಸಿ ಕಾಗದವನ್ನು ಬರೆದನು.

ಇತ್ತ ರಾಜನ ಮಿಕ್ಕ ಸೈನ್ಯವು ಶತ್ರು ಸೈನ್ಯವನ್ನೆಲ್ಲ ಚದುರಿಸಿ ತಮ್ಮ ಪಾಳೆಯಕ್ಕೆ ಹಿಂತಿರುಗಿ ಬಂದು, ಶತ್ರುರಾಜನು ಉದಯಸಿಂಹನ ಸಾಹಸದಿಂದ ತಮ್ಮ ವಶವಾದುದನ್ನು ಅರಿತು ಅವನ ಪರಾಕ್ರಮವನ್ನು ಮನದಣಿಯೆ ಕೊಂಡಾಡಿತು. ಉದಯಸಿಂಹನು ಸೈನ್ಯದ ಜತೆಯಲ್ಲಿ ಅಮರಪುರಿಗೆ ಪ್ರಯಾಣ ಹೊರಟನು. ಇವನು ಆ ಊರ ಹೊರಗಣ ತೋಪಿಗೆ ಹೋದ

ಕೂಡಲೇ ಮಂತ್ರಿಯ ಲೇಖನವನ್ನು ನೋಡಿ ಬಹಳ ಸಂತೋಷಪಟ್ಟು, ಅಂಥ ವೀರರನ್ನು ತಾನೇ ನೋಡಬೇಕೆಂದು ರಾಜನು ಅಲ್ಲಿಗೆ ಬಂದು, ಉದಯಸಿಂಹನನ್ನು ಆಲಿಂಗಿಸಿಕೊಂಡು ಅವನಿಗೆ ಅಮೋಘವಾದ "ಮಹಾವೀರ"ನೆಂಬ ಬಿರುದನ್ನು ದಯಪಾಲಿಸಿ, ಅವನು ಕೋಳ ತಂದ ಹಣದಲ್ಲಿ ಅರ್ಧವನ್ನು ಕೊಟ್ಟು ತನ್ನ ಮಹಾಮಾತ್ಮನ ಕುಮಾರಿಯಾದ ಅನಂಗಸುಂದರಿಯನ್ನು ವಿವಾಹ ಮಾಡಿಕೊಡುವುದಾಗಿ ಏರ್ಪಾಟುಗಳನ್ನು ಮಾಡಿದನು.

ಹದಿನೈದು ದಿನಗಳಲ್ಲಿ ಒಂದು ಶುಭಮುಹೂರ್ತವು ಗೊತ್ತಾಯಿತು. ಅಮರಪುರವೆಲ್ಲವೂ ತಳಿರು ತೋರಣಗಳಿಂದಲೂ, ಚಪ್ಪರಗಳಿಂದಲೂ, ಪತಾಕೆಗಳಿಂದಲೂ ಕಳಕಳಿಸುತ್ತಿದ್ದಿತು. ಮಹಾವೀರ ಉದಯಸಿಂಹ ಅನಂಗಸುಂದರಿಯರಿಗೂ, ಜಯವೀರ ವಿಮಲೆಯರಿಗೂ ಪಾಣಿಗ್ರಹಣ ಮಹೋತ್ಸವವು ಬಹು ಸಂಭ್ರಮದಿಂದ ನಡೆಯಿತು. ರತ್ನಾಂಬೆಯೂ, ಲಲಿತಾಂಗಿಯೂ ಮುಂದಾಗಿ ನಿಂತು ಸಕಲವಾದ ಏರ್ಪಾಟುಗಳನ್ನು ಮಾಡಿದರು. ವಿವಾಹಕಾಲದಲ್ಲಿ ಉದಯಸಿಂಹನಿಗೆ ಒಂದು ಆಶೀರ್ವಾದ ಪತ್ರಿಕೆಯು ಬಂದಿತು. ಅದರಲ್ಲಿ

"ಚಿರಂಜೀವಿ ಶ್ರೀಮಂತ ಉದಯಸಿಂಹನಿಗೆ ರಾಜಾ ಮಲಯಸಿಂಹನು ಮಾಡುವ ಅನೇಕ ಆಶೀರ್ವಾದಗಳು. ನಿನಗೂ ಅನಂಗಸುಂದರಿಗೂ ಈ ದಿವಸ ವಿವಾಹ ನಡೆಯುವುದೆಂಬ ಸಂಗತಿಯು ತಿಳಿದು ನಾನೂ ನನ್ನ ಮಡದಿ ಕೋಮಲೆಯೂ ಬಹಳ ಹೃಷ್ಟರಾದೆವು. ನಿನ್ನ ತಾಯಿಗೂ ನಿನಗೂ ಧರ್ಮದೇವನಿಂದ ತಲೆಗಟ್ಟಿದ ವ್ಯಥೆಯು ಸುಮಂತನಿಂದ ಪರಿಹಾರವಾಯಿತು ಎಂಬುದನ್ನು ನೀವು ಇದಕ್ಕೆ ಮೊದಲೇ ಊಹಿಸಿರಬಹುದು. ಭಗವಂತನು ನಿನಗೂ ನಿನ್ನ ಪತ್ನಿಗೂ ಆಯುರಾರೋಗ್ಯೈಶ್ವರ್ಯಗಳನ್ನು ಅನುಗ್ರಹಿಸಲಿ. ಸುಪುತ್ರನಾದ ನೀನು ಕಷ್ಟದಿಂದ ನೊಂದ ನಿನ್ನ ತಾಯಿಯನ್ನು ಸರಿಯಾಗಿ ನೋಡಿಕೋ. ವಿವೇಕಿಯಾದ ನಿನಗೆ ನಾನೇನನ್ನೂ ಹೆಚ್ಚಾಗಿ ಹೇಳಬೇಕಾದುದಿಲ್ಲ. ನಿನಗೆ ಮಂಗಳವುಂಟಾಗಲಿ" ಎಂದು ಈ ರೀತಿಯಾಗಿ ಒಕ್ಕಣೆಯಿದ್ದಿತು.

ಇತ್ತ ಜಯವೀರನು ವಿಮಲೆಯೊಡನೆ ಸಕಲ ಸಂಸಾರ ಸುಖವನ್ನೂ ಅನುಭವಿಸುತ್ತ ಪುತ್ರಪೌತ್ರರನ್ನು ಪಡೆದು ಸಂತೋಷದಿಂದಿದ್ದನು.

ಉದಯಸಿಂಹನು ಅನಂಗಸುಂದರಿಯನ್ನು ಅತಿಶಯವಾಗಿ ಪ್ರೀತಿಸುತ್ತ ಲಲಿತಾಂಗಿಗೆ ಕ್ಲೇಶಲೇಶವೂ ತೋರದಂತೆ ಅವಳನ್ನು ಉಪಚರಿಸುತ್ತ "ಸುಪುತ್ರಃ ಕುಲದೀಪಕಃ" ಎಂಬ ಆಪ್ತವಾಕ್ಯವನ್ನು ಸಾರ್ಥಕಪಡಿಸಿಕೊಂಡು, ಇಹದಲ್ಲಿ ಖ್ಯಾತಿಯನ್ನೂ ಪರದಲ್ಲಿ ಪುಣ್ಯವನ್ನೂ ಸಂಪಾದಿಸಿಕೊಂಡು ಸುಖವಾಗಿ ಇದ್ದನು.

-ಸಂಪೂರ್ಣ-